
ಪುಸ್ತಕ ಪ್ರಪಂಚ

ಅಕ್ಟೋಬರ್–ನವೆಂಬರ್ ೧೯೮೮



ಟಿ. ಎಸ್. ಎಲಿಯಟ್

ಪುಸ್ತಕ ಪ್ರಪಂಚ
ಮಾಸಿಕ

ಪರಿವಿಡಿ

ಪುಸ್ತಕ ವಿಭಾಗ

ಸಂಪುಟ : ೪೩ ಸಂಚಿಕೆ ೩–೪

PUSTAKA PRAPANCHA : Monthly

Published and printed by Karnataka State Adult Eductaion Council, Mysore-4. Price : Rupees five

ಬಿಡಿಪ್ರತಿ : ರೂ. 5

ವಾರ್ಷಿಕ ಚಂದಾ : ರೂ. 30

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 300

ಸಂಸ್ಥೆಗೆ : ರೂ. 500

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು–570 004

ಎಲಿಯಟ್‌ನ ನಾಟಕಗಳು

ಎ. ಆರ್. ನಾಗಭೂಷಣ

ಶೇಕ್ಸ್‌ಪಿಯರನ ನಂತರದ ಇಂಗ್ಲಿಷ್ ಲೇಖಕರದಲ್ಲಿ ವ್ಯಾಪಕವಾದ ಚರ್ಚೆಗೆ ಮೂಲವಾದವನು ಟಿ. ಎಸ್. ಎಲಿಯಟ್. ಅಮೆರಿಕಾದಲ್ಲಿ ಹುಟ್ಟಿ ಇಂಗ್ಲೆಂಡಿನಲ್ಲಿ ನೆಲೆಸಿದ ಇವನು ಆಧುನಿಕ ಜಗತ್ತಿನಲ್ಲಿ ಎಲ್ಲದರಲ್ಲೂ ನಂಬಿಕೆ ಕಳೆದುಕೊಂಡು ಅತಂತ್ರನಾದ ಮನುಷ್ಯ ಜೀವಿಯ ಸಂವೇದನೆಯನ್ನು ತನ್ನ ಕೃತಿಗಳಲ್ಲಿ ಅಭಿವ್ಯಕ್ತಿಸಿದ. ಒಂದು ತಾತ್ತ್ವಿಕ ನಿಷ್ಠೆ ಇಲ್ಲದ 'ನಾಗರಿಕ' ಬದುಕು ಒಟ್ಟಾರೆ ಸಾಮಾಜಿಕ ಗತಿಸ್ಥಿತಿಗಳ ಅವ್ಯವಸ್ಥೆಗೆ ಆತ್ಮದ ಅಸ್ವಸ್ಥತೆಗೆ ಮುಖ್ಯ ಕಾರಣವಾಗುತ್ತದೆಂಬುದನ್ನು ಎಲಿಯಟ್ ಗುರುತಿಸಿದ. ಭಗವದ್ಗೀತೆ, ಉಪನಿಷತ್ತು, ಬೌದ್ಧ ಧರ್ಮ ಮತ್ತು ಕ್ಯಾಥೊಲಿಕ್ ಕ್ರಿಶ್ಚಿಯನ್ ಧರ್ಮವನ್ನು ತನ್ನ ಪ್ರಧಾನ ನೆಲೆಯಾಗಿರಿಸಿಕೊಂಡು ಮನುಷ್ಯನನ್ನು ಕಾಡುತ್ತಲೇ ಬಂದಿರುವ ಎಲ್ಲ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಲು ಪ್ರಯತ್ನಿಸಿದ. ಆದರೆ ಒಣ ಸಾಂಪ್ರದಾಯಿಕ ದೃಷ್ಟಿಯಿಂದ ಧರ್ಮವನ್ನು ಇವನು ಎಂದೂ ಅವಲೋಕಿಸಲಿಲ್ಲ. ಬದಲಾಗಿ, ಧರ್ಮಕ್ಕೂ ಮಾನವೀಯತೆಗೂ ನಂಟನ್ನು ಕಂಡು ಅದನ್ನು ತನ್ನ ಮೂಲ ದೃಷ್ಟಿಕೋನವಾಗಿಟ್ಟುಕೊಂಡ. ಉನ್ನತ ಮಟ್ಟದ ತಾತ್ತ್ವಿಕತೆ ಮತ್ತು ನಯವಾಗಿದ್ದೂ ಮೊನಚಾದ ಭಾಷೆ ಇವನ ಕೃತಿಗಳಲ್ಲಿ ಸಮಾಗಮವಾಗಿದ್ದು ಇವನ ಜೀವನ ದರ್ಶನವನ್ನು ಕಲಾತ್ಮಕವಾಗಿ ಬಿತ್ತರಿಸುತ್ತವೆ. ಇಂತಹ ಹಲವಾರು ಕಾರಣಗಳಿಂದಾಗಿ ಎಲಿಯಟ್‌ನನ್ನು ಇಪ್ಪತ್ತನೆಯ ಶತಮಾನದ ಶ್ರೇಷ್ಠ ಕವಿ ಎನ್ನಲಾಗಿದೆ. ಮತ್ತು ಇವನ ಪ್ರತಿಭೆ, ಸಾಧನೆಗಳನ್ನು ಗುರುತಿಸಿ ನೊಬೆಲ್ ಬಹುಮಾನವನ್ನು (೧೯೪೮) ನೀಡಲಾಗಿದೆ.

ಇದು ಎಲಿಯಟ್‌ನ ಜನ್ಮಶತಾಬ್ಧಿಯ ವರ್ಷ. (ಜನನ: ೧೮೮೮ ಮರಣ: ೧೯೬೫) ಯಾವತ್ತೂ ಪ್ರಸ್ತುತವಾಗಿರುವ ಇವನ ಕೃತಿಗಳನ್ನು ಇನ್ನೊಮ್ಮೆ ಪರಿಚಯ ಮಾಡಿಕೊಳ್ಳುವುದಕ್ಕೆ,

ಅಧ್ಯಯನ ಮಾಡುವುದಕ್ಕೆ ಈ ಸಂದರ್ಭವನ್ನು ಉಪಯೋಗಿಸಿಕೊಳ್ಳುವುದು ಸೂಕ್ತ. ಇವನು ಮೂಲಭೂತವಾಗಿ ಕವಿಯಾದ್ದರಿಂದ ವಿಮರ್ಶಕರ ದೃಷ್ಟಿ ಸಹಜವಾಗಿ ಕಾವ್ಯದತ್ತ ಹರಿದಿದೆ. ಕಾವ್ಯದ ಜೊತೆಗೆ ಇವನು ವಿಮರ್ಶೆ ಮತ್ತು ನಾಟಕಗಳನ್ನು ಸಹಾ ಬರೆದಿದ್ದಾನೆ. ಈ ಎಲ್ಲಾ ಕೃತಿಗಳನ್ನು ಸಮಗ್ರವಾಗಿ ವಿಶ್ಲೇಷಿಸಿದರೆ ಎಲಿಯಟ್ ಪರಿಪೂರ್ಣ ದೃಷ್ಟಿಯುಳ್ಳ, ತೀವ್ರ ಸಂವೇದನಾಶೀಲತೆಯುಳ್ಳ ಲೇಖಕ ಎಂಬುದು ಸ್ಪಷ್ಟವಾಗುತ್ತದೆ.

ಎಲಿಯಟ್ ನಾಟಕಗಳನ್ನು ಬರೆಯಲು ಪ್ರಾರಂಭ ಮಾಡಿದ್ದು ಸ್ವಲ್ಪ ತಡವಾಗಿ. ೧೯೨೬–೨೭ ರ ಸುಮಾರಿಗೆ ಹೊರಬಿದ್ದ ಪ್ರಥಮ ನಾಟಕಕ್ಕೆ ಮೊದಲೇ ಪ್ರಸಿದ್ಧ 'ದಿ ವೇಸ್ಟ್‌ಲ್ಯಾಂಡ್' ಕಾವ್ಯಕೃತಿ ಸೇರಿದಂತೆ ಹಲವಾರು ಕವನಗಳು ಪ್ರಕಟವಾಗಿದ್ದವು. ನಾಟಕ ಪ್ರಕಾರಕ್ಕೆ ಆಕರ್ಷಿತನಾದ ಬಗ್ಗೆ ಎಲಿಯಟ್ ಹೀಗೆ ನುಡಿದಿದ್ದಾನೆ: "ನನ್ನ ಮೊದಲ ಕಾವ್ಯದಲ್ಲಿ ನಾಟಕೀಯ ಲಕ್ಷಣಗಳಿವೆ. ಪ್ರಾಯಶಃ ಮೊದಲಿನಿಂದಲೇ ರಂಗಭೂಮಿಯ ದಿಕ್ಕಿನತ್ತ ನನಗೆ ಸುಪ್ತ ತುಡಿತಗಳಿದ್ದವು. ನಾಟಕಗಳನ್ನು ಕಾವ್ಯ ಮಾಧ್ಯಮದಲ್ಲಿ ರಚಿಸಬೇಕೆಂಬ ನಿರ್ಣಯವನ್ನು ಇವನು ತೆಗೆದುಕೊಂಡದ್ದು ಒಂದು ಮುಖ್ಯ ವಿಚಾರ. "ಗದ್ಯ ನಾಟಕಕ್ಕಿಂತ ಗೀತ ನಾಟಕ ಹೆಚ್ಚು ತೀವ್ರವಾದದ್ದು ಮತ್ತು ಚೋದಕವಾದದ್ದು" ಎಂದು ತನ್ನ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದಾನೆ. ನಾಟಕದಲ್ಲಿ ಕಾವ್ಯ ಹೇಗೆ ಬಳಕೆಯಾಗಬೇಕೆಂಬುದರ ಬಗ್ಗೆ ಇವನು ಸ್ಪಷ್ಟವಾಗಿ ಚಿಂತಿಸಿದ್ದಾನೆ. "ಕಾವ್ಯ ನಾಟಕಕ್ಕೆ ಶೃಂಗಾರವಾಗಬಾರದು, ಬದಲಾಗಿ ನಾಟಕದ ವಸ್ತುವನ್ನು ತೀವ್ರಗೊಳಿಸಬೇಕು" ಎಂಬ ವಿಚಾರವನ್ನು ತನ್ನ ನಾಟಕಗಳಲ್ಲಿ ಮೂರ್ತಗೊಳಿಸಿದ್ದಾನೆ.

ಇವನು ನಾಟಕಗಳನ್ನು ಬರೆಯುವ ಹೊತ್ತಿಗೆ ಈ ಶತಮಾನದ ಇನ್ನೊಬ್ಬ ಶ್ರೇಷ್ಠ ಲೇಖಕ ಯೇಟ್ಸ್ ಗೀತ ನಾಟಕಗಳ ಪ್ರಯೋಗಗಳನ್ನು ನಡೆಸುತ್ತಿದ್ದ. ಇವರಿಬ್ಬರಿಗೂ ಹತ್ತೊಂಬತ್ತನೆಯ ಶತಮಾನದ ಇಂಗ್ಲೆಂಡಿನ ಗೀತ ನಾಟಕಗಳ ಬಗ್ಗೆ ತೀವ್ರವಾದ ಅಸಮಾಧಾನವಿತ್ತು. ಶೇಕ್ಸ್‌ಪಿಯರನ ಪ್ರಭಾವದಿಂದ ತಪ್ಪಿಸಿಕೊಳ್ಳಲಾಗದೆ ಅವು ಕೃತಕವಾಗಿದ್ದವು. ಶೇಕ್ಸ್‌ಪಿಯರನ ಪ್ರಭಾವ ಎಲಿಯಟ್‌ಗೂ ಒಂದು ತೊಡಕೆನಿಸಿತು. ಇದರಿಂದ ಪಾರಾಗಲು ಶೇಕ್ಸ್‌ಪಿಯರನಿಗಿಂತ ಹಿಂದೆ ರಚಿತವಾದ ನಾಟಕಗಳಿಗೆ ಅಂದರೆ ಮಿರಕಲ್ ನಾಟಕಗಳು, ಮಿಸ್ಟರಿ ನಾಟಕಗಳು ಮತ್ತು ಗ್ರೀಕ್ ನಾಟಕಗಳಿಗೆ ಮೊರೆಹೋದ. ಇದರಿಂದಾಗಿ ತನ್ನತನವನ್ನು ಕಂಡುಕೊಳ್ಳುವುದು ಮತ್ತು ಸ್ವೋಪಜ್ಞ ನಾಟಕಗಳನ್ನು ರಚಿಸುವುದು ಇವನಿಗೆ ಸಾಧ್ಯವಾಯಿತು.

ಎಲಿಯಟ್ ರಚಿಸಿದ ನಾಟಕಗಳು ಒಟ್ಟು ಏಳು: 'ಸ್ವೀನಿ ಅಗೋನಿಸ್ಟೆಸ್', 'ದಿ ರಾಕ್', 'ಮರ್ಡರ್ ಇನ್ ದಿ ಕೆಥೆಡ್ರಲ್', 'ದಿ ಫ್ಯಾಮಿಲಿ ರಿಯೂನಿಯನ್', 'ದಿ ಕಾಕ್‌ಟೇಲ್ ಪಾರ್ಟಿ', 'ದಿ ಕಾನ್‌ಫಿಡೆನ್‌ಷಿಯಲ್ ಕ್ಲರ್ಕ್' ಮತ್ತು 'ದಿ ಎಲ್ಡರ್ ಸ್ಟೇಟ್ಸ್‌ಮನ್. ಇವುಗಳಲ್ಲಿ ಮೊದಲ ಎರಡು ಕೃತಿಗಳು ಉನ್ನತ ಮಟ್ಟವನ್ನು ಮುಟ್ಟಲ್ಲ.

'ಸ್ವೀನಿ ಅಗೋನಿಸ್ಟೆಸ್' (Sweeney Agonistes, ೧೯೨೬–೨೭) ಒಂದು ಅಪೂರ್ಣವಾದ ನಾಟಕ. ಅರಿಸ್ಟೋಫೇನಿಸ್‌ನ ಗ್ರೀಕ್ ನಾಟಕಗಳ ಮಾದರಿಯಲ್ಲಿ

ಬರೆದ ದೃಶ್ಯಗಳ ತುಣುಕುಗಳಿಂದು ಇದನ್ನು ಕಟೆಯಲಾಗಿದೆ. ಸಂದರ್ಭಗಳನ್ನೂ ಭಾವನೆಗಳನ್ನೂ ಬೇಕೆಂದೇ ಉದ್ದೀಪನಗೊಳಿಸಿ ಈ ನಾಟಕವನ್ನು ಮೆಲೊಡ್ರಾಮಾ ರೀತಿಯಲ್ಲಿ ಉದ್ದೇಶಪೂರ್ವಕವಾಗಿ ಬರೆಯಲಾಗಿದೆ.

ಒಂದು ಚರ್ಚ್‌ನ ಕಟ್ಟಡದ ಸಹಾಯಾರ್ಥ ಪ್ರದರ್ಶನಕ್ಕಾಗಿ ಬರೆದ ನಾಟಕ 'ದಿ ರಾಕ್' (The Rock, ೧೯೩೪) ಈ ನಾಟಕದ ವಿಶೇಷವೆಂದರೆ ಚರ್ಚ್‌ನ ಕಟ್ಟುವುದೇ ಇದರ ವಸ್ತುವಾಗಿರುವುದು. ಇದನ್ನು ನಿರ್ದೇಶಕ ಮಾರ್ಟಿನ್ ಬ್ರೌನ್‌ನ ಸೂಚನೆಗಳಿಗೆ ಅನುಸಾರವಾಗಿ ಎಲಿಯಟ್ ಬರೆಯಬೇಕಾಯಿತು. ಸಂಪೂರ್ಣ ಸ್ವಾತಂತ್ರ್ಯದಿಂದ ಬರೆಯಲು ಇವನಿಗೆ ಸಾಧ್ಯವಾಗದಿದ್ದುದರಿಂದ ಇದು ಯಶಸ್ವಿ ಯಾಗಿಲ್ಲ. ಮುಂದಿನ ಐದು ನಾಟಕಗಳು ಎಲಿಯಟ್‌ನ ರಂಗಪ್ರತಿಭೆಯನ್ನೂ ಭಾಷಾ ಪ್ರಭುತ್ವವನ್ನೂ ಸಾರ್ಥಕವಾಗಿ ಬಿಚ್ಚಿಡುತ್ತವೆ.

ಎಲಿಯಟ್‌ನ ತಾತ್ತ್ವಿಕ ಸ್ಪಷ್ಟತೆ ಮತ್ತು ಕೌಶಲಗಳು ಮೊದಲ ಬಾರಿಗೆ ಪ್ರಖರವಾಗಿ ಕಂಡುಬರುವುದು 'ಮರ್ಡರ್ ಇನ್ ದಿ ಕೆಥೆಡ್ರಲ್' ನಾಟಕದಲ್ಲಿ. (Murder in the cathedral, ೧೯೩೫) ಈ ನಾಟಕಕ್ಕೆ ಮೊದಲು 'ಫಿಯರ್ ಇನ್ ದಿ ವೇ' ಎಂಬ ಶೀರ್ಷಿಕೆ ಇತ್ತು. ಪ್ರಾಪಂಚಿಕತೆ ಮತ್ತು ಪಾರಮಾರ್ಥಿಕತೆಗಳ ನಡುವಣ ಘರ್ಷಣೆ, ಹುತಾತ್ಮ ಎಂಬ ಪರಿಕಲ್ಪನೆಯ ಅರ್ಥ, ಧರ್ಮನಿಷ್ಠೆ—ಇವೆಲ್ಲ ಈ ಈ ನಾಟಕದ ಹೃದಯದಲ್ಲಿವೆ. ಹನ್ನೆರಡನೆಯ ಶತಮಾನದ ಇಂಗ್ಲೆಂಡಿನಲ್ಲಿ ಸಂಭವಿಸಿದ ಒಂದು ಐತಿಹಾಸಿಕ ಮಹತ್ವವುಳ್ಳ ಘಟನೆಯನ್ನು ತನ್ನ ಉದ್ದೇಶ ಸಾಧನೆಗಾಗಿ ಎಲಿಯಟ್ ಬಳಸಿಕೊಂಡಿದ್ದಾನೆ. ನಾಟಕದ ಪ್ರಾರಂಭದಲ್ಲೇ ರಾಜ ಹೆನ್ರಿಗೂ ಧರ್ಮ ಗುರು ಥಾಮಸ್‌ಗೂ ಉಂಟಾಗಿರುವ ವೈಮನಸ್ಯ ಬಿರುಸಾಗಿ ವ್ಯಕ್ತವಾಗುತ್ತದೆ. ಇದು ಸಾಮಾನ್ಯ ವರ್ಗದ ಹೆಂಗಸರಲ್ಲಿ ಮತ್ತು ಪಾದ್ರಿಗಳಲ್ಲಿ ತಳಮಳವನ್ನು ಹುಟ್ಟಿಹಾಕು ತ್ತದೆ. ಫ್ರಾನ್ಸ್‌ನಿಂದ ಮರಳಿ ಕ್ಯಾಂಟರ್‌ಬರಿಗೆ ಥಾಮಸ್ ಬರಲಿದ್ದಾನೆ ಎಂಬ ಸುದ್ದಿ ಇವರಲ್ಲಿ ವಿವಿಧ ರೀತಿಯ ಹಲವಾರು ತರಂಗಗಳನ್ನು ಎಬ್ಬಿಸುತ್ತದೆ. ಕೆಲ ಹೊತ್ತಿನ ನಂತರ ಥಾಮಸ್ ಬಂದು ತನಗೆ ಒದಗಿದ ಕಷ್ಟಗಳನ್ನು ಪಟ್ಟಿಮಾಡುತ್ತಾ ಹೋಗುತ್ತಾನೆ.

ಥಾಮಸ್‌ನ ಬಲವಾದ ನಿಲುವುಗಳನ್ನು ಬಾಗಿಸಲು ನಾಲ್ಕು ಜನ ಟೆಂಪ್ಟರ್ಸ್ ಒಬ್ಬರಾದಮೇಲೊಬ್ಬರು ಬರುತ್ತಾರೆ. ರಾಜನೊಡನೆ ಸ್ನೇಹದಿಂದ ಇರಲು ಕೆಲವು ತತ್ತ್ವಗಳನ್ನು ಬಿಟ್ಟುಕೊಟ್ಟರೆ ಜೀವನವನ್ನು ಸುಖವಾಗಿ ಅನುಭವಿಸಬಹುದು ಎಂದು ಮೊದಲನೆಯವನು ಥಾಮಸ್‌ನನ್ನು ಆಕರ್ಷಿಸುತ್ತಾನೆ. ಹಿಂದೆ ಪಡೆದಿದ್ದ ಅಧಿಕಾರವನ್ನು ಪುನಃ ಪಡೆಯಬಹುದೆಂಬ ಆಕರ್ಷಣೆಯನ್ನು ಎರಡನೆಯವನು ಒಡ್ಡುತ್ತಾನೆ. ಮೂರನೆ ಯವನ ವಾದ ಇದು : ಥಾಮಸ್ ಒಂದು ಗುಂಪನ್ನು ಕಟ್ಟಿ, ರಾಜನನ್ನು ಇಳಿಸಿ, ತನಗೂ ಚರ್ಚ್‌ಗೂ ವಿಶೇಷವಾದ ಅಧಿಕಾರವನ್ನು ಗಳಿಸಿಕೊಳ್ಳಬಹುದು. ಈ ಮೂರೂ ಟೆಂಪ್ಟರ್ಸ್‌ಗಳನ್ನು ಥಾಮಸ್ ತಿರಸ್ಕರಿಸುತ್ತಾನೆ. ಅಷ್ಟರ ಮಟ್ಟಿಗೆ ಅವನಿಗೆ ನೈತಿಕ ಸ್ಥೈರ್ಯವಿದೆ. ಆದರೆ ನಾಲ್ಕನೆಯ ಟೆಂಪ್ಟರ್ ಥಾಮಸ್‌ನನ್ನು ತೀರಾ ಸಂಕಷ್ಟಕ್ಕೆ ಸಿಲುಕಿಸುತ್ತಾನೆ. ಹುತಾತ್ಮನಾಗುವ, ದೇವಲೋಕದಲ್ಲಿ ಶಾಶ್ವತ ಸ್ಥಾನಗಳಿಸಬೇಕೆಂಬ ಆಸೆಯನ್ನು ಕುರಿತು ಇವನು ಹೇಳುತ್ತಾನೆ. ಈ ಬಯಕೆ ಥಾಮಸ್‌ಗೆ ಮೊದಲಿನಿಂದಲೂ

ಇದೆ. ಈ ದೌರ್ಬಲ್ಯವನ್ನು ಟೆಂಪ್ಟರ್ ಚುಚ್ಚಿದಾಗ ಹೇಗೆ ಪ್ರತಿಕ್ರಿಯಿಸಬೇಕೆಂದು ತಿಳಿಯದೆ ಥಾಮಸ್ ಗೊಂದಲ, ಕಳವಳಗಳಿಗೆ ಸಿಲುಕಿಕೊಳ್ಳುತ್ತಾನೆ.

ಮಾನಸಿಕ ತೊಳಲಾಟ, ಸಂದಿಗ್ಧತೆಗಳ ನಡುವೆ ಕ್ರಿಸ್‌ಮಸ್ ದಿನದಂದು ಬೆಳಗ್ಗೆ ಥಾಮಸ್ ಒಂದು ಧರ್ಮೋಪದೇಶವನ್ನು ನೀಡುತ್ತಾನೆ. ಇದರಲ್ಲಿ ಕ್ರಿಸ್ತ, ಭಕ್ತಿ, ಪಾರಮಾರ್ಥಿಕ ಮೌಲ್ಯಗಳು, ಹುತಾತ್ಮನಾಗುವಿಕೆ ಇತ್ಯಾದಿಗಳ ಬಗ್ಗೆ ವಿವೇಚಿಸುತ್ತಾನೆ.

ಕ್ರಿಸ್‌ಮಸ್ ಹಬ್ಬದ ದಿನಗಳು ಮುಗಿದ ನಂತರ ನಾಲ್ಕು ಜನ ಪ್ರಮುಖ ಸೈನಿಕರು ಕ್ಯಾಂಟರ್‌ಬರಿಗೆ ಬಂದು ಥಾಮಸ್ ಮೇಲೆ ಏಕಾಏಕಿ ಧಾಳಿ ಮಾಡುತ್ತಾರೆ. ಥಾಮಸ್ ನೀಡುವ ಆತಿಥ್ಯವನ್ನು ತಿರಸ್ಕರಿಸಿ ಇವನನ್ನು ಹಲವಾರು ಆಪಾದನೆಗಳಿಗೆ ಗುರಿಮಾಡುತ್ತಾರೆ. ರಾಜನ ವಿರುದ್ಧ ಬಂಡೆದ್ದಿದ್ದು, ಈ ಸಲುವಾಗಿ ಫ್ರಾನ್ಸ್‌ಗೆ ಹೋಗಿದ್ದು, ಅಲ್ಲಿನ ರಾಜ ಮತ್ತು ಪೋಪ್ ಜೊತೆ ಸಂಚು ಹೂಡಿದ್ದು, ರಾಜನ ನೆರವಿನಿಂದ ಜೀವನದಲ್ಲಿ ಔನ್ನತ್ಯವನ್ನು ಮುಟ್ಟಿ ನಂತರ ನಂಬಿಕೆ ದ್ರೋಹ ಬಗೆದಿದ್ದು ಇತ್ಯಾದಿ. ಈ ಟೀಕೆಗಳಿಗೆ ಥಾಮಸ್ ಧೈರ್ಯದಿಂದ ನೇರವಾದ ಉತ್ತರಗಳನ್ನು ನೀಡುತ್ತಾನೆ. ಇವನ ಮಾತುಗಳಿಗೆ ಕಿಂಚಿತ್ತೂ ಬೆಲೆ ಕೊಡದ ಸೈನಿಕರು ಇವನನ್ನು ಕೊಲ್ಲುತ್ತಾರೆ. ನಂತರ ತಮ್ಮ ಕ್ರಮಕ್ಕೆ ಸಮರ್ಥನೆಯನ್ನು ಕೊಡುತ್ತಾರೆ: ತಮ್ಮ ಇಚ್ಛೆಗೆ ವಿರುದ್ಧವಾಗಿ ಥಾಮಸ್‌ನನ್ನು ಕೊಲ್ಲಬೇಕಾಯಿತು. ಶಾಂತಿ ಪಾಲನೆಯೇ ತಮ್ಮ ಧ್ಯೇಯ. ರಾಜ ಎಷ್ಟೇ ಒತ್ತಾಸೆ ನೀಡಿದರೂ ಥಾಮಸ್ ಬಂಡಾಯ ಹೂಡಿದ, ಅವನು ಅಹಂಕಾರಿಯಾಗಿದ್ದ, ಅವನೇ ಕೊಲೆಯನ್ನು ಆಹ್ವಾನಿಸಿದ್ದರಿಂದ ಅವನದ್ದು ಮಾನಸಿಕ ಸ್ಥಿಮಿತ ಕಳೆದುಕೊಂಡ ಒಬ್ಬ ವ್ಯಕ್ತಿಯ ಆತ್ಮಹತ್ಯೆ. ತಮ್ಮ ವಾದಗಳನ್ನು ಮಂಡಿಸಿ ಸೈನಿಕರು ನಿರ್ಗಮಿಸಿದ ನಂತರ ಪಾದ್ರಿಗಳು ಮತ್ತು ಸಾಮಾನ್ಯ ಜನತೆ ಕಣ್ಣೀರಿಡುತ್ತಾರೆ. ಈ ದುಃಖದಲ್ಲೂ ತತ್ತ್ವನಿಷ್ಠೆಗಾಗಿ ಪ್ರಾಣಾರ್ಪಣೆ ಮಾಡುವವರು ಇದ್ದಾರೆ ಎಂಬ ಭರವಸೆಯನ್ನು ಕಂಡು ಸಮಾಧಾನವನ್ನು ಕಾಣಲು ಪ್ರಯತ್ನಿಸುತ್ತಾರೆ.

'ದಿ ಮರ್ಡರ್ ಇನ್ ದಿ ಕೆಥೆಡ್ರಲ್' ನಾಟಕಕ್ಕೆ ಕೆಲವು ವಿಶೇಷಗಳಿವೆ. ಮೊದಲನೆಯದಾಗಿ, ಮೇಳವನ್ನು ಗ್ರೀಕ್ ನಾಟಕಗಳಿಂದ ಎತ್ತಿಕೊಂಡಿದ್ದರೂ ಎಲಿಯಟ್‌ನ ವೈಯಕ್ತಿಕ ಛಾಪನ್ನು ಗುರುತಿಸಬಹುದು. ಕ್ಯಾಂಟರ್‌ಬರಿಯ ಸಾಮಾನ್ಯ ಹೆಂಗಸರು ಮೇಳದ ಸದಸ್ಯರು. ಇವರು ಕ್ರಿಯೆಗೂ ಪ್ರೇಕ್ಷಕರಿಗೂ ಸೇತುವೆಯಾಗಷ್ಟೇ ಉಳಿಯುವುದಿಲ್ಲ. ಬದಲಾಗಿ, ತಮ್ಮ ಭಾವನಾತ್ಮಕ ಪ್ರತಿಕ್ರಿಯೆಗಳಿಂದ ನಾಟಕದ ಕ್ರಿಯೆಯನ್ನು ಇನ್ನಷ್ಟು ತೀವ್ರಗೊಳಿಸುತ್ತಾರೆ. ಎರಡನೆಯದಾಗಿ, ಇದು ಗೀತ ನಾಟಕವಾದರೂ ಎರಡು ಭಾಗಗಳು ಗದ್ಯದಲ್ಲಿವೆ—ಥಾಮಸ್‌ನ ಧರ್ಮೋಪದೇಶ ಮತ್ತು ಸೈನಿಕರ ಭಾಷಣ.

ಒಳಿತು—ಕೆಡಕುಗಳ ತಿಕ್ಕಾಟವನ್ನು ಶೋಧಿಸುತ್ತಾ ಹಿಂಸೆಯ ವಿರುದ್ಧ ಮತ್ತು ತಾತ್ತ್ವಿಕ ನಿಷ್ಠೆಯ ಪರವಾದ ಧೋರಣೆಯನ್ನು ವ್ಯಕ್ತಪಡಿಸುವ ನಾಟಕ ಇದು. ಥಾಮಸ್ ವ್ಯಕ್ತಿಯಾಗಿ ಸತ್ತರೂ ಹುತಾತ್ಮನಾಗಿ ಚಿರಂಜೀವಿಯಾಗಿದ್ದಾನೆ ಎಂಬುದನ್ನು ಸೂಚಿಸುವುದು ಎಲಿಯಟ್‌ನ ಉದ್ದೇಶವಾಗಿದೆ. ಇದು ಜರ್ಮನಿಯ ನಾಟ್ಸಿಗಳ

ವಿರುದ್ಧ ಪ್ರತಿಭಟನೆಯನ್ನು ತೋರುವ ನಾಟಕ ಎಂದು ಅವನೇ ಒಂದೆಡೆ ಹೇಳಿಕೊಂಡಿದ್ದಾನೆ.

'ಮರ್ಡರ್ ಇನ್ ದಿ ಕೆಥೆಡ್ರಲ್' ನಲ್ಲಿ ಎತ್ತಿಕೊಂಡ ವಸ್ತುವನ್ನೇ ಎಲಿಯಟ್ ತನ್ನ ಮುಂದಿನ ನಾಟಕ 'ದಿ ಫ್ಯಾಮಿಲಿ ರಿಯೂನಿಯನ್'ನಲ್ಲಿ (The Family Reunion, 1939) ಇನ್ನೊಂದು ರೀತಿಯಲ್ಲಿ ವಿವೇಚಿಸಿದ್ದಾನೆ. ಮೊದಲ ನಾಟಕ ಸಂತನೊಬ್ಬನ ಅಂತರ್ಯವನ್ನು ಕೆದಕಿದರೆ ಇದು ಸಾಮಾನ್ಯ ವ್ಯಕ್ತಿಯೊಬ್ಬನ ಜೀವನ ಕ್ರಮವನ್ನು ವಿಶ್ಲೇಷಿಸುತ್ತದೆ.

ಇಂಗ್ಲೆಂಡಿನ ಕುಸಿಯುತ್ತಿರುವ ಶ್ರೀಮಂತ ಕುಟುಂಬದ ಒಬ್ಬ ಸದಸ್ಯನಾದ ಹ್ಯಾರಿ ಈ ನಾಟಕದ ನಾಯಕ. ವಿಷ್‌ವುಡ್ ಮನೆಯಲ್ಲಿ ವಾಸಿಸುವ ಈ ಕುಟುಂಬದವರು ಆಧ್ಯಾತ್ಮಿಕವಾಗಿ ಅಧಃಪತನಕ್ಕೆ ಒಳಗಾಗಿದ್ದು, ಜಡವಾಗಿರುವವರು. ಹ್ಯಾರಿ ಮತ್ತು ಇವನ ಸೋದರರಾದ ಜಾನ್ ಹಾಗೂ ಆರ್ಥರ್ ಮೂವರೂ ತಮ್ಮ ತಾಯಿ ಏಮಿಯ ಪ್ರಬಲ ಹಿಡಿತದಲ್ಲಿ ಬದುಕುತ್ತಿರುತ್ತಾರೆ. ಈ ಕಾರಣದಿಂದಾಗಿ ಈ ಸೋದರರು ಜೀವನದಲ್ಲಿ ವಿಫಲರಾಗುತ್ತಾರೆ. ಏಮಿ ಸ್ವಕೇಂದ್ರದಲ್ಲಿ ಸದಾ ಮೋಹಗೊಂಡು ಜೀವಿಸುತ್ತಾಳೆ. ಇದರ ಪರಿಣಾಮವಾಗಿ ಗಂಡನಿಂದ ದೂರವಾಗಿರುತ್ತಾಳೆ. ಇವಳ ಕೊಳಕು ಮನಸ್ಸು ಎಷ್ಟು ದೂರ ಹೋಗುತ್ತದೆ ಎಂದರೆ ಮಕ್ಕಳು ತಮ್ಮ ತಂದೆಯೊಡನೆ ಸಹಜ ಸಂಬಂಧವನ್ನು ಹೊಂದಲು ಸಹಾ ಇವಳು ತಡೆ ಒಡ್ಡುತ್ತಾಳೆ. ತಾನು ಗೊತ್ತು ಮಾಡಿದ ಹುಡುಗಿ ಮೇರಿಯೊಡನೆಯೇ ಹ್ಯಾರಿ ಮದುವೆಯಾಗಬೇಕೆಂದು ಅಪೇಕ್ಷಿಸುತ್ತಾಳೆ. ತಾಯಿಯ ಹಿಡಿತದಿಂದ ಪಾರಾಗಲು ಹ್ಯಾರಿ ಬೇರೊಂದು ಹುಡುಗಿಯ ಜೊತೆ ಮದುವೆಯಾಗುತ್ತಾನೆ. ಈ ಮದುವೆ ವಿಫಲವಾಗುತ್ತದೆ, ಹ್ಯಾರಿಯ ಹೆಂಡತಿ ಸಾಯುತ್ತಾಳೆ. ಈ ಸಾವು ಹೇಗೆ ಸಂಭವಿಸಿತೆಂಬುದು ನಾಟಕದಲ್ಲಿ ಸ್ಪಷ್ಟವಾಗುವುದಿಲ್ಲ. ಆದರೆ ಹೆಂಡತಿಯ ಸಾವಿಗೆ ತಾನೇ ಕಾರಣನೆಂಬಂತೆ ಹ್ಯಾರಿ ಪಾಪ ಪ್ರಜ್ಞೆಯಿಂದ ನರಳುತ್ತಾನೆ. ಇದು ಅವನನ್ನು ನೆರಳಿನಂತೆ ಹಿಂಬಾಲಿಸುತ್ತಾ ಅವನ ಮನಸ್ಸನ್ನು ಛಿದ್ರಗೊಳಿಸುತ್ತದೆ.

ವಿಷ್‌ವುಡ್ ಮನೆಯಲ್ಲಿ ತಳ ಊರಿರುವ ಹ್ಯಾರಿಯ ಕೆಲವು ಅಂಕಲ್ ಮತ್ತು ಆಂಟ್‌ಗಳು ಸದಾ ಪ್ರಾಪಂಚಿಕ ಯೋಚನೆಗಳಲ್ಲಿ ಮುಳುಗಿರುತ್ತಾರೆ. ಇವರಿಗೆ ತಮ್ಮ ಕುಟುಂಬದ ಘನತೆ ಮತ್ತು ಪ್ರತಿಷ್ಠೆಗಳು ಪ್ರಮುಖವಾಗಿರುತ್ತವೆ. ಈ ಗುಂಪಿಗೆ ವಿರುದ್ಧದ ಧ್ರುವದಲ್ಲಿ ಮೂರು ಜನರಿದ್ದಾರೆ—ಡಾಕ್ಟರ್ ವಾರ್ಬರ್ಟನ್, ಮೇರಿ ಮತ್ತು ಅಗಾಥಾ. ಈ ಮೂವರೂ ಜೀವನದಲ್ಲಿ ಪಾರಮಾರ್ಥಿಕತೆಗೆ ಇರುವ ಮಹತ್ವವನ್ನು ತಿಳಿದುಕೊಂಡವರು. ಇವರು ಹ್ಯಾರಿಯ ಮೇಲೆ ಬೀರುವ ಪ್ರಭಾವ ಅವನು ಅಜ್ಞಾನದಿಂದ, ಜಡತೆಯಿಂದ ಮುಕ್ತನಾಗುವುದಕ್ಕೆ ಕಾರಣವಾಗುತ್ತದೆ. ಡಾಕ್ಟರ್ ವಾರ್ಬರ್ಟನ್ ಪ್ರಕಾರ ಮನುಷ್ಯರೆಲ್ಲರೂ ಒಂದು ಕಾಯಿಲೆಗೆ ತುತ್ತಾಗಿದ್ದಾರೆ. ಆಧುನಿಕ ಪ್ರಪಂಚದ ಸತ್ವಹೀನ ಗತಿಸ್ಥಿತಿಗಳೇ ಈ ಕಾಯಿಲೆ. ಏಮಿಯ ಒತ್ತಡಕ್ಕೆ ಮಣಿದು ಹ್ಯಾರಿಯನ್ನು ಮದುವೆಯಾಗಲು ವ್ಯರ್ಥವಾಗಿ ಕಾಯುವ ಮೇರಿ ಕೊನೆಗೆ ಜೀವನದ ಅರ್ಥವನ್ನು ಅರಿತುಕೊಳ್ಳುತ್ತಾಳೆ. ನಾಟಕದಲ್ಲಿ ಎಲಿಯಟ್‌ನ ಮುಖವಾಣಿಯಾಗಿ ಕಾಣಿಸುವ ಅಗಾಥಾ ಹ್ಯಾರಿಯ ಜೀವನವನ್ನು ತೀವ್ರವಾಗಿ ಪ್ರಭಾವಿಸುತ್ತಾಳೆ. ಇವಳ ಮೂಲಕ

ಹ್ಯಾರಿಗೆ ತನ್ನ ತಂದೆ–ತಾಯಿಯರ ಸಂಬಂಧದ ಅರ್ಥಹೀನತೆ ಸ್ಪಷ್ಟವಾಗುತ್ತದೆ. ಪ್ರತಿಯೊಂದು ಜೀವಿಯ ಮೂಲದಲ್ಲೇ ಪಾಪದ ಬೀಜ ಇರುವುದನ್ನು ಇವನು ತಿಳಿದುಕೊಳ್ಳುತ್ತಾನೆ. ತನ್ನ ಜೀವನದ ಸಾಫಲ್ಯ ಕಾಣಬೇಕಾದರೆ ಪಾರಮಾರ್ಥಿಕ ಚೈತನ್ಯ ತನಗೆ ಸಿಗಬೇಕು, ಇದು ಸಾಧ್ಯವಾಗಬೇಕಾದರೆ ತಾನು ಮನೆಯಿಂದ ಹೊರಬೀಳಬೇಕು ಎಂಬ ಅರಿವು ಇವನಿಗೆ ಮೂಡುತ್ತದೆ. ಹೀಗೆ ಈ ನಾಟಕದಲ್ಲಿ ಎಲಿಯಟ್ ಪ್ರಾಪಂಚಿಕ ಮೌಲ್ಯಗಳನ್ನೂ ಅರ್ಥಹೀನ ಸಂಬಂಧಗಳನ್ನೂ ತಿರಸ್ಕರಿಸಿ ಆಧ್ಯಾತ್ಮಿಕ ಬೆಳಕಿನತ್ತ ತುಡಿಯುತ್ತಾನೆ.

ಮಾನವ ಪ್ರೇಮದ ಸಾರ್ಥಕತೆ ಮತ್ತು ಸ್ವಕೇಂದ್ರಕ್ಕೆ ಬದ್ಧವಾದ ಜೀವನದ ಅರ್ಥಹೀನತೆ 'ದಿ ಕಾಕ್‌ಟೇಲ್ ಪಾರ್ಟಿ'ಯ (The Cocktail Party, 1949) ವಸ್ತುವಾಗಿದೆ. ಚೇಂಬರ್ಲೇನ್ ಕುಟುಂಬದ ಸದಸ್ಯರು ಟೊಳ್ಳು ವ್ಯಕ್ತಿತ್ವವನ್ನು ಪಡೆದುಕೊಂಡು ಬೂರ್ಜ್ವಾಗಳಾಗಿ ಜೀವಿಸುತ್ತಿರುತ್ತಾರೆ. ಇವರಿಗೆ ಯಾರೊಂದಿಗೂ ಭಾವನಾತ್ಮಕವಾದ, ಅರ್ಥ ಪೂರ್ಣವಾದ ಸಂಬಂಧಗಳಿಲ್ಲ. ತಮ್ಮ ಬೇಸರವನ್ನು ನೀಗಿಕೊಳ್ಳಲು ಮೋಜಿನ ಕೂಟಗಳಿಗೆ, ಕುಡಿತಕ್ಕೆ ಗಾಳಿ ಮಾತುಗಳಿಗೆ ಸದಾ ದುಂಬಾಲು ಬೀಳುತ್ತಾರೆ. ಈ ಕುಟುಂಬದ ಎಡ್ವರ್ಡ್ ತನ್ನ ಹೆಂಡತಿ ಲ್ಯಾವಿನಿಯಾ ಜೊತೆ ಪ್ರೇಮರಹಿತವಾದ ಯಾಂತ್ರಿಕ ಸಂಬಂಧವನ್ನು ಹೊಂದಿದ್ದಾನೆ. ಸೀಲಿಯಾ ಎಂಬುವಳೊಡನೆ ವಿವಾಹೇತರ ಸಂಬಂಧವನ್ನು ಬೆಳೆಸಿಕೊಂಡಿದ್ದಾನೆ. ಇವೆಲ್ಲದರ ಪರಿಣಾಮವಾಗಿ ಲ್ಯಾವಿನಿಯಾ ಗಂಡನಿಂದ ದೂರವಾಗುತ್ತಾಳೆ. ಎಡ್ವರ್ಡ್‌ನ ವೈಯಕ್ತಿಕ ಮತ್ತು ಸಾಂಸಾರಿಕ ಜೀವನದ ಪರಿಚಯವಿದ್ದೂ ಸೀಲಿಯಾ ಇವನೊಡನೆ ಸ್ನೇಹವನ್ನು ಬಯಸುತ್ತಾಳೆ. ಒಂದು ಕುಡಿತದ ಕೂಟದಲ್ಲಿ ಎಡ್ವರ್ಡ್ ತನ್ನ ಬದುಕಿನ ಏರಿಳಿತಗಳನ್ನು ಒಬ್ಬ ಅತಿಥಿಗೆ ತಿಳಿಸುತ್ತಾನೆ. ಮಾನಸಿಕ ರೋಗ ತಜ್ಞನಾದ ರೇಲಿಯೇ ಈ ಅತಿಥಿ. ಇವನು ಎಲಿಯಟ್‌ನ ಧೋರಣೆಗಳಿಗೆ ಈ ನಾಟಕದಲ್ಲಿ ಧ್ವನಿ ಕೊಡುತ್ತಾನೆ. ಜೊತೆಗೆ ನಾಟಕದ ಸಂವಿಧಾನ ಮತ್ತು ಗತಿಯನ್ನು ಇವನು ನಿಯಂತ್ರಿಸುತ್ತಾನೆ. ಗಂಡನಿಂದ ತಾತ್ಕಾಲಿಕವಾಗಿ ದೂರವಾಗುವಂತೆ ಲ್ಯಾವಿನಿಯಾಗೆ ಹೇಳಿ ಕೊಟ್ಟವನು ಇವನು. ಎಡ್ವರ್ಡ್‌ನಂತೆ ಲ್ಯಾವಿನಿಯಾ ಕೂಡಾ ತನ್ನ ಬದುಕನ್ನು ವ್ಯರ್ಥಪಡಿಸಿಕೊಳ್ಳುತ್ತಿರುತ್ತಾಳೆ. ಇವಳಿಗೂ ವಿವಾಹೇತರ ಸಂಬಂಧವಿದೆ. ಪೀಟರ್‌ನೊಂದಿಗೆ ಇವಳು ಸಂಬಂಧವನ್ನು ರೂಢಿಸಿಕೊಳ್ಳುತ್ತಾಳೆ. ಆದರೆ ಪೀಟರ್ ಇವಳನ್ನು ಬಿಟ್ಟು ಸೀಲಿಯಾಳಿಗೆ ಹತ್ತಿರವಾಗುತ್ತಾನೆ. ಸೀಲಿಯಾಳಿಗೆ ಪೀಟರ್ ಮೇಲೆ ವಿಶೇಷವಾದ ಪ್ರೀತಿ ಇಲ್ಲ. ಈ ಎಲ್ಲ ಗೊಂದಲಗಳು ಸ್ವಾರ್ಥ, ಅನುಮಾನ, ಅಸೂಯೆಗಳೊಂದಿಗೆ ತಳಕು ಹಾಕಿಕೊಂಡಿರುತ್ತವೆ. ಇದೆಲ್ಲವನ್ನು ತಿಳಿಗೊಳಿಸುವುದೇ ರೇಲಿಯ ಗುರಿ. ನಿಸ್ವಾರ್ಥವಾದ, ಪಾರಮಾರ್ಥಿಕ ಧ್ಯೇಯವುಳ್ಳ ಜೀವನ ಶೈಲಿಯನ್ನು ಬೆಳಸಿಕೊಂಡರೆ ಸಮಸ್ತ ಸಮಸ್ಯೆಗಳಿಗೂ ಪರಿಹಾರವಿದೆ ಎಂಬುದು ಇವನ ನಿಲುವು. ಇವನ ಚಿಂತನೆ, ಕ್ರಿಯೆಗಳಿಗೆ ಜೂಲಿಯಾ ಮತ್ತು ಅಲೆಕ್ಸಾಂಡರ್ ನೆರವಾಗುತ್ತಾರೆ. ರೇಲಿ ನೀಡುವ ಸಲಹೆಗಳನ್ನು ಪಾಲಿಸಿ ಎಡ್ವರ್ಡ್ ಮತ್ತು ಲ್ಯಾವಿನಿಯಾ ಪಶ್ಚಾತ್ತಾಪ ಪಡುತ್ತಾರೆ, ಪರಸ್ಪರ ಅರಿತುಕೊಳ್ಳಲು ಪ್ರಯತ್ನಿಸುತ್ತಾರೆ. ಕೆಲವು ಸಮಯದ ನಂತರ ಇವರ ಪುನರ್ಮಿಲನವಾಗಿ,

ಸಂಬಂಧ ನೇರವಾಗುತ್ತದೆ. (ಎಡ್ವರ್ಡ್ ಮತ್ತು ಲಾವಿನಿಯಾ ಅಗಲುವುದು ಮತ್ತು ಪುನಃ ಒಂದಾಗುವುದು—ಈ ವಸ್ತುವಿಗಾಗಿ ಯೂರಿಪಿಡೀಸ್‌ನ 'ಅಲ್ಸೆಸ್ಟಿಸ್'—Alcestis—ನಾಟಕಕ್ಕೆ ತಾನು ಋಣಿಯಾಗಿದ್ದೇನೆಂದು ಎಲಿಯಟ್ ನುಡಿದಿದ್ದಾನೆ.) ಸೀಲಿಯಾ ನರ್ಸ್ ಕೆಲಸಕ್ಕೆ ಸೇರಿ, ಬೇರೊಂದು ಸ್ಥಳಕ್ಕೆ ಹೋಗಿ ನೊಂದವರ ಸೇವೆಯಲ್ಲಿ ನಿರತಳಾಗಿ, ಕೊನೆಗೆ ಸಾವನ್ನಪ್ಪುತ್ತಾಳೆ. ಜೂಲಿಯಾಳ ಸಲಹೆಯ ಮೇರೆಗೆ ಪೀಟರ್ ತನ್ನ ಸ್ವಾರ್ಥವನ್ನು ಗೆಲ್ಲಲು ಮತ್ತು ನಿರ್ಲಿಪ್ತ ಧೋರಣೆಯನ್ನು ಬೆಳೆಸಿಕೊಳ್ಳಲು ಪ್ರಯತ್ನಿಸುತ್ತಾನೆ. ಹೀಗೆ ಈ ನಾಟಕ ಪ್ರೀತಿ ಇಲ್ಲದ ಜೀವನದ ಅರ್ಥಹೀನತೆ, ಅಹಂಕಾರದಿಂದ ಹುಟ್ಟಿದ ಒಂಟಿತನದ ಭಯಾನಕತೆಗಳನ್ನು ವಿಶ್ಲೇಷಿಸುತ್ತದೆ.

ಈ ಜಗತ್ತಿನ ಗುರಿಯನ್ನಾಗಲೀ ಬದುಕಿನ ಸಾರ್ಥಕತೆಯನ್ನಾಗಲೀ ಅರಿಯಲು ಅಸಮರ್ಥರಾದ ಕೆಲವು ವ್ಯಕ್ತಿಗಳನ್ನು ಒಬ್ಬ ಸ್ಥಿತಪ್ರಜ್ಞನೊಡನೆ ತುಲನೆ ಮಾಡಿ ವಾಸ್ತವದ ದರ್ಶನವನ್ನು ಮಾಡಿಸುವ ನಾಟಕ 'ದಿ ಕಾನ್‌ಫಿಡೆನ್‌ಷಿಯಲ್ ಕ್ಲರ್ಕ್'. (The Confidential Clerk, ೧೯೫೪) ಹಿಂದಿನ ಮೂರು ನಾಟಕಗಳು ಬಲು ಗಂಭೀರವಾದ ನಾಟಕಗಳಾದರೆ ಈ ನಾಟಕ ಒಂದು ಕಾಮಿಡಿ. ತಾನು ಕಾಮಿಡಿಯನ್ನು ಏಕೆ ಬರೆದೆನೆಂಬುದರ ಬಗ್ಗೆ ಸ್ವತಃ ಎಲಿಯಟ್ ಹೀಗೆ ಹೇಳಿದ್ದಾನೆ: "ಈಚಿನ ದಿನಗಳಲ್ಲಿ ಗಂಭೀರವಾದದ್ದನ್ನು ಅಭಿವ್ಯಕ್ತಿಸಲು ಟ್ರ್ಯಾಜಿಡಿಗಿಂತ ಕಾಮಿಡಿಯೇ ಸುಲಭವಾಗಿದೆ. ಜನರು ಟ್ರ್ಯಾಜಿಡಿಯನ್ನು ತೀರಾ ಗಂಭೀರವಾಗಿ ಸ್ವೀಕರಿಸುತ್ತಾರೆ. ಆದರೆ ಕಾಮಿಡಿಯನ್ನು ಮೇಲ್ನೋಟಕ್ಕೆ ಲಘುವಾಗಿ ಸ್ವೀಕರಿಸಿ ಆಳದಲ್ಲಿ ಗಂಭೀರವಾಗಿ ತೆಗೆದುಕೊಳ್ಳುತ್ತಾರೆ." ಈ ನಾಟಕಕ್ಕೆ ಯೂರಿಪಿಡೀಸ್‌ನ 'ಇಯಾನ್' (Ion) ಆಧಾರವಾಗಿದ್ದರೂ ಇದೊಂದು ಸ್ವತಂತ್ರವಾದ ನಾಟಕವೇ ಆಗಿದೆ.

ಕೋಲ್ಬಿ ಎಂಬುವನು ಸಾರಾ ಮತ್ತು ಹರ್ಬರ್ಟ್ ಎಂಬುವರಿಗೆ ಹುಟ್ಟಿದವನು. ಕ್ಲಾಡ್ ತಿಳಿದುಕೊಂಡಿರುವಂತೆ ಕೋಲ್ಬಿ ತನಗೆ ತನ್ನ ಪ್ರೇಯಸಿ (ಸಾರಾಳ ತಂಗಿ) ಯಲ್ಲಿ ಹುಟ್ಟಿದವನು. ಕ್ಲಾಡ್‌ನ ಹೆಂಡತಿ ಎಲಿಜಬೆತ್ ಪ್ರಕಾರ ಕೋಲ್ಬಿ ತನ್ನ ಮತ್ತು ಟೋನಿಯ ಸಮಾಗಮದಲ್ಲಿ ಜನಿಸಿದವನು. ಈ ಕಥಾಸಂವಿಧಾನ ಇನ್ನಷ್ಟು ಗೋಜಲಾಗುವುದಕ್ಕೆ ಇನ್ನು ಕೆಲವು ಬೆಳವಣಿಗೆಗಳಿವೆ. ಕ್ಲಾಡ್-ಎಲಿಜಬೆತ್ ದಂಪತಿಗಳಿಗೆ ಮಕ್ಕಳಿಲ್ಲ. ಇಬ್ಬರಿಗೂ ವಿವಾಹೇತರ ಸಂಬಂಧಗಳಿದ್ದು ಕ್ಲಾಡ್‌ಗೆ ಲುಕಾಸ್ತಾ ಎಂಬ ಮಗಳೂ ಎಲಿಜಬೆತ್‌ಗೆ ಬಾರ್ನ್‌ಬಾಸ್ ಎಂಬ ಮಗನೂ ಇದ್ದಾರೆ. ಈ ಎಲ್ಲ ಗೊಂದಲಮಯ ಸಂಬಂಧಗಳ ಶಿಖರಪ್ರಾಯವಾಗಿ ಲುಕಾಸ್ತಾ ಮತ್ತು ಬಾರ್ನ್‌ಬಾಸ್ ಪರಸ್ಪರ ಪ್ರೀತಿಸುತ್ತಾರೆ.

ಪ್ರಾರಂಭದಲ್ಲಿ ಕೋಲ್ಬಿಗೆ ತನ್ನ ಜನ್ಮದ ಸತ್ಯ ತಿಳಿದಿರುವುದಿಲ್ಲ. ತನ್ನ ತಂದೆ ತಾಯಿಯರು ಬಹಳ ಹಿಂದೆಯೇ ಸತ್ತುಹೋಗಿದ್ದಾರೆಂದೂ ಸಾರಾ ತನ್ನ ಸಾಕು ತಾಯಿಯೆಂದೂ ಇವನು ನಂಬಿಕೊಂಡಿರುತ್ತಾನೆ. ಆದರೆ ಇದು ನಿಜವಲ್ಲ ಎಂದು ತಿಳಿದೊಡನೆಯೇ ತಳಮಳಗೊಳ್ಳುತ್ತಾನೆ. ತನ್ನ ಜನ್ಮ ರಹಸ್ಯವನ್ನು ಪತ್ತೆ ಹಚ್ಚಬೇಕೆಂಬುದು ಇವನ ಹಂಬಲವಾಗುತ್ತದೆ. ಇವನಿಗೆ ಸಂಗೀತದಲ್ಲಿ ತೀವ್ರ ಆಸಕ್ತಿ ಇದೆ. ಆದರೆ ಉತ್ತಮ ಸಂಗೀತಗಾರನಾಗಬೇಕೆಂಬ ಇವನ ಆಕಾಂಕ್ಷೆ ಫಲಿಸುವುದಿಲ್ಲ. ಇದು ನಿರಾಶೆಗೆ, ದುಗುಡಕ್ಕೆ ಮೂಲವಾಗಿ ಇವನ ವ್ಯಕ್ತಿತ್ವದಲ್ಲಿ ಅಳುಕು, ಹಿಂಜರಿತಗಳು ತುಂಬಿಕೊಳ್ಳುತ್ತವೆ.

ಕೋಲ್ಬಿಗೆ ಸೂಕ್ತವಾದ ಕೆಲಸವನ್ನು ಕೊಡಿಸಿ ಅವನಿಗೆ ಸಾಮಾಜಿಕ ಅಂತಸ್ತು ಲಭಿಸುವ ಹಾಗೆ ಮಾಡಬೇಕೆಂಬುದು ಕ್ಲಾಡ್‌ನ ಆಸೆ. ತನ್ನ ಗುಮಾಸ್ತನಾದ ಎಗರ್ಸನ್‌ಗೆ ಅನಾರೋಗ್ಯದ ಕಾರಣ ಕೆಲಸದಿಂದ ನಿವೃತ್ತಿಯಾಗುವಂತೆ ಸೂಚಿಸಿ ಆ ಕೆಲಸಕ್ಕೆ ಕೋಲ್ಬಿಯನ್ನು ತೆಗೆದುಕೊಳ್ಳಲು ಯೋಜಿಸುತ್ತಾನೆ. ಆದರೆ ಹೆಂಡತಿಗೆ 'ಕೋಲ್ಬಿ ನನ್ನ ಮಗ' ಎಂದು ಹೇಳಲು ಇವನೂ ಹಿಂಜರಿಯುತ್ತಾನೆ. ಹೇಳಿದರೆ ಕೋಲ್ಬಿಯ ಬಗ್ಗೆ ಅವಳಿಗೆ ಅಸೂಯೆ ಹುಟ್ಟಬಹುದೆಂದು ಭಯಪಡುತ್ತಾನೆ.

ಕ್ಲಾಡ್‌ನ ಯೋಜನೆಯಂತೆ ಕೋಲ್ಬಿ ಗುಮಾಸ್ತನ ಕೆಲಸಕ್ಕೆ ಸೇರುತ್ತಾನೆ. ಅವನ ಅನುಕೂಲಕ್ಕಾಗಿ ಕ್ಲಾಡ್ ಒಂದು ಮನೆಯನ್ನು ಕೊಡುತ್ತಾನೆ. ಸಂಗೀತದಲ್ಲಿರುವ ಆಸಕ್ತಿಯನ್ನು ಮುಂದವರೆಸಲು ಒಂದು ಪಿಯಾನೊ ತೆಗೆದುಕೊಡುತ್ತಾನೆ. ಇವೆಲ್ಲದ ರಿಂದ ಕೋಲ್ಬಿಗೆ ತುಂಬಾ ಸಮಾಧಾನವಾಗುತ್ತದೆ. ತಾನು ಒಳ್ಳೆಯ ಸಂಗೀತಗಾರ ನಾಗಬಲ್ಲೆನೆಂಬ ಆಕಾಂಕ್ಷೆ ಪುನಃ ಮೂಡುತ್ತದೆ. ಆದರೆ ಸಂಪೂರ್ಣ ಧೈರ್ಯ ಹುಟ್ಟುವು ದಿಲ್ಲ. ಕ್ರಮೇಣ ತನ್ನ ಬದುಕಿನ ಬಗ್ಗೆ ಅಸಹನೆ ಪ್ರಾರಂಭವಾಗುತ್ತದೆ. ಹಿಂದಿನ ಬಯಕೆಗೂ ಈಗಿನ ಜೀವನಶೈಲಿಗೂ ಘರ್ಷಣೆಯಾಗುತ್ತದೆ. ಇವನ ಸಂಕೀರ್ಣಭಾವನೆ ಗಳು ಯಾರಿಗೂ ತಿಳಿಯುವುದಿಲ್ಲ. ಇವನನ್ನು ಅರ್ಥಮಾಡಿಕೊಳ್ಳುವುದರ ಬದಲಾಗಿ ಕ್ಲಾಡ್ ತನ್ನ ವ್ಯಕ್ತಿತ್ವವನ್ನು ಕೋಲ್ಬಿಯ ಮೇಲೆ ಹೇರುತ್ತಾನೆ. ವರ್ಷಗಳ ಹಿಂದೆ ಕ್ಲಾಡ್ ಕಲೆಗಾರನಾಗಬೇಕೆಂಬ ಉತ್ಸುಕತೆಯನ್ನಿಟ್ಟುಕೊಂಡಿದ್ದವನು. ಆದರೆ ತಂದೆಯ ಒತ್ತಡಕ್ಕೆ ಮಣಿದು ಹಣ ಗಳಿಸುವ ದಂಧೆಗೆ ಇಳಿದಿರುತ್ತಾನೆ. ಈಗ ಕೋಲ್ಬಿ ಸಹಾ ತನ್ನ ಹಾಗೆ ಆಗಬೇಕೆಂದು ಇಚ್ಛಿಸುತ್ತಾನೆ.

ಎಲಿಜಬೆತ್ ಜೀವನಕ್ಕೆ ವಿಮುಖವಾಗಿ ಭ್ರಮಾಪ್ರಪಂಚದಲ್ಲಿ ಬದುಕುವಂತಹ ವ್ಯಕ್ತಿ. ಮನೆಯ ಸಮಸ್ತ ವ್ಯವಹಾರವೂ ತನ್ನ ಹಿಡಿತದಲ್ಲೇ ಇರಬೇಕೆಂದು ಬಯಸು ತ್ತಾಳೆ. ಕೋಲ್ಬಿಯನ್ನು ಗುಮಾಸ್ತನ ಕೆಲಸಕ್ಕೆ ತಾನೇ ಆರಿಸಿದ್ದು ಎನ್ನುತ್ತಾಳೆ. ಇವನ ಮನೆಗೆ ಯಾವ ಬಣ್ಣ ಇರಬೇಕೆಂಬುದನ್ನು ಅವಳೇ ನಿರ್ಧರಿಸುತ್ತಾಳೆ. ಜೊತೆಗೆ ಕೋಲ್ಬಿ ತನ್ನ ಮಗನೇ ಎಂದು ನಂಬುತ್ತಾಳೆ.

ದ್ವಂದ್ವವೇ ಕೋಲ್ಬಿಯ ದುರಂತ. ಸಂಗೀತಗಾರನಾಗಬೇಕೆಂಬ ಆಂತರಿಕ ಆಕಾಂಕ್ಷೆಗೂ ವ್ಯಾಪಾರೋದ್ಯಮಿಯೊಬ್ಬನ ಗುಮಾಸ್ತನ ಕೆಲಸಕ್ಕೂ ಸ್ವಲ್ಪವೂ ತಾಳೆ ಯಾಗುವುದಿಲ್ಲ. ಒಳಪ್ರಪಂಚಕ್ಕೂ ಹೊರ ಪ್ರಪಂಚಕ್ಕೂ ಬಿಕ್ಕಟ್ಟು ಏರ್ಪಟ್ಟು ಅಗಲ ವಾದ ಕಂದಕ ಉಂಟಾಗುತ್ತದೆ. ಇವನ ಇನ್ನೊಂದು ದುರಂತವೆಂದರೆ ಕ್ಲಾಡ್, ಎಲಿಜಬೆತ್, ಲುಕಾಸ್ತಾ, ಬಾರ್ನ್‌ಬಾಸ್ ಎಲ್ಲರಿಗೂ ತಮ್ಮತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳುವ ಹುನ್ನಾರಗಳಿಗೆ ಬಲಿಯಾಗಿಬಿಡುವುದು. ಎಗರ್ಸನ್ ಒಬ್ಬನೇ ಇವನನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ನಾಟಕದಲ್ಲಿ ಎಗರ್ಸನ್‌ಗೆ ಬಹಳ ಮಹತ್ತರವಾದ ಪಾತ್ರವಿದೆ. ಸ್ವಂತ ಮಗನನ್ನು ಇವನು ಕಳೆದುಕೊಂಡಿದ್ದಾನೆ. ಆದರೂ ಸ್ಥಿತಪ್ರಜ್ಞ ವ್ಯಕ್ತಿತ್ವವನ್ನು ಹೊಂದಿರುವ ಗಟ್ಟಿಜೀವಿ ಇವನು. ತನ್ನ ದುಃಖ ವನ್ನು ಬಹಿರಂಗವಾಗಿ ಸ್ವಲ್ಪವೂ ವ್ಯಕ್ತಪಡಿಸುವುದಿಲ್ಲ. ಇವನ ವ್ಯಕ್ತಿತ್ವದ ಮುಖ್ಯ ಆಯಾಮವೆಂದರೆ ಎಲ್ಲರಿಗೂ ಒಳ್ಳೆಯದನ್ನು ಬಯಸುವುದು. ಇವನನ್ನು ಕುರಿತು

ಎಲಿಯಟ್ ಹೀಗೆ ಹೇಳಿದ್ದಾನೆ: "ನಾಟಕದಲ್ಲಿ ಪೂರ್ಣಪ್ರಮಾಣದ ಕ್ರಿಶ್ಚಿಯನ್ ಎಗರ್ಸನ್ ಒಬ್ಬನೇ." ಕೋಲ್ಬಿಯ ಸಂಕಟವನ್ನು ಅರಿತುಕೊಂಡ ಎಗರ್ಸನ್ ಅವನಿಗೆ ಮಾರ್ಗದರ್ಶಿಯಾಗುತ್ತಾನೆ, ಅವನ ಪಾರಮಾರ್ಥಿಕ ತುಡಿತಗಳು ಫಲಿಸಲು ನೆರವಾಗುತ್ತಾನೆ. ಭ್ರಮೆಗಳನ್ನು ತೊರೆದು, ದ್ವಂದ್ವಗಳನ್ನು ಗೆದ್ದು, ಆಧ್ಯಾತ್ಮಿಕತೆಯತ್ತ ಚಲಿಸುವುದು ಜೀವನದ ಗುರಿಯಾಗಬೇಕೆಂಬ ಎಲಿಯಟ್‌ನ ಧೋರಣೆ ಕೋಲ್ಬಿ—ಎಗರ್ಸನ್ ಸಂಬಂಧದಲ್ಲಿ ಸ್ಪಷ್ಟವಾಗಿ ಬಿತ್ತರವಾಗಿದೆ,

ಎಲಿಯಟ್‌ನ ಕೊನೆಯ ನಾಟಕದ 'ದಿ ಎಲ್ಡರ್ ಸ್ಟೇಟ್ಸ್‌ಮನ್'. (The Elder stateman, ೧೯೫೮). ಈ ನಾಟಕದ ಕೇಂದ್ರ ಪಾತ್ರ ಒಬ್ಬ ರಾಜಕೀಯ ಪಟು—ಲಾರ್ಡ್ ಕ್ಲೇವರ್ಟನ್. ಹಲವಾರು ವರ್ಷಗಳ ರಾಜಕೀಯ ಚಟುವಟಿಕೆಗಳಿಂದ ಒಂದು ದಿನ ಇವನು ಡಾಕ್ಟರ ಸಲಹೆಯ ಮೇರೆಗೆ ನಿವೃತ್ತನಾಗುತ್ತಾನೆ. ತನ್ನ ಯೌವನದಲ್ಲಿ ಮತ್ತು ರಾಜಕೀಯ ಜೀವನದಲ್ಲಿ ಸಾಕಷ್ಟು ನೇತ್ಯಾತ್ಮಕ ಕ್ರಿಯೆಗಳಲ್ಲಿ ಪಾಲ್ಗೊಂಡಿರುತ್ತಾನೆ. ನಿವೃತ್ತನಾದ ಮೇಲೆ ಒಂಟಿಜೀವಿಯಾಗಿಬಿಡುತ್ತಾನೆ, ಸದಾ ಗ್ರಂಥಾಲಯದಲ್ಲಿ ಕಾಲಕಳೆಯತೊಡಗುತ್ತಾನೆ. ಭೂತಕಾಲ ಇವನನ್ನು ಪೀಡಿಸಲು ಪ್ರಾರಂಭಿಸುತ್ತದೆ. ಒಂಟಿತನ ಅಸಹನೀಯವಾಗುತ್ತದೆ. ಇದರಿಂದ ಪಾರಾಗಲು ಮಗಳು ಮೋನಿಕಾ ಯಾವಾಗಲೂ ತನ್ನ ಸನಿಹದಲ್ಲೇ ಇರಬೇಕೆಂದು ಬಯಸುತ್ತಾನೆ. ಇವನ ಆರೋಗ್ಯಕ್ಕಾಗಿ ಡಾಕ್ಟರು ಯಾವ ಔಷಧಿಯನ್ನೂ ಕೊಡುವುದಿಲ್ಲ ಬದಲಾಗಿ ಸ್ಥಳ ಬದಲಾವಣೆಯನ್ನು ಸೂಚಿಸುತ್ತಾರೆ. ಕ್ಲೇವರ್ಟನ್ ಇದನ್ನು ಒಪ್ಪಿ ಬೇರೆಡೆ ತೆರಳುತ್ತಾನೆ. ಮೋನಿಕಾ ಸಹಾ ತಂದೆಯ ಜೊತೆ ಹೋಗಿ ಶುಶ್ರೂಷೆಯಲ್ಲಿ ತೊಡಗುತ್ತಾಳೆ. ಒಂದು ದಿನ ಕ್ಲೇವರ್ಟನ್‌ನ ಕಾಲೇಜು ದಿನಗಳ ಗೆಳೆಯ ಫೆಡೆರಿಕೊ ಗೋಮೆಜ್ ಭೇಟಿಯಾಗಲು ಬರುತ್ತಾನೆ. ಇವರಿಬ್ಬರು ಹಲವು ವರ್ಷಗಳ ಹಿಂದೆ ಅನೇಕ ನೀಚ ಕೆಲಸಗಳನ್ನು ಮಾಡಿರುತ್ತಾರೆ. ಈಗ ಫೆಡೆರಿಕೊ ಕ್ಲೇವರ್ಟನ್‌ಗೆ ತನ್ನ ಭೂತಕಾಲದ ಪಾಪಕೃತ್ಯಗಳ ಮೂರ್ತರೂಪವಾಗಿ ಕಾಣಿಸುತ್ತಾನೆ. ಬೇರೊಂದು ದೇಶದಲ್ಲಿ ಫೆಡೆರಿಕೊ ಗೋಮೆಜ್ ಅಮಾನವೀಯ ಕೃತ್ಯಗಳಿಂದ ಶ್ರೀಮಂತನಾಗುತ್ತಾನೆ. ಇವರು ಪುನಃ ಭೇಟಿಯಾದಾಗ ಇಬ್ಬರು ಮಾನಸಿಕ ಗತಿಸ್ಥಿತಿಗಳು ಒಂದೇ ಆಗಿರುತ್ತವೆ. ಅರ್ಥಾತ್, ಪಾರಮಾರ್ಥಿಕವಾಗಿ ಇಬ್ಬರೂ ದಿವಾಳಿಯಾಗಿರುತ್ತಾರೆ.

ಕ್ಲೇವರ್ಟನನ್ನು ಭೇಟಿಯಾಗಲು ಬರುವ ಇನ್ನೊಬ್ಬ ವ್ಯಕ್ತಿಯೆಂದರೆ ಮೈಸಿ ಬ್ಯಾಟರ್ಸನ್. ಯೌವ್ವನದಲ್ಲಿ ಕ್ಲೇವರ್ಟನ್ ಮೈಸಿಯನ್ನು ಪ್ರೀತಿಸುವಂತೆ ನಟಿಸಿ ವಂಚಿಸಿರುತ್ತಾನೆ. ಜಗತ್ತಿನಲ್ಲಿ ಕ್ಲೇವರ್ಟನ್‌ಗೆ ಇರುವ ಗೌರವಾನ್ವಿತ ವ್ಯಕ್ತಿ ಎಂಬ ಇಮೇಜ್‌ನ ಹಿಂದೆ ಎಂತಹ ಅನೈತಿಕ ಮುಖವಿದೆ ಎಂಬುದನ್ನು ಮೈಸಿ ಬಿಚ್ಚಿಡುತ್ತಾಳೆ.

ಕ್ಲೇವರ್ಟನ್ನನ ಕೆಡುಕು ಎಷ್ಟು ಘೋರವೆಂಬುದನ್ನು ಎಲಿಯಟ್ ಇವನ ಮಗ ಮೈಖೇಲ್‌ನ ಕೃತ್ಯಗಳ ಮುಖೇನ ನಿಚ್ಚಳಗೊಳಿಸುತ್ತಾನೆ. ತಂದೆಯ ಸಕಲ ದುರ್ಗುಣಗಳನ್ನು ಮೈಗೂಡಿಸಿಕೊಂಡ ಮೈಖೇಲ್‌ಗೆ ಯಾವ ಮೌಲ್ಯವೂ ಇಲ್ಲ. ಇವನೊಡನೆ ಮುಖಾಮುಖಿಯಾದಾಗ ಎಂತಹ ತಿಳಿವಳಿಕೆ ನೀಡಬೇಕೆಂದು ಕ್ಲೇವರ್ಟನ್‌ಗೆ ತಿಳಿಯುವುದಿಲ್ಲ. ಏಕೆಂದರೆ ಮಗನ ಸ್ಥಿತಿಗೂ ತಂದೆಯ ಸ್ಥಿತಿಗೂ ಏನೂ ವ್ಯತ್ಯಾಸವಿಲ್ಲ. ಈ

ಇಕ್ಕಟ್ಟಿನ ಸಂದರ್ಭದಲ್ಲಿ ಭೂತಕಾಲ ಕ್ಲೇವರ್ಟನ್ನನ್ನು ತೀವ್ರವಾಗಿ ಹಿಂಸಿಸುತ್ತದೆ. ಮೋನಿಕಾ ತನ್ನ ಪ್ರಿಯಕರ ಚಾರ್ಲ್ಸ್ ಜೊತೆ ಮಾತನಾಡುವಾಗ ತಂದೆಯನ್ನು ಹೊಗಳುವ ಮಾತುಗಳು ಕಿವಿಗೆ ಬಿದ್ದಾಗ ಪಾಪಪ್ರಜ್ಞೆ ಇನ್ನಷ್ಟು ಮೊನಚಾಗಿ ಇವನನ್ನು ಕಿತ್ತುತಿನ್ನುತ್ತದೆ. ಜಗತ್ತಿನಲ್ಲಿ ತನ್ನ ಬಗ್ಗೆ ಇರುವ ಅಭಿಪ್ರಾಯ ತಪ್ಪು ಕಲ್ಪನೆಯಿಂದ ಉಂಟಾದದ್ದು, ತಾನು ಭೂತಕಾಲದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಪ್ರಜ್ಞೆ ಇವನಿಗೆ ಮೂಡುತ್ತದೆ. ತನ್ನ ಕೃತ್ಯಗಳೆಲ್ಲವನ್ನು ಒಬ್ಬರ ಮುಂದೆ ನಿವೇದಿಸಿಕೊಳ್ಳಬೇಕೆಂಬ ತುಡಿತ ಇವನನ್ನು ತುಂಬಿಕೊಳ್ಳುತ್ತದೆ. ದೀರ್ಘವಾಗಿ ಆಲೋಚಿಸಿ, ಒದ್ದಾಡಿ, ಕೊನೆಗೆ ಒಂದು ನಿರ್ಧಾರಕ್ಕೆ ಬಂದು, ಮೋನಿಕಾಳೊಂದಿಗೆ ತನ್ನ ಮನಸ್ಸನ್ನು ಬಿಚ್ಚಿಕೊಳ್ಳುತ್ತಾನೆ. ತನಗೂ ತನ್ನ ಹೆಂಡತಿಗೂ ಇದ್ದ ಅಸಾಮರಸ್ಯ, ಮೈಸಿ ಹಾಗೂ ಫೆಡೆರಿಕೊ ಇಬ್ಬರ ಜೀವನವನ್ನು ತಾನು ಧೂಳೀಪಟ ಮಾಡಿದ್ದು, ಹಿಂದೆ ಒಂದು ದಿನ ಕಾರನ್ನು ವೇಗವಾಗಿ ಓಡಿಸಿ ಒಬ್ಬ ಮುದುಕನನ್ನು ಸಾಯಿಸಿದ್ದು, ಮುಖ್ಯವಾಗಿ ಭೂತಕಾಲವನ್ನು ಮುಚ್ಚಿಟ್ಟಿದ್ದು ಎಲ್ಲವನ್ನು ಮಗಳ ಮುಂದೆ ಬಿಚ್ಚಿಡುತ್ತಾನೆ. ಇದು ಸ್ವಾತಂತ್ರ್ಯದತ್ತ ಇವನ ಮೊದಲ ಹೆಜ್ಜೆ. ಹೃದಯವನ್ನು ಬೆತ್ತಲು ಮಾಡಿಕೊಳ್ಳುವುದು ನೈಜ ಕ್ರಿಶ್ಚಿಯನ್ ಧರ್ಮದ ಮೊದಲ ತತ್ತ್ವ. ತನ್ನ ನಿವೇದನೆಯನ್ನು ಮಗನ ಮುಂದೆಯೂ ಮಾಡಿ ಕ್ಲೇವರ್ಟನ್ ನಿರಾಳನಾಗುತ್ತಾನೆ. ಇದರ ಪರಿಣಾಮವಾಗಿ ಭೂತಕಾಲದ ಪರದೆ ಮರೆಯಾಗುತ್ತದೆ, ಪಾಪ ಪ್ರಜ್ಞೆಯ ಹೊರೆ ಕಳಚುತ್ತದೆ; ಕ್ಲೇವರ್ಟನ್ 'ನಿಜ'ವಾದ ವ್ಯಕ್ತಿಯಾಗುತ್ತಾನೆ.

ಈ ನಾಟಕದ ಮಧ್ಯದಲ್ಲಿ ಕ್ಲೇವರ್ಟನ್ ಇದ್ದರೆ, ಒಂದೆಡೆ ನೀಚತನದ ಪ್ರತಿನಿಧಿಗಳಾಗಿ ಮೈಸಿ ಮತ್ತು ಫೆಡೆರಿಕೊ ಇನ್ನೊಂದೆಡೆ ಇತ್ಯಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಮಿಸೆಸ್ ಪಿಗಟ್, ಮೋನಿಕಾ ಮತ್ತು ಚಾರ್ಲ್ಸ್ ಇದ್ದಾರೆ. ಮೋನಿಕಾ ಮತ್ತು ಚಾರ್ಲ್ಸ್ ಪ್ರೇಮದ ಬೆಲೆಯನ್ನು ಅರಿತವರು. ಸಂಕಷ್ಟ ಮತ್ತು ಸಾವಿನ ಎದುರು ಪ್ರೀತಿಯ ಶಕ್ತಿಯನ್ನು ಎತ್ತಿ ಹಿಡಿಯುವ ಮೋನಿಕಾಳ ಮಾತಿನೊಂದಿಗೆ ನಾಟಕ ಮುಕ್ತಾಯವಾಗುತ್ತದೆ.

ಎಲಿಯಟ್‌ನ ಎಲ್ಲಾ ನಾಟಕಗಳನ್ನೂ ಸಮಗ್ರವಾಗಿ ಅವಲೋಕಿಸಿದಾಗ ಕೆಲವು ಲಕ್ಷಣಗಳು ಎದ್ದುಕಾಣುತ್ತವೆ. ಪ್ರಾಪಂಚಿಕ ಭೋಗವನ್ನು ತಿರಸ್ಕರಿಸಿ ಆಧ್ಯಾತ್ಮಿಕ ಜೀವನಕ್ರಮವನ್ನು ಪರಮ ಮೌಲ್ಯವಾಗಿ ಇವನು ಕಂಡಿದ್ದಾನೆ. ಆಧುನಿಕ ಬದುಕಿನ ಟೊಳ್ಳುತನವನ್ನೂ ಖೋಟಾ ವ್ಯಕ್ತಿತ್ವವನ್ನೂ ಭ್ರಮಾಲೋಕವನ್ನೂ ಒಡೆದು ಒಂದು ತತ್ತ್ವಕ್ಕೆ ನಿಷ್ಠನಾದಾಗ ಮಾತ್ರ ಬಾಳಿಗೆ ಅರ್ಥ ಪ್ರಾಪ್ತವಾಗುತ್ತದೆ ಎಂಬ ನೋಟ ಇವನ ನಾಟಕಗಳಲ್ಲಿದೆ. ಇಪ್ಪತ್ತನೆಯ ಶತಮಾನದ ಸಂವೇದನೆಯನ್ನು ಸೂಕ್ಷ್ಮವಾಗಿ ಗ್ರಹಿಸಿ ಇಂದಿನ ಮನುಷ್ಯನ ಬೇರಿಲ್ಲದ ಬದುಕಿಗೆ ಒಂದು ದಾರಿಯನ್ನು ತೋರಿದ್ದಾನೆ. ಇದೇ ಇವನ ನಾಟಕಗಳ ಸಾರ್ಥಕತೆ.

ಮಹಾತ್ಮನಿಗೆ ಗೌರವ

ಕನ್ನಡಕ್ಕೆ : ಕೆ. ಅಕ್ಕಮಹಾದೇವಿ

ನ್ಯೂಯಾರ್ಕ್ ನಗರ ಅಕ್ಟೋಬರ್ ೨ರಂದು ಮಹಾತ್ಮಾ ಗಾಂಧಿ ಅವರ ಗೌರವಾರ್ಥ ೧೧೭ನೇ ಜನ್ಮದಿನೋತ್ಸವ ಆಚರಿಸುವ ಸಲುವಾಗಿ ಯೂನಿಯನ್ ಸ್ಕ್ವೇರ್ ಪಾರ್ಕ್‌ನಲ್ಲಿ ಭಾರತದ ರಾಷ್ಟ್ರಪಿತನ ಪ್ರತಿಮೆಯನ್ನು ಅನಾವರಣ ಮಾಡಿತು.

ಚರಿತ್ರಾರ್ಹವಾದ ಈ ಉದ್ಯಾನ ಅಮೆರಿಕಾದ ಅಧ್ಯಕ್ಷರಾಗಿದ್ದ ಜಾರ್ಜ್ ವಾಷಿಂಗ್‌ಟನ್ ಮತ್ತು ಅಬ್ರಹಾಮ್ ಲಿಂಕನ್ ಹಾಗೂ ಕ್ರಾಂತಿಯುತ ಸ್ವಾತಂತ್ರ್ಯ ಸಮರಕ್ಕೆ ಸುಮಾರು ೨೦೦ ವರ್ಷಗಳ ಕಾಲ ಸ್ವಯಂಸೇವೆ ಸಲ್ಲಿಸಿದ ಫ್ರಾನ್ಸಿನ ಮಾರ್ಕ್ವಿಸ್ ಡಿ ಲಾಫಯೆಟ್ಟೆ ಮುಂತಾದವರ ಪ್ರತಿಮೆಗಳಿಗೆ ತವರು.

ಉತ್ತರ ಅಮೆರಿಕಾಕ್ಕೆ ಪ್ರಥಮ ಕೊಡುಗೆಯಾದ ೨.೪ ಮೀಟರ್ ಎತ್ತರವಿರುವ ಗಾಂಧೀಜಿಯ ಈ ಕಂಚಿನ ಪ್ರತಿಮೆ ಅಹಮದಾಬಾದಿನ ಚಂದ್ರೋಡಿಯಾದ ಎಚ್. ಕೆ. ಪಟೇಲ್ ಅವರ ಕೃತಿ. ಅಮೆರಿಕಾದ ಸಂಸ್ಥಾನದಲ್ಲಿರುವ ಭಾರತೀಯ ಸಮಾಜ ಇದರ ಸ್ಥಾಪನೆಗೆ ಅಂಕುರಾರ್ಪಣವಾಯಿತು. ಈ ಪ್ರತಿಮೆಯ ಮೌಲ್ಯ ಸುಮಾರು ೬೦,೦೦೦ ಡಾಲರುಗಳು. ಇದನ್ನು ತುಂಬಿಸಿಕೊಡಲು ಮುಂದಾದವರೆಂದರೆ ಅಂತರರಾಷ್ಟ್ರೀಯ ಮುಜ್ರಾನಿ ಅಧ್ಯಕ್ಷರಾದ ಮೋಹನ್ ಬಿ. ಮುಜ್ರಾನಿ. ಯೂನಿಯನ್ ಸ್ಕ್ವೇರ್ ಪಾರ್ಕಿನಲ್ಲಿ ಎಲ್ಲ ಪ್ರತಿಮೆಗಳನ್ನೂ ಸಜ್ಜುಗೊಳಿಸುವ ಸಲುವಾಗಿ ಉದ್ಯಾನ ಇಲಾಖೆಗೆ ಸುಮಾರು ೧೦೦,೦೦೦ ಡಾಲರುಗಳ ವಂತಿಗೆ ನೀಡಿದ್ದಾರೆ ಭಾರತೀಯ ಅಮೆರಿಕನ್ನರು.

ಗಾಂಧೀಜಿಯವರ ಪ್ರತಿಮೆಯ ಅನಾವರಣದ ಈ ಸಮಾರಂಭಕ್ಕೆ ಸುಮಾರು ೪೦೦ ಮಂದಿ ಭಾರತೀಯರು ಮತ್ತು ಅಮೆರಿಕನ್ನರು ಹಾಜರಿದ್ದರು. ನ್ಯೂಯಾರ್ಕ್ ನಗರದ ಉದ್ಯಾನಗಳ ಆಯುಕ್ತ

೧೯೮೬ರ ನವೆಂಬರ್ ತಿಂಗಳ 'ಸ್ಪೇನ್' ಮಾಸಪತ್ರಿಕೆಯಲ್ಲಿ ಪ್ರಕಟವಾದ "ಆನರಿಂಗ್ ದಿ ಮಹಾತ್ಮಾ" ಲೇಖನದ ಅನುವಾದ.

ರಾದ ಹೆನ್ರಿಸ್ಟೈನ್‌ರವರು ಸಮಾರಂಭನನ್ನು ಉದ್ದೇಶಿಸಿ ಮಾತನಾಡುತ್ತ "ಮಹಾತ್ಮಾ ಗಾಂಧಿಯವರನ್ನು ಗೌರವಿಸಲು ಯೂನಿಯನ್ ಸ್ಕ್ವೇರ್ ಪಾರ್ಕ್"ಗಿಂತ ಉತ್ತಮವಾದ ಸ್ಥಳ ಬೇರೊಂದು ಇಲ್ಲವೆಂದು ನಾನು ಭಾವಿಸುತ್ತೇನೆ. ನ್ಯೂಯಾರ್ಕ್ ನಗರ ಮಹಾತ್ಮಾ ಗಾಂಧಿಗೆ ಮಾತ್ರವಲ್ಲ ಇಡೀ ಭಾರತಕ್ಕೆ ತನ್ನ ಹೃದಯವನ್ನು ತೆರೆದಿದೆ. ಅರ್ಥಾತ್ ಈ ನೆಲದ ಒಂದು ಭಾಗದ ಪಾವಿತ್ರ್ಯ ಎಂದೆಂದಿಗೂ ಭಾರತಕ್ಕೆ ಮುಡಿಪು" ಎಂದು ಸ್ಪಷ್ಟಪಡಿಸಿದ್ದಾರೆ.

ಭಾರತದ ರಾಯಭಾರಿ ಪಿ. ಎ. ನಜ್ರೇತ್ ಅವರು ತಮ್ಮ ಭಾಷಣದಲ್ಲಿ "ಈ ಪ್ರತಿಮೆಯ ಪ್ರತಿಷ್ಠಾಪನೆ ಈ ಮುಖ್ಯ ನಗರದ ಚರಿತ್ರಾರ್ಹ ಉದ್ಯಾನದಲ್ಲಿ ನೆರವೇರಿರುವುದು, ನ್ಯೂಯಾರ್ಕಿಗೆ ಮತ್ತು ಯಾವುದೇ ಪ್ರದೇಶದಲ್ಲಿರುವ ಭಾರತೀಯ ಸಮಾಜಕ್ಕೆ ಒಂದು ಹೆಮ್ಮೆಯ ಸಂಗತಿ. ಸ್ವಾತಂತ್ರ್ಯಕಾಂಕ್ಷಿಗಳಾಗಿ ಬಂದ ಹೊರಗಿನವರಿಗೆ ನೆಲೆವೀಡಾಗಿಯೂ ಸಂಯುಕ್ತರಾಷ್ಟ್ರಗಳಿಗೆ ತವರಾಗಿಯೂ ಇರುವ ಈ ನಗರ ಗಾಂಧಿ ಪ್ರತಿಮೆಯ ಅನಾವರಣದ ಮೂಲಕ ಅವರ ಸಂದೇಶ ವಿಶ್ವವ್ಯಾಪಿಯಾಗಲು ಯುಕ್ತವಾದ ಸ್ಥಳವಾಗಿದೆ" ಎಂದು ಹೇಳಿದ್ದಾರೆ.

ಮತ್ತೊರ್ವ ಭಾಷಣಕಾರ ಮತ್ತು ೭೫ ವರ್ಷ ವಯಸ್ಸಿನ ಅಮೆರಿಕಾದ ಪೌರನಾಯಕ ಬೇಯಾರ್ಡ್ ರಸ್ಟಿನ್ ಎಂಬವರು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲು ೧೯೪೦ರಲ್ಲಿ ಭಾರತಕ್ಕೆ ಭೇಟಿ ನೀಡಿದ್ದರು. ಈ ಉತ್ಸವವನ್ನು ಕುರಿತಾಗಿ ಅವರು "ಈ ದಿನ ನಾವು ಗಾಂಧಿಯವರ ಪ್ರತಿಮೆಯ ಅನಾವರಣ ಮಾಡುವುದರ ಮೂಲಕ ಪ್ರಗತಿಯ ಒಂದು ಹೆಜ್ಜೆಯನ್ನು ಮುಂದೆ ಇಟ್ಟಿದ್ದೇವೆ. ನಮ್ಮೆಲ್ಲರ ನಡುವೆ ಅವರ ಜೀವನ, ಚಿಂತನ, ಮಾತು ಮತ್ತು ಕೃತಿಗಳನ್ನು ಸ್ಥಿರವಾಗಿ ಅಳವಡಿಸಿಕೊಳ್ಳಲಿದ್ದೇವೆ" ಎಂದು ಹೇಳಿರುವುದು ಸಮಯೋಚಿತವಾಗಿದೆ.

ಪ್ರತಿಮೆಯ ಪ್ರತಿಷ್ಠಾಪನೆಯ ಕೀರ್ತಿ ನ್ಯೂಯಾರ್ಕ್ ನಗರದ ಸಲಹಾ ಸಮಿತಿಯ ಸದಸ್ಯರಾದ ಡಾ|| ಚಂದ್ರಶೇಖರ್‌ರವರಿಗೆ ಸಂದಿದೆ. ನ್ಯೂಯಾರ್ಕಿನಲ್ಲಿ ಗಾಂಧಿಯವರಿಗೆ ಸೂಕ್ತ ಸ್ಮಾರಕವೊಂದನ್ನು ನಿರ್ಮಿಸುವಂತೆ ಮೇಯರ್ ಎಡ್‌ವರ್ಡ್ ಕೋಚ್‌ರವರನ್ನು ಸುಮಾರು ಮೂರು ವರ್ಷಗಳಿಂದಲೂ ಒತ್ತಾಯಿಸಿದ್ದಾರೆ.

ಉಪವಾಸಗಳಿರುವುದು, ವಿವೇಕವನ್ನು ಜಾಗ್ರತಗೊಳಿಸಿ ಮನಸ್ಸಿನ ಮಾಲಿನ್ಯವನ್ನು ಅಳಿಸುವುದಕ್ಕಾಗಿ.

ಗಾಂಧೀಜಿ

ಸೂರ್ಯ ಮರಳಿ ಬಂದ [ಚೆಕ್ ಕಥೆ]

ಈರ್ಶಿ ವೋಲ್ಕರ್

ಅವನು ಒಂದು ಭವ್ಯ ಅರಮನೆಯಲ್ಲಿ ವಾಸಿಸುತ್ತಿದ್ದ. ಜನರು ಅವನ ಸೇವೆಯಲ್ಲಿ ಸದಾ ಮಗ್ನರಾಗಿರುತ್ತಿದ್ದರು. ಜೀವನದಲ್ಲಿ ಅವನಿಗೆಲ್ಲವೂ ಸಿಕ್ಕಿತ್ತು. ಅವನಿಚ್ಛೆಗಳೆಲ್ಲವು ಪೂರ್ಣವಾಗಿದ್ದರೂ ಈ ವ್ಯಕ್ತಿ ರೋಗಿಯಾಗಿದ್ದರಿಂದ ಸಹಜವಾಗಿರಲಿಲ್ಲ. ಅವನ ಶರೀರದ ಮೇಲೆಲ್ಲಾ ಹಳದಿ ಗಾಯಗಳಾಗಿದ್ದವು. ಗಾಯಗಳು ಸ್ರವಿಸುತ್ತಿದ್ದವು. ಸಾಕಷ್ಟು ನೋವನ್ನು ಆತ ಅನುಭವಿಸುತ್ತಿದ್ದ. ಈ ಕೊಳಕು ರೋಗ ಅವನನ್ನು ಒಳಗೇ ಹಿಂಡಿ ಲಜ್ಜಾಸ್ಪದಗೊಳಿಸಿ ಬಿಟ್ಟಿತ್ತು.

ಅವನು ಸಾಮಾನ್ಯವಾಗಿ ಬೆಲೆಬಾಳುವ ಸುಂದರ ಉಡುಪುಗಳನ್ನೆ ಸದಾ ಧರಿಸಿರುತ್ತಿದ್ದ—ತನ್ನ ರೋಗ ಇತರರಿಗೆ ಗೋಚರಿಸಬಾರದೆಂದು. ಈಗ ಅವನಿಗೆ, ಈ ರೋಗ ಹೆಚ್ಚುತ್ತಾ ಕಡೆಗೆ ಕಣ್ಣುಗಳನ್ನೂ ಆವರಿಸಿಬಿಟ್ಟರೆ ಎಂಬ ಭಯ ಕಾಡಲಾರಂಭಿಸಿತು. ಹೆದರಿದ ಅವನು ವೈದ್ಯರನ್ನು ಕರೆಸಲು ಆಜ್ಞಾಪಿಸಿದ. ಇದುವರೆಗೆ ಇವೆಲ್ಲವನ್ನೂ ಬೇರೆಯವರಿಗೆ ಹೇಳಲು ಅವನು ಸಂಕೋಚಪಡುತ್ತಿದ್ದ....ಯಾಕೆಂದರೆ ಆತ, ಯಾರ ಬಳಿ ಹಣ ಹೆಚ್ಚಾಗಿರುವುದೋ ಆತನೇ ಸುಖಿಯಾಗಿರುತ್ತಾನೆ ಎಂದು ನಂಬುತ್ತಿದ್ದ. ಅವನ ಐಶ್ವರ್ಯ ಕಂಡು ಜನರೂ ಹೀಗೆಯೇ ಯೋಚಿಸುತ್ತಿದ್ದರು.

ವೈದ್ಯ ಬಂದ ಮೇಲೆ ಮೊದಲು ಅವನಿಗೆ ಆತ ತನ್ನ ಉಪದೇಶವನ್ನು ಹೇಳಿದ, "ನಾನು ಯಾರನ್ನೂ ನಂಬುವುದಿಲ್ಲ. ರಾಜಾ ಮಿಡಾಸ್‌ನ ಕಥೆಯಿಂದ, ನಾನು ಎಚ್ಚರವಾಗಿರಬೇಕೆಂದು ಶಿಕ್ಷಣ ದೊರೆತಿದೆ. ನನ್ನ ರೋಗ ಎಷ್ಟು ಕೆಟ್ಟದ್ದಾಗಿದೆಯೆಂದರೆ ಯಾರೂ ಇದರ ಬಗ್ಗೆ ತಿಳಿಯಲೇಬಾರದು, ಇದು ನನ್ನಾಸೆ. ನೀನು ನನ್ನ ರೋಗಕ್ಕೆ ಚಿಕಿತ್ಸೆಯನ್ನು ಸೂಚಿಸಿದೊಡನೆಯೇ....ನಾನು ನಿನ್ನ ತಲೆಯನ್ನು ಶರೀರದಿಂದ ತೆಗೆಸಿಹಾಕುವೆ! ನಿನ್ನ ಹೆಂಡತಿ-ಮಕ್ಕಳಿಗೆ ನಾನು ಪೆಂಶನ್ ಕೊಡುವೆ".

ಆಧಾರ : 'ಸಾರಿಕಾ' ದಿಂದ

ವೈದ್ಯನ ತಲೆ ಮೇಲೆ ಮೃತ್ಯು ನೃತ್ಯಿಸುತ್ತಿತ್ತು. ಆಗಲೇ ರೋಗಿ ಅವನೆಮರು ಬಟ್ಟೆಗಳನ್ನೆಲ್ಲಾ ಕಳಚಿ ಹಾಕಿ ಬೆತ್ತಲೆ ನಿಂತ. ಅವನ ರೋಗ ಕಂಡು ವೈದ್ಯನ ಮನಸ್ಸು ಕಹಿಯಾಯಿತು.... ಈ ವ್ಯಕ್ತಿಯಿಂದಾಗಿ ನಾನು ಸಾಯಬೇಕಾಯಿತಲ್ಲಾ. ಸರಿ, ನಾನು ಇವನಿಗೆ ಸರಿಯಾದ ಔಷಧಿಯನ್ನೇ ಹೇಳುವೆ! ಎಂದು ವೈದ್ಯ ಯೋಚಿಸಿ ರೋಗಿಗೆ ಹೇಳಿದ, "ಮಾನ್ಯರೇ, ನಿಮ್ಮ ರೋಗದ ಔಷಧಿಗೆ ನಿಮಗೆ ಸೂರ್ಯನ ಅಗತ್ಯವಿದೆ. ಸೂರ್ಯನ ತುಂಡಲ್ಲ, ಇಡೀ ಸೂರ್ಯನೇ ಬೇಕು. ನಿಮ್ಮ ಬಳಿ ಸಾಕಷ್ಟು ಹಣವಿದೆ. ನೀವು ಸೂರ್ಯನನ್ನು ನಿಮ್ಮ ಅರಮನೆಯಲ್ಲೂ ಇಟ್ಟುಕೊಳ್ಳಬಲ್ಲಿರಿ. ಕೆಲವು ದಿನ ನೀವು ಸೂರ್ಯನ ಬಳಿಯಿದ್ದರೆ, ಅವನ ಕಿರಣಗಳಿಂದ ಲಾಭವಾಗುವುದು. ನೀವು ನಿರೋಗಿ ಮಾತ್ರವಲ್ಲ, ಅಮರರೂ ಆಗುವಿರಿ."

ಇದಾದ ಸ್ವಲ್ಪ ಹೊತ್ತಿನಲ್ಲಿಯೇ ವೈದ್ಯನಿಗೆ ಗುಂಡು ಹೊಡೆದು ಸಾಯಿಸಲಾಯಿತು. ಅವನ ವಿಧವೆ ಪತ್ನಿಗೆ ಸಾಕಷ್ಟು ಹಣದ ಚೆಕ್ ಕಳಿಸಿಕೊಡಲಾಯಿತು.

ಕಡಿಮೆ ಹಣ ಖರ್ಚುಮಾಡಿ ಸೂರ್ಯನನ್ನು ಭೂಮಿಯ ಮೇಲೆ ಇಳಿಸುವುದು ಹೇಗೆ?—ಈಗ ಶ್ರೀಮಂತ ರೋಗಿಗೆ ಈ ಚಿಂತೆ ತಾಕಿತು! ನೂರು ಇಂಜಿನಿಯರುಗಳು ಸೇರಿ, ಸೂರ್ಯನನ್ನು ಕೆಳಗಿಳಿಸಿ ಅರಮನೆಯಲ್ಲಿಡಲು ಯೋಜನೆಯೊಂದನ್ನು ತಯಾರಿಸಿದರು.

....ಮತ್ತೊಂದು ರಾತ್ರಿ ಅವರು ಸೂರ್ಯನನ್ನು ಸೆರೆಹಿಡಿದರು. ಅವನನ್ನು ಒಂದು ಭವ್ಯ ತಿಜೋರಿಯಲ್ಲಿ ಬಂದ್‌ಮಾಡಿದರು—ಸೂರ್ಯನ ಒಂದು ಕಿರಣವೂ ಹೊರ ಹೋಗಬಾರದೆಂದು. ಜಗತ್ತಿನಲ್ಲೆಲ್ಲಾ ಅಂಧಕಾರ ಹಬ್ಬಿತು. ತಾನಿನ್ನು ನಿರೋಗಿಯಾಗುವೆ ಎಂದು ರೋಗಿ ಖುಷಿಯಾದ.

ನಾನೀಗ ಅಮರವಾಗುವೆ ಎಂದು ರೋಗಿ ಯೋಚಿಸುತ್ತಾ ದಿನ ಕಳೆಯಲಾರಂಭಿಸಿದ. ಸೂರ್ಯನಿಂದೇನಾಗುವುದು, ತಾನೀಗ ಬೇರೆ ಗ್ರಹಗಳನ್ನೂ ತನ್ನ ತಿಜೋರಿಯಲ್ಲಿ ಬಂಧಿಸಬಹುದು. ತಾನು ದೇವರನ್ನೂ ಖರೀದಿ ಮಾಡಿಬಿಡುವೆ. ಆಗ, ತನ್ನನ್ನು ಯಾರು ಎದುರಿಸುತ್ತಾರೆ, ನೋಡುವೆ! ತಾನು ಪೃಥ್ವಿಯನ್ನು ಒಂದು ಹೆಣ್ಣಿನಂತೆ ಆನಂದಿಸುವೆ. ತಾನು ಬಲಿಷ್ಠ ...

ಜನರಿಗೆಚ್ಚರವಾದಾಗ ಅವರು ಗಾಬರಿಯಾದರು.... ಆಕಾಶದಲ್ಲಿ ಇದೆಂಥ ಹಾಗಾಯ! ಕಡೆಗೆ ಅವರೆಲ್ಲಾ ಕೂಗಾಡಲಾರಂಭಿಸಿದರು, "ಸೂರ್ಯ ಎಲ್ಲಿ? ಸೂರ್ಯನನ್ನು ಯಾರು ಕದ್ದರು?" ಕೇಳುವವರು ಇದ್ದರೆ ತಾನೇ? ಎಲ್ಲರೂ ವ್ಯಗ್ರರಾದರು, ಹೆದರಿದರು. ರಸ್ತೆ–ಗಲ್ಲಿಗಳಲ್ಲಿ ಜನರ ಗುಂಪು ಕಲೆಯಿತು.

ತನ್ನದೇಯಾದ ಅಮಲಿನಲ್ಲಿ ಶ್ರೀಮಂತ ರೋಗಿ ಯೋಚಿಸುತ್ತಲೇ ಇದ್ದ.... ತಾನು ಸರಿಯಾದ ಮೇಲೆ ಸೂರ್ಯನಿಂದ ವಿಶೇಷ ರೀತಿಯ ಬೆಂಕಿಪೊಟ್ಟಣಗಳನ್ನು ತಯಾರಿಸುವೆ. ಬಿಸಿಲಿನ ತಾಪದಿಂದ ಬೆಂದ ಮನುಷ್ಯನಿಗೆ ಮಲಾಮನ್ನು ಮಾಡುವೆ.... ಮನುಷ್ಯ ಬುದ್ಧಿವಂತನಾದರೆ ಎಷ್ಟೊಂದು ಶ್ರೀಮಂತನಾಗಬಹುದು.

ಜನರ ಕಳವಳ ಹೆಚ್ಚುತ್ತಲೇ ಇತ್ತು. ಆ ಕಡೆ ಶ್ರೀಮಂತ ರೋಗಿ ದೊಡ್ಡ–ದೊಡ್ಡ ಪೋಸ್ಟರ್‌ಗಳನ್ನು ಹಚ್ಚಿಸಿ, "ಕಡೆಗೆ ಅಂಧಕಾರ ಹಬ್ಬಿತು" ಎಂದು ತಿಳುವಳಿಕೆಯನ್ನು

ಕೊಟ್ಟ. ಅವನು ಪತ್ರಿಕೆಗಳಲ್ಲಿ ಲೇಖನವನ್ನೂ ಪ್ರಕಟಿಸಿದ...."ದೀರ್ಘ ಕಾಲದಿಂದ ಜನ ಸೂರ್ಯನಿಂದ ವ್ಯಗ್ರರಾಗಿದ್ದರು....ವೈದ್ಯರು ಸಂಶೋಧನೆಯಿಂದ, ಸೂರ್ಯನ ನೆರಳಲ್ಲಿ ಹುಟ್ಟಿದ ನೂರಾರು ಜನ ಸತ್ತುಹೋದರು ಎಂಬುದನ್ನು ದೃಢಪಡಿಸಿದ್ದಾರೆ. ಆದ್ದರಿಂದ ದಾನವೀರರು ತಮ್ಮ ಖರ್ಚಿನಿಂದ ಸೂರ್ಯನನ್ನು ಆಕಾಶದಿಂದ ಬೇರ್ಪಡಿಸಿದ್ದಾರೆ. ವಿವರಗಳನ್ನು ತರಿಸಿಕೊಳ್ಳಿ!"

ಯಾರ ಬಳಿ ಪ್ರಕಾಶವಿತ್ತೋ ಅವರೆಲ್ಲ ಅದನ್ನು ಓದಿದರು. ಪ್ರಕಾಶವಿರದಿದ್ದವರು ವ್ಯಗ್ರರಾಗಿ ಅಲೆದಾಡಿದರು. ಅನುಭವಿ ವೃದ್ಧ ಮಹಿಳೆಯರು 'ಜಗತ್ತಿನ ಅಂತ್ಯ ಸಮೀಪಿಸುತ್ತಿದೆ' ಎನ್ನುವವರೆಗೂ ಯೋಚಿಸಿದರು.

ಶ್ರೀಮಂತ ರೋಗಿ ಈಗ ಚಿಕಿತ್ಸೆ ಮಾಡಿಕೊಳ್ಳಬೇಕಾಗಿತ್ತು. ಅವನು ಅರಮನೆ ಯಿಂದ ಎಲ್ಲಾ ಸೇವಕರನ್ನೂ ಓಡಿಸಿಬಿಟ್ಟ. ಭವ್ಯ ತಿಜೋರಿಗೆ ನುಗ್ಗಿ ಅದನ್ನು ಸರಿಯಾಗಿ ಭದ್ರಪಡಿಸಿಕೊಂಡ. ಪ್ರವೇಶದ್ವಾರದಲ್ಲಿ ಆತನ ಬಂದೂಕುಧಾರಿ ಕಾವಲು ಗಾರರಿದ್ದರು. ಯಾರನ್ನೂ ಒಳಗೆ ಬಿಡಬಾರದೆಂದು ಅವನಿಗೆ ಕಟ್ಟಪ್ಪಣೆ ಕೊಡಲಾಗಿತ್ತು.

ತಿಜೋರಿಯೊಳಗೆ ಬಂದು ರೋಗಿಯು ಬೀಗವನ್ನೂ ಹಾಕಿಕೊಂಡಿದ್ದ—ಬಟ್ಟೆ ಕಳಚಲು. ಮರುಕ್ಷಣವೇ ಆತ ಬೆತ್ತಲಾಗಿ ನಿಂತ.

ಸೂರ್ಯನ ತಾಪದಿಂದ ಅವನಿಗೆ ಸ್ವಲ್ಪ ಕಸಿವಿಸಿಯಾಯಿತು. ಆದರೆ ಅವನು ಅದನ್ನು ಮನಸ್ಸಿಗೆ ತಂದುಕೊಳ್ಳಲಿಲ್ಲ. ಮಹಾನ್ ವಸ್ತುವೊಂದು ಸಿಗುತ್ತಿರುವಾಗ ಕಷ್ಟವನ್ನು ಸಹಿಸಬೇಕಾಗುತ್ತದೆ ಎಂದು ಯೋಚಿಸಿದ...."ಅದೇ ನನ್ನ ಬೆನ್ನು ನೋವು ... ನನ್ನ ತಲೆ, ಕಿವಿ, ಕಣ್ಣುಗಳು, ಎದೆ, ಕಾಲು....ಓಹೋ ಈ ತಾಪ ಸಹಿಸಲಸಾಧ್ಯ. ನಾನು ಬೂದಿಯಾಗಬಹುದು! ಇನ್ನೂ ಸ್ವಲ್ಪ ಈ ತಾಪ ತಡೆಯಲು ಪ್ರಯತ್ನಿಸಿ ನೋಡುವೆ! ಆ ಮೇಲೆ ನಾನು ಹೊರ ಹೋಗಿಯೇ ಹೋಗುವೆ. ಯಾವುದಾದರೂ ತಣ್ಣನೆಯ ಝರಿಯಲ್ಲಿ ಬೀಳುವೆ....ಅಥವಾ ಮಂಜಿನ ನದಿಯಲ್ಲಿ ಹೋಗಿ ಹೊರಳಾಡುವೆ. ಆದರೆ, ಈಗಂತೂ ನನ್ನ ಉಸಿರೇ ಕಟ್ಟುತ್ತಿದೆಯಲ್ಲ! ಇಲ್ಲ, ನಾನಿನ್ನು ತಡೆಯಲಾರೆ! ಇನ್ನು ಹೊರಹೋಗುವುದೇ ಒಳಿತು...." ಅವನು ಮನಸ್ಸಿನಲ್ಲಿ ಹೇಳಿಕೊಂಡ.

ಬೆತ್ತಲೆ ಶ್ರೀಮಂತ ರೋಗಿ ತನ್ನ ಉರಿಯುವ ಶರೀರ ಹೊತ್ತು, ಹದ್ದು ಕಣ್ಣು ಗಳಿಂದ ತಿಜೋರಿಯ ಬೀಗದ ಕಡೆಗೆ ಓಡಿಬಂದ, ಆದರೆ ಇದೇನು! ತಿಜೋರಿಯ ಬೀಗ ಕರಗಿ ಅಗಲವಾಗಿಬಿಟ್ಟಿತ್ತು. ಅವನಿಗೆ ತಿಜೋರಿಯ ಬಾಗಿಲನ್ನು ತೆಗೆಯಲು ಸಾಧ್ಯ ವಾಗಲೇ ಇಲ್ಲ. ಶ್ರೀಮಂತ ರೋಗಿ ಸಾಕಷ್ಟು ಹೊತ್ತು ವ್ಯರ್ಥ ಪ್ರಯತ್ನಮಾಡಿದ. ಬಾಗಿಲಿಗೆ ಬಡಿದೂ. ಒದ್ದೂ ಸುಸ್ತಾದ....ಹೊರಗೆ, ಈ ಸದ್ದು ಕೇಳುವವರಿದ್ದರೆ ತಾನೇ? ರೋಗಿ ಒಂಟಿಯಾಗಿದ್ದ....ದುರ್ಗಂಧ ಎದೆಯೊಳಗಿದ್ದ ಒಂಟಿ ಹೃದಯ....ಸ್ರವಿಸುವ ಗಾಯಗಳ ಒಂಟಿ ಶ್ರೀಮಂತರೋಗಿ ಮಾತ್ರ ಅಲ್ಲಿದ್ದ!....

ಶ್ರೀಮಂತ ರೋಗಿ ಈಗ ಭಯದಿಂದ ಕಂಪಿಸಿದ—ಬಿರುಗಾಳಿಗೆ ಒಂಟಿ ಮರವೊಂದು ಸಿಕ್ಕಿಹಾಕಿಕೊಂಡಂತೆ.

"ಅದೇ ಮೂರ್ಖ, ನೀನು ಜಗತ್ತಿನಲ್ಲಿರುವ ವ್ಯಕ್ತಿಗಳ ಸುಖವನ್ನು ಹೊದ್ದು ಕೊಳ್ಳಲು ಪ್ರಯತ್ನಿಸಬೇಡ! ನಿನ್ನ ಬಳಿ ಈ ಹಿಂದಿದ್ದದ್ದು ಏನೂ ಕಡಿಮೆಯೇ?"

ಸೂರ್ಯನ ತಾಪವನ್ನು ಸಹಿಸಲಾರದೇ ಈಗ ಶ್ರೀಮಂತ ರೋಗಿ ಕೆಳಗುರುಳಿದ. ಇನ್ನು ಉಳಿದಿದ್ದು ಈಗ ಅವನ ಬೂದಿ ... ಆ ಬೂದಿಯ ಬೆಲೆ ಹೆಚ್ಚೆಂದರೆ ಒಂದು ರೂಪಾಯಿಯೂ ಇರಲಿಲ್ಲ.

ಎಲ್ಲರೂ ಮೌನರಾಗಿದ್ದರು. ಯಾರೂ ಶೋಕವನ್ನಾಚರಿಸಲಿಲ್ಲ. ಸೂರ್ಯನ ಪ್ರಕಾಶ ಮೊದಲಿನಂತೆಯೇ ಇತ್ತು. ಕ್ರಮೇಣ ಗೋಡೆಗಳೂ ಬಿದ್ದವು. ಸೂರ್ಯನ ತಾಪ ಈಗ ಇನ್ನೂ ಸ್ವಲ್ಪ ಹಬ್ಬಿತು. ಈಗ ಅವನು ಹಸಿರು ಹುಲ್ಲಿನ ಮೇಲೆ ಇಳಿದು ಬಂದಿದ್ದ. ಜನ, ಸಂತೋಷದಿಂದ ಕೂಗಾಡುತ್ತಿದ್ದರು.

ಈಗ ಸೂರ್ಯನನ್ನು ಮತ್ತೆ ಆಕಾಶದ ಮೇಲೆ ಹೇಗೆ ಕಳಿಸುವುದು ಎಂದು ಜನ ಯೋಚಿಸುತ್ತಿದ್ದರು. ಮತ್ತೆ ಅವನು ಎಲ್ಲರನ್ನೂ ಮೇಲಿನಿಂದ ನೋಡಬೇಕು. ಎಲ್ಲರೂ ಅವನನ್ನು ಮೇಲಕ್ಕೆ ನೋಡಬೇಕು. ಯಾರು, ಮರಳಿ ಅವನನ್ನು ಆಕಾಶಕ್ಕೆ ಬಿಡುವುದು ಎಂದು ಜನ ಚರ್ಚಿಸಿದರು.

ಚರ್ಚೆ–ವಾದಗಳೆಲ್ಲಾ ಮುಗಿದ ಮೇಲೆ ಈ ನಿರ್ಣಯವನ್ನು ಎರಡು ಮಗುವಿನ ಮೇಲೆ ಬಿಡಲಾಯಿತು. ಒಂದು ಮಗು ಉತ್ಸಾಹದಿಂದ "ಹೂಂ–ಹೂಂ, ನಾವು ಇವನನ್ನು ಮರಳಿ ಕಳಿಸ್ತೀವಿ!" ಎಂದಿತು.

ಇಬ್ಬರು ಮಕ್ಕಳೂ ಸೂರ್ಯನನ್ನು ಆಕಾಶಕ್ಕೆ ಬಿಟ್ಟು ಬರಲು ಹೊರಟುಹೋದರು. ಹೊರಡುವಾಗ ಅವರ ತಾಯಿ, 'ನೀವಿಬ್ಬರೂ ಬೇಗ ಬಂದುಬಿಡಿ' ಎಂದು ಉಪದೇಶ ವಿತ್ತಳು. ಮತ್ತೆ ನಿಜವಾಗಿಯೂ ಅವರು ಶೀಘ್ರವೇ ಮರಳಿಯೂ ಬಂದರು!

ಕನ್ನಡಕ್ಕೆ : ಡಿ. ಎನ್. ಶ್ರೀನಾಥ್

ದೇವರು ಎಷ್ಟು ದೊಡ್ಡ ಪ್ರಜಾಪ್ರಭುತ್ವವಾದಿ! ನಮ್ಮ ಎಷ್ಟು ತಪ್ಪುಗಳನ್ನು, ಎಂಥೆಂಥ ಮೋಸಗಳನ್ನು ಸಹಿಸುತ್ತಾನೆ.

ಗಾಂಧೀಜಿ

ವೈಜ್ಞಾನಿಕ ಮನೋಧರ್ಮ

ಜಿ. ಟಿ. ನಾರಾಯಣರಾವ್

ಆಧುನಿಕ ಯಂತ್ರಸ್ಥಾವರವನ್ನು ಉದ್ಘಾಟಿಸುತ್ತ ರಾಷ್ಟ್ರದ ಒಬ್ಬ ಹಿರಿಯ ವಿಜ್ಞಾನಿ "ರಾಹುಕಾಲ ಆರಂಭವಾಗುವ ಮೊದಲೇ ಈ ಸ್ಥಾವರವನ್ನು ಚಾಲೂಗೊಳಿಸುವುದು ಅಗತ್ಯ. ಆದ್ದರಿಂದ ನನ್ನ ಭಾಷಣವನ್ನು ಇಲ್ಲಿಗೇ ನಿಲ್ಲಿಸುತ್ತೇನೆ" ಎಂದರು.

ದೇಶದ ಪ್ರಮುಖ ಯಂತ್ರೋದ್ಯಮ ಸಂಸ್ಥೆಯ ಪ್ರಧಾನಾಧಿಕಾರಿ —ಇವರು ಶಿಕ್ಷಣದಿಂದಲೂ ವೃತ್ತಿಯಿಂದಲೂ ಎಂಜಿನಿಯರ್— ತಮ್ಮ ಮಗಳ ಮದುವೆಯನ್ನು ಶೂನ್ಯಮಾಸದಲ್ಲಿ ನೆರವೇರಿಸಲು ಸುತರಾಂ ಒಪ್ಪಲಿಲ್ಲ. "ಅದು ಕೆಟ್ಟ ಕಾಲ. ಆಗ ಒಳ್ಳೆಯ ಕೆಲಸ ವನ್ನು ಹೇಗೆ ತಾನೇ ಮಾಡಲಿ?" ಇದು ಅವರು ನೀಡಿದ ವಿವರಣೆ.

ವಿಜ್ಞಾನ ಮತ್ತು ತಂತ್ರವಿದ್ಯೆಯಲ್ಲಿ ಪ್ರಪಂಚದ ಧುರೀಣರಾಷ್ಟ್ರ ವಾಗಿರುವ ಅಮೆರಿಕದ ಅಧ್ಯಕ್ಷ ರೊನಾಲ್ಡ್ ರೇಗನ್ ಫಲಜ್ಯೋತಿಷಿ ಗಳ ಜೊತೆ ಸಮಾಲೋಚಿಸದೆ ಮಹತ್ತ್ವದ ಯಾವ ನಿರ್ಣಯ ವನ್ನೂ ಕೈಗೊಂಡದ್ದಿಲ್ಲವೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಸಾಧಾರಣ ವ್ಯಕ್ತಿಗಳ ಬದುಕಿಗೆ ಬರೋಣ. ಮದುವೆಯ ಮೊದಲ ಹೆಜ್ಜೆ ಜಾತಕಗಳ ಹೊಂದಾಣಿಕೆ. ಮನೆಯೊಕ್ಕಲೆಂದರೆ ಶುಭ ಮುಹೂರ್ತದ ಅನ್ವೇಷಣೆ. ಹಿಡಿದ ಕೆಲಸ ಹಾಳಾದರೆ "ಈಗ ನಾನು ಪ್ರತಿಕೂಲ ದಿನಗಳನ್ನು ಎದುರಿಸುತ್ತಿದ್ದೇನೆ." ಆದ್ದರಿಂದ 'ಗ್ರಹಚಾರ ಬಿಡಿಸುವ' ಪ್ರಯತ್ನ ಮಾಡುವುದು ಅಗತ್ಯ. ದೇವರಿಗೆ ಹರಕೆ ಒಪ್ಪಿಸಿ, ಪೂಜೆಸಲ್ಲಿಸಿ ಅಥವಾ ಬಲಿನೀಡಿ ಸಕಲ ಇಷ್ಟಾರ್ಥಗಳನ್ನೂ ಸಿದ್ಧಿಸಿಕೊಳ್ಳಬಹುದೆಂಬ ನಂಬಿಕೆ ದಿನೇ ದಿನೇ ಹೆಚ್ಚಾಗುತ್ತಿದೆ ಎನ್ನುವುದಕ್ಕೆ ಸಾಕಷ್ಟು ಪುರಾವೆ ಗಳು ಸಿಕ್ಕುತ್ತವೆ.

ಪವಾಡಗಳ ಮೂಲಕ ಬದುಕಿನ ಸಮಸ್ಯೆಗಳನ್ನು ಪರಿಹರಿಸಬಹು ದೆಂಬ ಭಾವನೆ ಆದಿ ಮಾನವನಲ್ಲಿದ್ದಷ್ಟೇ ಆಳವಾಗಿ ಆಧುನಿಕ ಮಾನವನಲ್ಲಿಯೂ ಬೇರೂರಿರುವಂತಿದೆ.

ಬದುಕನ್ನು ಹಿಡಿದಿಟ್ಟು ನಿಯಂತ್ರಿಸುವ ಇಂಥ ನಂಬಿಕೆಗಳಿಗೂ ಈ ಸಂಬಂಧವಾದ ಆಚರಣೆಗಳಿಗೂ ಆಧಾರಗಳೇನಾದರೂ ಇವೆಯೇ? ವಿಜ್ಞಾನ ಮತ್ತು ತಂತ್ರವಿದ್ಯೆಯ ಪ್ರತ್ಯಕ್ಷ ಫಲಗಳನ್ನು ಭೋಗಿಸುತ್ತಿರುವ, ಆಧುನಿಕ ಮಾನವ ಇವುಗಳಿಗೆ ಹೊಂದುವಂತೆ ತನ್ನ ಜೀವನವನ್ನು ಮಾರ್ಪಡಿಸಿಕೊಳ್ಳುವುದು ಅಗತ್ಯವೇ? ಅನಿವಾರ್ಯವೇ?

"ವೇದೋಪನಿಷತ್ತುಗಳಲ್ಲಿ ಉಕ್ತವಾಗಿದೆ. ಪುರಾಣಗಳ ಸಮರ್ಥನೆ ಇದೆ" ಎಂದು ಮುಂತಾಗಿ ವಾದಿಸುವವರಿದ್ದಾರೆ. ಅದೇ ರೀತಿ ಬೈಬಲ್, ಕೊರಾನ್ ಮುಂತಾದ ಧಾರ್ಮಿಕ ಗ್ರಂಥಗಳಲ್ಲಿ ನಿರೂಪಿತವಾಗಿರುವ ಸೃಷ್ಟಿ ಅಥವಾ ಪ್ರಕೃತಿ ನಿಯಮಗಳನ್ನು ಉಲ್ಲೇಖಿಸಿ ತಮ್ಮ ನಂಬಿಕೆಯನ್ನು ಸಮರ್ಥಿಸುವವರಿದ್ದಾರೆ. ಏಕೆಂದರೆ ಇವೆಲ್ಲವೂ ಅಪೌರುಷೇಯಗಳು—ಸಾಕ್ಷಾತ್ ಭಗವಂತನ ಮುಖಾರವಿಂದದಿಂದ ಉದ್ಭವಿಸಿದ ಸ್ಫೂರ್ತಿಯುತ ವಾಣಿ. ಅಂದ ಮೇಲೆ ಭಗವತ್ಸೃಷ್ಟಿಗಳಾದ ಸಮಸ್ತ ಜೀವಿ ಅಜೀವಿಗಳೂ ಆ ವಾಣಿ ವಿಧಿಸಿರುವಂತೆಯೇ ಇರತಕ್ಕದ್ದು. ಇದು ನಿಜವೇ?

ಇಂಥ ಒಂದೊಂದು ಪ್ರಶ್ನೆಗೂ ಉತ್ತರವನ್ನು ಧಾರ್ಮಿಕ, ಪೌರಾಣಿಕ ಅಥವಾ ಪುರಾತನ ಗ್ರಂಥಗಳಲ್ಲಿ ಅರಸುವುದಕ್ಕಿಂತ ವಾಸ್ತವ ಜಗತ್ತಿನಲ್ಲಿ ಅನ್ವೇಷಿಸುವುದು ಸ್ವತಃ ನಮ್ಮ ದೃಷ್ಟಿಯಿಂದ ಅಧಿಕ ಉಪಯುಕ್ತ ಮತ್ತು ಫಲಕಾರಿ. ಏಕೆಂದರೆ ಗ್ರಂಥ ಯಾವುದೇ ಆಗಿರಲಿ—ಅದು ಎಷ್ಟೇ ಪ್ರಾಚೀನವಾಗಿರಲಿ, ಅದರ ಬಗ್ಗೆ ಜನರ ನಂಬಿಕೆ ನಿಷ್ಠೆ ವಿಶ್ವಾಸ ಯಾವ ಮಟ್ಟದ್ದೇ ಇರಲಿ, ಅದರ ಋಜುತ್ವ ಕುರಿತಂತೆ ಎಂಥ ಸಾಕ್ಷ್ಯಾಧಾರಗಳನ್ನೇ ಒದಗಿಸಲಿ—ಅಂತಿಮವಾಗಿ ಅದೊಂದು ಮಾನವಕೃತ ದಾಖಲೆ ಮಾತ್ರ. ಅದರ ರಚನೆಯಲ್ಲಿ ದೈವಿಕ ಅಥವಾ ಪಾರಲೌಕಿಕ ಅಂಶವೇನೂ ಇರುವುದಿಲ್ಲ. ಇನ್ನು ಅದು ಶಾಸ್ತ್ರ ಗ್ರಂಥವಾಗಿದ್ದು ಸೃಷ್ಟಿನಿಯಮಗಳ ಬಗ್ಗೆ ವ್ಯಾಖ್ಯಾನಿಸುವುದಾದ ಪಕ್ಷದಲ್ಲಿ ಸಮಕಾಲೀನ ಊಹೆ ಚಿಂತನೆ ಸಾಧನೆ ಸಿದ್ಧಿಗಳಿಗಿಂತ ಬಹಳ ಮುಂದೆ ಹೋಗುವುದು ಅಸಾಧ್ಯ. ಅಂದ ಮೇಲೆ ಐವತ್ತು ಅರುವತ್ತು ಶತಮಾನಗಳ ಹಿಂದೆ ರಚಿತವಾದ ಗ್ರಂಥ ಸೃಷ್ಟಿನಿಯಮಗಳನ್ನು ಕುರಿತಂತೆ ನೀಡುವ ವಿವರಣೆ ವರ್ಣನೆ ಇಂದು ನಿಜವಾಗಿರಬೇಕಾಗಿಲ್ಲ ಎಂಬುದು ಸ್ಪಷ್ಟ. ಇಂದಿನ ಲಭ್ಯ ವೀಕ್ಷಣೆ, ಪ್ರಯೋಗ, ವಿಶ್ಲೇಷಣೆ, ತಪಾಸಣೆ, ಪುನರಾವರ್ತನೆ ಮುಂತಾದ ವಿಧಿ ವಿಧಾನ ಕುರಿತಂತೆ ಪ್ರಕಟವಾಗುವ ನಿಯಮಗಳನ್ನು ಅಂಗೀಕರಿಸುವುದೊಂದೇ ವಿಕಾಸದ ಹಾದಿ. ಅಜ್ಜ ನೆಟ್ಟ ಆಲದ ಮರಕ್ಕೆ ನೇಣು ಹಾಕಿಕೊಳ್ಳುವುದಲ್ಲ.

ಹಾಗಾದರೆ ಈ ಕೆಲಸವನ್ನು ಹೇಗೆ ಮಾಡಬಹುದು?

ರಾಹುಕಾಲ, ಶೂನ್ಯಮಾಸ, ಗುರುಮೌಢ್ಯ ಇತ್ಯಾದಿ ನಿಜವಾಗಿಯೂ ದುಷ್ಟ ಅವಧಿಗಳಾಗಿದ್ದಲ್ಲಿ ಆಗ ಮಾಡಿದ ಕ್ರಿಯೆಗಳ ಫಲವೇನು, ಉಳಿದ 'ಶಿಷ್ಟ' ಅವಧಿಗಳಲ್ಲಿ ಮಾಡಿದ ಕ್ರಿಯೆಗಳ ಫಲವೇನು—ಇವನ್ನು ಪ್ರಯೋಗ, ಅವಲೋಕನ, ತುಲನೆ ಮುಂತಾದ ಸಾರ್ವತ್ರಿಕ ವಿಧಾನಗಳಿಂದ ಪರಿಶೀಲಿಸಿ ಯುಕ್ತ ತೀರ್ಮಾನಕ್ಕೆ ಬರುವುದು ಅಪೇಕ್ಷಣೀಯ.

In the beginning God created the heaven and the earth ಎಂಬ ಬೈಬಲ್ ಉಕ್ತಿಯನ್ನು ವಾಸ್ತವ ಜಗತ್ತಿಗೆ ಬರೆದ ತಾರ್ಕಿಕ ಭಾಷ್ಯ ಎಂದು ಪರಿಗಣಿಸಬೇಕೇ? ಆದಿ ಮಾನವನ ಅನುಭವದ ಮಿತಿಯ ಒಂದು ಲಕ್ಷಣ ಎಂದು

ಭಾವಿಸಬೇಕೇ? God, heaven, earth, creation ಎಂಬ ಪದಗಳ ಅರ್ಥ ಗ್ರಹಿಸಿ ಇಂದಿನ ಜ್ಞಾನದ ಅನುಸಾರ ಪ್ರಯೋಗ ಮಾಡಿ ಇದರಿಂದ ಕಂಡುಬರುವ ತಥ್ಯದ ಮುನ್ನೆಲೆಯಲ್ಲಿ ಯೋಗ್ಯ ನಿರ್ಧಾರ ತಳೆಯುವುದು ನಿಜವಾದ ಚಿಂತನಶೀಲನ ಹಾದಿ.

ರಡ್‌ಯಾರ್ಡ್ ಕಿಪ್ಲಿಂಗ್ ಬರೆದಿದ್ದಾರೆ:

I keep six honest serving men
(They taught me all I knew
Their names are what and why and when
And how and where and who

ಶ್ರದ್ಧೆಯಿಂ ದುಡಿವಾರು ಸಹಚರರನಿಟ್ಟಿಹೆನು
(ನನಗೆ ತಿಳಿದಿಹುದೆಲ್ಲ ಕಲಿಸಿದವರೇ ಅವರು)
ಅವರ ಪೆಸರೇನೆಂದು ಪೇಳಲೇ?—ಏನು?
ಏಕೆ? ಎಂದು? ಹೇಗೆ? ಎಲ್ಲಿ? ಯಾರು?

ಹೀಗೆ ಒಂದು ಸಮಸ್ಯೆ, ಘಟನೆ, ವಿದ್ಯಮಾನ ಅಥವಾ ನಡವಳಿಕೆ ಬಗ್ಗೆ ಮೂಲಭೂತವಾಗಿ ಚಿಂತಿಸುವ ಮಾನಸಿಕ ಧೋರಣೆ ಒಂದು ಕಡೆ, ಹಳೆಯದೆಲ್ಲವೂ ಹೊನ್ನೇ ಅದನ್ನು ಶ್ರದ್ಧೆಯಿಂದ ಸ್ವೀಕರಿಸಿ ಪಾಲಿಸುವುದೊಂದೇ ನಮ್ಮ ಧರ್ಮ, ಪ್ರಶ್ನೆ ಹಾಕಲು ನಾವು ಯಾರು ಎಂಬುದಾಗಿ ಅನ್ಯಥಾ ಶರಣಂ ನಾಸ್ತಿ ಎಂಬ ನಿಲವಿನಿಂದ ಯೋಚಿಸುವ (ಪ್ರಾಯಶಃ ಯೋಚಿಸದಿರುವ) ಮಾನಸಿಕ ಧೋರಣೆ ಇನ್ನೊಂದು ಕಡೆ ಇಂದು ಸುಖವಾಗಿ ಸಹಜೀವನ ನಡೆಸುತ್ತಿರುವುದು ಕಂಡುಬರುತ್ತಿದೆ. ಮೊದಲನೆಯದು ವೈಜ್ಞಾನಿಕ ಮನೋಧರ್ಮದ ಲಕ್ಷಣ, ಎರಡನೆಯದು ಪಲಾಯನವಾದದ ಲಕ್ಷಣ.

ವೈಜ್ಞಾನಿಕ ಮನೋಧರ್ಮ ಎಂದರೇನು? ಬದುಕಿನ ಅಥವಾ ಪ್ರಕೃತಿಯ ಸಮಸ್ತ ವಿದ್ಯಮಾನಗಳನ್ನೂ ಕಾರ್ಯ-ಕಾರಣ ಸಂಬಂಧ ದೃಷ್ಟಿಯಿಂದ ಪರಿಶೀಲಿಸಿ ಯುಕ್ತ ನಿರ್ಧಾರ ಕೈಗೊಳ್ಳುವ ಮಾನಸಿಕ ಧೋರಣೆ. ಒಂದು ಉದಾಹರಣೆಯಿಂದ ಈ ವ್ಯಾಖ್ಯೆಯನ್ನು ಸ್ಪಷ್ಟೀಕರಿಸುತ್ತೇನೆ. ಸೂರ್ಯ ಮುಂಜಾನೆ ಪೂರ್ವ ದಿಶೆಯಲ್ಲಿ ಮೂಡಿ ಆಕಾಶದಲ್ಲಿ ಸಂಚರಿಸಿ ಸಂಜೆ ಪಶ್ಚಿಮದಿಶೆಯಲ್ಲಿ ಕಂತುವುದನ್ನು ಕಾಣುತ್ತೇವೆ. ಸೂರ್ಯ ಆಕಾಶದಲ್ಲಿದ್ದಷ್ಟು ಹೊತ್ತು ಹಗಲು, ಇಲ್ಲದಷ್ಟು ಹೊತ್ತು ಇರುಳು ಎನ್ನುತ್ತೇವೆ. ಆದ್ದರಿಂದ ಹಗಲಿಗೂ ಸೂರ್ಯನಿಗೂ ಕಾರ್ಯ-ಕಾರಣ ಸಂಬಂಧವಿದೆ: ಹಗಲು ಕಾರ್ಯ, ಸೂರ್ಯ ಕಾರಣ. ಈ ಸಂಬಂಧ ತಿಳಿಯುವ ಮಾನಸಿಕ ಧೋರಣೆ ವೈಜ್ಞಾನಿಕ ಮನೋಧರ್ಮ ಎನ್ನಿಸುತ್ತದೆ. ಇನ್ನೂ ಮುಂದೆ ಹೋಗಿ ಸೂರ್ಯನ ಆಕಾಶಪರ್ಯಟನೆ ಕೇವಲ ತೋರ್ಕೆ ಚಲನೆ, ವಾಸ್ತವವಾಗಿ ಭೂಮಿಯ ಆವರ್ತನ ಚಲನೆಯ (ಇದು ಕಾರಣ) ಪರಿಣಾಮವಾಗಿ ಸೂರ್ಯ ಚಲಿಸಿದಂತೆ (ಇದು ಕಾರ್ಯ) ಭಾಸವಾಗುವುದೆಂದು ತಿಳಿಯುವ ಮಾನಸಿಕ ಧೋರಣೆಯೇ ವೈಜ್ಞಾನಿಕ ಮನೋಧರ್ಮ.

ಹೀಗಲ್ಲದೆ ಭಗವಂತನ ಶ್ರೇಷ್ಠತಮ ಸೃಷ್ಟಿಯಾದ ಮಾನವನ ಸುಖಸಂತೋಷಗಳಿಗೋಸ್ಕರ ಅದೇ ಭಗವಂತ ಆಕಾಶದಲ್ಲಿಟ್ಟಿರುವ ಉಜ್ಜ್ವಲ ದೀಪ ಸೂರ್ಯ; ಇದನ್ನು ಬಾನಿನಡ್ಡ ದಿನದಿನ ಒಯ್ಯಲಾಗುತ್ತಿದೆ ಎಂದು ಪ್ರಾಮಾಣಿಕವಾಗಿ (ಕಾವ್ಯಾತ್ಮಕವಾಗಿ ಅಲ್ಲ) ನಂಬಿದರೆ ಅಂಥ ಘೋಷಣೆ ವೈಜ್ಞಾನಿಕ ಮನೋಧರ್ಮದ ಲಕ್ಷಣ ಎನ್ನಿಸದು. And God made two great lights; the greater light to rule the day, and the lesser light to rule the night; he made the stars also. ಈ ನಿರೂಪಣೆಯನ್ನು ಕಲ್ಪನೆ, ಕಾವ್ಯ, ಅಥವಾ ರೂಪಕ ಎಂದು ಭಾವಿಸಿದರೆ ಸೊಗಸಾಗಿರುತ್ತದೆ. ಹಾಗಲ್ಲದೇ ಸೂರ್ಯ ಚಂದ್ರರ ಉಗಮ ಈ ತೆರನಾಗಿ ಆಯಿತು ಎಂದು ಅಂಗೀಕರಿಸಿದ್ದಾದರೆ ಅದು ವೈಜ್ಞಾನಿಕ ಮನೋಧರ್ಮ ಎನ್ನಿಸುವುದಿಲ್ಲ.

ವೈಜ್ಞಾನಿಕ ಮನೋಧರ್ಮದ ವಿಕಾಸಕ್ಕೆ ಒಂದು ಉದಾಹರಣೆ ನೋಡಿ.

ಭೂಮಿಯೇ ವಿಶ್ವಕೇಂದ್ರ ಎಂಬುದಾಗಿ ಮಾನವ ಮೊದಲು ನಂಬಿದ್ದ. ಇಂದಾದರೂ ಗುಡ್ಡದ ಕೊಡಿಗೆ ಇಲ್ಲವೇ ಕಡಲಕಿನಾರೆಗೆ ಹೋಗಿನಿಂತು ನೋಡಿದವನಿಗೆ ಭಾಸವಾಗುವುದು ಹೀಗೆಯೇ. ಆದಿಮಾನವ—ಆದಿವಿಜ್ಞಾನಿ ಅನ್ನಿಬೇಕಾದರೆ—ಸೂರ್ಯ ಚಂದ್ರ ಗ್ರಹ ನಕ್ಷತ್ರಗಳು ಭೂಮಿಯ ಸುತ್ತ ಪರಿಭ್ರಮಿಸುತ್ತವೆಂಬುದಾಗಿ ವಿವರಿಸಿದ.

ಈ ವಿವರಣೆಯನ್ನು ಆಧರಿಸಿ ಗಣಿತವನ್ನು ಬೆಳೆಸಿ ಆಕಾಶದಲ್ಲಿ ಸಂಭವಿಸಲಿರುವ ಭವಿಷ್ಯಘಟನೆಗಳನ್ನು, ಅಂದರೆ ಸೂರ್ಯನ ವರ್ತನೆ, ಚಂದ್ರನ ಬಗೆಬಗೆಯ ವರಿಸೆಗಳು, ಗ್ರಹಣಗಳು ಮುಂತಾದವನ್ನು ಮುನ್ನುಡಿದ. ಇವು ಅಂದಿಗೆ ಸರಿ ಆಗಿದ್ದುವು. ಶತಮಾನಗಳು ಉರುಳಿ ಸಂಕಲನಗೊಂಡ ಮಾಹಿತಿಗಳ ಹೊರೆ ಬೆಳೆದು ಗುಡ್ಡವಾದಾಗ ಮತ್ತು ವಿಜ್ಞಾನದ ವಿವಿಧ ಶಾಖೆಗಳು ಅಭಿವರ್ಧಿಸಿ ಪ್ರೌಢವಾದಾಗ ಆಕಾಶ ಘಟನೆಗಳಿಗೂ ಮಾನವ ಗಣನೆಗಳಿಗೂ ನಡುವೆ ಸಾಂಗತ್ಯ ಏರ್ಪಡದೆ ಸಾಕಷ್ಟು ವ್ಯಾಘಾತಗಳು (contradictions) ಎದ್ದು ಕಾಣಲಾರಂಭಿಸಿದುವು. ಆಗೊಬ್ಬ ಮೇಧಾವಿ ಎದ್ದು ಬಂದ. ಇಡೀ ಸಮಸ್ಯೆಯನ್ನು ಹೊಸ ದೃಷ್ಟಿಯಿಂದ ಅವಲೋಕಿಸಿದ. ಪರಂಪರೆಯ ಹೆಣಭಾರವನ್ನು ಕಳಚಿಹಾಕಿದ. ಭೂಮಿಯನ್ನು ವಿಶ್ವಕೇಂದ್ರವೆಂದು ಅಂಗೀಕರಿಸಿದ್ದರಿಂದ ಈ ವ್ಯಾಘಾತಪರಂಪರೆ ತಲೆ ಎತ್ತಿದೆ. ನಿಜಸಂಗತಿ ಏನೆಂದರೆ ಸೂರ್ಯನೇ ವಿಶ್ವಕೇಂದ್ರ (ಅಂದಿನ ವಿಶ್ವವೆಂದರೆ ಇಂದಿನ ಸೌರವ್ಯೂಹ), ಸೂರ್ಯನ ಸುತ್ತ ಭೂಮಿ ಮುಂತಾದ ಗ್ರಹಗಳು ಪರಿಭ್ರಮಿಸುತ್ತಿವೆ ಎಂದ. ಆ ತನಕ ಆಕಾಶನಾಟಕದ ಸಾರ್ವಭೌಮ ವಸ್ತುವಾಗಿದ್ದ ನಿಶ್ಚಲ ಭೂಮಿ ಇದ್ದಕ್ಕಿದ್ದಂತೆ ಸೂರ್ಯನ ತೊತ್ತಾಗಿ ಆತನ ಸುತ್ತ ಪರಿಭ್ರಮಿಸುವ ನಿಕೃಷ್ಟ ಸ್ಥಿತಿಗೆ ಕೆಡೆಯಲ್ಪಟ್ಟಿತು. ಸಂಚಿತ ಅಸಾಂಗತ್ಯ, ವ್ಯಾಘಾತ ಎಲ್ಲವೂ ಈ ಕ್ರಾಂತಿಕಾರಿ ಸಿದ್ಧಾಂತದ ಫಲವಾಗಿ ಒಡನೆ ಕುಸಿದು ಕರಗಿಹೋದುವು. ಆದರೆ ಮತಧುರೀಣರು, ಇವರನ್ನು ಬೆಂಬಲಿಸಿದ ರಾಜಕೀಯ ಮುಖಂಡರು ಮತ್ತು ಪರಂಪರೆಯ ಬಗ್ಗೆ ಅಂಧ ವಿಶ್ವಾಸಿಗಳಾಗಿದ್ದ ಅನೇಕ ಮಂದಿ ಪ್ರತಿಷ್ಠಿತರು ಈ ವಾಸ್ತವ ಸತ್ಯವನ್ನು ಒಪ್ಪಲಿಲ್ಲ. ಅಷ್ಟೇ ಅಲ್ಲ. ಇದನ್ನು ಸ್ವೀಕರಿಸಿದವರನ್ನು ದೇವರ, ಮತದ

ಯಾ ರಾಜ್ಯದ ಹೆಸರಿನಲ್ಲಿ ಜೀವಂತ ಸುಡುವುದನ್ನೂ ಒಳಗೊಂಡಂತೆ ಅಮಾನುಷವಾಗಿಯೂ ಕಟ್ಟೂಗ್ರವಾಗಿಯೂ ಶಿಕ್ಷಿಸಿದರು ಕೂಡ.

ಇಂಥ ಉದಾಹರಣೆಗಳು ಬಹುಸಂಖ್ಯೆಯಲ್ಲಿ ದೊರೆಯುತ್ತವೆ. ನಿಜಕ್ಕೂ ವಿಜ್ಞಾನೇತಿಹಾಸವೆಂದರೆ ವೈಜ್ಞಾನಿಕ ಮನೋಧರ್ಮದ ಹೋರಾಟದ ಕತೆ, ಮೂಢ ನಂಬಿಕೆಗಳ ಎದುರು ಮಾನವ ಪ್ರತಿಭೆ ನಡೆಸಿದ ಕಾಳಗದ ವರದಿ, ಕತ್ತಲೆಯ ಮೊತ್ತವನ್ನು ನಿವಾರಿಸಲು ಬೆಳಕಿನ ಕಿಡಿ ಮಾಡಿದ ಪ್ರಯತ್ನದ ಸಾರ. ಆದ್ದರಿಂದ ವೈಜ್ಞಾನಿಕ ಮನೋಧರ್ಮದ ವಿಕಾಸ. ಸಹಜ ಪ್ರಕ್ರಿಯೆ ಎಂದು ಭಾವಿಸಲು ಅವಕಾಶ ವಿಲ್ಲ. ಪ್ರಯತ್ನ ಪೂರ್ವಕವಾಗಿ ಸಾಧಿಸಿಕೊಳ್ಳಬೇಕಾದ ಗುಣವಿದು.

ಇಂದು ಅತ್ಯಂತ ವ್ಯಾಪಕ ದುರುಪಯೋಗಕ್ಕೆ ಪಕ್ಕಾಗಿರುವ ಐದು ಪದಗಳನ್ನು ಆಯುವುದು ನಮ್ಮ ಉದ್ದೇಶವಾಗಿರಲಿ. ನಾವು ವಿಧಿಸಿಕೊಳ್ಳುವ ಸೀಮಿತಗಳ ಅನುಸಾರ ನಮಗೆ ಬೇರೆ ಬೇರೆ ಪಟ್ಟಿಗಳು ದೊರೆಯುತ್ತವೆ. ಆದರೆ ಇವುಗಳಲ್ಲಿ ನಮಗೊಂದು ಆಶ್ಚರ್ಯ ಎದುರಾಗುತ್ತದೆ: ಈ ಎಲ್ಲವುಗಳಿಗೂ ಸಾಮಾನ್ಯವಾದ ಒಂದು ಪದವಿರುವುದು. ಅದೇ 'ವೈಜ್ಞಾನಿಕ ಮನೋಧರ್ಮ.'

ರಾಜಕಾರಣಿ ವ್ಯವಸ್ಥಿತವಾಗಿ ಜನರನ್ನು ಸುಲಿಯುವ ತಂತ್ರಕ್ಕೆ ಚಿಂತನೆಯ ಗಾಂಭೀರ್ಯ ತೊಡಿಸಲು 'ವೈಜ್ಞಾನಿಕ ಮನೋಧರ್ಮ' ಪದ ಬಳಸದೆ ಇರಲಾರ.

ಸರ್ಕಾರದ ಹೊಣೆಗೇಡಿ ದುಂದುವೆಚ್ಚಗಳನ್ನು ಸರಿದೂಗಿಸಲು ಅಧಿಕ ತೆರಿಗೆ ವಿಧಿಸುವ ವಿತ್ತ ಮಂತ್ರಾಲಯ 'ವೈಜ್ಞಾನಿಕ ಮನೋಧರ್ಮ'ಕ್ಕೆ ಶರಣುಹೋಗದೆ ವಿಧಿ ಇಲ್ಲ.

ಫಲಜ್ಯೋತಿಷಿ ತನ್ನ ಪ್ರಚ್ಛನ್ನ ವಾಮ ವ್ಯವಹಾರಕ್ಕೆ 'ವೈಜ್ಞಾನಿಕ ಮನೋಧರ್ಮ'ದ ಮುಸುಕು ತೊಡಿಸಿಯೇ ಕಳಕ್ಕೆ ದುಮುಕುವುದಾಗಿದೆ.

ಧರ್ಮದ ಹೆಸರಿನಲ್ಲಿ ಮುಗ್ಧ ಜನರನ್ನು ತಪ್ಪು ಹಾದಿಗೆ ಎಳೆದು ಅವರ ಅಜ್ಞಾನವನ್ನು ಇಲ್ಲವೇ ಅಂಧ ವಿನೀತತೆಯನ್ನು ತಮ್ಮ ಬಂಡವಾಳವಾಗಿ ಮಾಡಿಕೊಂಡು ಸ್ವಾರ್ಥ ಸಾಧಿಸಿಕೊಳ್ಳುವ ಧಾರ್ಮಿಕ ಮುಖಂಡರೇ 'ವೈಜ್ಞಾನಿಕ ಮನೋಧರ್ಮ'ದ ಮೊದಲ ಚಲಾವಣೆಕಾರರು.

ಸ್ವಂತೋತ್ಕರ್ಷಗಾಗಿ ವೈಜ್ಞಾನಿಕ ಅಂಕೆ ಅಂಶಗಳನ್ನು ಬೇಕಾದಂತೆ ಹಿಂಜಿ ಭ್ರಷ್ಟ ರಾಜಕಾರಣಿಗಳು ಊದುವ ಪೀಪಿಗೆ ಅನುಗುಣವಾಗಿ ತಾಳ ಹಾಕುತ್ತ ಪ್ರಾಯೋಗಿಕ ದಾಖಲೆಗಳನ್ನು ತಿದ್ದುವ ಶಿಕ್ಷಕ-ರಾಜಕಾರಣಿಗಳ ಗುರಾಣಿಕಾಪು 'ವೈಜ್ಞಾನಿಕ ಮನೋಧರ್ಮ.'

ಹಾಗಾದರೆ ವೈಜ್ಞಾನಿಕ ಮನೋಧರ್ಮದ ನಿಜವಾದ ಅರ್ಥವೇನು ?

ವಿಜ್ಞಾನದ ವಿಧಿ, ನಿಯಮ, ಸೂತ್ರ, ನಿರ್ಬಂಧ ಮುಂತಾದವುಗಳಲ್ಲಿ ನಿಹಿತವಾಗಿರುವ ತತ್ತ್ವವೇ ವೈಜ್ಞಾನಿಕ ಮನೋಧರ್ಮ. ಈ ಹೇಳಿಕೆಯ ಪೂರ್ಣ ಅರ್ಥ ಗ್ರಹಿಸಲು ವಿಜ್ಞಾನವೆಂದರೇನೆಂದು ತಿಳಿಯುವುದು ಅವಶ್ಯ. Science in History ಎನ್ನುವ ಗ್ರಂಥದಲ್ಲಿ ಜೆ. ಡಿ. ಬರ್ನಾಲ್ ಈ ಪದಕ್ಕೆ ನೀಡಿರುವ ವಿವರಣೆ ಇದು "ವಿಜ್ಞಾನ ಒಂದು ಸಂಸ್ಥೆ, ಒಂದು ವಿಧಾನ, ಜ್ಞಾನದ ಸಂಗೃಹೀತ ಪರಂಪರೆ,

ಉತ್ಪಾದನೆಯ ಮಟ್ಟ ಕಾದಿಡುವುದರಲ್ಲಿಯೂ ಉತ್ಪಾದನೆಯನ್ನು ಅಭಿವೃದ್ಧಿಪಡಿಸುವು ದರಲ್ಲಿಯೂ ಒಂದು ಪ್ರಧಾನ ಅಂಶ; ಮತ್ತು ವಿಶ್ವ ಹಾಗೂ ಮಾನವನೆಡೆಗೆ ನಂಬಿಕೆ ಗಳನ್ನೂ ನಿಲವುಗಳನ್ನೂ ರೂಪಿಸುವ ಅತ್ಯಂತ ಸಾಮರ್ಥ್ಯವಂತ ಪ್ರಭಾವಗಳ ಪೈಕಿ ಒಂದು." ವಾಸ್ತವ ಜೀವನದ ಸಮಸ್ತ ಕ್ರಿಯಾಕಲಾಪಗಳ ವ್ಯವಸ್ಥಿತ ವಿಶ್ಲೇಷಣೆಯೇ ವಿಜ್ಞಾನ.

ಮಾನವನ ಅಸಂಖ್ಯಾತ ಸೃಜನಾತ್ಮಕ ಚಟುವಟಿಕೆಗಳ ಪರಿಧಿಯೊಳಗೆ ವಿಜ್ಞಾನವೂ ಸೇರಿದೆ. ವಿಶ್ವ ಒಡ್ಡುವ ಉದ್ದೀಪನೆಗೆ (stimulus) ಮಾನವ ಮನಸ್ಸಿನ ಅನು ಕ್ರಿಯೆಯ (reponse) ಒಂದು ಪ್ರಕಾರ ವಿಜ್ಞಾನ.

ವಿಶ್ವದ ಸಮಸ್ತ ವಿದ್ಯಮಾನಗಳಲ್ಲಿ ಕಾರ್ಯ-ಕಾರಣ ಸಂಬಂಧವನ್ನು ಅರಸು ವುದು ವಿಜ್ಞಾನದ ಕ್ರಿಯೆ. ಇದನ್ನು ನಡೆಸಲು ಅದೊಂದು ಕ್ರಮವನ್ನು ಅಥವಾ ಧಾಟಿ ಯನ್ನು ಅನುಭವದಿಂದ ಕಂಡುಕೊಂಡಿದೆ. ಅದಕ್ಕೆ ವೈಜ್ಞಾನಿಕ ವಿಧಾನವೆಂದು ಹೆಸರು.

ಕಾರ್ಯಕಾರಣ ಸಂಬಂಧವನ್ನು ಸ್ವಂತ ಪರಿಶ್ರಮದಿಂದ ಕಂಡುಕೊಳ್ಳುವುದು ಇಲ್ಲವೇ ಯೋಗ್ಯಶಿಕ್ಷಣ ವಿಧಾನಗಳಿಂದ ತಿಳಿದುಕೊಳ್ಳುವುದು ಕಷ್ಟದ ಕೆಲಸ. ಮಾನವ ಮತಿಯ ಸಹಜ ಪ್ರವೃತ್ತಿಯಾದರೋ ಶ್ರಮರಹಿತ ಹಾದಿಯಲ್ಲಿ ಸಾಗುವುದು. ಸುಲಭ ಮಾರ್ಗಗಾಮಿಗೆ ಕಲ್ಪನೆ ಅದ್ಭುತ ಸಂಗಾತಿ. ಇಂಥವನ ದೃಷ್ಟಿಯಲ್ಲಿ ಅಜ್ಞಾತ ವಿಷಯ ಗಳೆಲ್ಲವೂ ದೇವರು ಎಂಬ ಅಮೂರ್ತ ಭಾವನೆಯಲ್ಲಿ ಐಕ್ಯವಾಗಿರುತ್ತವೆ. ಮಳೆ ಏಕೆ ಸುರಿಯುತ್ತದೆ? ದೇವರ ಇಚ್ಛೆ. ಮಳೆ ಏಕೆ ಸುರಿಯುವುದಿಲ್ಲ? ದೇವರ ಇಚ್ಛೆ. ತೃಣಮಪಿ ನ ಚಲತಿ ತೇನ ವಿನಾ! ಇಂಥ ಸರ್ವಶಕ್ತ (ಸೋಮಾರಿ?) ಭಗವಂತ ಸ್ವರ್ಗದಲ್ಲಿ ಸುಖ ಸತ್ಕಥಾವಿನೋದನಿರತನಾಗಿದ್ದಾನೆ, ಜಗತ್ತಿನಲ್ಲಿ ಸಕಲವೂ ಆತನ ಇಚ್ಛಾನುಸಾರ ಸಂಭವಿಸುತ್ತವೆ ಎಂದು ನಂಬಿದ್ದಾದರೆ ಬದುಕು ಎಷ್ಟು ಸರಳ, ಎಷ್ಟು ಸಲೀಸು!

ಬದುಕು ಇಷ್ಟು ಸರಳ ಅಲ್ಲ, ಸಲೀಸೂ ಅಲ್ಲ ಎಂದು ತಿಳಿದಿರುವಾತ ಪ್ರಕೃತಿಯ ವಿವಿಧ ವಿದ್ಯಮಾನಗಳ ಹಿನ್ನೆಲೆಯಲ್ಲಿರುವ ಕಾರ್ಯ-ಕಾರಣ ಸಂಬಂಧ ಅನ್ವೇಷಿಸಲು ತೊಡಗುತ್ತಾನೆ. ಇವನು ಸಾಗುವ ಜಾಡಿಗೆ ವೈಜ್ಞಾನಿಕ ವಿಧಾನವೆಂದು ಹೆಸರು. ಇದರ ಮುಖ್ಯ ಹಂತಗಳಿವು:

೧ ತಪಾಸಣೆಗೆ ಆಯ್ದುಕೊಂಡ ಸಮಸ್ಯೆ ಕುರಿತಂತೆ ವ್ಯವಸ್ಥಿತವಾಗಿ ಮಾಹಿತಿ ಗಳನ್ನು ಕಲೆ ಹಾಕುವುದು.

೨ ಮಾಹಿತಿಗಳನ್ನು ಕ್ರಮಬದ್ಧವಾಗಿ ಅಳವಡಿಸಿ ವಿಶ್ಲೇಷಿಸಿ ಅವುಗಳಲ್ಲಿ ಹುದುಗಿರಬಹುದಾದ ಸೂತ್ರ ಇಲ್ಲವೇ ನಿಯಮಗಳನ್ನು ಸೋಸಿ, ಹಿಂಡಿ ಯಾ ಬಟ್ಟಿ ಇಳಿಸಿ ತೆಗೆಯಲು ಬುದ್ಧಿಯನ್ನು ಪ್ರಯೋಗಿಸುವುದು. ಅಂದರೆ ದತ್ತ ಮಾಹಿತಿಗಳಿಗೆ ಒಪ್ಪುವ ಸ್ಥೂಲ ಪ್ರತಿರೂಪವನ್ನು (model) ರೂಪಿಸುವುದು.

೩ ಈ ಪ್ರತಿರೂಪವನ್ನು ಮೂಲ ಸಮಸ್ಯೆಯ ಸನ್ನಿವೇಶಗಳಿಗೆ ಅನ್ವಯಿಸಿ ಆಗ ಕಂಡು ಬರುವ ಪ್ರತಿಯೊಂದು ಲೋಪದೋಷವನ್ನೂ ಗಮನಿಸಿ ತದನುಸಾರ ಪ್ರತಿರೂ

ದಲ್ಲಿ ಯುಕ್ತ ತಿದ್ದುಪಡಿ ಅಳವಡಿಸಿ ಇದು ವಾಸ್ತವತೆಯ ಸಮೀಪತಮ ಪ್ರತಿಬಿಂಬ ವಾಗುವ ತನಕವೂ ಇದನ್ನು ಪರಿಷ್ಕರಿಸುತ್ತ ಹೋಗುವುದು.

೪ ಈ ತೆರನಾದ ಪ್ರತಿರೂಪವನ್ನು ಪರಿಷ್ಕರಿಸುವುದು ಸಾಧ್ಯವೇ ಆಗದಾಗ ಬೇರೆಯೇ ಒಂದು ಪ್ರತಿರೂಪವನ್ನು ಮಂಡಿಸಿ ಅದರ ಮೇಲೆ ಮೂರನೆಯ ಹಂತವನ್ನು ಪ್ರಯೋಗಿಸುವುದು.

ಆದ್ದರಿಂದ ವೈಜ್ಞಾನಿಕ ವಿಧಾನ ಅನುಸರಿಸುವಾತ ಮಳೆ ಸುರಿಯುವುದು ದೇವರ ಇಚ್ಛೆಯಿಂದಲ್ಲ ಅಥವಾ ಸಾಧು ಸಂತ ಬಾಬಾ ಮುಂತಾದ ಪವಾಡ ಪುರುಷರು ಸಲ್ಲಿಸಿದ ಪ್ರಾರ್ಥನೆಗಳಿಂದಲೂ ಅಲ್ಲ, ಕಾರಣಗಳನ್ನು ವಿವರಿಸಬಹುದಾದ ಹವಾವಿದ್ಯಮಾನವದು ಎಂದು ತಿಳಿಯಬಲ್ಲ. ಭೂಕಂಪನ ಸಂಭವಿಸಿ ಜನ ಧನ ನಷ್ಟ ಆಗುವುದು ದೇವರ ಕೋಪ ದಿಂದಲ್ಲ ಅಥವಾ ಅಧರ್ಮದ ಏರಿಕೆಯಿಂದಲ್ಲ, ಕಾರಣಗಳನ್ನು ವಿವರಿಸಬಹುದಾದ ಭೂವಿದ್ಯಮಾನವದು ಎಂದು ವಿವರಿಸಬಲ್ಲ. ವ್ಯಕ್ತಿಯ ಅಥವಾ ಜನಾಂಗದ ಭವಿಷ್ಯ ಜಾತಕದಿಂದಾಗಲೀ ತಾಯಿತಿಯಿಂದಾಗಲೀ ನಿರ್ಣೀತವಾಗುವ ಜಳ್ಳು ಘಟನೆ ಅಲ್ಲ, ಗಣನೆಗೆ ದೊರೆಯದ ಮತ್ತು ಊಹೆಗೆ ನಿಲುಕದ ಅಸಂಖ್ಯಾತ ಅಜ್ಞಾತ ಭೌತ ಕಾರಕ ಗಳ ಸಂಯುಕ್ತ ಫಲವದು ಎಂದು ಅರಿಯಬಲ್ಲ.

ವೈಜ್ಞಾನಿಕ ವಿಧಾನವನ್ನು ಅನುಸರಿಸುವ ಪ್ರತಿಯೊಬ್ಬ ಪ್ರಯೋಗ ಪರಿಣತನು ತಿಯೂ ತಿಳಿದೋ ತಿಳಿಯದೆಯೋ ಮೂರು ಅಭಿಗೃಹೀತಗಳನ್ನು (assumptions) ಅಂಗೀಕರಿಸಿರುತ್ತಾನೆ. (ಅಭಿಗೃಹೀತ : ಎಲ್ಲರಿಗೂ ಸುವೇದ್ಯವಾಗಿರುವ ಸಂಗತಿ; ಇದನ್ನು ರುಜುವಾತಿಸಲು ಅಥವಾ ಹುಸಿವಾತಿಸಲು ಸಾಧ್ಯವಾಗುವುದಿಲ್ಲ. ಎಲ್ಲರೂ ಇದನ್ನು ನಿಜವೆಂದು ಒಪ್ಪಿರುತ್ತಾರೆ. ಪ್ರತಿಯೊಂದು ವಾದದ ತಳದಲ್ಲಿಯೂ ಅಭಿಗೃಹೀತಗಳು ಇದ್ದೇ ಇರುತ್ತವೆ.)

೧ ವಿಶ್ವದ ಸಮಸ್ತ ಕ್ರಿಯೆಗಳಲ್ಲಿಯೂ ನಿರ್ದಿಷ್ಟ ಕ್ರಮ ಉಂಟು.

೨ ಈ ಕ್ರಮವನ್ನು ಗ್ರಹಿಸಿ ಯುಕ್ತ ಪರಿಭಾಷೆಯಲ್ಲಿ ವಿವರಿಸಬಲ್ಲ ಸಾಮರ್ಥ್ಯ ಮಾನವ ಮತಿಗೆ ಉಂಟು.

೩ ವಿಶ್ವದ ವಿವಿಧ ವಿದ್ಯಮಾನಗಳು ವಿಶ್ವನಿಯಮಗಳಿಗೆ ಅನುಸಾರವಾಗಿ, ಮಾನವ ಅವನ್ನು ಗಮನಿಸಿದರೂ ಗಮನಿಸದಿದ್ದರೂ ಆತ ಅವುಗಳಿಗೆ ಅನುವರ್ತಿಯಾಗಿ ನಡೆದುಕೊಂಡರೂ ನಡೆದುಕೊಳ್ಳದಿದ್ದರೂ, ಸಂಭವಿಸುವುದು ಶತಸ್ಸಿದ್ಧ. ಈ ನಿಯಮ ಗಳನ್ನು ಮಾನವನಿಂದ ಬಚ್ಚಿಡಬೇಕೆಂಬ ದುರ್ಬುದ್ಧಿ ವಿಶ್ವಕ್ಕಿಲ್ಲ, ಆತನಿಗೆ ತಿಳಿಸಬೇಕೆಂಬ ಸದ್ಬುದ್ಧಿಯೂ ಅದಕ್ಕಿಲ್ಲ. ಐನ್‌ಸ್ಟೈನರ ಸುಪ್ರಸಿದ್ಧ ಸೂಕ್ತಿಗಳನ್ನು ಗಮನಿಸಿ : ದೇವರು ಎಂದೂ ದಾಳ ಒಗೆಯುವುದಿಲ್ಲ; ದೇವರು ಬಲು ನವುರು, ಎಂದೂ ಕುಹಕಿ ಅಲ್ಲ. ಇಲ್ಲಿ ದೇವರು ಎಂದರೆ 'ವಿಶ್ವ' ಅಥವಾ ನಿಸರ್ಗ ಎಂದು ತಿಳಿಯಬೇಕು.

ಖಗೋಳವಿಜ್ಞಾನ ನಡೆದು ಬಂದ ದಾರಿ ವೈಜ್ಞಾನಿಕ ವಿಧಾನದ ವಿಕಾಸಕ್ಕೆ ಉತ್ಕೃಷ್ಟ ನಿದರ್ಶನ ಒದಗಿಸುತ್ತದೆ:

೧ ಆದಿಮಾನವ ತನ್ನ ನೆಲೆಯಾದ ಭೂಮಿ ಸಮತಲವಾಗಿದೆಯೆಂದು ಭಾವಿಸಿದ್ದ. ಕ್ರಿಸ್ತ ಪೂರ್ವ ದಿನಗಳಂದೇ ಅಂದಿನ ಚಿಂತನಶೀಲರು ಈ ಭಾವನೆ ತಪ್ಪೆಂದು ತೋರಿಸಿ ಚಿಂತನೆಗೆ ಹೊಸ ಆಯಾಮವಿತ್ತರು.

೨ ಲಿಖಿತೇತಿಹಾಸದ ಸುದೀರ್ಘಾವಧಿ ಪರ್ಯಂತ ಮಾನವ ತನ್ನ ತಾಂಡೆಯಾದ ಈ ನೆಲವೇ ವಿಶ್ವದ ಕೇಂದ್ರ ಎಂದು ಅಂಗೀಕರಿಸಿದ್ದ. ಕ್ರಿಸ್ತಶಕ ಹದಿನಾರನೆಯ ಶತಮಾನ ದಲ್ಲಿ ಈ ಭಾವನೆಯನ್ನು ಹೂಳಲಾಯಿತು. ವಿಶ್ವದ ಕೇಂದ್ರ ಭೂಮಿ ಅಲ್ಲ, ಸೂರ್ಯ ಎಂದು ಸಾಧಿತವಾದಾಗ ಚಿಂತನೆಗೆ ಹೊಸತೊಂದು ಆಯಾಮ ಸೇರಿತು.

೩ ತನ್ನ ನಕ್ಷತ್ರವಾದ ಸೂರ್ಯನೇ ಜಗದೇಕಚಕ್ಷು ಎಂದು ಮಾನವ ನಂಬಿ ದ್ದಾಗ ಹದಿನೇಳನೆಯ ಶತಮಾನದಲ್ಲಿ ಅನಾವರಣಗೊಂಡ ವಾಸ್ತವಚಿತ್ರ ಈ ನಂಬಿಕೆ ಯನ್ನು ಹುಡಿಹಾರಿಸಿತು. ಆಕಾಶಗಂಗೆಯಲ್ಲಿರುವ ಅಸಂಖ್ಯ ನಕ್ಷತ್ರಗಳ ಸಮುದಾಯದಲ್ಲಿ ಸೂರ್ಯ ತೀರ ಸಾಧಾರಣ ವರ್ಗದ ನಕ್ಷತ್ರ ಎಂಬ ಸಂಗತಿ ವೇದ್ಯವಾದಾಗ ಚಿಂತನೆಗೆ ಮತ್ತೊಂದು ಆಯಾಮ ಒದಗಿತು.

೪ ಸೂರ್ಯ ಸಾಧಾರಣ ವರ್ಗದ ನಕ್ಷತ್ರವೇ ಇರಬಹುದು. ಆದರೆ ಇದರ ಸ್ಥಾನ ಮಾತ್ರ ಮಹತ್ತ್ವಪೂರ್ಣವಾದದ್ದು; ಆಕಾಶಗಂಗೆಯ ಕೇಂದ್ರದಲ್ಲಿ ಇದು ಪ್ರತಿಷ್ಠಿತವಾಗಿದೆ ಎಂಬ ಕ್ಷನ್ಯ ಅಭಿಮಾನ ತಳೆದಿದ್ದ ಮಾನವನ ಹೆಮ್ಮೆ ಅಲ್ಪಾಯುಷಿ ಆಗಿತ್ತು. ಸೂರ್ಯನ ಸ್ಥಾನ ಆಕಾಶಗಂಗೆಯ ಹೊರ ಅಂಚಿನಲ್ಲಿದೆ ಎಂಬ ಕಹಿ ವಾಸ್ತವತೆ ಪ್ರಸಕ್ತ ಶತಮಾನದ ಆದಿಯಲ್ಲಿ ಪ್ರಕಟವಾದಾಗ ಚಿಂತನೆಗೆ ಬೇರೊಂದು ಆಯಾಮ ಮೊಳೆಯಿತು.

೫ ನಮ್ಮ ಆಕಾಶಗಂಗೆಯೇ ವಿಶ್ವ ಎಂಬ ತೀವ್ರ ಮತ್ತು ಗಾಢ ನಂಬಿಕೆ ೧೯೨೩ ರಲ್ಲಿ ಬುಡಹತ್ತ ಕುಸಿದು ಕುಕ್ಕರಿಸಿತು. ಅಸಂಖ್ಯ ಆಕಾಶಗಂಗೆಗಳ (Milky Ways) ಸಮುದಾಯ ವಿಶ್ವ (Universel) ಎಂಬ ಸತ್ಯ ಸಾಕ್ಷಾತ್ಕಾರವಾದಾಗ ಚಿಂತನೆಗೆ ಹಲವು ಹನ್ನೊಂದು ಆಯಾಮಗಳು ಕೂಡಿಕೊಂಡವು.

೬ ಆಕಾಶಗಂಗೆಯೇ ಅತ್ಯಂತ ದೊಡ್ಡ ಬ್ರಹ್ಮಾಂಡ (galaxy) ಎಂಬ ನಂಬಿಕೆ ೧೯೫೨ರಲ್ಲಿ ನಿರ್ನಾಮವಾಯಿತು. ಇದನ್ನು ಸಲೀಸಾಗಿ ಗುಳುಂಕರಿಸಿ ಅಸ್ತ್ರಾಯುಫಟ್ ಮಾಡಬಲ್ಲ ಬ್ರಹ್ಮಾಂಡಗಳು ವಿಶ್ವದಲ್ಲಿ ವಿಪುಳವಾಗಿವೆ ಎಂಬ ಸಂಗತಿ ತಿಳಿದಾಗ ಚಿಂತನೆಯ ಆಯಾಮಕ್ಕೆ ಹೊಸ ಗರಿ ಚಿಗುರೊಡೆಯಿತು.

೭ ಅವಹೇಳನ ಪರಂಪರೆಯನ್ನು ಮೀರಿ ಮಾನವನ ಆತ್ಮಪ್ರತ್ಯಯ ಬೆಳೆಯಿತು. ವಿಶ್ವದಲ್ಲಿ ಮಾನವನೇ ಏಕೈಕ ಬುದ್ಧಿವಂತ ಜೀವಿ ಎಂಬುದು ತೀರ ಈಚಿನ ಶನಕವೂ

ಇದ್ದ ನಂಬಿಕೆ. ನನ್ನ ಬ್ರಹ್ಮಾಂಡ, ನನ್ನ ನಕ್ಷತ್ರ, ನನ್ನ ಮನೆ ಯಾವುದೂ ಇಲ್ಲ—ಸಾಕ್ಷಾತ್ ನಾನೇ. "ಬಾನಾಚೆಯಿಂ ವಿಶ್ವಸತ್ತ್ವ ತಾಸಿಳಿದಿಳೆಗೆ ನಾನೆನುವ ಚೇತನದಿ ರೂಪುಗೊಂಡಿಹುದೋ?" ೧೯೭೦ರಿಂದೀಚೆಗೆ ಈ ನಂಬಿಕೆಯು ಬುಡ ಕೂಡ ಹಂದಾಡ ತೊಡಗಿದೆ. ಇದು ಚಿಂತನೆಗೆ ಇನ್ನೊಂದು ಟಿಸಿಲೊಡೆಯುತ್ತಿರುವುದರ ಲಕ್ಷಣ.

ಒಂದು ಅರ್ಥದಲ್ಲಿ ವೈಜ್ಞಾನಿಕ ವಿಧಾನದ ಮುನ್ನಡೆಯನ್ನು ಭ್ರಮನಿರಸನ ಪರಂಪರೆ ಎನ್ನಬಹುದು.

ಈ ದೃಶ್ಯವನ್ನು ಐನ್‌ಸ್ಟೈನ್ ವರ್ಣಿಸಿರುವ ಪರಿ "ವೈಜಾನಿಕ ಸಿದ್ಧಾಂತಿಯನ್ನು ಅಸೂಯೆಯಿಂದ ನೋಡಬಾರದು. ಏಕೆಂದರೆ ನಿಸರ್ಗ ಅಥವಾ ಅಧಿಕ ಸ್ಪಷ್ಟವಾಗಿ ಪ್ರಯೋಗ, ಆತನ ಕಾರ್ಯದ ಬಗೆಗೆ ದಯಾಶೂನ್ಯವಾದ ಮತ್ತು ಅಷ್ಟೇನೂ ಸ್ನೇಹ ಪರವಲ್ಲದ ನಿಕಷ. ಅದೆಂದೂ ಒಂದು ಸಿದ್ಧಾಂತವನ್ನು 'ಸರಿ' ಎಂದೊಪ್ಪದು. ಅತ್ಯಂತ ಅನುಕೂಲ ಸಂದರ್ಭಗಳಲ್ಲಿ 'ಇರಬಹುದು' ಎನ್ನುತ್ತದೆ; ಹೆಚ್ಚಿನ ಎಲ್ಲ ಸಂದರ್ಭಗಳಲ್ಲಿಯೂ ನೇರವಾಗಿ 'ಇಲ್ಲ' ಎಂದುಬಿಡುತ್ತದೆ. ಯಾವುದೇ ಪ್ರಯೋಗ ಒಂದು ಸಿದ್ಧಾಂತದ ಜೊತೆ ಹೊಂದಿಕೆಯಾದರೆ ಸಿದ್ಧಾಂತ ಕುರಿತಂತೆ ಇದರ ಅರ್ಥ 'ಇರಬಹುದು,' ಹೊಂದಿಕೆಯಾಗದಿದ್ದರೆ 'ಇಲ್ಲ' ಪ್ರಾಯಶಃ ಪ್ರತಿಯೊಂದು ಸಿದ್ಧಾಂತವೂ ಒಂದಲ್ಲ ಒಂದು ದಿವಸ ಅದರ 'ಇಲ್ಲ'ವನ್ನು ಅನುಭವಿಸಲಿದೆ—ಹೆಚ್ಚಿನ ಸಿದ್ಧಾಂತಗಳು ಧಾರಣೆಯಾದ ತರುಣದಲ್ಲೇ."

ವಿಜ್ಞಾನದ ತಳದಲ್ಲಿರುವ ಮೂರು ಅಭಿಗೃಹೀತಗಳ ಅರ್ಥ ವಿವರಿಸಲು ಮೂರು ಉದಾಹರಣೆ ಕೊಡುತ್ತೇನೆ, ಒಂದೊಂದಕ್ಕೆ ಒಂದೊಂದು.

೧ ದೃಶ್ಯ ಪ್ರಪಂಚದ ಅತಿ ಸಂಕೀರ್ಣತೆಯ ತಳದಲ್ಲಿ ಕೇವಲ ೯೨ ನೈಸರ್ಗಿಕ ಧಾತುಗಳ (elements) ವಿವಿಧ ಸಂಯೋಜನೆಗಳನ್ನು ಗುರುತಿಸಲು ಶಕ್ಯವಾಗಿರುವುದು ಮತ್ತು ಅಲ್ಲಿಯ ನಿಯಮಗಳನ್ನು ಅನುಸರಿಸಿ ನೈಸರ್ಗಿಕ ಕ್ರಿಯೆಗಳನ್ನು ಪುನರಾವರ್ತಿಸಲು ಸಾಧ್ಯವಾಗಿರುವುದು ವಿಶ್ವದ ಸಮಸ್ತ ಕ್ರಿಯೆಗಳಲ್ಲಿಯೂ ನಿರ್ದಿಷ್ಟ ಕ್ರಮವಿರುವುದರಿಂದ ಕೈಗೂಡಿದೆ.

೨ ತಾನು ಗಮನಿಸಿದುದನ್ನು ಮತ್ತು ಅರಿತುದನ್ನು ಇತರರಿಗೆ ಆಯಾ ವಿಷಯಕ್ಕೆ ಹೊಂದುವ ಪರಿಭಾಷೆಯಲ್ಲಿ ಸಂವಹನಿಸಲು ಮಾನವನಿಗೆ ಸಾಧ್ಯವಾಗಿರುವುದರಿಂದಲೇ ನಾಗರಿಕತೆ ಬೆಳೆದು ಅಭಿವರ್ಧಿಸಿರುವುದಾಗಿದೆ. ಪ್ರತಿಯೊಬ್ಬನೂ ಪ್ರತಿಯೊಂದನ್ನೂ ಅ ಆ ಇ ಈ ಯಿಂದಲೇ ಕಲಿಯಬೇಕಾಗಿದ್ದರೆ ಮಾನವನಾಗರಿಕತೆ ಪಶುನಾಗರಿಕತೆಗಿಂತ ಭಿನ್ನವಾಗಿರುತ್ತಿರಲಿಲ್ಲ.

೩ ನೀರನ್ನು ವಿಯೋಜಿಸಿದಾಗ ಅದರ ಘಟಕಗಳಾದ ಹೈಡ್ರೊಜನ್ ಮತ್ತು ಆಕ್ಸಿಜನ್ ಧಾತುಗಳು ನಿರ್ದಿಷ್ಟ ಪ್ರಮಾಣದಲ್ಲಿ ದೊರೆಯುತ್ತವೆ; ವಿಲೋಮವಾಗಿ, ಹೈಡ್ರೊಜನ್ ಮತ್ತು ಆಕ್ಸಿಜನ್ ಧಾತುಗಳನ್ನು ನಿರ್ದಿಷ್ಟ ಪ್ರಮಾಣದಲ್ಲಿ ಸಂಯೋಜಿಸಿದಾಗ ನೀರು ಫಲಿಸುತ್ತದೆ. ಈ ಪ್ರಯೋಗ ದೇಶ ಕಾಲ ಕುಲ ಲಿಂಗ ಅತೀತವಾಗಿದೆ. ವಿಜ್ಞಾನದ ಎಲ್ಲ ಪ್ರಯೋಗಗಳ ಮುಖ್ಯ ಗುಣವೇ ಇದು.

ನಿಸರ್ಗದ ಅಸಂಖ್ಯ ಕ್ರಿಯೆಗಳನ್ನು ನಮ್ಮ ಅನುಭವದ ಮಿತಿಯೊಳಗೆ ಅರ್ಥವಿಸುವ ಸಲುವಾಗಿ ನಿರ್ದಿಷ್ಟ ಚೌಕಟ್ಟನ್ನು (framework) ವ್ಯಾಖ್ಯಿಸುವುದು ವೈಜ್ಞಾನಿಕ ವಿಧಾನದ ಒಂದು ಮಾಮೂಲಿ ಕ್ರಮ. ಇಂಥ ಒಂದು ಚೌಕಟ್ಟಿನಲ್ಲಿ ಸಂಗತ ಫಲಿತಾಂಶಗಳನ್ನು ಕೊಡುವ—ಅಂದರೆ ವಾಸ್ತವತೆಯನ್ನು ಸರಿಯಾಗಿ ವಿವರಿಸುವ—ಅನ್ವೇಷಕ ಮಾರ್ಗ, ಸೂತ್ರ, ವಿಧಿ, ನಿಯಮ ಮುಂತಾದವು ಇನ್ನೊಂದು ಚೌಕಟ್ಟಿನಲ್ಲಿ ಸಂಗತ ಫಲಿತಾಂಶ ಕೊಡಬೇಕಾಗಿಲ್ಲ ಎಂದು ತಿಳಿಯುವ ಮಾನಸಿಕ ಧೋರಣೆಯೇ ವೈಜ್ಞಾನಿಕ ಮನೋಧರ್ಮ.

ಉದಾಹರಣೆಗೆ ೧+೧+೧+೧=೪; ೧+೧+೧+೧=೧೦೦೦. ಎರಡೂ ಸರಿ: ಮೊದಲನೆಯದು ರೂಢಿಯ ದಾಶಮಿಕ ಪದ್ಧತಿಯ ಚೌಕಟ್ಟಿನಲ್ಲಿ ಸರಿ, ಎರಡನೆಯದು ಗಣಕದ ಪರಿಭಾಷೆಯಾದ ದ್ವಿಮಾನ ಪದ್ಧತಿಯ ಚೌಕಟ್ಟಿನಲ್ಲಿ ಸರಿ.

ಪರಮಾಣುವಿನ ಬೀಜವನ್ನು (nucleus) ಸತತವಾಗಿ ಪರಿಭ್ರಮಿಸುತ್ತಿರುವ ಎಲೆಕ್ಟ್ರಾನ್ ಕಣ ನಿರ್ದಿಷ್ಟ ಸ್ಥಾನಕ್ಕೆ ಯಾವ ಮುಹೂರ್ತದಲ್ಲಿ ಬರುತ್ತದೆ? ನಿರ್ದಿಷ್ಟ ಮುಹೂರ್ತದಲ್ಲಿ ಯಾವ ಸ್ಥಾನದಲ್ಲಿರುತ್ತದೆ? ಪ್ರಬಲ ಸೂಕ್ಷ್ಮದರ್ಶಕಕ್ಕೂ ಅಗೋಚರವಾದ ಪರಮಾಣುವನ್ನು ವಿಜ್ಞಾನಿಗಳು ಅನಂತಾಲ್ಪಗಾತ್ರದ ಸೌರವ್ಯೂಹವೆಂದು ಕಲ್ಪಿಸಿಕೊಂಡರು. ಸೂರ್ಯನ ಸ್ಥಾನದಲ್ಲಿ ಪರಮಾಣವಿಕ ಬೀಜವೂ ವಿವಿಧ ಗ್ರಹಗಳ ಸ್ಥಾನಗಳಲ್ಲಿ ವಿವಿಧ ಎಲೆಕ್ಟ್ರಾನ್ ಕಣಗಳೂ ಇವೆಯೆಂದು ಭಾವಿಸಿದರು. ಗ್ರಹಗಳು ಸೂರ್ಯನನ್ನು ಹೇಗೊ ಎಲೆಕ್ಟ್ರಾನುಗಳು ಬೀಜವನ್ನು ಹಾಗೆ ವಿವಿಧ ಕಕ್ಷೆಗಳಲ್ಲಿ ವಿವಿಧ ವೇಗಗಳಿಂದ ಪರಿಭ್ರಮಿಸುತ್ತವೆ. ಗ್ರಹ ಯಾವ ನೆಲೆಗೆ ಯಾವ ವೇಳೆಗೆ ಬರುವುದೆಂಬುದನ್ನೂ ಯಾವ ವೇಳೆಯಲ್ಲಿ ಯಾವ ನೆಲೆಯಲ್ಲಿ ಇರುವುದೆಂಬುದನ್ನೂ ಗಣಿತಗಣನೆಗಳ ಪ್ರಕಾರ ಕರಾರುವಾಕ್ಕಾಗಿ ಕಣಿನುಡಿಯಬಹುದು. ಪಂಚಾಂಗ ತಯಾರಿಕೆಯ ಹಿನ್ನೆಲೆಯಲ್ಲಿರುವ ತತ್ತ್ವವಿದು. ಈ ತತ್ತ್ವವನ್ನು ಎಲೆಕ್ಟ್ರಾನಿಗೆ ಅನ್ವಯಿಸಿದಾಗ ಫಲಿತಾಂಶ ತದ್ವಿಪರೀತವಾಯಿತು. ವಿಜ್ಞಾನಿಯ ಭಾಷ್ಯವನ್ನು ನಿಸರ್ಗ ನಿರಾಕರಿಸಿದಂಥ ಪರಿಸ್ಥಿತಿ. ಈ ಸಂದಿಗ್ಧತೆಯ ಪರಿಹಾರಕ್ಕೆ ವಿಜ್ಞಾನಿಗಳು ಗ್ರಹಚಲನೆಯ ವಿವರಣೆಗೆ ಅಂಗೀಕರಿಸಿದ್ದ ನ್ಯೂಟನ್ ಚೌಕಟ್ಟನ್ನು ತೊರೆದು ಪರಮಾಣು ಪ್ರಪಂಚಕ್ಕೆ ಒಪ್ಪುವ ಶಕಲ ಅಥವಾ ಕ್ವಾಂಟಮ್ ಚೌಕಟ್ಟನ್ನು ಆಶ್ರಯಿಸಬೇಕಾಯಿತು. ಹೀಗೆ ಮಾಡಿದ್ದೇ ತಡ ಎಲ್ಲವೂ ಸುಸೂತ್ರವಾಯಿತು.

ವಿಖ್ಯಾತ ಭೌತವಿಜ್ಞಾನಿ ಪ್ರೊ. ಇ. ಸಿ. ಜಿ. ಸುದರ್ಶನ್ ವೈಜ್ಞಾನಿಕ ಮನೋಧರ್ಮದಲ್ಲಿ ಆರು ಮುಖ್ಯ ಗುಣಗಳನ್ನು ಗುರುತಿಸಿ ಇವನ್ನು ಷಣ್ಮುಖ ಎಂದು ಹೆಸರಿಸಿದ್ದಾರೆ.

೧ ಕಾರ್ಯಕಾರಣ ವಿವೇಕ (rationality): ಪ್ರತಿಯೊಂದು ಕಾರ್ಯದ ಹಿನ್ನೆಲೆಯಲ್ಲಿ ಒಂದು ಕಾರಣವಿದೆಯೆಂದು ತಿಳಿಯುವ ಮತ್ತು ಅದನ್ನು ಅರಸುವ ಗುಣ.

೨ ಅನಹಂಕಾರ (humility): ಪ್ರತಿಯೊಂದು ನೂತನಾನ್ವೇಷಣೆಯೂ ಪ್ರಚಲಿತ ಸಿದ್ಧಾಂತದ ಸುಧಾರಣೆಗೆ ಇಲ್ಲವೇ ನಾಶಕ್ಕೆ ಕಾರಣವಾಗುವುದೆಂಬುದರ ಅರಿವು ಪ್ರೇರಿಸುವ ವಿನಯಶೀಲತೆ.

೩ ಪ್ರಯೋಗ ಮತ್ತು ಸ್ವತಂತ್ರಾನ್ವೇಷಣೆ (experimcntation and innovation): ಸದ್ಯ ಅಂಗೀಕೃತವಾಗಿರುವ ಸಿದ್ಧಾಂತದಲ್ಲಿ ಈ ತನಕ ಅರೆ ಕೊರೆ ಏನೂ ತಲೆ ಹಾಕಿಲ್ಲ ಎಂದ ಮಾತ್ರಕ್ಕೆ ಇದೇನೂ ಶಾಶ್ವತ ಪರಿಹಾರವಾಗಬೇಕಾಗಿಲ್ಲವೆಂಬ ಅರಿವು.

೪ ನಿರ್ದಾಕ್ಷಿಣ್ಯ (relentlessnes): ಸತ್ಯಾನ್ವೇಷಣೆಗೆ ಕೊನೆ ಎಂಬುದೇ ಇಲ್ಲ. ಆದ್ದರಿಂದ ಸತತ ಕ್ರಿಯಾಶೀಲನಾಗಿರುವುದು ಮಾತ್ರ ತನ್ನ ಹೊಣೆ ಎಂಬ ತಿಳಿವು.

೫ ಆರ್ಜವ (integrity): ನಿಸರ್ಗವನ್ನು ಯಾರೂ ಮೋಸಗೊಳಿಸಲಾರರು ಎಂಬ ಅರಿವಿನಿಂದ ಪ್ರೇರಿತವಾಗುವ ಪ್ರಾಮಾಣಿಕತೆ.

೬ ಪ್ರತಿಭೆ (creativity): ಮಳೆಮೋಡ ಸಂಚಯಿಸಿದ ಹೊರತು ಮಿಂಚು ಹೇಗೆ ಛಳಕಿಸದೊ ಹಾಗೆ ಕಠಿಣ ಪರಿಶ್ರಮಜನ್ಯ ದತ್ತಾಂಶ ಸಂಗೃಹೀತವಾದ ಹೊರತು ಪ್ರತಿಭೆಯ ಕಿಡಿ ಪ್ರಜ್ವಲಿಸದು ಎಂಬ ಅರಿವು.

ಈ ಷಡ್ಗುಣಗಳು ಪರಸ್ಪರ ಪೂರಕ ಮತ್ತು ಪೋಷಕ ಎಂಬುದು ಸ್ಪಷ್ಟ.

ಪ್ರತಿಯೊಂದು ಜೀವಿಗೂ ತೀರ ಪ್ರಾಥಮಿಕ ಮಟ್ಟದ ವೈಜ್ಞಾನಿಕ ಮನೋಧರ್ಮ ಜನ್ಮತಃ ಪ್ರಾಪ್ತವಾಗಿರುತ್ತದೆ. ಪ್ರಾಣಿಗಳ ವರ್ತನೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಇದು ತಿಳಿಯುತ್ತದೆ. ಅವುಗಳ ಸೀಮಿತ ಚೌಕಟ್ಟಿನೊಳಗೆ ಅವು ವೈಜ್ಞಾನಿಕವಾಗಿ, ಅಂದರೆ ಕಾರ್ಯಕಾರಣ ಸಂಬಂಧವಿರುವ ಹಾದಿಯಲ್ಲಿ ವರ್ತಿಸುತ್ತವೆ. ಈ ಗುಣಕ್ಕೆ ಪ್ರವೃತ್ತಿ ಅಥವಾ ಸಹಜ ಸ್ವಭಾವ (instinct) ಎಂದು ಹೆಸರು. ಎಂದೇ ಸುವ್ಯಾಖ್ಯಿತ ಪರಿಧಿಯೊಳಗೆ ಅವುಗಳ ಜೀವನ ಸುಗಮವಾಗಿ ಸಾಗುವುದಾಗಿದೆ. ಮಾನವ ಶಿಶುವಾದರೂ ಈ ಪ್ರಾಣಿಸಹಜಸ್ವಭಾವಕ್ಕೆ ಹೊರಗಾಗಿರಬೇಕಾಗಿಲ್ಲ. ಆದರೆ ಮಾನವನ ವಿಶಿಷ್ಟ ಸೊತ್ತುಗಳಾದ ಮಾತು ಬರೆಹ ಸಂಪರ್ಕ ವಿವೇಚನಾಶಕ್ತಿ ಮುಂತಾದವು—ಒಟ್ಟಾಗಿ ನಾಗರಿಕತೆ—ಶಿಶುವನ್ನು 'ಸರಿದಾರಿಯಲ್ಲಿ' ನಡೆಸಲು ಅದರ ಮೇಲೆ ಬಾಹ್ಯನಿರ್ಬಂಧಗಳನ್ನು ಹೇರುತ್ತವೆ. ಇವನ್ನೆಲ್ಲ ಮಾನವ ಪ್ರವೃತ್ತಿಯನ್ನು ಅನುಲಕ್ಷಿಸಿ ನಿಸರ್ಗ ನಿಯಮಗಳಿಗೆ ಅನುವರ್ತಿಯಾಗಿ ಪ್ರಯೋಗಿಸಿದರೆ ಶಿಶುವಿನ ವಿಕಾಸ ನಿಜಕ್ಕೂ ಸರಿದಾರಿಯಲ್ಲಿ ಆಗಿ ಅದರ ವೈಜ್ಞಾನಿಕ ಮನೋಧರ್ಮ ಕುದುರುವುದು. ಆದರೆ ಸರ್ಕಾರ, ಸಮಾಜ, ಧರ್ಮ, ಪರಂಪರೆ ಮುಂತಾದ—ಅನೇಕ ಸಂದರ್ಭಗಳಲ್ಲಿ ವಿರುದ್ಧ ದಿಶೆಗಳಲ್ಲಿ ವರ್ತಿಸುವ—ವಿವಿಧ ಬಲ ಮತ್ತು ಆಸಕ್ತಿಗಳ ಜಟಿಲ ಸಿಕ್ಕುಗಳಿಂದ ಬಂಧಿತವಾಗಿರುವ ಶಿಶುವಿಗೆಂದೂ ಈ ನೇರ ಹಾದಿ ಲಭಿಸದು. ಜಾತಿ, ಮತ, ಧರ್ಮ, ದೇವರು, ಆಚರಣೆ, ಸಂಪ್ರದಾಯ ಒಂದೊಂದೂ ಮೇಲೆ ಹೇಳಿರುವ ಪಟ್ಟಭದ್ರ

ಹಿತಾಸಕ್ತಿಗಳಿಗೆ ಪೋಷಕವಾಗಿ ಬೆಳೆದು ಅಭಿವರ್ಧಿಸುತ್ತಿವೆ. ಈ ಮಿಥ್ಯಾ ವ್ಯವಸ್ಥೆಯ ಅಂಗವಾಗಿರುವ ಶಿಕ್ಷಣ ಮತ್ತು ಸರ್ಕಾರೀ ನೇಮನ ಅಥವಾ ನಾಮಕರಣ ಇದಕ್ಕೆ ಪಿಟೀಲು ಬಾರಿಸುವ ಕೆಲಸವನ್ನೇ ಮಾಡುವುದಾಗಿದೆ. Glimpses of World History ಯಲ್ಲಿ ಜವಾಹರಲಾಲ್ ನೆಹರೂ ಬರೆದಿದ್ದಾರೆ (ಕೊನೆ ಪತ್ರದಲ್ಲಿ) "ಗತಕಾಲವನ್ನು ವರ್ತಮಾನಕಾಲದ ಶಿಷ್ಟಮಾನಕಗಳಿಂದ ನಿರ್ಣಯಿಸಬಾರದೆಂಬ ಸಂಗತಿಯನ್ನು ಪ್ರತಿಯೊಬ್ಬನೂ ಸಹಜವಾಗಿ ಒಪ್ಪುವನಾದರೂ ವರ್ತಮಾನ ಕಾಲವನ್ನು ಗತಕಾಲದ ಮಾನಕಗಳಿಂದ ಅಳೆಯಬಾರದೆಂಬ ಸಂಗತಿಯನ್ನು ಮಾತ್ರ ಅಷ್ಟೇ ಅಬದ್ಧ ವೆಂದು ಒಪ್ಪುವುದಿಲ್ಲ. ಉದಾಹರಣೆಗೆ ನಮ್ಮ ಹಲವಾರು ಧರ್ಮಗಳು ಮಾಡಿರುವುದು ಇದನ್ನೇ: ಒಂದು ಕಾಲದಲ್ಲಿ ತಮ್ಮ ಹುಟ್ಟು ನೆಲೆಗಳಲ್ಲಿ ಒಂದಿಷ್ಟು ಉಪಯುಕ್ತತೆ ಗಳಿಸಿದ್ದು ನಮ್ಮ ಈ ಆಧುನಿಕ ಯುಗದಲ್ಲಿ ತೀರ ಅಸಂಗತ ಪಳೆಯುಳಿಕೆಗಳಾಗಿರುವ ಹಳೆಯ ನಂಬಿಕೆ, ಶ್ರದ್ಧೆ ಹಾಗೂ ಆಚಾರಗಳನ್ನು ಜಡಭಾರಗಳಾಗಿ ನಮ್ಮ ಮೇಲೆ ಹೇರುವುದರಲ್ಲಿ ವಿಶೇಷ ಯಶಸ್ಸು ಗಳಿಸಿರುವುದು."

ವೇದೋಪನಿಷತ್ ಕಾಲದಲ್ಲಿ ಪ್ರಚಲಿತವಿದ್ದ ನಿಸರ್ಗಬಲಗಳ ಅರ್ಥಪೂರ್ಣ ಉಪಾಸನೆ, ಕರ್ತವ್ಯನಿರ್ವಹಣೆ ಕುರಿತ ಅವಧಾರಣೆ, ಕರ್ಮದಿಂದಲೇ ಶ್ರೇಯಸ್ಸು ಎಂಬುದಾಗಿ ಕ್ರಿಯೆಗೆ ನೀಡಲಾಗಿದ್ದ ಪ್ರಾಧಾನ್ಯ, ಧರ್ಮದ ವ್ಯಾಖ್ಯೆಯಲ್ಲಿ ಅಡಕವಾಗಿದ್ದ ಉದಾರನೀತಿ ಮರೆಯಾಗಿ ತದನಂತರದ ಪುರಾಣಕಾಲದ ಪವಾಡಗಳ ಬೆರಗು, ಕರ್ತವ್ಯ ನಿರ್ವಹಿಸದೆಯೂ ಜೀವನ ಫಲಗಳನ್ನು ಗಿಟ್ಟಿಸಬಲ್ಲ ತಂತ್ರ ಜನರ ಒಳಿತು ಕೆಡಕುಗಳಿಗೆ ಕಾರಣನಾದ ದೇವರು, ಈ ದೇವಾನುಗ್ರಹ ಸಂಪಾದಿಸಲು ಸಲ್ಲಿಸಬೇಕಾದ ಕೈಂಕರ್ಯ ಮುಂತಾದವು ರಂಗಪ್ರವೇಶಿಸಿ ವರ್ತಮಾನ ಜೀವನವನ್ನು ಬಂದಿಳಿಕೆಗಳಂತೆ ಬಿಗಿದಪ್ಪಿ ಕೊಂಡು ಶೋಷಿಸುತ್ತಿವೆ. ಇಂಥಲ್ಲಿ ವೈಜ್ಞಾನಿಕ ಮನೋಧರ್ಮ ವಿಕಸಿಸುವುದು ಹೇಗೆ ತಾನೇ ಸಾಧ್ಯ?

ವೈಜ್ಞಾನಿಕ ಮನೋಧರ್ಮದ ಪ್ರಥಮ ಹಾಗೂ ಪ್ರಬಲ ಶತ್ರು ಜನರಿಂದ ಲಂಚ ಪಡೆದು ಅವರಿಗೆ ವರಗಳನ್ನು ಅನುಗ್ರಹಿಸುವ ದೇವರು! ಈ ಸ್ವಾರ್ಥಾತೀತನಲ್ಲದ ಮತ್ತು ಮಾನವ ಸೃಷ್ಟಿಯಾದ ದೇವರ ಸುತ್ತ ಮಠ, ಗುರು, ಜಾತಿ, ಮತ, ಸಂಪ್ರದಾಯ, ಕುರುಡುನಂಬಿಕೆ ಮುಂತಾದ ವಿಗತಿಗಾಮಿ ಬಲಗಳೆಲ್ಲವೂ ಹೆಣೆದು ಕೊಂಡು ಬದುಕನ್ನು ಕಳ್ಳ ಹಾದಿಯಲ್ಲಿ ತಳ್ಳಿಕೊಂಡು ಹೋಗುತ್ತಿವೆ. ವೈಜ್ಞಾನಿಕ ಮನೋಧರ್ಮದ ತಾಯಿಬೇರಿಗೆ ಹಿಡಿದಿರುವ ಗೆದ್ದಲು ಈ ದೇವರು. ರೂಪ, ಗುಣ, ಭಾವನೆ, ಲಹರಿ, ಸಂತೋಷ, ದುಃಖ, ಕೋಪ, ಮತ್ಸರ ಮುಂತಾದ ಸಕಲ ಮಾನವೀಯ ಸದ್ಗುಣ ದುರ್ಗುಣಗಳಿಂದ ಬಾಧಿತನಾಗಿರುವ, ಜನರ ಅದೃಷ್ಟದ ಜೊತೆ ಚೆಕ್ಕಂದವಾಡುವ ಮತ್ತು ಅವರಲ್ಲಿ ನಿಷ್ಕ್ರಿಯತೆ ಪ್ರೇರಿಸುವ ವಿಕರ್ಷಕ ದೇವರನ್ನು ನಿವಾರಿಸಿದ ವಿನಾ ವೈಜ್ಞಾನಿಕ ಮನೋಧರ್ಮ ಅಭಿವರ್ಧಿಸಲಾರದು.

ಬದುಕಿಗೊಂದು ನಂಬಿಕೆ ಬೇಕು, ಶ್ರದ್ಧೆ ಬೇಕು ನಿಜ. ಆದರೆ ಈ ನಂಬಿಕೆ ಶ್ರದ್ಧೆಗಳು ಬದುಕು ರೂಪುಗೊಳ್ಳಲು ಕಾರಣವಾಗಿರುವ ವಿಶ್ವವನ್ನು ಕುರಿತದ್ದಾಗಿರಬೇಕೇ ವಿನಾ ಒಳದಾರಿ ಸೂಚಿಸುವ ಪವಾಡಪುರುಷ ದೇವರನ್ನು ಕುರಿತದ್ದಾಗಿರಬಾರದು.

ದೇವರ ಬಗ್ಗೆ ಐನ್‌ಸ್ಟೈನ್ ಹೇಳಿರುವ ಈ ಮುಂದಿನ ಮಾತು ಮನನೀಯವಾಗಿದೆ. "ವೈಯಕ್ತಿಕ ದೇವರ ಭಾವನೆ ಮಾನವಶಾಸ್ತ್ರೀಯವೆಂದು ನನಗನ್ನಿಸುತ್ತದೆ. ನಾನೇನೂ ಇದನ್ನು ಗಂಭೀರವಾಗಿ ಸ್ವೀಕರಿಸಲಾರೆ. ಮಾನವಪ್ರಜ್ಞೆಯ ಹೊರಗೆ ಯಾವುದೋ ಮನಸ್ಸು ಅಥವಾ ಗುರಿ ಇದೆಯೆಂದು ಊಹಿಸುವುದು ಕೂಡ ನನಗೆ ಸಾಧ್ಯವಾಗದು. ನನ್ನ ಅಭಿಪ್ರಾಯ ಸ್ಪಿನೋಜನದರ ಹತ್ತಿರದ್ದು: ನಾವು ನಿವೇದಿತರಾಗಿ ಅಲ್ಲಿಯೂ ಅಪರಿಪೂರ್ಣವಾಗಿ ಮಾತ್ರ ಗ್ರಹಿಸಬಹುದಾದ ಕ್ರಮ ಮತ್ತು ಸುಸಾಂಗತ್ಯದಲ್ಲಿ ನಂಬಿಕೆ, ಮತ್ತು ಇದರ ಸೌಂದರ್ಯದ ಬಗ್ಗೆ ಮೆಚ್ಚುಗೆ. ನಮ್ಮ ಅಪರಿಪೂರ್ಣ ಜ್ಞಾನ ಮತ್ತು ಅಪಕ್ವ ತಿಳಿವಳಿಕೆಯಿಂದಲೇ ನಾವು ತೃಪ್ತರಾಗಿದ್ದುಕೊಂಡು ಮೌಲ್ಯಗಳನ್ನೂ ನೈತಿಕ ಹೊಣೆಗಳನ್ನೂ ಕೇವಲ ಮಾನವ ಸಮಸ್ಯೆ ಎಂಬುದಾಗಿ ಪರಿಗಣಿಸಬೇಕೆಂದು ಭಾವಿಸಿದ್ದೇನೆ. ಈ ಸಮಸ್ಯೆ ಎಲ್ಲ ಮಾನವ ಸಮಸ್ಯೆಗಳ ಪೈಕಿ ಅತಿ ಮುಖ್ಯವಾದದ್ದು. ವಿಶ್ವದ ನಿಗೂಢತೆ ಒದಗಿಸುವ ರಸಾನುಭವವೇ ಅತ್ಯಂತ ಸುಂದರವಾದದ್ದು. ಇದೇ ನಿಜವಾದ ಎಲ್ಲ ಕಲೆ ಮತ್ತು ವಿಜ್ಞಾನಗಳ ಆಕರ. ಯಾರಿಗೆ ಈ ಅನುಭವ ಪರಕೀಯ ಎನ್ನಿಸುವುದೊ ಯಾರು ನಿಗೂಢತೆಯ ಎದುರು ಮೂಕ ವಿಸ್ಮಯದಿಂದ ಬೆಕ್ಕಸಬೆರಗಾಗಿ ನಿಂತು ಕಣ್ಣರಳಿಸಲಾರರೊ ಅವರು ಇದ್ದೂ ಸತ್ತಂತೆಯೇ—ಅವರ ಕಂಗಳು ಇಂಗಿಹೋಗಿರುತ್ತವೆ. ಅತ್ಯುತ್ಕೃಷ್ಟ ಜ್ಞಾನವಾಗಿಯೂ ಪರಮೋಜ್ಜ್ವಲ ಸೌಂದರ್ಯವಾಗಿಯೂ ಪ್ರಕಟವಾಗುವ ಗಮ್ಯಾತೀತ ಪದಾರ್ಥವೊಂದುಂಟು. ನಮ್ಮ ಮಂದ ಸಂವೇದನೆಗಳು ಇದನ್ನು ಇದರ ಅತ್ಯಂತ ಆದಿಮ ರೂಪದಲ್ಲಿ ಮಾತ್ರ ಗ್ರಹಿಸಬಲ್ಲವು ಎಂಬುದನ್ನು ಅರಿಯುವುದೇ—ಈ ತಿಳಿವಳಿಕೆ ಈ ಭಾವನೆ—ನಿಜವಾದ ಧಾರ್ಮಿಕತೆಯ ತಿರುಳು. ಈ ಅರ್ಥದಲ್ಲಿ, ಮಾತ್ರ, ನಾನು ಶ್ರದ್ಧಾವಂತ ಧಾರ್ಮಿಕ ವ್ಯಕ್ತಿಗಳ ಸಾಲಿಗೆ ಸೇರಿದವನಾಗಿದ್ದೇನೆ."

ಸ್ವಾಮಿ ವಿವೇಕಾನಂದರು ದೇವರ ಬಗ್ಗೆ ಹೇಳಿರುವ ಮಾತು ನೋಡಿ "'ವೇದಾಂತ' ಪದ 'ವೇದ'ದಿಂದ ಬರುತ್ತದೆ. ವೇದವೆಂದರೆ ಜ್ಞಾನ. ಎಲ್ಲ ಜ್ಞಾನವೂ ವೇದ. ಇದು ಅನಂತ—ದೇವರಂತೆ. ನಮ್ಮ ದೇಶದಲ್ಲಿ ವೇದ ಪಠಿಸುವಾತನ ಮುಂದೆ ನಾವು ಮೊಣಕಾಲು ಬಗ್ಗಿಸಿ ತಗ್ಗಿ ನಡೆಯುತ್ತೇವೆ. ಆದರೆ ಭೌತವಿಜ್ಞಾನ ಅಭ್ಯಸಿಸುವಾತನ ಬಗ್ಗೆ ಉದಾಸೀನ ಭಾವ ತಳೆಯುತ್ತೇವೆ. ಈ ವರ್ತನೆ ಕುರುಡುನಂಬಿಕೆ. ಇದು ಎಂದೂ ವೇದಾಂತವಾಗದು. ಇದು ಶುದ್ಧಾಂಗ ಐಹಿಕ ಲಾಲಸೆ. ದೇವರಲ್ಲಿ ಪ್ರತಿಯೊಂದು ಜ್ಞಾನವೂ ಪವಿತ್ರ. ಜ್ಞಾನವೇ ದೇವರು."

ಅನಂತವಿಶ್ವದ ಅನಂತಾಲ್ಪ ಅಂಶವಾದ ಮಾನವ ಅರಿಯಲೆಳಸಬೇಕಾದದ್ದು ಸ್ವಾಮಿ ವಿವೇಕಾನಂದ, ಆಲ್ಬರ್ಟ್ ಐನ್‌ಸ್ಟೈನ್ ಮೊದಲಾದ ದಾರ್ಶನಿಕರು ವಿವರಿಸಿರುವ ದೇವರನ್ನು, ಪವಾಡಗಳ ಆಕರವಾದ ಮತ್ತು ಬಿಡಿ ವ್ಯಕ್ತಿಗಳ ಪಾಪ ಪುಣ್ಯತಖ್ತೆ ಬರಾಯಿಸುವ ಲೆಕ್ಕಿಗನಾದ ಪೊಳ್ಳು ದೇವರನ್ನಲ್ಲ. ಆ ಹಾದಿಯಲ್ಲಿ ಮಾಡುವ ಪ್ರಯತ್ನ ನಿಜವಾದ ಧರ್ಮವೆನಿಸುತ್ತದೆ, ಇತರರ ಮೇಲೆ ಪ್ರಭಾವ ಬೀರುವ ಉದ್ದೇಶವನ್ನು ಪ್ರಚ್ಛನ್ನವಾಗಿಯೋ ಪ್ರಕಟವಾಗಿಯೋ ಹೊಂದಿರುವ ಬೂಟಾಟಿಕೆಯ ಆಚರಣೆಗಳಲ್ಲ. ಇಂಥ ಪ್ರಯತ್ನವೇ ನಿಜವಾದ ವೈಜ್ಞಾನಿಕ ಮಾರ್ಗ. ಈ ಮಾರ್ಗಗಾಮಿಯೇ ವೈಜ್ಞಾನಿಕ ಮನೋಧರ್ಮವಿರುವಾತ.

ಎಚ್. ನರಸಿಂಹಯ್ಯ ಸಂಪಾದಿಸಿರುವ Science, Nonscience and the Paranormal ಪುಸ್ತಕದಲ್ಲಿ ವೈಜ್ಞಾನಿಕ ಮನೋಧರ್ಮದ ನಾಲ್ಕು ಪ್ರಮುಖ ಆಧಾರಗುಣಗಳನ್ನು ಪಟ್ಟಿಮಾಡಿದೆ:

೧ ವೈಜ್ಞಾನಿಕ ವಿಧಾನ ಜ್ಞಾನ ಸಂಪಾದನೆಗೆ ಒಂದು ವ್ಯಾವಹಾರಿಕ ಮಾರ್ಗವನ್ನು ಒದಗಿಸುತ್ತದೆ.

೨ ವೈಜ್ಞಾನಿಕ ವಿಧಾನದ ಮೂಲಕಗಳಿಸಿದ ಜ್ಞಾನದ ನೆಲೆಯಲ್ಲಿ ಮಾನವ ಸಮಸ್ಯೆಗಳನ್ನು ಅರ್ಥವಿಸಿ ಪರಿಹರಿಸುವುದು ಸಾಧ್ಯವಿದೆ.

೩ ನೀತಿಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರ ಒಳಗೊಂಡಂತೆ ವ್ಯಕ್ತಿಯ ದೈನಂದಿನ ಜೀವನದ ಪ್ರತಿಯೊಂದು ಚಟುವಟಿಕೆಯಲ್ಲಿಯೂ ವೈಜ್ಞಾನಿಕ ವಿಧಾನದ ಸಂಪೂರ್ಣ ಬಳಕೆ ಮಾನವನ ಉಳಿವು ಹಾಗೂ ಪ್ರಗತಿ ಸಾಧಿಸಲು ಅಗತ್ಯ.

೪ ವೈಜ್ಞಾನಿಕ ವಿಧಾನದ ಅನ್ವಯದಿಂದ ಗಳಿಸಿದ ಜ್ಞಾನವನ್ನು ಖಚಿತದ ಬಗ್ಗೆ ಆ ಗಳಿಗೆ ತನಕ ದೊರೆತ ಪರಮಸನ್ನಿಹಿತ ಜ್ಞಾನವೆಂದು ಪರಿಗಣಿಸಬೇಕು. ಇದರ ಜೊತೆ ಹೊಂದದ ಯಾವುದೇ ಜ್ಞಾನದ ತಥ್ಯವನ್ನು ಪ್ರಶ್ನಿಸಬೇಕು. ಕಾಲಕಾಲಕ್ಕೆ ಸಮಕಾಲೀನ ಜ್ಞಾನದ ಅಡಿಪಾಯವನ್ನು ಮರುತಪಾಸಿಸಬೇಕು.

ಮಕ್ಕಳಲ್ಲಿ ಜೀವನದ ಮತ್ತು ಶಿಕ್ಷಣದ ಅವಿಭಾಜ್ಯ ಅಂಗವಾಗಿ ವೈಜ್ಞಾನಿಕ ಮನೋಧರ್ಮ ಬೆಳೆಸಲು ನಾವೆಲ್ಲರೂ ಪ್ರಯತ್ನಶೀಲರಾಗಬೇಕಾದದ್ದು ಜರೂರಿನ ಅಗತ್ಯ. ಈ ದಿಸೆಯಲ್ಲಿ ಏನು ಮಾಡಬಹುದೆಂಬುದನ್ನು ಮುಂದಿನ ಒಂಬತ್ತು ಸೂತ್ರಗಳಲ್ಲಿ ವಿವರಿಸುತ್ತೇನೆ:

೧ **ಕಾರ್ಯ–ಕಾರಣ ಸಂಬಂಧ**: ನಿಸರ್ಗದ ಸಮಸ್ತ ಕ್ರಿಯೆಗಳಲ್ಲಿಯೂ ಇದನ್ನು ಗುರುತಿಸುವುದು ಸಾಧ್ಯವಿದೆ ಎಂಬುದನ್ನು ಮಕ್ಕಳಿಗೆ ಸೋದಾಹರಣ ವಿವರಿಸಬೇಕು. ಅಲ್ಲಿಗೆ ಮನೆಯಲ್ಲಿಯ ಹಿರಿಯರಲ್ಲಿ ಇಂಥ ಜ್ಞಾನ ಬೆಳೆದಿರಬೇಕೆಂದಾಯಿತು.

೨ **ಪಠ್ಯಪುಸ್ತಕಗಳು**: ಮಕ್ಕಳಿಗೆ ವಿಧಿಸಲಾಗುವ ಪಠ್ಯೋಪಪಠ್ಯ ಪುಸ್ತಕಗಳು, ಪೂರಕ ವಾಙ್ಮಯ ಎಲ್ಲದರಲ್ಲಿಯೂ ವೈಜ್ಞಾನಿಕ ಮನೋಧರ್ಮದ ಹಿನ್ನೆಲೆ ಇರಲೇಬೇಕು. ಸಾಧುಸಂತರನ್ನಾಗಲೀ ತೀರ್ಥಕ್ಷೇತ್ರಗಳನ್ನಾಗಲೀ ಪರಿಚಯಿಸುವ ಪಾಠಗಳಲ್ಲಿ ಅಥವಾ ಪುಸ್ತಕಗಳಲ್ಲಿ ಎಲ್ಲಿಯೂ ಪವಾಡ, ಕಣ್ಕಟ್ಟು, ಯಂತ್ರ, ಮಾಯೆ ಮುಂತಾದ ಅವೈಜ್ಞಾನಿಕ ಘಟನೆಗಳಿಗೆ ಯಾ ಅಂಶಗಳಿಗೆ ಪ್ರಾಮುಖ್ಯ ಖಂಡಿತ ನೀಡಕೂಡದು. ಸ್ವಂತ ಸಾಹಸದಿಂದ ಸಾಧಾರಣ ವ್ಯಕ್ತಿ ಅತಿಮಾನವನಾಗುವುದು ಸಾಧ್ಯ. ಆದರೆ ಈ ಅತಿಮಾನವತೆಯನ್ನು ಕೊಂಚಿಸುವ ಉತ್ಸಾಹದಲ್ಲಿ ಅದಕ್ಕೆ ಪವಾಡದ ಬಣ್ಣ ಬಳಿದು ಮುಗ್ಧರ ಮನಸ್ಸನ್ನು ಕರ್ತವ್ಯವಿಮುಖವಾಗಿಸುವುದು ಘೋರಾಪರಾಧ.

೩ ಪುರಾಣ, ಕತೆಗಳು: ಪುರಾಣ ಕತೆಗಳು, ನೀತಿ ಕತೆಗಳು, ಅದ್ಭುತ ಕಥಾನಕಗಳು ಮುಂತಾದ ನೀತಿ ಮತ್ತು/ಅಥವಾ ರಂಜನೆ ಬೋಧಕ ಪ್ರಸಂಗಗಳನ್ನು ಬರೆಯುವಾಗ ಅಥವಾ ಬೋಧಿಸುವಾಗ ಕೂಡ ವೈಜ್ಞಾನಿಕ ಮನೋಧರ್ಮದ ಭದ್ರ ಅಡಿಪಾಯ ಅತ್ಯಾವಶ್ಯಕ. ಅಂದರೆ ಲೇಖಕ ಸ್ವಪ್ರತಿಭೆಯಿಂದ ನಿರ್ಮಿಸಿದ ಕಾಲ್ಪನಿಕ ಚೌಕಟ್ಟಿನ ಒಳಗೆ ಅವನೇ ವಿಧಿಸಿದ ನಿಯಮಾನುಸಾರ ಆ ಘಟನೆಗಳು ಜರಗುವುದಾಗಿದೆ ಎಂಬ ಭಾವ ಅಂತರ್ಗತವಾಗಿರುವುದು ಜರೂರಿನ ಅಗತ್ಯ.

೪ ದೇವರು, ಮತ ಇತ್ಯಾದಿ: ಪ್ರಚಲಿತ ದೇವರು, ದೇವಾಲಯ, ಮಠ, ಗುರುಪೀಠ, ಮತ ಜಾತಿ, ಧಾರ್ಮಿಕ ವಿಧಿಗಳು, ಸಾಮಾಜಿಕ ಅಂತಸ್ತು ಮುಂತಾದವು ನಿಸರ್ಗನಿಯಮಗಳಿಗೆ ವಿರುದ್ಧವಾದಂಥವು. ಚಡಾವಿನ ಮೇಲಕ್ಕೆ ನೀರನ್ನು ಹರಿಸಲು ಮಾಡಿರುವಂಥ ಅವೈಜ್ಞಾನಿಕ ಕಟ್ಟುಪಾಡುಗಳು. ಇತ್ತ ಶಾಲಾಕಾಲೇಜುಗಳಲ್ಲಿ ಕಲಿಯುವ ಪುಸ್ತಕಗಳಾದರೋ ವೈಜ್ಞಾನಿಕ ನಿಯಮಗಳನ್ನು ವಿವರಿಸುವಂಥವು. ವಿಜ್ಞಾನ ಮತ್ತು ತಂತ್ರವಿದ್ಯೆ ಇವುಗಳ ತಳದಲ್ಲಿರುತ್ತವೆ. ಮೊದಲನೆಯದು ಕಲ್ಪನೆ, ಎರಡನೆಯದು ವಾಸ್ತವತೆ. ಈಗ ಇರುವಂತೆ ಇವು ಪರಸ್ಪರ ವಿರುದ್ಧವಾಗಿವೆ. ಏಕೆಂದರೆ ಕಲ್ಪನೆ (ದೇವರು, ಧರ್ಮ, ಮತ ಮುಂತಾದವನ್ನು ಕುರಿತ ನಂಬಿಕೆ) ನಿಂತನೀರಾಗಿದೆ; ವಾಸ್ತವತೆ (ನಿಸರ್ಗವನ್ನು ಅರ್ಥವಿಸಿ ವ್ಯಾಖ್ಯಾನಿಸುವ ವಿಜ್ಞಾನ ಮತ್ತು ತಂತ್ರವಿದ್ಯೆ) ಸತತ ಗತಿಶೀಲವಾಗಿದ್ದು ಜೀವನವನ್ನು ಎಲ್ಲ ಹಂತಗಳಲ್ಲಿಯೂ ಪ್ರಭಾವಿಸುತ್ತದೆ. ನಮ್ಮ ಬದುಕು ಇವೆರಡು ಪರಸ್ಪರ ವಿರುದ್ಧ ಬಲಗಳ ನಡುವೆ ಸಿಕ್ಕಿಹಾಕಿಕೊಂಡಿರುವುದರ ದುಷ್ಪರಿಣಾಮ ಅಸಂಖ್ಯಾತ ವ್ಯಾಘಾತಗಳು. ಮೊದಲಿನ ವರ್ಗದವು ಬದುಕನ್ನು ಹೀರುವ ರಕ್ತಶೋಷಕಗಳು. ಇವುಗಳ ದಿಢೀರ್ ನಿವಾರಣೆ ಸಾಧ್ಯವಾಗದು ನಿಜ. ಆದರೆ ಸರ್ಕಾರ, ಹಿರಿಯರು, ಶಿಕ್ಷಣ ಸಂಸ್ಥೆಗಳು ಎಲ್ಲವೂ ಈ ದಿಶೆಯಲ್ಲಿ ವೈಜ್ಞಾನಿಕವಾಗಿ ಯೋಚಿಸಿ ಮತ್ತು ಯೋಜಿಸಿ ದೃಢನಿಶ್ಚಯದಿಂದ ಯುಕ್ತ ತಿದ್ದುಪಡಿಗಳನ್ನು ಕಾರ್ಯರೂಪಕ್ಕೆ ಇಳಿಸಿದ್ದಾದರೆ ಮಕ್ಕಳ ಮನಸ್ಸು ಸಹಜವಾಗಿ ವೈಜ್ಞಾನಿಕ ವಿಧಿಗಳಿಗೆ ಒಗ್ಗಿಕೊಳ್ಳುತ್ತದೆ. ಈಗ ನಡೆಯುತ್ತಿರುವುದೇನು ಗೊತ್ತೇ? ಮಕ್ಕಳಿಗೆ ಚಿಕ್ಕಂದಿನಿಂದಲೇ ಆಹಾರಕ್ಕಿಂತಲೂ ಹೆಚ್ಚಾಗಿ ಜಾತಿ ಮತ ಆಚಾರ ಗುಟ್ಟಿಯ (dose) ಊಡಿಕೆ.

೫ ಮನೋರಂಜನೆ: ಜಾತ್ಯತೀತ ಸರ್ಕಾರದಿಂದ ಸಹಾಯ ಧನ ಪಡೆದು ಇಂದು ಹೇರಳವಾಗಿ ಸಿನಿಮಾಗಳು ತಯಾರಾಗುತ್ತಿವೆ. ಸಿನಿಮಾ, ದೂರದರ್ಶನ ಮತ್ತು ಆಕಾಶವಾಣಿ ಎಂಬ ಸಮೂಹ ಮಾಧ್ಯಮಗಳು ಸಾಮಾನ್ಯ ಮನೋರಂಜನೆಯ ಸಾಧನ ಮಾತ್ರವೇ ಅಲ್ಲ, ಶಿಕ್ಷಣ ಮಾಧ್ಯಮವೂ ಆಗಿವೆ. ಆದರೆ ಸಿನಿಮಾಗಳಲ್ಲಿ ಬಹುಪಾಲಿನವು (ಸಂಚಿ ಭರ್ತಿಮಾಡುವಂಥವು) ಯಶಸ್ವಿಯಾಗಿರುವುದು ಜನರ ಅವೈಜ್ಞಾನಿಕ ಪ್ರವೃತ್ತಿ ದಾಹಗಳಿಗೆ ವಿಷವೆರೆಯುವ ಮೂಲಕವೇ. ಇದು ಸ್ಪಷ್ಟವಾಗಿ ತಂತ್ರವಿದ್ಯೆಯ ದುರುಪಯೋಗ. ಸಾರ್ವಜನಿಕ ಮಾಧ್ಯಮಗಳಲ್ಲಿ ಪ್ರಕಟವಾಗುವ ಸಮಸ್ತವೂ ವೈಜ್ಞಾನಿಕ ವಿಧಿ ವಿಧಾನಗಳ ಪರೀಕ್ಷೆಯಲ್ಲಿ ಉತ್ತೀರ್ಣವಾಗಲೇಬೇಕೆಂಬ ಕಡ್ಡಾಯ ಷರತ್ತನ್ನು ಹೇರಬೇಕು.

೬ ದುಡಿಮೆಯ ಬೆಲೆ : ಕಠಿಣ ಹಾಗೂ ಪ್ರಾಯೋಗಿಕ ದುಡಿಮೆಯೊಂದೇ ಬದುಕಿನಲ್ಲಿ ಯಶಸ್ಸನ್ನೂ ಸಂತೃಪ್ತಿಯನ್ನೂ ಗಳಿಸಿಕೊಡಬಲ್ಲದು ಎಂಬುದನ್ನು ಮಕ್ಕಳಲ್ಲಿ ಎಳವೆಯಿಂದಲೇ ಆಚರಣೆಗೆ ತರಬೇಕು. ವಾಸ್ತವ ದುಡಿಮೆಯ ಸಿಕಪದಲ್ಲಿ ಗೆದ್ದವ ಮಾತ್ರ ಅರ್ಹ, ಹುಟ್ಟಿನ ದುಡ್ಡಿನ ಯಾ ಪ್ರಭಾವದ ಎತ್ತುಗ ಒದಗಿಸುವ ಕೃತಕ ಬಲದಿಂದ ಮೇಲೆ ಬಂದವ ಅಲ್ಲ ಎಂಬ ಕಾನೂನನ್ನು ಶಿಕ್ಷಣ ಸಂಸ್ಥೆಗಳಲ್ಲಿ ಜಾರಿಗೊಳಿಸಬೇಕು. ದುಡಿಮೆಯಲ್ಲಿ ಮೇಲು ಕೀಳು ಎಂಬ ತಾರತಮ್ಯವಿಲ್ಲ. ಮುಖ್ಯವಾದದ್ದು ಶ್ರದ್ಧೆ. ಶ್ರದ್ಧಾಯುತವಾದ ಪ್ರತಿಯೊಂದು ದುಡಿಮೆಯೂ ಉತ್ತಮವಾದದ್ದು ಎಂಬುದನ್ನು ಮಕ್ಕಳಲ್ಲಿ ಮುಂದಟ್ಟು ಮಾಡಬೇಕು.

೭ ಬೆರಗು : ನಿಸರ್ಗದ ವೈಭವವನ್ನು ಬೆರಗಿನಿಂದ ನೋಡಿ ಇದರ ರಹಸ್ಯವನ್ನು ನಿಸರ್ಗಕ್ಕೆ ಅನುವರ್ತಿಯಾಗಿದ್ದುಕೊಂಡು ಅರಿಯುವ ವಿಧಾನವನ್ನು ಮಕ್ಕಳಿಗೆ ಬೋಧಿಸಬೇಕು. ಮಗು ನಿಸರ್ಗದಿಂದ ಬೇರೆಯಾದ ಜೀವಿ ಅಲ್ಲ. ಅದು ನಿಸರ್ಗದ ಕೂಸು ಎಂಬುವನ್ನು ಮಕ್ಕಳಿಗೆ ತಿಳಿಯಪಡಿಸುವ ಪಾಠ ಮತ್ತು ಪ್ರಯೋಗ ಶಿಕ್ಷಣದ ಮುಖ್ಯ ಪರಿಕರಗಳಾಗಬೇಕು.

೮ ಕ್ರಿಯಾಭಾಗಿತ್ವ : ಬದುಕಿನ ವಿದ್ಯಮಾನಗಳನ್ನು ನೋಡಿ ಕಲಿಯಲು ಮತ್ತು ಮಾಡಿ ತಿಳಿಯಲು ಮಕ್ಕಳಿಗೆ ವಿಪುಲ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಈ ತೆರನಾದ ಕ್ರಿಯಾಭಾಗಿತ್ವ ಮಕ್ಕಳ ಸಹಜ ಸಾಹಸ ಪ್ರವೃತ್ತಿಗೆ ಸವಾಲಾಗುವುದರ ಜೊತೆಗೆ ಅವರ ವೈಜ್ಞಾನಿಕ ಮನೋಧರ್ಮ ಅರಳುವುದಕ್ಕೂ ನೆರವಾಗುತ್ತದೆ.

೯ ಹಿರಿಯರ ಹೊಣೆ : ಮಕ್ಕಳು ಬಹುತೇಕ ಕಲಿಯುವುದು ತಮ್ಮ ಸನ್ನಿಕಟ ಹಿರಿಯ ಒಡನಾಡಿಗಳನ್ನು ಅನುಕರಿಸುವುದರ ಮೂಲಕ. ಎಂದೇ "ಮಕ್ಕಳಿಸ್ಕೂಲ್ ಮನೇಲಲ್ವೆ ?" ಎಂಬ ಹೇಳಿಕೆ ಅರ್ಥಗರ್ಭಿತವಾಗಿರುವುದಾಗಿದೆ. ಮನೆಯಲ್ಲಿ ಹಿರಿಯರು ಮತ್ತು ಶಾಲೆಗಳಲ್ಲಿ ಅಧ್ಯಾಪಕರು ತಮ್ಮ ನಡೆ ನುಡಿ ಬಗೆಗಳಲ್ಲಿ ಸಾಮರಸ್ಯ ಕಾಪಾಡಿಕೊಂಡು ನೇರ ಅಂದರೆ ವೈಜ್ಞಾನಿಕ ಬದುಕನ್ನು ಬಾಳಿದ್ದಾದರ ಮಕ್ಕಳ ಎದುರು ಸುಖ ಜೀವನಪಥ ವಿಕಸಿಸುತ್ತದೆ. ಹೀಗಲ್ಲದೆ ಹಿರಿಯರ ಚಾಳಿ ಆಡುವುದೊಂದು, ಮಾಡುವುದಿನ್ನೊಂದು, ಪಡೆಯುವುದು ಬೇರೊಂದೇ ಆದರೆ ಮಕ್ಕಳ ಮುಗ್ಧ ಮನಸ್ಸು ಮೊದಲು ಗೊಂದಲಕ್ಕೆ ತುತ್ತಾಗುತ್ತದೆ. ಕ್ರಮೇಣ ಆ ಚಮತ್ಕಾರ ಮತ್ತು ಹಿಕಮತ್ತುಗಳಿಂದ ಪ್ರಭಾವಿತವಾಗುತ್ತದೆ. ಕೊನೆಗೆ ಅವುಗಳಿಗೆ ಒಲಿದು ಅವನ್ನು ಅನುಕರಿಸತೊಡಗುತ್ತದೆ. ಅಲ್ಲಿಗೆ ವೈಜ್ಞಾನಿಕ ಮನೋಧರ್ಮದ ಪೂರ್ಣ ಸಮಾಧಿ ಆದಂತೆಯೇ.

ವೈಜ್ಞಾನಿಕ ಮನೋಧರ್ಮದ ವಿರುದ್ಧ ಗುಣಗಳೆಂದರೆ ಮೂಢನಂಬಿಕೆ ಅಥವಾ ಕುರುಡು ನಂಬಿಕೆ (superstition), ಅಂಧಶ್ರದ್ಧೆ (blind faith), ಮತಾಂಧತೆ (fundamentalism), ಜಾತಿ ಮತ ಕುಲ ಅಂತಸ್ತು ಮುಂತಾದವುಗಳ ಕಾರಣವಾಗಿ ಹೆಡೆಯೆತ್ತುವ ಕುಪ್ರತಿಷ್ಠೆ (communalism/caste con-

sciousness) ಇತ್ಯಾದಿ. ಈ ಒಂದೊಂದು ಗುಣದ ತಳದಲ್ಲಿಯೂ ಹುದುಗಿರುವುದು ಅವಿವೇಕ, ಭಯ, ದ್ವೇಷ, ಈರ್ಷ್ಯೆ, ಅಹಂಕಾರ ಮುಂತಾದ ಜೀವನವಿರೋಧೀ ಮಾರಕಗಳು. ಮಾನವಮತಿಯ ರಚನೆ, ಸಮಾಜದ ಕಟ್ಟುಪಾಡು, ಪ್ರಚಲಿತ ಸನ್ನಿವೇಶ ಮುಂತಾದ ಪ್ರಭಾವಗಳ ಪರಿಣಾಮವಾಗಿ ಈ ಮಾರಕ ಗುಣಗಳು ಪ್ರತಿಯೊಬ್ಬನಲ್ಲಿಯೂ ಬುಸುಗುಟ್ಟುವುದು ವಿರಳವಲ್ಲ. ಅಂಥ ಒಂದೊಂದು ಸಂದರ್ಭದಲ್ಲಿಯೂ—ಮನಸ್ಸು ರಾಗಭಾವಾದಿ ವಿಕಾರಗಳಿಗೆ ವಶವಾಗುವ ದುರ್ಮುಹೂರ್ತದಲ್ಲಿ—ಸಾವಧಾನವಾಗಿಯೂ ವಿವೇಕಯುತವಾಗಿಯೂ ಸಮಸ್ಯೆಯನ್ನು ಕಾರ್ಯ-ಕಾರಣ ಸಂಬಂಧ ವಿಧಿಸುವ ಚೌಕಟ್ಟಿನ ಒಳಗೆ ಪರಿಶೀಲಿಸಿದುದಾದರೆ ಹಿಮಾಲಯಭಾರದ ಸಮಸ್ಯೆ ಹೂಹಗುರವಾಗಿ ಮಾಯವಾಗುವುದು ಖಾತ್ರಿ. ಜೊತೆಗೆ ಮನಸ್ಸು ಸಂಸ್ಕಾರಗೊಂಡು ದಕ್ಷವೂ ಆಗುತ್ತದೆ.

ಶಿಕ್ಷಣದಿಂದ ವಿಜ್ಞಾನಿಗಳಾದವರು, ಕ್ರಿಯೋದ್ಯುಕ್ತ ವಿಜ್ಞಾನಿಗಳು, ತಂತ್ರವಿದರು ಮೊದಲಾದವರು ಆ ಕಾರಣದಿಂದಲೇ ವೈಜ್ಞಾನಿಕ ಮನೋಧರ್ಮ ಪಡೆದಿರುವರೆಂದೇನೊ ಭಾವಿಸಬೇಕಾಗಿಲ್ಲ. ಇಂಥವರು ಇತರರಂತೆಯೇ ಕುರುಡು ನಂಬಿಕೆಗಳ ದಾಸರಾಗಿರುವುದೂ ಬದುಕು ಮತ್ತು ವೃತ್ತಿ ಬೇರೆ ಬೇರೆ ಎಂಬ ದ್ವಂದ್ವದಿಂದ ಬಾಧಿತರಾಗಿರುವುದೂ ವಿರಳವೇನೂ ಅಲ್ಲ. ಅಲ್ಲದೇ ವಿಜ್ಞಾನವನ್ನು ಸ್ವಂತ ಲಾಭಕ್ಕಾಗಿ—ಅಂದರೆ ಇತರರನ್ನು ಮೋಸಗೊಳಿಸುವುದಕ್ಕಾಗಿ— ನಿಯೋಜಿಸುವುದೂ ಉಂಟು.

ವಿಜ್ಞಾನದಲ್ಲಿ ಮೋಸ ಅಥವಾ 'ವೈಜ್ಞಾನಿಕ ಮೋಸ' ಎಂದರೇನು? ಇದನ್ನು ಅರಿಯುವ ಮೊದಲು 'ತಪ್ಪು,' 'ಮೋಸ' ಪದಗಳ ನಡುವಿನ ಅರ್ಥವ್ಯತ್ಯಾಸ ತಿಳಿಯಬೇಕು. ವ್ಯಕ್ತಿಯ ಅಜ್ಞತೆಯಿಂದ ತಪ್ಪು ಘಟಿಸುತ್ತದೆ. ಇದು ಅಪರಾಧವಲ್ಲ. ದುಷ್ಟಲಾಲಸೆಯ ಈಡೇರಿಕೆಗಾಗಿ ವ್ಯಕ್ತಿ ಎಸಗುವ ಕುಕೃತ್ಯವೇ ಮೋಸ. ಇದು ಖಾತ್ರಿ ಅಪರಾಧ

'ವೈಜ್ಞಾನಿಕ ಮೋಸ'ಕ್ಕೆ ಪ್ರತ್ಯಕ್ಷ ನಿದರ್ಶನವೆಂದರೆ ಫಲಜ್ಯೋತಿಷ್ಯ. ಬಾನಿನ ವಿವಿಧ ಆಳಗಳಲ್ಲಿ ನಿತ್ಯಸಂಚಾರಿಗಳಾಗಿರುವ ಮಹಾಗಾತ್ರದ ಗ್ರಹಗಳು ಬಿಡಿ ಹುಲು ಮನುಜನ ಭವಿಷ್ಯ ನಿರ್ಣಾಯಕಗಳೆಂಬ ಅಸಂಬದ್ಧ ಕಲ್ಪನೆಯನ್ನು ಆಧರಿಸಿದ ವ್ಯವಸ್ಥಿತ ವಂಚನೆ ಇದು. ಜೈವಿಕಲಯ (biorhythm) ಎನ್ನುವ ಇನ್ನೊಂದು ವಂಚನೆ ಪ್ರಕರಣವನ್ನೂ ಉಲ್ಲೇಖಿಸಬಹುದು. ಇದರ ಪ್ರಕಾರ ವ್ಯಕ್ತಿಯ ಜೀವನ ೨೩ ಮತ್ತು ೨೮ ದಿನಗಳ ಎರಡು ಚಕ್ರಗಳನ್ನು ಅವಲಂಬಿಸಿದೆ; ಜನ್ಮದಿನದಿಂದ ಮರಣದಿನದ ತನಕ ಇವು ಆತನ ಸ್ಥಿತಿಗತಿಗಳನ್ನು ನಿರ್ದೇಶಿಸುತ್ತವೆ; ಆದ್ದರಿಂದ ಈ ಚಕ್ರಗಳು ಪೂರ್ವಭಾವಿಯಾಗಿ ವಿಧಿಸುವ ಮಾರ್ಗಾನುಸಾರ ಆತ ತನ್ನ ಬದುಕನ್ನು ರೂಪಿಸಿಕೊಳ್ಳಬೇಕು.

ಇಂಥ ಪ್ರತಿಯೊಂದು ಪ್ರಸಂಗದಲ್ಲಿಯೂ ವೈಜ್ಞಾನಿಕ ಮನೋಧರ್ಮದಿಂದ ಅದನ್ನು ಪರಿಶೀಲಿಸುವುದೊಂದೇ ಸರಿದಾರಿ ಕಾಣಬಹುದಾದ ವಿಧಾನ.

ಇಲ್ಲಿ ಒಂದು ಪ್ರಶ್ನೆ ಏಳಬಹುದು. ಮಾನವೇತಿಹಾಸದ ಉದ್ದಕ್ಕೂ 'ವೈಜ್ಞಾನಿಕ ಮೋಸ' ನಡೆದಿರುವುದಕ್ಕೆ ವಿಪುಲ ಉದಾಹರಣೆಗಳು ದೊರೆಯುತ್ತವೆ. ಇದರ ಕಾರಣ ವೇನು? ಬಯಕೆಗಳ ಬೆಂಬತ್ತಿ ನಂಬಿಕೆಗಳನ್ನು ರೂಪಿಸುವುದು ಹಾಗೂ ಈ ನಂಬಿಕೆ

ಗಳಿಗೆ ತಕ್ಕ 'ವೈಜ್ಞಾನಿಕ' ಸಾಕ್ಷ್ಯಾಧಾರ ಅರಸುವುದು ಈ ಕಡೆ ಮಾನವ ಮತಿಯ ಸಹಜ ಒಲವು ಇದೆಯೆಂದನ್ನಿಸುತ್ತದೆ. ಹೀಗಲ್ಲದೆ ತಾರ್ಕಿಕ ಚಿಂತನವಿಧಾನವನ್ನು ಆಧರಿಸಿ ನಂಬಿಕೆಗಳನ್ನು ರೂಪಿಸಿಕೊಂಡಿದ್ದರೆ 'ವೈಜ್ಞಾನಿಕ ಮೋಸ' ಪ್ರಕರಣಗಳಿ ಅವಕಾಶವೇ ಇರುತ್ತಿರಲಿಲ್ಲ. ಇನ್ನೂ ಒಂದು ಪ್ರಶ್ನೆ ಉದ್ಭವಿಸಬಹುದು; ಯಾವುದೇ 'ಅತಿಮಾನವ,' 'ನಿಸರ್ಗಾತೀತ' ಅಥವಾ 'ಪಾರಲೌಕಿಕ' ವಿದ್ಯಮಾನವನ್ನು ವೈಜ್ಞಾನಿಕ ಪ್ರಯೋಗಕ್ಕೆ ಒಳಪಡಿಸಿ ಅದರ ತಥ್ಯ ಅಥವಾ ಮಿಥ್ಯ ಏನೆಂದು ಸಾಬೀತುಪಡಿಸಬಹುದಲ್ಲ? ಇಂಥ ಹುಚ್ಚು ಪ್ರಶ್ನೆಗಳಿಗೆ ಉತ್ತರ ಒಂದೇ: There's nothing that one can't research the hell out of. Research guided by bad judgment is a black hole for good money. (J.A. Wheeler)

ಇಲ್ಲಿ ಒಂದು ಎಚ್ಚರಿಕೆ ನುಡಿ ಅಗತ್ಯ. ಸಾಧಾರಣವಾಗಿ ಮುಗ್ಧ ಜನರ ಮನದಲ್ಲಿ ದೇವರ-ವಿಜ್ಞಾನ ಪರಸ್ಪರ ವೈರಿಗಳು ಎಂಬ ತಪ್ಪು ಕಲ್ಪನೆ ಇದೆ. ವಿದ್ಯಾವಂತರೆನ್ನಿಸಿಕೊಂಡವರಾದರೂ ಈ ಕುರಿತು ಗಂಭೀರವಾಗಿ ಚಿಂತಿಸದೆ ಪರಂಪರೆಯ (ಅಂದರೆ ಹಳೆಯ ಕೊಳಕುಗಳ ಗ್ರಾಮಸಾರದ) ಜೊತೆ ತೇಲುತ್ತಲೋ ಮುಳುಗುತ್ತಲೋ ದಿನ ತಳ್ಳುವುದು ಕಂಡುಬರುತ್ತದೆ. ದೇವರು ಮತ್ತು ವಿಜ್ಞಾನ ಎಂಬ ಪದಗಳ ಬಗ್ಗೆ ನಮ್ಮ ಭಾವನೆ ಅಸ್ಪಷ್ಟವಾಗಿರುವುದೇ ಇಲ್ಲಿಯ ಗೊಂದಲದ ಕಾರಣ.

ಹಾಗಾದರೆ ದೇವರು ಎಂದರೇನು?

ಮಾನವೇತಿಹಾಸವಿದರಪ್ರಕಾರ ಮೂರು ಬಗೆಯ ದೇವರುಗಳ ಕಲ್ಪನೆ ವಿಕಾಸವಾಗಿದೆ: ಭಯಾಧಾರಿತ ದೇವರು, ನೀತ್ಯಾಧಾರಿತ ದೇವರು, ಮಾನವಕೇಂದ್ರಿಯವಲ್ಲದ ಬ್ರಹ್ಮಾಂಡೀಯ ದೇವರು.

ನಿಸರ್ಗ ವ್ಯಾಪಾರಗಳ ರಹಸ್ಯ ಭೇದಿಸಲಾಗದ ಆದಿಮಾನವ ಅವುಗಳ ಬಗ್ಗೆ ಭಯಪಟ್ಟ. ಭಯನಿವಾರಣೆಗಾಗಿ ತನ್ನ ರೂಪದ, ಆದರೆ ತನಗಿಂತ ಎಷ್ಟೋ ಪಟ್ಟು ಅಧಿಕ ತ್ರಾಣದ, ದೇವರನ್ನು ಸೃಷ್ಟಿಸಿದ. So God greated man in his own image ಎನ್ನುವುದರ ನಿಜವಾದ ಅರ್ಥ ಮಾನವ ತನ್ನ ಮನದಲ್ಲಿ ತನ್ನ ರೂಪದ ಆದರೆ ಅಗಾಧ ಶಕ್ತಿಯ ದೇವರನ್ನು ಕಲ್ಪಿಸಿಕೊಂಡ ಎಂದು. ಭಯಾಧಾರಿತ ದೇವರ ಕಲ್ಪನೆಯಿದು. ಈ ದೇವರಿಗೂ ಸಾಮಾನ್ಯ ಜನತೆಗೂ ನಡುವೆ ಮಧ್ಯಸ್ಥಿಕೆ ವಹಿಸಲು ಪುರೋಹಿತವರ್ಗದ (priestly class) ಸೃಷ್ಟಿ ಆಯಿತು.

ಸಮಾಜ ಬೆಳೆದು ಅಭಿವರ್ಧಿಸಿದಂತೆ ವ್ಯಕ್ತಿ-ವ್ಯಕ್ತಿ ನಡುವಿನ ಹಾಗೂ ವ್ಯಕ್ತಿ-ಸಮಾಜ ನಡುವಿನ ಅಂತರಕ್ರಿಯೆಗಳನ್ನು ಸಮಷ್ಟಿಯ ಹಿತದೃಷ್ಟಿಯಿಂದ ಸುಸೂತ್ರವಾಗಿ ನಿಯಂತ್ರಿಸಲು ನೀತಿಯ ತಳಹದಿ ಅನಿವಾರ್ಯ ಅಗತ್ಯವಾಯಿತು. ಈ ನೀತಿಯ ಆಕರ ಯಾರು ಅಥವಾ ಯಾವುದು? ಆಗ ಮೈದಳೆದದ್ದೇ ನೀತ್ಯಾಧಾರಿತ ದೇವರ ಕಲ್ಪನೆ. ಸ್ವರ್ಗ ನರಕಗಳ ಕಲ್ಪನೆ, ಪುಣ್ಯವಂತರಿಗೆ ಸ್ವರ್ಗವಾಸ ಸುಖ, ಪಾಪಿಗಳಿಗೆ ನರಕವಾಸ ದುಃಖ ಮುಂತಾದ ಭಾವನೆಗಳೆಲ್ಲವೂ ಇದರ ಉಪೋತ್ಪನ್ನಗಳು. ಇಲ್ಲಿ ದೇವರು ಬಿ ವ್ಯಕ್ತಿಗಳ ಪುಣ್ಯಪಾಪಗಳ ಲೆಕ್ಕವಿಡುವ ಲೆಕ್ಕಿಗ! ಚಿತ್ರಗುಪ್ತ!

ಈ ಎರಡು ಕಲ್ಪನೆಗಳೂ ಮಾನವಕೇಂದ್ರೀಯವಾದವು—ಮಾನವ ಸ್ವಭಾವದ ಅನುಮೂರ್ತೀಕರಣಗಳಿವು. ದೇವರೆಂದರೆ ಅತಿಮಾನವ ಅಥವಾ ಮಹಾಮಾನವ ಎಂಬುದು ಅಂತರ್ಗತ ಭಾವನೆ. ಸಾಮಾನ್ಯ ಜನರ ದೃಷ್ಟಿಯಲ್ಲಿ ಇದೇ ಧರ್ಮದ ಮೂಲ: ವ್ಯಕ್ತಿ–ದೇವರು ನಡುವಿನ ಸಂಬಂಧವೇ ಧರ್ಮ.

ಶುದ್ಧ ವಿಜ್ಞಾನಿಯ ಮತ್ತು ಪರಿಪೂರ್ಣ ಕಲಾವಿದನ ದೃಷ್ಟಿಕೋನವಾದರೋ ಐನ್‌ಸ್ಟೈನ್ ಹೇಳಿರುವಂತೆ ಈ ಮಾನವಕೇಂದ್ರೀಯ ದೇವರನ್ನು ಮೀರಿ ವಿಶ್ವದ ಕ್ರಮಬದ್ಧತೆಯಲ್ಲಿ, ವಿಶ್ವವ್ಯಾಪಾರಗಳ ಸುಸಾಂಗತ್ಯದಲ್ಲಿ ಮತ್ತು ವಿಶ್ವದ ಅನುಪಮ ಸೌಂದರ್ಯದಲ್ಲಿ ಪ್ರಕಟವಾಗುವ ವಿಶಿಷ್ಟ ಗುಣದಿಂದ ಉದ್ದೀಪಿತವಾಗುತ್ತದೆ ಹಾಗೂ ಸ್ಫೂರ್ತಿ ತಳೆಯುತ್ತದೆ. ಇದೇ ಬ್ರಹ್ಮಾಂಡೀಯ ಧಾರ್ಮಿಕ ಸಂವೇದನೆಯು (cosmic religious feeling), ಅಂದರೆ ತತ್ತ್ವಮಸಿ ಭಾವನೆಯ ಮೂಲ.

ವಿಜ್ಞಾನಿಗೆ ಸ್ಫೂರ್ತಿ ಒದಗುವುದು ಬ್ರಹ್ಮಾಂಡೀಯ ಧಾರ್ಮಿಕ ಸಂವೇದನೆಯಿಂದ ಎಂಬುದನ್ನು ಗಮನಿಸಬೇಕು: ವಿಶ್ವ ಎಸೆಯುವ ಸವಾಲಿಗೆ ಮಾನವಮತಿ ನೀಡುವ ಪ್ರಾಯೋಗಿಕ ಜವಾಬೇ ವಿಜ್ಞಾನ, ತಾರ್ಕಿಕ ಜವಾಬು ತತ್ತ್ವಶಾಸ್ತ್ರ. ಆದ್ದರಿಂದ ತತ್ತ್ವಶಾಸ್ತ್ರ ವಿಜ್ಞಾನದ ಬುನಾದಿ. ಇತ್ತ ಧರ್ಮದ ಮೂಲವೂ ತತ್ತ್ವಶಾಸ್ತ್ರವೇ. ಹೀಗೆ ಮಾನವ ಚಿಂತನೆ ಹಾಗೂ ವ್ಯವಹಾರಗಳ ಎರಡು ಮುಖಗಳಾದ ದೇವರು ಮತ್ತು ಧರ್ಮ, ಒಂದು ಕಡೆ ವಿಜ್ಞಾನ ಮತ್ತು ತಂತ್ರವಿದ್ಯೆ (science and technology) ಇನ್ನೊಂದು ಕಡೆ ಪರಸ್ಪರ ಪೂರಕ ಪೋಷಕಗಳೇ ವಿನಾ ಮಾರಕ ಶೋಷಕಗಳಲ್ಲ.

ಈ ಸುಲಭ ಮತ್ತು ಸ್ಪಷ್ಟ ಸಂಗತಿಯನ್ನು ಹಿರಿಯರು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಇದಕ್ಕೆ ಅನುಗುಣವಾದ ಸಮಾಜ ವಿಕಸಿಸಬೇಕು ಮತ್ತು ಶಿಕ್ಷಣನೀತಿ ರೂಪುಗೊಳ್ಳಬೇಕು. ಇಂಥ ಅನುಕೂಲ ಹವೆಯಲ್ಲಿ ಅರಳುವ ಎಳೆ ಪ್ರತಿಭೆಯಲ್ಲಿ ವೈಜ್ಞಾನಿಕ ಮನೋಧರ್ಮ ಉಸಿರಿನಷ್ಟೇ ಸಹಜ ವಿದ್ಯಮಾನವಾಗಿರುತ್ತದೆ. ಆಗ ಧರ್ಮ, ಪ್ರಾರ್ಥನೆ, ಶ್ರದ್ಧೆ, ನಂಬಿಕೆ, ನೀತಿ ಮುಂತಾದ ಜೀವನೋತ್ಕರ್ಷಕ ಗುಣಗಳಿಗೆ ನೈಸರ್ಗಿಕ ಅರ್ಥ ಪ್ರಾಪ್ತವಾಗಿ—ಈಗ ಇರುವಂತೆ ಕೃತಕ ಅರ್ಥವಲ್ಲ—ಬದುಕು ಅರ್ಥಪೂರ್ಣವಾಗುತ್ತದೆ, ಉಲ್ಲಾಸಭರಿತವಾಗುತ್ತದೆ.

ನಮಗೆ ತಿಳಿಯದ ವಿಶ್ವರಹಸ್ಯಗಳು ಅಸಂಖ್ಯವಾಗಿವೆ. ಎಲ್ಲವನ್ನೂ ಎಂದೂ ಮಾನವಮತಿ ಭೇದಿಸಲಾರದು, ನಿಜ. ಆದರೆ ಪ್ರತಿಯೊಂದು ರಹಸ್ಯವನ್ನೂ ವೈಜ್ಞಾನಿಕವಾಗಿ ವಿಶ್ಲೇಷಿಸಿ ಅದರ ತಳದಲ್ಲಿರುವ ನಿಸರ್ಗನಿಯಮವನ್ನು ಪತ್ತೆ ಹಚ್ಚುವುದು ಸಾಧ್ಯವಿದೆ. ಜ್ಞಾನ ಮತ್ತು ವಿಜ್ಞಾನ ಬೆಳೆದು ಅಭಿವರ್ಧಿಸಿರುವುದು ಈ ಖಚಿತ ಮಾರ್ಗ ಕ್ರಮಣದಿಂದ. ಇದರಲ್ಲಿ ನಡೆಪಾತನ ಮನಸ್ಸು ಪವಾಡಗಳಿಂದ ಪ್ರಭಾವಿತವಾಗುವುದಿಲ್ಲ, ಭವಿಷ್ಯವಾಣಿ ನುಡಿಯುವವರ ಸಯುಮಂಚನೆಗಳಿಗೆ ಬಲಿಯಾಗುವುದಿಲ್ಲ, ನಿಸರ್ಗಾತೀತ ಬಲಗಳ ವಶೀಕರಣದಿಂದ ವೈಚಿತ್ರ್ಯಗಳನ್ನು ಪ್ರದರ್ಶಿಸುತ್ತೇವೆನ್ನುವವರ ಕುಟಿಲಪ್ರಚಾರ ತಂತ್ರಗಳಿಗೆ ಎರೆಯಾಗುವುದಿಲ್ಲ. ಇಂಥ ಮಾನಸಿಕ ಸ್ಥಿತಿಯೇ ವೈಜ್ಞಾನಿಕ ಮನೋಧರ್ಮ.

ವೈಜ್ಞಾನಿಕ ಮನೋಧರ್ಮ ಎಂದ ಕೂಡಲೇ ಅದು ವಿಜ್ಞಾನಿಗಳ ಅಥವ ವಿಜ್ಞಾನ ಕಲಿತವರ ವಿಶಿಷ್ಟ ಸೊತ್ತು, ವಿಜ್ಞಾನ ಮತ್ತು ತಂತ್ರವಿದ್ಯೆಯ ಅನ್ವಯಗಳ ಮಾತ್ರ ಚಲಾವಣೆಗೆ ಬರುವ ಗುಣ ಎಂದು ಮುಂತಾದ ತಪ್ಪು ಕಲ್ಪನೆಗಳು ಜನರಲ್ಲಿವೆ ನಿಸರ್ಗವನ್ನು ಅರ್ಥವಿಸಲು ವಿಜ್ಞಾನ ವೈದಳೆಯಿತು. ವಿಜ್ಞಾನದ ಅನ್ವಯವಾ ತಂತ್ರವಿದ್ಯೆ ಬೆಳೆದು ಅಭಿವರ್ಧಿಸಿತು. ಈ ಕ್ಷೇತ್ರಗಳಲ್ಲಿ ಮುಂದುವರಿಯಲು ಸ್ಪಷ್ಟವಾ ಮಾರ್ಗವಿದೆ. ಅದೇ ವೈಜ್ಞಾನಿಕ ವಿಧಾನ. ಇದನ್ನು—ವೈಜ್ಞಾನಿಕ ವಿಧಾನವನ್ನು— ಬದುಕಿನ ಎಲ್ಲ ಅಂಗಗಳಿಗೂ ಅತ್ಯಂತ ಲಾಭಪ್ರದವಾಗಿ ಅನ್ವಯಿಸುವುದು ಸಾಧ್ಯವಿದೆ ಈ ಹಾದಿಯಲ್ಲಿ ಮುಂದುವರಿಯುವಾತನ ಮನಸ್ಸು ವಿಶೇಷ ಪಕ್ವ ಹಾಗೂ ಪರಿಪೂರ್ಣ ಸ್ಥಿತಿಗೆ ಬರುತ್ತದೆ: ಪ್ರತಿಯೊಂದು ಸಮಸ್ಯೆಯನ್ನೂ ವಿದ್ಯಮಾನವನ್ನೂ ಕಾರ್ಯ ಕಾರಣ ಸಂಬಂಧದ ನಿರಪೇಕ್ಷ ಪಾತಳಿಯಲ್ಲಿ ಪರಿಶೀಲಿಸಿ ಯುಕ್ತ ತೀರ್ಮಾನಕ್ಕೆ ಬರು ಗುಣ. ಇದೇ ವೈಜ್ಞಾನಿಕ ಮನೋಧರ್ಮ. ಆದ್ದರಿಂದ ವೈಜಾನಿಕ ಮನೋಧರ ಎಲ್ಲರ ಜೀವನಧರ್ಮವಾಗುವುದು ಸಾಧ್ಯವಿದೆ.

ನನಗೆ ಜೀವ ಉಳಿಸುವ ಮಾತಿಗಿಂತಲೂ, ಹೃದಯ ಪರಿವರ್ತನೆಯೇ ಮುಖ್ಯವಾಗಿದೆ.

ದೈಹಿಕ ಸಖ್ಯದ ಮೂಲಕ ಆತ್ಮ ಸಖ್ಯವನ್ನು ಸಾಧಿಸುವುದೇ ವಿವಾಹದ ಗುರಿ.

ಗಾಂಧೀಜಿ

ಮಧುಮೇಹ ರೋಗಿಯ ಸ್ವಂತ ಅನುಭವಗಳು

ಶ್ರೀಮತಿ ಟೆರೀಸ ಮ್ಯಾಕ್‌ಲೀನ್

ನನಗೆ ಇಂದು ೩೬ ವರ್ಷ. ೨೧ನೆ ವರ್ಷ ವಯಸ್ಸಿನಿಂದಲೂ ಮಧುಮೇಹರೋಗ ಪೀಡಿತಳಾಗಿದ್ದೇನೆ. ಮಾಮೂಲು ರೋಗದ ಅಪವಾದದಂತಿರುವ ಛಿದುರರೀತಿಯ ರೋಗ (Brittle diabetes) ನನ್ನಿಂದ ಕಿತ್ತುಕೊಂಡಿರುವುದಕ್ಕಿಂತ ಹೆಚ್ಚಾಗಿ ವಿಶೇಷ ಅನುಭವಗಳನ್ನು ನೀಡಿದೆ. ಆದ್ದರಿಂದ ಬೇರೆ ಮಧುಮೇಹ ರೋಗಿಗಳಿಗೆ ಅಥವಾ ಅವರ ಒಡನಾಡಿಗಳಿಗೆ ಅನುಕೂಲವಾಗಲೆಂಬ ಇಚ್ಛೆಯಿಂದ ಮಧುಮೇಹರೋಗಿ ಹೇಗಿರಬಹುದೆಂದೂ ರೋಗ ನನಗೆ ಏನುಮಾಡಿದೆ ಎಂದೂ ಸ್ವಂತ ಅನುಭವಗಳ ತಪಶೀಲು ಗಳನ್ನು ಇಲ್ಲಿ ತಿಳಿಸುತ್ತಿದ್ದೇನೆ.

ನನಗೆ ಆಗುವ ಬಾಧೆಗಳ ವಿವರಣೆಯಿಂದ ತಾನು ಮಧುಮೇಹ ರೋಗಿ ಎಂದು ನೂತನವಾಗಿ ಅರಿತ ರೋಗಿಗೆ ವ್ಯಾಕುಲವನ್ನುಂಟು ಮಾಡುವುದಕ್ಕೆ ನಾನು ಹೇಸುತ್ತೇನೆ. ಅನೇಕ ಅನುಭವಗಳು ನನಗೆ ಮಾತ್ರ ವಿಶಿಷ್ಟವಾದವು—ಎಲ್ಲ ಮಧುಮೇಹ ರೋಗಿಗಳಿಗೂ ಕೆಲವು ವಿಶಿಷ್ಟ ಅನುಭವಗಳಿರುವಂತೆಯೇ. ಪ್ರತಿರೋಗಿಯನ್ನೂ ರೋಗ ವಿಧವಿಧವಾಗಿಯೇ ಕಾಡಿಸುತ್ತದೆ ಮತ್ತು ನನ್ನ ಅನುಭವ ದಂತೆ ಅದೇ ರೋಗಿಯಲ್ಲೂ ರೋಗಲಕ್ಷಣ ದೀರ್ಘಕಾಲ ಒಂದೇ ರೀತಿ ಯಲ್ಲಿರುವುದಿಲ್ಲ; ಸತತವಾಗಿ ಬದಲಾಗುತ್ತಿರುತ್ತದೆ. ಬದಲಾಗದೇ ಇರುವುದೆಂದರೆ ಸಾಕ್ಷಾತ್ ರೋಗವೊಂದೇ. ನಾನು ಕನಸಿನಲ್ಲೂ ಕಾಣಲಾಗದ ಅನುಭವ ಅವಕಾಶಗಳನ್ನು ಈ ರೋಗ ನನಗೆ ಒದಗಿಸಿ —ಕೆಲವು ಭಯಾನಕ, ಕೆಲವು ದುಃಖಕರ, ಕೆಲವು ವಿನೋದಕರ, ಇನ್ನು ಕೆಲವು ಅನಿರೀಕ್ಷಿತ ಹಾಗೂ ಆಶ್ಚರ್ಯಕರ.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯಾಗಿ ನಾನು ವಿನೋದವಾಗಿ ಕಾಲಕಳೆದೂ ಚರಿತ್ರೆಯಲ್ಲಿ ಮೇಲ್ಮಟ್ಟದ ಎರಡನೇ

೧೯೮೬ರ ನವೆಂಬರ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಶ್ರೀಮತಿ ಟೆರೀಸ ಮ್ಯಾಕ್‌ಲೀನ್ ಅವರ ಲೇಖನದ ಅನುವಾದ.

ದರ್ಜೆಯಲ್ಲಿ ಉತ್ತೀರ್ಣಳಾಗಿ ಪದವೀಧರಳಾದೆ. ಜೀವನದಲ್ಲಿ ನನಗೆ ದೊರೆತಷ್ಟು ವಿನೋದ ಲಭ್ಯವಾಗದ ಇತರರಿಗೆ ಸಹಾಯ ಎಸಗಲು ನನಗೆ ದಾರುಣವೇ ಎನಿಸುವಷ್ಟು ಆಸೆ.

ಮದರ್ ಟೆರೀಸಳ ಭೂತದಯಾದಾದಿ ಸಂಘಕ್ಕೆ ಸೇರಿಕೊಳ್ಳಬಹುದೇ ಎಂದು ಆಕೆಗೆ ಕಾಗದ ಬರೆದೆ. ಈಚಿನ ದಿನಗಳಲ್ಲಿ ಸೇರುವವರು ಬಹುಕಾಲ ಕಾಯಬೇಕು. ಆದರೆ ೧೯೭೨ರಲ್ಲಿ ನಾನು ಬರೆದದ್ದರಿಂದ; ಆಗಬಹುದು ಎಂದು ಜವಾಬು ಬಂತು. ಭಾರತಕ್ಕೆ ಬಂದದ್ದಾಯಿತು. ಆದರೆ ಬಂದ ತರುಣದಲ್ಲೆ ನನಗೆ ಆಮಶಂಕೆರೋಗ ತಗಲಿ ೬ ತಿಂಗಳಾದರೂ ಇನ್ನೂ ಬಾಧಿಸುತ್ತಿತ್ತು. ಜೊತೆಗೆ ಅತೀವವಾಗಿ ಬಾಯಾರಿಕೆ ಆಗುತ್ತಿದ್ದುದರಿಂದ ಕೈಗೆ ಸಿಕ್ಕ ಪಾನೀಯವನ್ನು ಕುಡಿದುಬಿಡುತ್ತಿದ್ದೆ; ಲೆಮೊನೇಡ್, ಗಲೀಜು ನೀರು, ಅಸಂಖ್ಯ ಬಟ್ಟಲುಗಳು ಟೀ—ಯಾವುದೋ. ಬಹಳಸಾರಿ ಜಲಬಾಧೆ ಆಗುತ್ತಿತ್ತು; ಹಗಲು ೧೦ ಸಾರಿ ರಾತ್ರಿ ೩–೪ ಸಾರಿ. ನನ್ನ ತೂಕ ೧೯ ಕಿಲೋಗಳಷ್ಟು ದಿಢೀರೆಂದು ಕುಸಿಯಿತು. ಬಹಳವಾದ ಸುಸ್ತು ಬಳಲಿಕೆಗಳಿಂದ ಎಚ್ಚರವಾಗಿರುವುದೂ ಕಷ್ಟವಾಗಿತ್ತು. ಇಂಗ್ಲೆಂಡಿಗೆ ವಾಪಸ್ಸು ಹೋಗುವಂತೆ ನನ್ನ ಮನ ಒಪ್ಪಿಸಿದರು.

ಇಂಗ್ಲೆಂಡಿನ ಗ್ಯಾಟ್‌ವಿಕ್ಕಿನಲ್ಲಿ ಏರೋಪ್ಲೇನಿನಿಂದ ಇಳಿದಾಗ ನನ್ನ ತಾಯಿಗೆ ನನ್ನ ಗುರುತೇಹತ್ತಲಿಲ್ಲ. ಭಾರತಕ್ಕೆ ತೆರಳಿದಾಗ ನಾನು ದುಂಡದುಂಡಗಿದ್ದೆ. ಈಗ ತೆಳುವಾಗಿ ಕಣ್ಣು ಗುಳಿಬಿದ್ದು ನಿತ್ರಾಣಿ ಆಗಿದ್ದೆ. ಎದೆನೋವು ತೀವ್ರವಾಗಿತ್ತು. ಅವತ್ತು ರಾತ್ರಿ ಮನೆಯಲ್ಲಿ ಉಸಿರಾಡುವುದಕ್ಕೂ ಕಷ್ಟವಾಗಿ ನಿದ್ರೆಯಿಂದ ಎಚ್ಚರಗೊಂಡಿದ್ದೆ. ತಾಯಿ ಡಾಕ್ಟರನ್ನು ಬರಮಾಡಿದಾಗ, ಆತ ನನಗೆ ಪ್ಲೂರಿಸಿ ಆಗಿದೆ ಎಂದು ಹೇಳಿ ಆಂಬ್ಯುಲೆನ್ಸಿನಲ್ಲಿ ಕಳುಹಿಸಿ ಆಸ್ಪತ್ರೆಗೆ ದಾಖಲುಮಾಡಿಸಿದ.

ಆಸ್ಪತ್ರೆಯ ಡಾಕ್ಟರು ನನ್ನ ಮೂತ್ರಪರೀಕ್ಷೆ ಮಾಡಿಸಿದಾಗ ಅದರಲ್ಲಿ ಅಧಿಕವಾಗಿ ಸಕ್ಕರೆ ಇರುವುದು ವ್ಯಕ್ತವಾಯಿತು. ನನ್ನ ಚರ್ಮ ಶುಷ್ಕವಾದಂತಿದೆಯೇ ಎಂದು ಆತ ಕೇಳಿದಾಗ ನಾನು ಹೌದೆಂದೆ. ಅವನು ಈ ಲಕ್ಷಣಗಳೆಲ್ಲ ಆಮಶಂಕೆಯದ್ದೆ ಎಂದು ಹೇಳಿದ. ಮಧುಮೇಹವಿರುವುದು ನನಗೆ ಹೇಗೆ ಮನವರಿಕೆ ಆಗಲಿಲ್ಲವೋ, ಆಸ್ಪತ್ರೆಯ ವೈದ್ಯನಿಗೆ ಅದು ಹೇಗೆ ಪತ್ತೆ ಆಗಲಿಲ್ಲವೋ ದೇವರೇ ಬಲ್ಲ. ನಾಲ್ಕು ತಿಂಗಳುಗಳನಂತರ ಆಸ್ಪತ್ರೆಯಿಂದ ಬಿಡುಗಡೆಯಾದೆ.

ಆಸ್ಪತ್ರೆಯಿಂದ ಮನೆಗೆ ಬಂದಮೇಲೆ ನನಗೆ ಅತೀವಬಳಲಿಕೆ; ಇನ್ನೊಂದು ದಿನ ಬಂತಲ್ಲಪ್ಪ ಎಂಬ ಅಂಜಿಕೆಯಿಂದಲೇ ದಿನಾ ನಿದ್ರೆಯಿಂದ ಎದ್ದೇಳುತ್ತಿದ್ದೆ. ವಿಷಾದಕರ ನಿರುತ್ಸಾಹ ಯಾವುದೇ ಆಸಕ್ತಿಯನ್ನೂ ಮಟ್ಟಹಾಕಿಬಿಡುತ್ತಿತ್ತು.

ಮೈಕೇಯಲ್ ಎಂಬ ಸ್ನೇಹಿತನೊಬ್ಬನಿಗೆ ನನ್ನ ಜಡಬಾಳನ್ನು ಕಂಡು ತೀರ ಅಸಹ್ಯ. ಅವನಾದರೋ ತೃಪ್ತಿ ಎಂಬುದನ್ನೇ ಕಾಣದ ಬಾಳನ್ನು ಬದುಕುತ್ತಿದ್ದ ಉತ್ಸಾಹೀ ಐರ್‌ಲೆಂಡ್ ದೇಶೀಯ. ಅವನು ಯಾವ ಉದ್ಯೋಗದಲ್ಲಿಲ್ಲದಿದ್ದರೂ ಆಶ್ಚರ್ಯಕರವಾಗಿ ಒಂದು ಕಾರು, ಲಂಡನ್ನಿನಲ್ಲಿ ಒಂದು ಮನೆ, ಜೂಜು ಕಟ್ಟೆಯಲ್ಲಿ ಗೊಣಗದೆ ಕಳೆದುಕೊಳ್ಳುವಷ್ಟು ಧನ ಇದ್ದವನು. ಬಹಳಷ್ಟುಮಂದಿ, ಸ್ವತಃ ನಾನೇ, ತಿಳಿದಿದ್ದಂತೆ ನಾನು ಬಡಕಲಾಗಿ ಕ್ಷೀಣಿಸಿರುವುದಕ್ಕೆ ನನ್ನ ಭಾರತ ಪ್ರವಾಸವೇ ಕಾರಣವೆಂದು ಅವನೂ ಹೇಳುತ್ತಿದ್ದ.

ಹಂಗಾಮಿ ಕೆಲಸ ದೊರಕಿಸಿಕೊಡುವ ಸಂಸ್ಥೆಯೊಂದರಲ್ಲಿ ದಾಖಲಾಗಿದ್ದು ಅದರ ಮೂಲಕ ದೊರೆತ ಗುಮಾಸ್ತೆ, ಶುಚಿಮಾಡುವಿಕೆ, ಸಾಮಾನು ತಲುಪಿಸುವಿಕೆ, ಯಾವುದೇ ಆದರೂ ಮಾಡುತ್ತಿದ್ದೆ. ಶಕ್ತಿಗುಂದಿದ ಬ್ಯಾಟರಿಯನ್ನು ಛಾರ್ಜ್ ಮಾಡಿಸುವಂತೆ ನನ್ನನ್ನೂ ಒಂದು ರೀತಿ ಛಾರ್ಜ್ ಮಾಡಿಸಿದರೆ ನನ್ನ ಆಲಸ್ಯವೆಲ್ಲ ಮಾಯವಾಗುತ್ತೆ ಎಂದು ಮೈಕೇಯಲ್‌ನ ನಂಬಿಕೆ. ಆತ ನನಗೆ ಒಂದು ಸಣ್ಣ ಮನೆಮಾಡಿಕೊಟ್ಟು ಸಾಯಂಕಾಲ ನನ್ನನ್ನು ಹೊರಗೆ ಸುತ್ತಾಡಿಸಿಕೊಂಡು ಬರುತ್ತಿದ್ದ. ನನ್ನ ಬೇನೆ ಎಂದರೆ ಸತತ ಬಾಯಾರಿಕೆ; ಅದರ ಚಿಕಿತ್ಸೆ ಅತಿಸುಲಭ. ಇದಕ್ಕಿಂತ ಬಯಸಬಹುದಾದ ಬೇನೆ ಅವನ ಕಲ್ಪನೆಗೂ ಮೀರಿದ್ದು. ಆದ್ದರಿಂದ ಸುತ್ತಾಡುವಾಗ ಐರಿಶ್ ಜನರ ಮದ್ಯ ಪಾನಾಲಯಗಳೆಲ್ಲವಲ್ಲೂ ನಾವು ಕುಡಿದ್ದೇಕುಡಿದ್ದು. ಹಿಡಿದಮಾರ್ಗದಿಂದ ಇಲ್ಲ ಬದುಕಬೇಕು, ಇಲ್ಲ ಸಾಯಬೇಕು ಎಂಬ ಹಠದ ಮನುಷ್ಯ ಮೈಕೇಯಲ್. ನಾನು ಎಷ್ಟು ಹೆಚ್ಚಾಗಿ ಸೊರಗುತ್ತಿದ್ದೆನೋ ಅಷ್ಟೂ ಹೆಚ್ಚಾಗಿ ನನಗೂ ಕುಡಿಸಿ ತಾನೂಕುಡಿಯುತ್ತಿದ್ದ. ಅವನ ಈ ಚಿಕಿತ್ಸಾಕ್ರಮದಿಂದ ನಾನು ಬದುಕಿ ಉಳಿದದ್ದು ಹೆಚ್ಚು.

ಎಂದೂ ತುಂಬಾ ಆರೋಗ್ಯದಿಂದಲೇ ಇದ್ದ ನನಗೆ ನನ್ನ ಈಗಿನ ಅಸ್ವಸ್ಥಸ್ಥಿತಿ ನಿಜವಾಗಿಯೂ ಕಳವಳವನ್ನುಂಟು ಮಾಡುವಷ್ಟು ತೀವ್ರವಾದದ್ದು ಎಂದು ಮನಸ್ಸಿಗೇ ಹತ್ತಲಿಲ್ಲ. ನಾನು ಮುಟ್ಟಾಗುವುದು ನಿಂತು ಹೋಗಿರುವುದು (ಮಧುಮೇಹದಲ್ಲಿ ಮುಟ್ಟಿನ ಅಕ್ರಮ ಸಾಮಾನ್ಯ) ಏಕೆ ಎಂದು ನಮ್ಮ ಕುಟುಂಬದ ಡಾಕ್ಟರನ್ನು ಕೇಳಿದಾಗ ಆತ ಅದರಿಂದ ಏನೂ ಬಾಧಕವಿಲ್ಲ ಎಂದು ಹೇಳಿದ. ಆದರೂ ನನ್ನ ತೃಪ್ತಿಗಾಗಿ ಲಂಡನ್ನಿನಲ್ಲಿ ತಜ್ಞನೊಬ್ಬನ ಬಳಿಗೆ ಕಳುಹಿಸಿದ. ಈ ತಜ್ಞ ನಾನು ಚೆನ್ನಾಗಿಯೇ ಇದ್ದೇನೆಂದೂ ಆದರೆ ಬಹು ತೆಳುವಾಗಿದ್ದೇನೆಂದೂ, ಮೈಬರುವ ಆಹಾರ ಸೇವನೆ ಮಾಡಬೇಕೆಂದೂ ಹೇಳಿದ. ಹಾಗೆಯೇ ನಿನ್ನ ಪಾದಗಳು ಏಕೆ ಊದಿವೆ ಎಂದು ಕೇಳಿದ. ಗೊತ್ತಿಲ್ಲ ಎಂದು ನಾನು ಹೇಳಿದ ಮೇಲೆ ಕಾಲನ್ನು ಎತ್ತರಸ್ಥಳದಲ್ಲಿಟ್ಟು ಕೂತು ಮಲಗಿ ನೋಡೆಂದು ಹೇಳಿದ. ಕೆಲಸ ಮುಗಿದ ಮೇಲೆ ನಾನು ಕಾಲನ್ನು ಕಿಟಕಿಯ ಮೇಲೆ ಇಟ್ಟು ಕುಳಿತುಕೊಳ್ಳುತ್ತಿದ್ದೆ. ಅವನ ಸಲಹೆಯಂತೆ ಆತ್ಮಹತ್ಯಾತ್ಮಕವೇ ಎನ್ನಬಹುದಾದ ಸಕ್ಕರೆ ಪ್ರಧಾನ ಆಹಾರಗಳನ್ನು ಸೇವಿಸುತ್ತ ಇನ್ನೆರಡುವಾರ ತಾರಾಡುತ್ತ ಕಾಲ ಹಾಕಿದೆ.

ಒಂದು ಸಾಯಂಕಾಲ ಬಸ್ ನಿಲ್ದಾಣದ ಹತ್ತಿರ ಒಂದು ಶಸ್ತ್ರಚಿಕಿತ್ಸಾ ಶಿಬಿರದ ವಾರ್ತಾಪ್ರಚಾರ ಫಲಕವನ್ನು ನೋಡಿದೆ. ನಾನು ಅವರಲ್ಲಿ ಪೂರ್ವಭಾವಿ ದಾಖಲಾಗಿಲ್ಲದಿದ್ದರೂ, ನನ್ನನ್ನು ಯಾವವೈದ್ಯನೂ ಅಲ್ಲಿಗೆ ಹೋಗುವಂತೆ ಸಲಹೆಮಾಡಿ ಏರ್ಪಡಿಸಿರದಿದ್ದರೂ, ನನಗೇ ಗೊತ್ತಿಲ್ಲದಂತೆ ಶಿಬಿರದ ಕಟ್ಟಡದ ಒಳಹೊಕ್ಕೆ. ನಾನು ಒಳಗೆ ಬಂದದ್ದನ್ನು ಇಟಲಿದೇಶೀಯ ಹೆಂಗಸೊಬ್ಬಳು ನೋಡಿದಳು. ನನ್ನನ್ನು ಕರೆದು ಕೂಡಿಸಿ ಅವಳು ಇನ್ನೂ ಊದಿಕೊಂಡೇ ಇದ್ದ ನನ್ನ ಪಾದಗಳನ್ನು ನೋಡಿ ನನ್ನ ಮೂತ್ರ ಪರೀಕ್ಷೆ ಮಾಡಿದಳು. ಅದರಲ್ಲಿ ಸಕ್ಕರೆ ಹೆಚ್ಚಾಗಿಯೇ ಇತ್ತು. ಅವಳು ಕೂಡಲೇ ಒಂದು ಕಾಗದ ಬರೆದು ಆದನ್ನು ಹತ್ತಿರದಲ್ಲೇ ಇದ್ದ ವೆಸ್ಟ್‌ಮಿನಿಸ್ಟರ್ ಆಸ್ಪತ್ರೆಯ ಹೊರರೋಗಿ ವಿಭಾಗಕ್ಕೆ ಕೊಟ್ಟುತೋರಿಸುವಂತೆ ಹೇಳಿದಳು. "ಅದು ಮುಂದಿನವಾರವೇ ಸರಿ; ನನಗೆ ಈಗ ಕೆಲಸ ಉಂಟು" ಎಂದು ಹೇಳಿದೆ. ಅವಳು ತಲೆ ಆಡಿಸಿ "ಎಲ್ಲವನ್ನೂ ರದ್ದುಪಡಿಸು; ನಾಳೆ ಮುಂಜಾನೆಯೇ ಕಾಗದವನ್ನು ತೆಗೆದುಕೊಂಡು ಹೋಗಿಕೊಡು" ಎಂದಳು.

ಅಲ್ಲಿಯ ಡಾಕ್ಟರು ಸ್ಕಾಟ್ಲೆಂಡ್ ದೇಶೀಯ. ನನ್ನ ಮೈಮೇಲೆ ಸೂಜಿ ಚುಚ್ಚುವಂತೆ ಆಗುವುದೇ ಮುಂತಾಗಿ ಅನೇಕಾನೇಕ ರೋಗಲಕ್ಷಣಗಳನ್ನು ತಾನೇ ಕೇಳಿಕೇಳಿ ವಿಚಾರಿಸಿದಾಗ ಅವುಗಳಲ್ಲಿ ಬಹುಲಕ್ಷಣಗಳು ನನ್ನಲ್ಲಿ ಕಂಡುಬರುತ್ತವೆ ಎಂದು ನಾನು ಒಪ್ಪಿಕೊಳ್ಳಬೇಕಾಯಿತು. ನೀನು ಮಧುಮೇಹರೋಗಿ ಎನ್ನುವುದರಲ್ಲಿ ನನ್ನ ಮನಸ್ಸಿನಲ್ಲಿ ಹೆಚ್ಚು ಸಂಶಯವಿಲ್ಲ; ಪರೀಕ್ಷಿಸಿ ನೋಡೋಣ; ನಿನ್ನನ್ನು ಸ್ವಲ್ಪ ದಿನಗಳು ವಾರ್ಡಿಗೆ ದಾಖಲು ಮಾಡಬೇಕೆಂದಿದ್ದೇನೆ ಎಂದು ಆತ ಹೇಳಿದ. ಅವನಿಗೆ ವಂದನೆಗಳನ್ನು ಅರ್ಪಿಸಿ ಮುಂದಿನವಾರ ಬರಬಹುದೇ ಎಂದು ಕೇಳಿದೆ. ಅವನು ನಕ್ಕ. ನೀನು ಕೆಲಸಕ್ಕೆ ಹೋಗುವುದು ಇರಲಿ, ಮೇಲೆ ಇರುವ ವಾರ್ಡಿಗೆ ಸಹ ನೀನು ಒಬ್ಬಳೇ ಹೋಗಿ ಸೇರಿಕೊಳ್ಳಲೂ ಬಿಡುವುದಿಲ್ಲ; ಸಹಾಯಕ್ಕಾಗಿ ದಾದಿಯನ್ನು ಕರೆಯುತ್ತೇನೆ ಎಂದ. ಸಮಾಧಾನದಿಂದ ಕಣ್ಣು ಮುಚ್ಚಿದೆ. ಕೊನೆಗಾದರೂ ನಾನು ಏಕೆ ಇಷ್ಟು ಬಳಲುತ್ತಿದ್ದೇನೆ ಎನ್ನುವುದಕ್ಕೆ ಯುಕ್ತ ಕಾರಣವೇ ಇದೆ—ಇನ್ನು ಅಧಿಕೃತವಾಗಿಯೇ ನಾನು ಬಳಲಬಹುದು ಎಂದುಕೊಂಡೆ. ನಾನು ಕಂಡಿದ್ದ ಒಬ್ಬನೇ ಮಧುಮೇಹ ರೋಗಿ ಎಂದರೆ ನಾನು ವಿದ್ಯಾಭ್ಯಾಸ ಮಾಡಿದ ಸರ್ರಿಕಾನ್‌ವೆಂಟಿನ ಮಾಲಿಯ ಮಗ ಫ್ರೆಡ್. ಅವನು ಪ್ರತಿ ಭಾನುವಾರವೂ ತಾಯಿಯನ್ನು ನೋಡಲು ಬರುತ್ತಿದ್ದ. ಆರೋಗ್ಯಕಳೆಯೇ ಇದ್ದ ನಗುಮುಖದ ಯುವಕ. ಅವನ ಜ್ಞಾಪಕವಲ್ಲಿಯೇ ಹಾಸಿಗೆಯಮೇಲೆ ಕುಳಿತಿದ್ದಂತೆ ನನ್ನ ತಾಯಿಗೆ ಫೋನ್ ಮಾಡಿದರೆ ಹೇಗೆ ಎನ್ನಿಸಿತು ಆದರೆ ಹಾಗೇನೂ ಮಾಡುವುದಕ್ಕೆ ಹೋಗಲಿಲ್ಲ. ವಾರ್ಡಿನ ವೈದ್ಯ ಡಾ. ಜೇಮ್ಸ್ ನನ್ನ ದೇಹ ಪರೀಕ್ಷೆ ಮಾಡಿದ. ಹೊಸ ಪೀಳಿಗೆಯ ವೈದ್ಯ; ಚಿಕ್ಕವ; ಬುದ್ಧಿವಂತ; ಚುರುಕಾಗಿರುವವ; ರೋಗಿಯ ದೇಹಪರೀಕ್ಷೆ ಬಹುಮುಖ್ಯವೆಂದು ತಿಳಿದವ. "ಮಧುಮೇಹ ರೋಗದಲ್ಲಿ ದೇಹದಲ್ಲಿ ನೀರು ಶೇಖರವಾಗುತ್ತದೆ. ಆ ಕಾರಣದಿಂದಲೇ ನಿನ್ನ ಪಾದಗಳು ಊದಿವೆ" ಎಂದು ಹೇಳಿದ. ಅದರ ಚಿಕಿತ್ಸೆಗಾಗಿ ಮುಂಚೆಯೇ ಬಹುಬಾರಿ ಮೂತ್ರ ಮಾಡುತ್ತಿದ್ದ ನನಗೆ ಇನ್ನೂ ತ್ರಾಸವಾಗುವಂತಿದ್ದರೂ ಮೂತ್ರ ವೃದ್ಧಿಮಾಡುವ ಔಷಧವನ್ನೇ ಕೊಟ್ಟ. ಮುಂದೆ ಹಲವು ವಾರಗಳಲ್ಲಿ ಪಾದಗಳ ಊತ ಇಳಿದು ಮಾಮೂಲು ಸ್ಥಿತಿಗೆ ಬಂದವು.

ಮಧುಮೇಹ ರೋಗದ ವಿಚಾರವಾಗಿ ಓದಿಕೊಳ್ಳಲೂ ಡಾ. ಜೇಮ್ಸ್ ಒಂದು ಪುಟ್ಟಪುಸ್ತಕ ಕೊಟ್ಟ. ಓದಿದಾಗ ಪಿಷ್ಟಾದಿಗಳು ಹೊಟ್ಟೆಯಲ್ಲಿ ಶರ್ಕರಗಳಾಗಿ ಪರಿವರ್ತಿತವಾಗಿ ರಕ್ತಗತವಾಗುತ್ತವೆಂದು ತಿಳಿಯಿತು. ಮೇಲುದರದಲ್ಲಿ ಸುಮಾರು ೨೦ ಸೆಂಮೀ ಉದ್ದವಾಗಿ ತೆಳುಹಳದಿಬಣ್ಣಕ್ಕಿರುವ ಮೇದೋಜೀರಕಾಂಗದ ಹಾರ್ಮೋನ್ ಇನ್‌ಸುಲಿನ್ನಿನ ಮೂಲಕ ಆರೋಗ್ಯವಾಗಿರುವ ವ್ಯಕ್ತಿ ರಕ್ತದ ಸಕ್ಕರೆಯನ್ನು ಶಕ್ತಿಯನ್ನಾಗಿ ಪರಿವರ್ತಿಸಿಕೊಳ್ಳುತ್ತಾನೆಂದೂ ತಿಳಿಯಿತು. ಮಧು ಮೇಹರೋಗಿಗಳಲ್ಲಿ ಈ ಎರಡನೆಯ ಪರಿವರ್ತನೆ ಪೂರ್ಣವಾಗುವುದಿಲ್ಲ. ಕಾರಣ, ಅವರಲ್ಲಿ ಇನ್‌ಸುಲಿನ್ನಿನ ಕೊರತೆ ಇರುತ್ತದೆ. ಅವರ ರಕ್ತದಲ್ಲಿ ಸಕ್ಕರೆ ಹೆಚ್ಚಾಗಿಯೇ ಇರುತ್ತದೆ ಮತ್ತು ಈ ಹೆಚ್ಚುವರಿ ಸಕ್ಕರೆ ಅಧಿಕಮೂತ್ರದ ಮೂಲಕ ವಿಸರ್ಜಿತವಾಗುತ್ತದೆ. ಅದರ ಫಲ, ಶೀಘ್ರವಾಗಿ ದೇಹ ತೂಕದ ಕುಸಿತ—ನಾನು ಭಾರತದಲ್ಲಿ ಅನುಭವಿಸಿದಂತೆ. ಮಧುಮೇಹ ರೋಗದ ವೈಜ್ಞಾನಿಕ ಹೆಸರು ಡೈಯಬಿಟೀಸ್ ಮೆಲ್ಲೈಟಸ್. ಇದರ ಅರ್ಥ

ಹೇನುತುಪ್ಪ ಕೂಡಿದ ನೀರಿನಂಥ ಮೂತ್ರ ವಿಸರ್ಜನೆ ಎಂದು. ಚಿಕಿತ್ಸೆ ಪಡೆಯದೇ ಇರುವ ಮಧುಮೇಹರೋಗಿ, ಅವನ ದೇಹದಲ್ಲಿ ಶಕ್ತಿ ಉತ್ಪಾದನೆ ಆಗದ್ದರಿಂದ ಬಳಲಿ ಕುಸಿಯುತ್ತಾನೆ. ಬಳಲಿಕೆ ಮುಂದುವರಿದು ಮಂಪರ ಬಂದು, ಆ ಸ್ಥಿತಿಯಲ್ಲೂ ಚಿಕಿತ್ಸೆ ಲಭಿಸದಿದ್ದರೆ ಮರಣ ಸಂಭವಿಸುತ್ತದೆ. ಆದರೆ ಸುಮಾರು ೭೦% ಮಧುಮೇಹ ರೋಗಿಗಳಲ್ಲಿ ಇನ್‌ಸುಲಿನ್ನು ಸ್ವಲ್ಪಮಟ್ಟಿಗೆ ಮಾತ್ರ ಕೊರೆ ಆಗಿರುತ್ತದೆ. ಇವರಲ್ಲಿ ಅನೇಕರು ೪೦ ವರ್ಷ ವಯಸ್ಸನ್ನು ಮೀರಿದವರಾಗಿರುತ್ತಾರೆ. ತಾವು ರಕ್ತಗತವಾಗಿಸಿ ಕೊಂಡಿರುವ ಸಕ್ಕರೆಯನ್ನು ವಿಲೆಮಾಡತಕ್ಕಷ್ಟು ಇನ್‌ಸುಲಿನ್ನನ್ನು ತಯಾರಿಸಲಾರದವ ರಾಗಿರುತ್ತಾರೆ. ಇವರು ಸ್ಥೂಲಕಾಯರಾಗಿರುವುದೂ ಸಾಮಾನ್ಯ. ಇಂಥ ಸೌಮ್ಯ ಮಧುಮೇಹರೋಗವನ್ನು ಯುಕ್ತ ಪಥ್ಯದಿಂದಲೇ ಹತೋಟಿಗೆ ತಂದುಕೊಳ್ಳಬಹುದು. ಇದು ಸಾಧ್ಯವಾಗದಿದ್ದರೆ ಅವರ ದೇಹದಲ್ಲಿ ಇನ್‌ಸುಲಿನ್ನಿನ ಉತ್ಪಾದನೆಯನ್ನು ಹೆಚ್ಚಿಸುವ ಮಾತ್ರೆಗಳ ಸೇವನೆಯಿಂದ ಚಿಕಿತ್ಸಿಸಬಹುದು. ಇನ್‌ಸುಲಿನ್ ಇನ್‌ಜೆಕ್ಷನ್‌ಗಳೇ ಅಗತ್ಯವಾಗಿರುವ ಮಿಕ್ಕ ಸುಮಾರು ೩೦% ಮಧುಮೇಹ ರೋಗಿಗಳಲ್ಲಿ ಬಹುಸಂಖ್ಯಾತರು ಹೆಚ್ಚುಕಡಿಮೆ ಕ್ಲುಪ್ತಪ್ರಮಾಣದ ಇನ್‌ಸುಲಿನ್ನಿಗೆ ಒಗ್ಗಿಕೊಳ್ಳುತ್ತಾರೆ. ಇಂಥವರನ್ನು ಸಮಸ್ಥಿತಿ ಮಧುಮೇಹ ರೋಗಿಗಳೆನ್ನುತ್ತಾರೆ. (Stable diabetics) ಉಳಿದ ಅಲ್ಪಸಂಖ್ಯಾತರನ್ನು—ಇನ್‌ಸುಲಿನ್ನಿಗೆ ಯದ್ವಾತದ್ವಾ ಪ್ರತಿಕ್ರಿಯೆ ತೋರುವ ಮತ್ತು ಅದರ ಫಲವಾಗಿ ರಕ್ತದಲ್ಲಿ ಅನಿಶ್ಚಿತವಾಗಿ ಅಧಿಕ ಸಕ್ಕರೆ ಇಲ್ಲವೇ ಸಕ್ಕರೆ ಕೊರತೆ ಇರುವವರನ್ನು— ಭಿದುರ ಮಧುಮೇಹ ರೋಗಿಗಳೆನ್ನುತ್ತಾರೆ (Brittle diabetics). ಈ ಪೈಕಿ ನಾನೊಬ್ಬಳು. ಎಲ್ಲ ಮಧುಮೇಹ ರೋಗಿಗಳೂ ಕಾರ್ಯಶೀಲ ಬದುಕನ್ನೇ ಬಾಳಬಹುದು. ಮದುವೆಯಾಗಿ ಮಕ್ಕಳನ್ನು ಪಡೆಯಬಹುದು. ಇಷ್ಟೆಲ್ಲ ವನ್ನೂ ಡಾ|| ಜೇಮ್ಸ್ ಕೊಟ್ಟ ಪುಸ್ತಕ ಓದಿ ತಿಳಿದುಕೊಂಡೆ.

ಇವೆಲ್ಲವೂ ತಿಳಿದ ಮೇಲೆ ನನಗೆ ಮೊತ್ತಮೊದಲಾಗಿ ಒಂದು ರೀತಿ ವಿಷಾದ ವಾಯಿತು. ನನ್ನ ತಾಯಿಗೆ ನನ್ನನ್ನು ಬಂದು ನೋಡುವಂತೆ ಫೋನ್ ಮಾಡಿದೆ. ಅವತ್ತು ಇನ್‌ಸುಲಿನ್ ಇಂಜೆಕ್ಷನ್ನನ್ನು ಕೊಟ್ಟ ನಂತರ ನನ್ನ ರಕ್ತದಲ್ಲಿ ಸಕ್ಕರೆಯ ಮಟ್ಟ ಹೆಚ್ಚು ಕಡಿಮೆ ಸಹಜಮಟ್ಟಕ್ಕೆ ಇಳಿಯಿತು. ಮಾರನೆ ದಿನ ನನ್ನ ತಾಯಿ ಆಸ್ಪತ್ರೆಗೆ ಬಂದಳು. ಮನಸ್ಸಿನ ಆತಂಕದ ಜೊತೆಗೆ ಅವಳಿಗೆ ಪ್ರಯಾಣದಿಂದ ಆಯಾಸವೂ ಆಗಿತ್ತು. ದಿನದ ೨೪ ಗಂಟೆಯೂ ವಾರ್ಡ್‌ನ ಕೆಲಸದಲ್ಲಿ ನಿರತನಾಗಿದ್ದ ಡಾ|| ಜೇಮ್ಸ್‌ಗೆ ಕೂಡ ಆಯಾಸ ವಾಗಿದ್ದಿರಲೇಬೇಕು. ಆದರೂ ಅವನು ನಮ್ಮಿಬ್ಬರನ್ನೂ ಮಧುಮೇಹ ವಿಚಾರ ತಿಳಿಸಲಿಕ್ಕೆಂದು ತನ್ನ ಕೊಠಡಿಗೆ ಕರೆದುಕೊಂಡು ಹೋದರು. "ಅದೃಷ್ಟವಶಾತ್ ನೀನು ಬದುಕಿಯೇ ಇದ್ದೀಯೆ. ಮಧುಮೇಹ ರೋಗಿಯಾದ ನೀನು ಮುಂದೆಯೂ ಹಲಕಾಲ ಜೀವದಿಂದಿರಬೇಕಾದರೆ ನಿನ್ನ ರೋಗಕ್ಕೆ ತೀವ್ರ ಗಮನ ಕೊಡುವುದು ಅಗತ್ಯ" ಎಂದು ಶ್ರದ್ಧಾಯುಕ್ತವಾಗಿ ಎಚ್ಚರಿಸಿದ. ಆದರೆ ಅದರ ಚಿಕಿತ್ಸೆಯ ವಿಷಯ ದಲ್ಲಿ ಮಾತ್ರ ಪೂರ್ಣ ನಂಬಿಕೆಯುಳ್ಳವನಾಗಿದ್ದು ಪ್ರೋತ್ಸಾಹಕರವಾಗಿಯೇ ಮಾತ ನಾಡಿದ. "ನಿಯಮಿತವಾಗಿ ಚಿಕಿತ್ಸೆ ಪಡೆಯುತ್ತಿದ್ದರೆ ಯಾವ ಸಿಕ್ಕೂ ಇಲ್ಲದೆ ನಿನ್ನ ಮಧುಮೇಹ ಸ್ಥಿತಿಯನ್ನು ಹತೋಟಿಯಲ್ಲಿಟ್ಟುಕೊಳ್ಳಬಹುದು" ಎಂದು ಹೇಳಿದ.

ನನ್ನ ತಾಯಿ ಮನೆಗೆ ವಾಪಸ್ಸು ಹೋದ ಮೇಲೆ ನಾನು ವಾರ್ಡಿಗೆ ಬಂದೆ. ಅಲ್ಲಿ ೨ ವಿಷಯಗಳ ಬಗ್ಗೆ ನಾನು ಮನಸ್ಸು ಕೆಡಿಸಿಕೊಳ್ಳದೆ ಇರಬೇಕಾಗಿತ್ತು. ಒಂದು ಆಸ್ಪತ್ರೆಯಲ್ಲಿನ ಗದ್ದಲ. ಯಾವಾಗ ನೋಡಿದರೂ ಆಹಾರದ ಕೈಗಾಡಿಯ ಗಡಗಡ ಶಬ್ದವಿರುತ್ತಿತ್ತು. ಎರಡನೆಯದಾಗಿ ಜಯಿಸುವುದಕ್ಕೆ ಅಸಾಧ್ಯವಾದ ಬೇಸರ. ವಾರ್ಡಿನಲ್ಲಿ ದೀಪ ಆರಿಸಿ ಎಷ್ಟೋ ಹೊತ್ತಾಗಿತ್ತು. ರಾತ್ರಿ ಹತ್ತುಗಂಟೆಯ ಮೇಲೆ ಆಗಿರಬೇಕು. ವಾರ್ಡಿನ ಬಾಗಿಲಲ್ಲಿ ಹಠಾತ್ತಾಗಿ ಮೈಕೇಯಲ್ ಕಾಣಿಸಿಕೊಂಡ. ಆಸ್ಪತ್ರೆಯಲ್ಲಿ ರೋಗಿಗಳನ್ನು ಭೇಟಿಮಾಡುವ ಕಾಲ ತಕ್ಕಷ್ಟು ಧಾರಾಳವಾಗಿಯೇ ಇತ್ತು. ಆದರೂ ರಾತ್ರಿ ಇಷ್ಟುಹೊತ್ತಿನ ಮೇಲೆ ಭೇಟಿಗಾಗಿ ಬರುವುದು ಎಷ್ಟೇ ಧಾರಾಳವಾಗಿದ್ದ ಸ್ಥಳದಲ್ಲೂ ಅಕ್ರಮ. ನನಗೇನೋ ಪರಮ ಸಂತೋಷವಾಯಿತು. ಗೂಟ ಒಂದರ ಮೇಲೆ ನೇತುಹಾಕಿದ್ದ ಡಾಕ್ಟರ ಬಿಳಿ ಕೋಟನ್ನು ಮೈಕೇಯಲ್ ಧರಿಸಿದ್ದ ಮತ್ತು ಅಕ್ರಮ ಭಟ್ಟಿಯಲ್ಲಿ ತಯಾರಿಸಿದ್ದ ಪೋಟೀನ್ ಎಂಬ ಐರ್‌ಲೆಂಡ್ ವ್ಹಿಸ್ಕಿಯ ಶೀಶೆಯೊಂದನ್ನು ತಂದಿದ್ದ. ಕುಡಿಯುವ ಪಾತ್ರೆಯಲ್ಲಿ ವ್ಹಿಸ್ಕಿಯನ್ನು ತುಂಬಿಕೊಟ್ಟಾಗ ನಾನು ಅದನ್ನು ಅತ್ಯಾನಂದದಿಂದ ಗುಟುಕರಿಸಿದೆ. ಆಗ ನಡುರಾತ್ರಿಯ ಸಮಯದ ರಕ್ತಪರೀಕ್ಷೆ ಮಾಡಲು ಡಾ॥ ಜೇಮ್ಸ್ ಬಂದ. ಎಲ್ಲವನ್ನೂ ನೋಡಿ ಗ್ರಹಿಸಿದ. ಮದ್ಯವನ್ನು ತಂದುಕೊಟ್ಟ ವಿಷಯದಲ್ಲಂತೂ ಅವನು ಬಹಳ ಕೋಪಗೊಂಡಿದ್ದ. ಅವನು ಕಷ್ಟಪಟ್ಟು ನನ್ನ ರಕ್ತದ ಸಕ್ಕರೆ ಮಟ್ಟವನ್ನು ಹದಕ್ಕೆ ತಂದಿದ್ದುದು ನಿಷ್ಪ್ರಯೋಜನವಾಯಿತು. "ನಿನ್ನ ರಕ್ತದಲ್ಲಿ ಸಕ್ಕರೆ ಅತ್ಯಧಿಕವಾಗಿಯೇ ಇರುತ್ತದೆ. ನಾನು ಈಗ ರಕ್ತಪರೀಕ್ಷೆ ಮಾಡುವುದು ಅರ್ಥಹೀನ" ಎಂದು ಹೇಳಿ ಮೈಕೇಯಲ್ಲನ್ನು ತರಾಟೆಗೆ ತೆಗೆದುಕೊಳ್ಳಲು ಆ ಕಡೆ ತಿರುಗಿದ. ಆದರೆ ಅವನು ಹೇಗೆ ಬಂದಿದ್ದನೋ ಹಾಗೆಯೇ ಮಾಯವಾಗಿಬಿಟ್ಟಿದ್ದ.

ಮಧುಮೇಹ ರೋಗವನ್ನು ಹಿಡಿತದಲ್ಲಿ ಇಟ್ಟುಕೊಳ್ಳುವುದು ಹೇಗೆ ಎಂಬುದನ್ನು ನಾನು ಈಗ ತಿಳಿದುಕೊಳ್ಳುತ್ತಿದ್ದೆ: ಸೇವಿಸುವ ಶರ್ಕರಪಿಷ್ಟಾದಿಗಳಿಗೆ ಅನುಗುಣವಾಗಿಯೇ ಇನ್‌ಸುಲಿನ್ ಇರಬೇಕು. ಇನ್‌ಸುಲಿನ್ನಿನ ಪ್ರಮಾಣ ಕಡಿಮೆ ಆಗಿದ್ದರೆ ದೇಹದಲ್ಲಿ ಉಪಯೋಗಿಸಲ್ಪಡುವ ಸಕ್ಕರೆಯ ಪ್ರಮಾಣ ಕಡಿಮೆ ಆಗಿ ಅರ್ಥಾತ್ ರಕ್ತದಲ್ಲಿಯ ಸಕ್ಕರೆ ಹೆಚ್ಚಿ ಬಾಯಾರಿಕೆ, ಸುಸ್ತು, ದುರ್ಬಲತೆಗಳಿಂದ ಬಳಲಬೇಕಾಗುತ್ತದೆ. ಈ ಸ್ಥಿತಿಗೆ ರಕ್ತದ ಅಧಿಕ ಶರ್ಕರತೆ (Hyperglycaemia) ಎಂದು ಹೆಸರು. ಇನ್‌ಸುಲಿನ್ನಿನ ಪ್ರಮಾಣ ಅಧಿಕವಾಗಿದ್ದು ಅನುಗುಣವಾಗಿ ಶರ್ಕರಪಿಷ್ಟಾದಿಗಳನ್ನುಳ್ಳ ಆಹಾರವನ್ನು ಸೇವಿಸಿರದಿದ್ದರೆ, ರಕ್ತದಲ್ಲಿ ಹಾಲಿ ಇರುವ ಸಕ್ಕರೆಯನ್ನು ಇನ್‌ಸುಲಿನ್ ವಿಲೇಮಾಡಿಬಿಟ್ಟು, ಮಿದುಳಿಗೆ ಅತ್ಯಗತ್ಯವಾದ ಸಕ್ಕರೆ ತಕ್ಕಷ್ಟು ಲಭಿಸದಂತೆ ಮಾಡಿಬಿಡುತ್ತದೆ. ಇದರ ಪರಿಣಾಮವಾಗಿ ನರಮಂಡಲದಿಂದಲೇ ಪ್ರಾರಂಭವಾಗಿ ಚಿತ್ತವೃತ್ತಿ ಹಾಗೂ ದೇಹಸ್ಥಿತಿಗಳು ಇಳಿಮುಖವಾಗುತ್ತ ಇನ್ನೊಂದು ಬಗೆಯ ದೇಹಾಲಸ್ಯದಿಂದ ಬಳಲಬೇಕಾಗುತ್ತದೆ. ಈ ಸ್ಥಿತಿಗೆ ರಕ್ತದ ಸಕ್ಕರೆ ಕೊರತೆ (Hypoglycaemia) ಎಂದು ಹೆಸರು. ಈ ಸ್ಥಿತಿ ತೀವ್ರವಾಗಿದ್ದು ಶೀಘ್ರವಾಗಿ ಹತೋಟಿಗೊಳಿಸಲ್ಪಡದಿದ್ದರೆ ವ್ಯಕ್ತಿಗೆ ಮೂರ್ಛೆ ಬರುತ್ತದೆ.

ನನಗೆ ಮೊದಲ ಸಲ ರಕ್ತದ ಸಕ್ಕರೆ ಕೊರತೆಯ ಅನುಭವ ಆದದ್ದು ಆಸ್ಪತ್ರೆಯಲ್ಲಿಯೇ. ಕೊರತೆಲಕ್ಷಣಗಳು ಅಷ್ಟು ತೀವ್ರವಾಗಿ ಇಲ್ಲದೇ ಇದ್ದರೂ ನನಗೆ ಭೀತಿ ಹುಟ್ಟಿಸುವಂಥ ಅನುಭವವೇ ಆಯಿತು. ಆ ಹೊತ್ತು ಭಾನುವಾರ. ಆಸ್ಪತ್ರೆಯ ಅತ್ಯಂತ ಮೇಲಿನ ಮಹಡಿಯಲ್ಲಿದ್ದ ಪ್ರಾರ್ಥನಾಮಂದಿರಕ್ಕೆ ಹೋದೆ. ಅಲ್ಲಿ ಪಾದ್ರಿ ಆರಾಧನೆಕ್ರಮಗಳನ್ನು (Mass) ಜರಗಿಸುತ್ತಿದ್ದಾಗ ನನಗೆ ಎಲ್ಲಿಯೋ ಏನೋ ಆಗುತ್ತಿದೆ ಎಂದು ವಿಚಿತ್ರವಾಗಿ ಅನ್ನಿಸುತ್ತಿತ್ತು. ಎಲ್ಲರಂತೆ ನಡೆದುಕೊಳ್ಳುವುದಕ್ಕಾಗದೆ, ಪ್ರಾರ್ಥನೆ ಮಾಡಲೂ ಸಾಧ್ಯವಾಗದೆ ವ್ಯಾಕುಲಳಾದೆ. ಹೊಟ್ಟೆ ಹಸಿವಿನಿಂದ ಬಾಧೆ ಆಗುತ್ತಿತ್ತು. ಬೆವರಿ ಮೈಯೆಲ್ಲ ತಣ್ಣಗಾಗಿತ್ತು. ಹಾಗೆಯೇ ಮುಂದಿನ ಸಂಸ್ಕಾರದಲ್ಲೂ ಭಾಗವಹಿಸಿದೆ. ಆದರೆ ಇವು ಯಾವುದಕ್ಕೂ ನನಗೂ ಸಂಬಂಧವೇ ಇಲ್ಲ ಎನ್ನಿಸುತ್ತಿತ್ತು. ಆರಾಧನೆ ಮುಗಿದ ಮೇಲೆ ಶೂನ್ಯಮನಸ್ಕಳಾಗಿ ಅಲೆಯುತ್ತ ಲಿಫ್ಟಿನ ಒಳಹೊಕ್ಕೆ. ಕೆಳಗಿಳಿಯುತ್ತ ಒಂದು ಮಜಲಿನಲ್ಲಿ ಅದರ ಬಾಗಿಲು ತೆಗೆದಾಗ ಹೊರಕ್ಕೆ ಬಂದೆ. ಅದೃಷ್ಟವಶಾತ್ ಅದು ನನ್ನ ವಾರ್ಡ್ ಇದ್ದ ಮಹಡಿಯೇ ಆಗಿತ್ತು. ಕುಡುಕಳಂತೆ ತೂರಾಡುತ್ತ ಬಂದು ನನ್ನ ಹಾಸಿಗೆಯ ಮೇಲೆ ಬಿದ್ದುಕೊಂಡೆ. ದುಃಖ ಹತ್ತಿ ಬಂತು. ಮುಚ್ಚಿದ ಕಣ್ಣುಗಳಿಂದ ಕಣ್ಣೀರು ಸುರಿದು ಬರುತ್ತಿತ್ತು. ಕಾಲುಗಳು ನಡುಗುತ್ತಿದ್ದವು. ನಡುಕವನ್ನು ತಪ್ಪಿಸಿಕೊಳ್ಳಲು ಕಾಲುಗಳನ್ನು ಬಿಗಿಯಾಗಿ ನೀಡಿ ಹಿಡಿದೆ. ಹಲವು ತಿಂಗಳುಗಳಿಂದಲೂ ಶುಷ್ಕವಾಗಿ ಪೊರೆಯಂತಿದ್ದ ಕಾಲುಚರ್ಮ ಬಿರಿದಿದ್ದು ತಿಳಿಯಿತು. ದಾದಿಯೊಬ್ಬಳು ಬಂದು ಒಂದು ಬಟ್ಟಲು ಸಿಹಿ ಮಾಡಿದ್ದ ಹಾಲನ್ನು ಕೊಟ್ಟಳು. ಅದನ್ನು ಕುಡಿದು ಮುಗಿಸುವಷ್ಟರಲ್ಲಿ ಕಾಲು ನಡುಕ ನಿಂತುಕೊಂಡಿತ್ತು. ನನ್ನ ಸ್ಥಿತಿ ಉತ್ತಮಗೊಂಡ ಅರಿಕೆ ಆಯಿತು. ದಾದಿಯನ್ನು ನೋಡಿ ನಕ್ಕೆ. ಡಾ॥ ಜೇಮ್ಸ್ ಹೀಗಾಗಿದ್ದನ್ನು ಕೇಳಿ "ಈಗ ನಿನಗೆ ತಿಳಿದಹಾಗಾಯಿತಲ್ಲ, ಇನ್ನೊಂದು ಸಾರಿ ಹೀಗೆಯೇ ಆದರೆ ಸಿಹಿಯಾದ ಆಹಾರವನ್ನೋ ಸಿಹಿ ಪಾನೀಯವನ್ನೋ ತಕ್ಷಣ ಸೇವಿಸು. ಅಲ್ಲಿ ಇಲ್ಲಿ ಸುತ್ತಾಡುತ್ತಿರಬೇಡ" ಎಂದು ಹೇಳಿದ. ಹಾಸಿಗೆಯ ಮೇಲೆ ಮಲಗಿಸಿದ್ದಂತೆ ಈಗ ನಾನು ಮುಂಚಿನಂತೆಯೇ ಇದ್ದೇನೆ ಎನ್ನಿಸಿ ಆಶ್ಚರ್ಯಪಟ್ಟೆ. ಅಂದು ಸಾಯಂಕಾಲ ಪುನಃ ರಕ್ತದಲ್ಲಿ ಸಕ್ಕರೆ ಕೊರತೆ ಉಂಟಾಗದಿರಲೆಂದು ಕಡಿಮೆ ಪ್ರಮಾಣದಲ್ಲಿ ಇನ್‌ಸುಲಿನ್ನನ್ನು ತೆಗೆದುಕೊಂಡಿದ್ದಾಯಿತು. ಅದರ ಫಲವಾಗಿ ರಕ್ತದಲ್ಲಿ ಸಕ್ಕರೆಯ ಆಧಿಕ್ಯ ಕಂಡುಬಂತು. ಮನಸ್ಸಿಗೆ ಏನೂ ಬೇಡ; ಬಾಯಾರಿಕೆ; ಪದೇ ಪದೇ ಮೂತ್ರ ಮಾಡಲು ಓಡಾಟ, ಇವುಗಳಿಂದ ನಿದ್ದೆ ಹತ್ತದೆ ಆಸ್ಪತ್ರೆಯ ರಾತ್ರಿ ಸಿಬ್ಬಂದಿಯೊಡನೆ ಇಸ್ಪೀಟಾಡುತ್ತ ಕೂತೆ.

ಆಸ್ಪತ್ರೆಯಲ್ಲಿ ದಿನಾ ಬೆಳಗ್ಗೆ ಮತ್ತು ಸಾಯಂಕಾಲ ಇನ್‌ಸುಲಿನ್ ಇನ್‌ಜೆಕ್ಷನ್‌ಗಳನ್ನು ನಾನೇ ಕೊಟ್ಟುಕೊಳ್ಳುತ್ತಿದ್ದೆ. ಆಸ್ಪತ್ರೆಗೆ ಸೇರಿದ ಮೂರನೆ ದಿನವೇ ಸ್ವತಃ ಇನ್‌ಜೆಕ್ಷನ್ ಕೊಟ್ಟುಕೊಳ್ಳುವುದನ್ನು ಕಲಿತಿದ್ದೆ. ಇದು ವಾಸಿ. ಇನ್‌ಜೆಕ್ಷನ್ ಮಾಡಲು ಇನ್ನೊಬ್ಬರಿಗಾಗಿ ಕಾಯಬೇಕಾಗಿಲ್ಲ. ಹೊಟ್ಟೆ, ತೊಡೆ, ತೋಳು, ಪಿರ್ರೆ ಮುಂತಾದ ಮಾಂಸ ದಪ್ಪವಾಗಿರುವ ಸ್ಥಳಗಳಲ್ಲಿ ಚರ್ಮದ ಮೇಲೆ ೪೫° ಯಷ್ಟು ಓರೆಯಾಗಿ ಸೂಜಿಯನ್ನಿಟ್ಟು ಒಳನೂಕಿ ಸಿರಿಂಜಿನಿಂದ ಇನ್‌ಸುಲಿನ್ನನ್ನು ಒಳದಬ್ಬುವುದು ಅಷ್ಟೆ ಇದರ ಗುಟ್ಟು.

ಆಸ್ಪತ್ರೆಯಲ್ಲಿ ೬ ದಿನಗಳು ಕಳೆದ ನಂತರ ವಾರಾಂತ್ಯಕ್ಕೆ ತಾಯಿಮನೆಗೆ ಹೋಗಲು ಅನುಮತಿ ಸಿಕ್ಕಿತು. ತಾಯಿ ನಾನು ಇನ್‌ಜೆಕ್ಷನ್ ತೆಗೆದುಕೊಳ್ಳುವುದನ್ನು ನೋಡಬೇಕೆಂದಾಗ ಅವಳೆದುರಿಗೇ ಇನ್‌ಜೆಕ್ಷನ್ ಮಾಡಿಕೊಂಡು ಜಂಬದ ಕೋಳಿಯಂತೆ ಮೆರೆದೆ. ಮಾರನೆಯ ಸಾಯಂಕಾಲ ನಾನು ಇನ್‌ಜೆಕ್ಷನ್ ಮಾಡಿಕೊಳ್ಳಬೇಕೆಂದು ಹವಣಿಸುತ್ತಿದ್ದಾಗ ನನ್ನ ತಂಗಿ ಡೊ ತಾನೂ ನೋಡಲು ಆಸೆಪಟ್ಟಳು. ನಾನು ಚುಚ್ಚಿಕೊಳ್ಳುವಾಗ ಮುಖವನ್ನು ಹೇಗೆ ಹೇಗೋ ಮಾಡಿಕೊಂಡಳು. 'ಸೂಜಿಯನ್ನು ಒಳಗೇ ಎಷ್ಟುಹೊತ್ತು ಇಟ್ಟುಕೊಂಡಿದ್ದರೂ ನೋವಾಗುವುದಿಲ್ಲ ನೋಡು' ಎಂದು ಹೇಳಿ ತೋರಿಸುವುದಕ್ಕೆಂದು ಸಿರಿಂಜನ್ನು ಅತ್ತಿತ್ತ ಅಲ್ಲಾಡಿಸಿದೆ. ಡೊಗೆ ಮೂರ್ಛೆ ಬಂದು ದಢೀರನೆ ಬಿದ್ದುಬಿಟ್ಟಳು. ಸದ್ದು ಕೇಳಿ ತಾಯಿ ನನಗೇ ಏನೋ ಆಯಿತೆಂದು ಗಾಬರಿಯಿಂದ ಓಡಿಬಂದಳು. ಅಣ್ಣ ಆಂಥೋನಿಯೂ ಬಂದ. ಎಲ್ಲರೂ ಸೇರಿ ಡೊಳನ್ನು ಎತ್ತಿ ಹಾಸಿಗೆಯ ಮೇಲೆ ಮಲಗಿಸಿದೆವು. ಅವಳಿಗೆ ಜ್ಞಾನ ಎಷ್ಟು ಹೊತ್ತಾದರೂ ಮರಳಲೇ ಇಲ್ಲ. ಆದ್ದರಿಂದ ತಾಯಿ ಡಾಕ್ಟರನ್ನು ಬರಮಾಡಿದಳು. ನನಗೇ ವೈದ್ಯಸಹಾಯ ಬೇಕಾಗಿದ್ದೀತು ಎಂದುಕೊಂಡು ಬಂದ ಡಾಕ್ಟರಿಗೆ ನನ್ನ ಬದಲಾಗಿ ಡೊ ಸಹಾಯಾರ್ಥಿಯಾಗಿದ್ದುದು ಮೋಜು. ಡೊಗೆ ತಲೆಗೆ ಏಟು ಬಿದ್ದಿರುವುದರಿಂದ ಹೆಚ್ಚುಹೊತ್ತು ಜ್ಞಾನ ತಪ್ಪಿದೆ ಅಷ್ಟೆ. ಏನೂ ಪರವಾಗಿಲ್ಲ ಎಂದು ಸಮಾಧಾನ ಹೇಳಿದ.

ಆ ಸಲದ ಈಸ್ಟರ್ ಹಬ್ಬದಲ್ಲಿ ನನ್ನ ಯೋಗಕ್ಷೇಮವನ್ನು ಬೇರೆಯವರು ನೋಡಿಕೊಳ್ಳುವಂಥ ವ್ಯಸನಕರವಾದ ಸೌಖ್ಯವನ್ನು ಮೊತ್ತ ಮೊದಲಸಲ ಅನುಭವಿಸಿದೆ. ಆದರೆ ಆ ರೀತಿಯ ಉಪಚಾರ ಮಧುಮೇಹ ರೋಗಿಗೆ ಎಷ್ಟು ಸಹಾಯಕವಾಗುತ್ತೆಂದು ವರ್ಣಿಸಲು ಅಸಾಧ್ಯ. ಬಹುವೇಳೆ ಜನರು ನಮಗೆ ಮಾಡಬಹುದಾದದ್ದು ಇಂಥ ಸಹಾಯ ಮಾತ್ರವೆ. ಆದರೂ ಅದೇ ಸರ್ವಸ್ವ ಎನ್ನಿಸುತ್ತೆ. ಜಾನ್ ವಿಲಿಯಮ್ ಎಂಬ ನನ್ನ ಆಕ್ಸ್‌ಫರ್ಡ್ ಕಾಲದ ಸ್ನೇಹಿತ ಬಂದು ನಮ್ಮೊಡನೆಯೇ ಇದ್ದ. ಹಳ್ಳಿಯ ಅಂಗಡಿಗೆ ನಾನು ಸಾಮಾನುಕೊಳ್ಳಲು ಹೋದಾಗ ಜೊತೆಗೆ ಬರುತ್ತಿದ್ದ. ಗ್ರೀಕ್ ಇತಿಹಾಸ ಹಾಗೂ ಕಾವ್ಯಗಳಲ್ಲಿ ಆಸಕ್ತನಾಗಿದ್ದ ಅವನು ಈಗ ಅಂಗಡಿಯಲ್ಲಿದ್ದ ಆಹಾರ ಪದಾರ್ಥಗಳಲ್ಲಿ ಮಧುಮೇಹ ರೋಗಿಗೆ ಒಗ್ಗುವಷ್ಟು ಶರ್ಕರಪಿಷ್ಟಾದಿಗಳು ಯಾವ ಯಾವುದರಲ್ಲಿ ಎಷ್ಟೆಷ್ಟಿವೆ ಎಂದು ನನ್ನ ಹತ್ತಿರ ಇದ್ದ ಮಧುಮೇಹ ಪುಸ್ತಕವನ್ನು ಶ್ರದ್ಧೆಯಿಂದ ಪಠಿಸಿ ತಿಳಿದುಕೊಂಡು ಯುಕ್ತ ಆಹಾರ ಪದಾರ್ಥಗಳನ್ನು ಕೊಳ್ಳಲು ನನಗೆ ಸಹಾಯ ಮಾಡುತ್ತಿದ್ದ. ಅಂಗಡಿಯ ಹತ್ತಿರ ಮೈಕೇಯಲ್ ಸಿಕ್ಕಿದ. ಅವನು ಜಾನ್ ಇಬ್ಬರೂ ನನ್ನನ್ನು ಕಾರಿನಲ್ಲಿ ಮನೆಗೆ ಕರೆತಂದರು. ಎರಡನೆಸಲ ನನ್ನನ್ನು ನೋಡಲು ಮೈಕೇಯಲ್ ಆಸ್ಪತ್ರೆಗೆ ಹೋಗಿದ್ದನಂತೆ. ಅದರ ಕಥೆಯನ್ನು ನಮಗೆ ದಾರಿಯಲ್ಲಿ ಹೇಳಿದ. ನಾನು ಆಸ್ಪತ್ರೆಯಲ್ಲಿಲ್ಲದಿದ್ದುದನ್ನು ನೋಡಿ ಅವನಿಗೆ ಏನೂ ತಿಳಿಯದಾಯಿತಂತೆ. ಯಾರನ್ನು ವಿಚಾರಿಸಬೇಕೆಂದು ಅತ್ತಿತ್ತ ನೋಡುತ್ತಿರುವಲ್ಲಿ ಡಾ. ಜೇಮ್ಸ್‌ಗೆ ಡಿಕ್ಕಿ ಹೊಡೆದನಂತೆ. ಮಾತು ಬೆಳೆದರೂ ಅವನ ಮಾಮೂಲು ಅದೃಷ್ಟದಂತೆ ಶೀಘ್ರವಾಗಿ ಅನ್ಯೋನ್ಯವಾಯಿತಂತೆ. ಕೊನೆಗೆ ಡಾ. ಜೇಮ್ಸ್‌ನೊಡನೆ ಟೀ ಸೇವನೆಯೂ

ಆಯಿತಂತೆ. ಟೀ ಕುಡಿಯುವಾಗ ಡಾ. ಜೇಮ್ಸ್‌ನಿಗೆ ಪ್ರೋಟೀನ್ ವಿಸ್ಕಿಯನ್ನು ಮನೆಯಲ್ಲಿ ತಯಾರಿಸುವುದು ಹೇಗೆ ಎಂದು ವಿವರಿಸಿದನಂತೆ. ಇದೆಲ್ಲ ಹೇಳುತ್ತ ಅವನೂ ಜಾನನೂ ನಕ್ಕಿದ್ದೂ ನಕ್ಕಿದ್ದೇ.

ಮನೆಯಿಂದ ಲಂಡನ್ನಿಗೆ ನಾನು ವಾಪಸಾಗುವಾಗ ಉದ್ದಕ್ಕೂ ಸಕ್ಕರೆ ಕೊರತೆ ಸ್ಥಿತಿಯಲ್ಲೆ ಇದ್ದೆ. ವೈಕೇಯಲ್ ಯಾವುದಾದರೂ ಮದ್ಯಪಾನ ಮಾಡುವಂತೆ ಹೇಳಿದ. ಕುಡಿಯುವುದಕ್ಕೆ ನನಗೂ ಆಸೆ. ಆದರೆ ಮದ್ಯ ತಕ್ಷಣದಲ್ಲಿ ಸಕ್ಕರೆ ಕೊರತೆಯನ್ನು ನೀಗುವುದಾದರೂ ಆಮೇಲೆ ಇನ್ನೂ ಹೆಚ್ಚು ಕೊರತೆ ಕಂಡುಬರುವಂತೆ ಮಾಡುತ್ತದೆ. ಆದ್ದರಿಂದ ಮದ್ಯಪಾನದ ಬದಲು ಒಂದು ಸ್ಯಾಂಡ್‌ವಿಚ್ಚನ್ನು ಕೊಂಡುಕೊಡಲು ಹೇಳಿದೆ. ಬೇರೆ ಯೋಚನೆಗಳೂ ಬಂದವು. ನನ್ನ ಬಾಳಿನ ಯಾವುದೋ ಅಂಶದ ಅಂತ್ಯವಾಗಿತ್ತು. ಇನ್ನು ಮುಂದೆ ಎಲ್ಲವೂ ಬದಲಾಯಿಸಿದಂತೆ; ಇದೂ ನನಗೆ ತಿಳಿದಿತ್ತು. ಆಹಾರ ನನಗೆ ಇನ್ನೆಂದೂ ಸಂತೋಷದಾಯಕವಲ್ಲ; ಬದಲು ಅದೂ ಔಷಧ ಸ್ವರೂಪ. ತೆಗೆದುಕೊಂಡ ಇನ್‌ಸುಲಿನ್ನಿನ ಪ್ರಮಾಣಕ್ಕೆ ಅನುಗುಣವಾಗಿ ನನಗೆ ರುಚಿಸದ ಪಿಷ್ಟಯುಕ್ತ ಆಹಾರವನ್ನು ರಾಶಿರಾಶಿ ಸೇವಿಸಬೇಕಾಗಿತ್ತು, ಬೆಳಗ್ಗೆ ಮಧ್ಯಾಹ್ನ, ರಾತ್ರಿ, ಆಗಾಗ ಏನಾದರೂ ಸಿಹಿಯಾಗಿರುವುದನ್ನು ತಿನ್ನುವುದು ಮಧುಮೇಹ ರೋಗಿಗೆ ಬಹು ತೃಪ್ತಿಕರ ವಿಷಯ. ಆದರೆ ಸಾಕ್ಷಾತ್ ಸಕ್ಕರೆಯನ್ನು ಬಳಸಿ ತಯಾರಿಸಿದ ವಸ್ತುಗಳ ತ್ಯಾಜ್ಯ. ರಕ್ತದಲ್ಲಿ ಸಕ್ಕರೆ ಕೊರತೆ ಕಂಡುಬಂದಾಗ ಮಾತ್ರ ಸಕ್ಕರೆ ಅಥವಾ ಅದನ್ನು ಬಳಸಿ ತಯಾರಿಸಿದ ಸಿಹಿ ವಸ್ತುಗಳು ಲಾಯಕ್ಕೇ ಹೊರತು ಬೇರೆ ಸಮಯದಲ್ಲಿ ಅವು ತೀರ ಪ್ರಬಲ. ಆದ್ದರಿಂದ ಮಧುಮೇಹ ರೋಗಿಗಳಿಗೆಂದೇ ತಯಾರಾದ ಸಿಹಿವಸ್ತುಗಳು, ಜ್ಯಾಮ್, ಚಾಕೋಲೇಟ್ ಇತ್ಯಾದಿಗಳಿಗೆ ಸಕ್ಕರೆಯ ಬದಲು ಸಾರ್ಬಿಟಾಲನ್ನು ಸೇರಿಸಿ ತಯಾರಿಸಿರುತ್ತಾರೆ. ಅವುಗಳ ರುಚಿ ಅಷ್ಟು ಕೆಟ್ಟಿರುವುದಿಲ್ಲ ಎಂದು ಮಾತ್ರ ಹೇಳಬಹುದು. ಸ್ಯಾಕರಿನ್ ಎಂಬುದು ಸಾರ್ಬಿಟಾಲಿಗಿಂತ ಅಗ್ಗ ಮತ್ತು ಅದಕ್ಕಿಂತ ಬಹುಪಟ್ಟು ಸಿಹಿಯಾಗಿರುತ್ತದೆ. ಆದರೆ ಅದನ್ನು ಮಧುಮೇಹ ರೋಗಿಗಳ ಸಿಹಿ ಆಹಾರಪದಾರ್ಥಗಳ ತಯಾರಿಕೆಯಲ್ಲಿ ಸಾಮಾನ್ಯವಾಗಿ ಬಳಸುವುದಿಲ್ಲ. ಏಕೆಂದರೆ ಅಂಥ ಆಹಾರವನ್ನು ಸೇವಿಸಿದ ನಂತರ ಬಾಯಲ್ಲಿ ಏನೋ ಅಸಹ್ಯವಾದಂಥ ಲೋಹದರುಚಿ ಅನುಭವವಾಗುತ್ತದೆ.

ಆಂಟೋನಿಯ ವ್ಹೈಟ್ ಎಂಬಾಕೆ Hound and the falcon ಎಂಬ ಒಂದು ಪುಸ್ತಕ ಬರೆದಿದ್ದಾಳೆ. ತನ್ನನ್ನು ಆಗಾಗ ಕಾಡುತ್ತಿದ್ದ ಮತಿವಿಕಲತೆಯನ್ನು ಆಕೆ ಆ ಪುಸ್ತಕದಲ್ಲಿ ವಿವರಿಸಿ "ಮೃಗ" ಎಂದು ಅದನ್ನು ಸಂಬೋಧಿಸಿದ್ದಾಳೆ. ಅವಳು ಹುಶಾರಾಗಿದ್ದಾಗಲೂ, ಜನ ಆ ಸಮಯದಲ್ಲಿ ಅವಳು ಹುಚ್ಚಿಯಾಗಿಲ್ಲವೆಂದು ತಿಳಿದುಕೊಂಡಿದ್ದ ಕಾಲದಲ್ಲೂ ತಾನು ವಾಸ್ತವವಾಗಿ ಮನೋರೋಗಿ ಆಗಿದ್ದಳೆಂದೇ ಅವಳ ಗ್ರಹಿಕೆ. ಆದ್ದರಿಂದ ಮತಿವಿಕಲತೆ (ಹುಚ್ಚು) ಯಾವಾಗ ಉಂಟಾದೀತೋ ಎಂದು ಸದಾಕಾಲ ಭಯಗ್ರಸ್ತಳಾಗಿದ್ದಳು. "ಮೃಗ" ಸದಾ ಅವಳ ಬೆನ್ನಹಿಂದೆಯೇ ಇರುವಂತೆ ಅವಳ ಭಾವನೆ. ನನಗೂ ಹಾಗೆಯೇ. ನಾನು ತೆಗೆದುಕೊಳ್ಳುತ್ತಿದ್ದ ಇನ್‌ಸುಲಿನ್ ಯಾವಾಗ ರಕ್ತದಲ್ಲಿ ಸಕ್ಕರೆ ಕೊರತೆಯನ್ನುಂಟುಮಾಡುತ್ತೋ ಎಂದು. ಸಕ್ಕರೆ ಕೊರತೆ

ನನ್ನ ಭಾಗದ "ಮೃಗ". ನನ್ನ ಮನದ ಆಳದಲ್ಲಿ ನಾನು ಯಾವಾಗಲೂ ಈ "ಮೃಗ" ಎರಗಿ ಕಾಡುವ ಸಂಭವವನ್ನು ಹೆದರಿಕೆಯಿಂದಲೇ ನಿರೀಕ್ಷಿಸುತ್ತಿದ್ದೆ.

ಮೊದಮೊದಲು ಸಕ್ಕರೆ ಕೊರತೆ ಪ್ರಸಂಗ ಒಂದೊಂದನ್ನೂ ಆ ಸಮಯದ ಅನಿಷ್ಟವೆಂದುಕೊಂಡು ಅನಂತರ ಮರೆತುಬಿಡುತ್ತಿದ್ದೆ. ಆದರೆ ಲಂಡನ್ನಿನಲ್ಲಿ ಹಂಗಾಮಿಯಾಗಿ ವಿವಿಧ ಕೆಲಸಗಳನ್ನೇ ಮಾಡುತ್ತಿರುವುದು ಬೇಜಾರಾಗಿ ಇಂಗ್ಲಿಷ್ ಬೋಧಿಸುವ ಸಹಾಯಕ ಅಧ್ಯಾಪಕಿಯಾಗಿ ನೇಮಕಗೊಂಡು ೧೯೭೩ ರ ಮಾಗಿಯಲ್ಲಿ ಫ್ರಾನ್ಸಿಗೆ ಬಂದು ಸೇರಿದ ಮೇಲೆ ಇದು ಬದಲಾಯಿಸಿ "ಮೃಗದ" ಅನುಭವ ಪ್ರಾರಂಭವಾಯಿತು. ನಾನು ಎಷ್ಟು ಕಡಿಮೆ ಪಿಷ್ಟಪದಾರ್ಥಗಳ ಸೇವನೆ ಮಾಡುತ್ತೇನೋ ಅಷ್ಟು ಕಡಿಮೆ ಇನ್‌ಸುಲಿನ್ನನ್ನು ತೆಗೆದುಕೊಳ್ಳಬಹುದು ಎಂದು ವೈದ್ಯರು ಹೇಳಿದ್ದರು. ಯಾವುದೋ ಸಂದರ್ಭದಲ್ಲಿ ಹೇಳಿದ ಮಾತು. ಆದರೆ ನಾನು ಅದನ್ನು ಅಕ್ಷರಶಃ ಅರ್ಥೈಸಿಕೊಂಡು ಪಿಷ್ಟ ಪದಾರ್ಥಗಳನ್ನು ಹೆಚ್ಚುಕಡಿಮೆ ವಜಾ ಮಾಡಿದ್ದೆ. ತತ್ಫಲವಾಗಿ ನಾನು ಸತತವಾಗಿ ಸಕ್ಕರೆಯ ಅಲ್ಪ ಕೊರತೆ ಸ್ಥಿತಿಯಲ್ಲೆ ಇದ್ದೆ. ಭೀಕರ ಕೊರತೆ ಸ್ಥಿತಿ ಎರಗುವುದಕ್ಕೆ ಯಾವಾಗಲೂ ಹೊಂಚು ಹಾಕಿಕೊಂಡಿತ್ತು. ಕೆಲವು ದಿನಗಳು ನಾನು ಏನೋ ಒಂದು ಬಗೆಯ ಆಲಸ್ಯದಿಂದಿದ್ದು ಸಕ್ಕರೆ ಕೊರತೆ ಲಕ್ಷಣಗಳು ಬಹು ನಿಧಾನವಾಗಿಯೇ ಕಂಡುಬರುತ್ತಿದ್ದವು. ಕೆಲವು ದಿನಗಳು ನಾನು ಉಲ್ಲಸಿತಳಾಗಿಯೇ ಚಟುವಟಿಕೆಯಾಗಿಯೇ ಇದ್ದಾಗ ಹಠಾತ್ತಾಗಿ ಭೀಕರವಾದ ಸಕ್ಕರೆ ಕೊರತೆಸ್ಥಿತಿ ಎರಗುತ್ತಿತ್ತು. ಇವೆರಡು ರೀತಿಯ ಅನುಭವಗಳಲ್ಲಿ ಯಾವುದು ಅಧಮಕರ ಎಂದು ಹೇಳಲಾರೆ.

ಒಂದು ಶನಿವಾರ ಬೆಳಿಗ್ಗೆ; ಚಳಿಯೇ ಆಗಿದ್ದರೂ ಬಿಸಿಲು ಚೆನ್ನಾಗಿತ್ತು. ಮಾರ್ಕೆಟ್ಟಿನ ಗಡಿಯಾರವನ್ನು ನೋಡಿದೆ. ೧೦.೩೦; ೧೦.೩೧ ಆಗಿದ್ದಾಗ ಇನ್ನೂ ಗಡಿಯಾರವನ್ನು ನೋಡುತ್ತಲೇ ಇದ್ದೆ. ಆದರೆ ಹೊತ್ತು ಎಷ್ಟು ಎಂಬುದು ಮನಸ್ಸಿಗೆ ಹತ್ತಲಿಲ್ಲ. ಹಾಕಿಕೊಂಡಿದ್ದ ಜರ್ಸಿ ಬೆವರಿನಿಂದ ಒದ್ದೆ ಮುದ್ದೆ ಆಯಿತು. ಅಂಗಡಿಗಳು ಕೊನೆಯೇ ಇಲ್ಲದೆ ಹಬ್ಬಿರುವಂತೆ ಭಾಸವಾಗುತ್ತಿತ್ತು. ಜನವೆಲ್ಲ ಹುಚ್ಚರಂತೆ ವರ್ತಿಸುತ್ತಿದ್ದಾರೆ ಎನ್ನಿಸಿತು. ಇದು ಸಕ್ಕರೆ ಕೊರತೆಯ ಒಂದು ಅನುಭವ. ಇಂಥ ಅನೇಕ ಅನುಭವಗಳು ನಾನು ಫ್ರಾನ್ಸಿನಲ್ಲಿದ್ದಾಗ ನನಗೆ ಆದವು. ನನ್ನ ಬದುಕಿನಲ್ಲಿ ಆಗ ಕಾಲಿಟ್ಟ "ಮೃಗ" ಇನ್ನೂ ನನ್ನ ಬೆನ್ನು ಬಿಟ್ಟಿಲ್ಲ. ಎಂದಾದರೂ ಬಿಡುತ್ತೆಂಬ ಭರವಸೆಯೂ ಇಲ್ಲ. ಆದರೆ ಮಧುಮೇಹ ರೋಗವೇ ಈ ಮೃಗದ ಕಾಟನನ್ನು ಸಹಿಸಿಕೊಳ್ಳುವಷ್ಟು ಸಾಮರ್ಥ್ಯ ಕೊಟ್ಟಿದೆ. ಅದಕ್ಕೆ ವಂದನೆಗಳು. ಏಕೆಂದರೆ ಹಠಹಿಡಿದು ಈ ಪ್ರಸಂಗಗಳನ್ನು ಎದುರಿಸುತ್ತೇನೆ.

ಫ್ರಾನ್ಸಿನಿಂದ ನಾನು ವಾಪಸ್ಸು ಬಂದು ಒಂದು ಬಾಲಿಕಾ ಪಾಠಶಾಲೆಯಲ್ಲಿ ಚರಿತ್ರೆಯ ಉಪಾಧ್ಯಾಯಿನಿಯಾಗಿ ಸೇರಿದೆ. ಆ ಸಮಯದಿಂದ ಸಕ್ಕರೆ ಕೊರತೆ ಪ್ರಸಂಗಗಳು ಕೌತುಕವನ್ನುಂಟುಮಾಡುವಂಥವಾದವು. ಶಾಲೆಯ ಅಧಿಕಾರಿವರ್ಗದವರಿಗೆ ನಾನು ಮಧುಮೇಹರೋಗಿ ಎಂಬ ವಿಷಯ ಮೊದಲಿಂದ ಗೊತ್ತಿತ್ತು. ಪಾಠದ ಮಧ್ಯೆ ಹುಶಾರು ತಪ್ಪಿದರೆ ಸಿಹಿಪದಾರ್ಥ ತಿನ್ನಲು ಅನುಮತಿಯನ್ನು ಶಾಲೆಯ ಮುಖ್ಯೋಪಾಧ್ಯಾಯಿನಿಯಿಂದ ನಾನು ಪಡೆಯಬೇಕಾಯಿತು. ಒಂದುಸಲ ಉಪಾಧ್ಯಾಯಿನಿಯರ

ಸಭೆಯಲ್ಲಿ ನಾನು ಸ್ಯಾಂಡ್‌ವಿಚ್ ತಿನ್ನಬೇಕಾಗಿಬಂದ ಪ್ರಸಂಗ ಒದಗಿ ೬೫ ಜನ ಅಧ್ಯಾಪಕಿಯರು ನನ್ನನ್ನು ಅವಹೇಳನ ದೃಷ್ಟಿಯಿಂದ ನೋಡುತ್ತಿದ್ದ ಅನುಭವ ಆಯಿತು. ಸಕ್ಕರೆ ಕೊರತೆ ನನ್ನನ್ನು ಖಿನ್ನಳನ್ನಾಗಿ ಮಾಡಲಿಲ್ಲ; ಆದರೆ ಅದರ ವಿಚಾರವಾಗಿ ನಾನು ಎಚ್ಚರಿಕೆ ವಹಿಸಲೇಬೇಕಾಗಿದ್ದಿತು. ಇದುವೇ ಅದರ “ಮೃಗ” ಲಕ್ಷಣ.

ಒಂದು ವರ್ಷಪರ್ಯಂತ ಗಣನೀಯವಾದಷ್ಟು ಭೀಕರ ಪ್ರಸಂಗವೇನೂ ಕಾಣಬರಲಿಲ್ಲ. ಆದರೆ ಅನಂತರ ಅಲಕ್ಷಿಸಲಾಗದಂಥ ಒಂದು ಪ್ರಸಂಗ ಕಂಡೇಬಂತು. ಮಧ್ಯಾಹ್ನದ ಊಟಕ್ಕೆ ಮುಂಚಿನ ಪೀರಿಯಡ್ಡಿನಲ್ಲಿ ಪಾಠಮಾಡುತ್ತಿದ್ದಾಗ ನನಗೆ ಏನೋ ಸಂಕಟವಾದಂತಾಯಿತು. ಮೇಜಿನಮೇಲೆ ತಲೆಯನ್ನಿಟ್ಟು ಹೇಳಿದ್ದಮಾತನ್ನೇ ಪುನಃಪುನಃ ಹೇಳಲು ಪ್ರಾರಂಭಿಸಿದೆ. ಕೆಲವು ಹುಡುಗಿಯರು ಕಿಲಕಿಲನೆ ನಕ್ಕರು. ಆಗ ನಾನು ಕುರ್ಚಿಯ ಮೇಲೆ ನಿಂತುಕೊಂಡು ನನ್ನ ಪುಲ್‌ಓವರನ್ನೂ ಬ್ರಾವನ್ನೂ ಕಳಚಲು ಪ್ರಾರಂಭಿಸಿದೆ. ಮುಂದಿನಸಾಲಿನಲ್ಲಿ ಬಾಗಿಲಹತ್ತಿರವೇ ಕುಳಿತಿದ್ದ ಹುಡುಗಿ ಹೊರಕ್ಕೆ ಓಡಿಹೋದಳು. ಹೋಗುವಾಗ ಬಾಗಿಲನ್ನು ತೆರೆದೇ ಹೋಗಿದ್ದಳು. ಪಕ್ಕದ ಹುಡುಗರ ಶಾಲೆಯ ಹುಡುಗರು ಇಲ್ಲಿ ಹುಡುಗಿಯರ ಜೊತೆ ಒಟ್ಟು ತರಗತಿಗೆ (combined class) ಬಂದಿದ್ದವರು ಬಾಗಿಲಿನ ಮೂಲಕ ನನ್ನನ್ನು ಬಿಟ್ಟಕಣ್ಣಿನಿಂದ ನೋಡುತ್ತ ಗೇರಾಯಿಸಿದರು. ಓಡಿ ಹೋಗಿದ್ದ ಹುಡುಗಿ ಪಕ್ಕದ ತರಗತಿಯಲ್ಲಿದ್ದ ಇತಿಹಾಸದ ಅಧ್ಯಾಪಕಿಯನ್ನು ಕರೆದು ತಂದಿದ್ದಳು. ಅವರ ಹಿಂದೆಯೇ ಶಾಲೆಯ ಕಾರ್ಯದರ್ಶಿನಿ ಸಕ್ಕರೆ ಹಾಕಿದ ಒಂದು ಬಟ್ಟಲು ಟೀಯೊಡನೆ ಬಂದಳು. ನಾನು ಹುಚ್ಚುಹುಚ್ಚಾಗಿ ವರ್ತಿಸಿದ್ದೆ ಎಂದು ನನಗೆ ಅರಿವಾಗಿದ್ದರೂ ನಾನು ಅದನ್ನು ತಡೆಯಲಾರದವಳಾಗಿ ಇದ್ದೆ. ಮೈಪರಚಿಕೊಳ್ಳುವಷ್ಟು ಬೇಸರದಿಂದ ಹಾಗೆಯೇ ನನ್ನ ಪುಲ್‌ಓವರನ್ನೂ ಬ್ರಾವನ್ನೂ ನೆಲದಮೇಲೆ ಬೀಳಿಸಿದೆ. ನನ್ನ ತಲೆಯಲ್ಲಿ ಮಿದುಳೇ ಇಲ್ಲ, ಖಾಲಿ, ಎನ್ನುವರೀತಿ ವರ್ತಿಸಿದ್ದೆ. ಕುರ್ಚಿಮೇಲಿಂದ ಕೆಳಗಿಳಿಯುವಂತೆ ಹೇಳಿದ ಮೇಲೆ ಇಳಿದು ನಡುಓಣಿಯಲ್ಲಿದ್ದ (corridor) ಬೆಂಚಿನಮೇಲೆ ಕುಳಿತುಕೊಂಡೆ. ಕಾರ್ಯದರ್ಶಿನಿ ಹುಡುಗರನ್ನೆಲ್ಲ ಆಚೆಗೆ ಕಳುಹಿಸಿ ನನ್ನ ಗಂಟಲಿನಲ್ಲಿ ಟೀ ಹಾಕುತ್ತ ಬಂದಳು. ಯಾರೋ ನನ್ನ ಮೈಸುತ್ತ ಪುಲ್‌ಓವರನ್ನು ಸುತ್ತಿದರು. ಹಲವಾರು ಮಿನಿಟುಗಳನಂತರ ನಾನು ಸಮಾಧಾನಕ್ಕೆ ಬಂದು ತೆಪ್ಪಗೆ ಕುಳಿತೆ. ಮಾರನೆ ದಿನವೂ ನಾನು ಅದೇ ತರಗತಿಯಲ್ಲಿ ಪಾಠ ಹೇಳಲು ಹೋದೆ. ಹಿಂದಿನ ದಿನ ಮಾನಗೆಟ್ಟವಳಂತೆ ವರ್ತಿಸಿದ್ದ ನಾನು ತರಗತಿಯ ಒಳಗೆ ಹೆಜ್ಜೆಯನ್ನಿಟ್ಟಾಗ ವಿದ್ಯಾರ್ಥಿನಿಯರೆಲ್ಲ ಆಶ್ಚರ್ಯಕರವಾಗುವಂತೆ ಒಳ್ಳೆ ರೀತಿಯಲ್ಲಿ ನಡೆದುಕೊಂಡರು. ಒಬ್ಬರೂ ಕ್ಷಣಮಾತ್ರವೂ ಹುಸಿನಗೆನಗಲಿಲ್ಲ.

ನಾನು ಬಟ್ಟೆ ಕಳಚಿಹಾಕಿದ್ದು ದೇವರದಯದಿಂದ ಇನ್ನೊಂದೇ ಬಾರಿ, ನನ್ನ ಸ್ನೇಹಿತೆಯ ಮನೆಯಲ್ಲಿ. ನನ್ನ ಸ್ನೇಹಿತರು ಆ ಅಹಿತಪ್ರಸಂಗದಲ್ಲಿ ನಕ್ಕುಬಿಟ್ಟು ಮರೆಯಬಲ್ಲವರಾಗಿದ್ದುದಕ್ಕೆ ದೇವರಿಗೆ ಅನಂತವಂದನೆಗಳು. ನಾನು ಸಹಜಸ್ಥಿತಿಗೆ ಮರುಳುವಷ್ಟು ಕಾಲವೂ ಬಿಸ್ಕತ್ತುಗಳನ್ನು ತಿಂದು ಅನಂತರ ರಕ್ತದ ಸಕ್ಕರೆಕೊರತೆ ಹೇಗೆ ಒಬ್ಬರ ನೈಜ ಸ್ವಭಾವವನ್ನು ವಕ್ರಗೊಳಿಸಿ ಪ್ರಕಟಮಾಡುತ್ತದೆ ಎಂಬ ನನ್ನ ಸಿದ್ಧಾಂತವನ್ನು ಅವರಿಗೆ ವಿವರಿಸಿ, ಆದ್ದರಿಂದಲೇ ಈಗ ಅಷ್ಟು ವಿಕಾರಪ್ರಸಂಗವಾಯಿತು ಎಂದು ಹೇಳಿದೆ.

ಸಕ್ಕರೆ ಕೊರತೆಯ ಪರಿಣಾಮ ಅಂತ್ಯವಾದ ಮೇಲೆ ಉದ್ಭವಿಸುವ ಇನ್ನೊಂದು ಭಯಂಕರ ಅನುಭವವೆಂದರೆ ಕುಡರಿಯದ ಸ್ಥಳವೊಂದರಲ್ಲಿ ತಾನು ಹಾಲಿ ಇರುವ ವಿಷಯ ಮನಸ್ಸಿಗೆ ಗೋಚರವಾಗುವುದು. ಒಂದು ಸಲ ಪ್ಯಾಡಿಂಗ್‌ಟನ್ನಿನಿಂದ ಆಕ್ಸ್‌ಫರ್ಡಿಗೆ ಹೋಗಲು ಬೆಳಗ್ಗೆ ೯-೪೫ ಗಂಟೆಯ ರೈಲನ್ನು ಹತ್ತಿದಾಗ ನನಗೆ ಈ ಅನುಭವ ಆಯಿತು. ಹಿಂದಿನ ರಾತ್ರಿಯ ಊಟದಲ್ಲಿ ನಾನು ನಿರೀಕ್ಷಿಸಿದ್ದಷ್ಟು ಶರ್ಕರಪಿಷ್ಟಾದಿಗಳಿರಲಿಲ್ಲ. ಪ್ಯಾಡಿಂಗ್‌ಟನ್ನಿನಲ್ಲಿ ರೈಲು ಹತ್ತಿದಾಗ ಟಿಕೆಟ್ ಕಲೆಕ್ಟರು ಡಿಡ್‌ಕಾಟಿನಲ್ಲಿ ರೈಲು ಬದಲಿಸಬೇಕು ಜ್ಞಾಪಕವಿರಲಿ ಎಂದು ಹೇಳಿದ್ದ. ಅಷ್ಟೆ ನನಗೆ ನೆನಪು. ಪರಿಸರದ ಅರಿಕೆ ನನಗೆ ಪುನಃ ಮೂಡಿದಾಗ ನಾನು ಒಂದು ದೊಡ್ಡ ಅಪರಿಚಿತ ಹಾಗೂ ಜನವೇ ಇಲ್ಲದಂತಿದ್ದ ಪಟ್ಟಣದ ರಸ್ತೆಗಳಲ್ಲಿ ಸುತ್ತುತ್ತಿದ್ದೆ. ಗುರುತುಗೊತ್ತಾಗುವಂತೆ ಏನಾದರೂ ಕಂಡೀತೇನೋ ಎಂದು ಹುಡುಕುತ್ತಿದ್ದರೂ ಏನೂ ಕಾಣಲಿಲ್ಲ. ಒಂದು ಮೂಲೆಯನ್ನು ತಿರುಗಿ ಮುಂದೆ ಬಂದಾಗ ಬ್ರಿಸ್ಟಲ್ ಟೆಂಪಲ್ ಮೀಡ್ಸ್ ಎಂಬ ಫಲಕ ಇದ್ದ ರೈಲ್ವೆ ಸ್ಟೇಷನ್ನೂ ರಾತ್ರಿ ೧-೩೦ ಗಂಟೆ ತೋರಿಸುತ್ತಿದ್ದ ಗಡಿಯಾರವೂ ಗೋಚರವಾದವು. ಆ ಸಮಯದಲ್ಲಿ ಕೊರತೆ ಲಕ್ಷಣದಿಂದ ನಾನು ಪೂರ್ಣವಾಗಿ ಎಚ್ಚೆತ್ತಿದ್ದೆ. ರೈಲಿನಲ್ಲಿ ಬಹುಶಃ ನನಗೆ ಮಂಪರು ಕವಿದಿತ್ತೆಂದು ತೋರುತ್ತದೆ. ಆದಕ್ಕೇ ಡಿಡ್‌ಕಾಟಿನಲ್ಲಿ ಇಳಿಯದೆ ರೈಲಿನ ಕೊನೆ ಸ್ಟೇಷನ್ನಿನ ತನಕವೂ ಹೋಗಿರಬೇಕು. ಅಲ್ಲಿ ಮಂಪರದಿಂದ ತುಸು ಎಚ್ಚರವಾಗಿ ಆ ಸ್ಟೇಷನ್ನಿನಲ್ಲಿ ಇಳಿದಿರಬೇಕು. ಅನಂತರದ ದಿನಗಳಲ್ಲಿ ಡಾಕ್ಟರು ಈ ಸ್ಥಿತಿಗೆ ಶ್ವೇತಉಪೇಕ್ಷೆ (white out) ಎಂದು ಹೆಸರು ಹೇಳಿ ವಿವರಿಸಿದರು. ಇಂಥ ಸಮಯದಲ್ಲಿ ದೇಹದ ಪರಿಸ್ಥಿತಿ ಯಥಾವತ್ತಾಗಿದೆ ಎಂದು ಕಾಣಿಸುವಂತೆಯೇ ಓಡಾಡುತ್ತಿದ್ದರೂ ವಾಸ್ತವವಾಗಿ ಮಿದುಳಿನಕ್ರಿಯೆ ಸುಪ್ತವಾಗಿರುತ್ತದೆ. ನಾನು ಈ ಅರ್ಧ ಎಚ್ಚರಸ್ಥಿತಿಯಲ್ಲಿ ಎಷ್ಟು ಗಂಟೆಗಳು ಕಳೆದೆನೋ ಯೋಚಿಸಲು ಇಷ್ಟವಾಗಲಿಲ್ಲ. ರೈಲಿನಿಂದ ಇಳಿದು ನಾನು ಏನೇನು ಮಾಡಿದೆನೋ ಬಹುಶಃ ಬ್ರಿಸ್ಟಲಿನಲ್ಲಿ ಹಲವರಿಗೆ ಗೊತ್ತು; ನನಗಂತೂ ಏನೂಗೊತ್ತಿಲ್ಲ. ಸ್ಟೇಷನ್ನಿನಲ್ಲಿದ್ದ ಟಿಕೆಟ್ ಕಲೆಕ್ಟರ ಹತ್ತಿರ ಹೋಗಿ ನಾನು ಮಧುಮೇಹರೋಗಿ ಎಂದೂ, ತಪ್ಪಿ ಬ್ರಿಸ್ಟಲಿಗೆ ಬಂದಿರುವೆನೆಂದೂ ಹೇಳಿದೆ. ಅವನು ನಂಬಿದಂತೆ ಕಾಣಲಿಲ್ಲ. "ಮತ್ತೆ ನೀನು ಏನು ಮಾಡಬೇಕೆಂದಿದ್ದಿ" ಎಂದು ಕೇಳಿದ. "ನನಗೆ ತಿನ್ನಲು ಒಂದು ಬನ್ನು ಬೇಕಾಗಿದೆ" ಎಂದೆ. "ಬನ್ನು ಬೇಕಾಗಿದೆ?" "ಹೌದು; ನನಗೆ ಬನ್ನು ಸಿಕ್ಕದಿದ್ದರೆ ನಾನು ಕುಸಿದುಬೀಳುತ್ತೇನೆ." "ಬನ್ನು ಸಿಕ್ಕದಿದ್ದರೆ ನೀನು ಕುಸಿದು ಬೀಳುತ್ತೀಯ?" ನಾವಿಬ್ಬರೂ ಹೀಗೆ ಬಹುಕಾಲ ಮಾತಾಡುತ್ತಲೇ ಇರುತ್ತಿದ್ದವೇನೋ. ಆದರೆ ಅದೃಷ್ಟವಶಾತ್ ಇನ್ನೊಬ್ಬ ರೈಲು ನೌಕರ ಬಂದು "ತೊಂದರೆ ಏನ." ಎಂದು ಕೇಳಿದ. ಟಿಕೆಟ್ ಕಲೆಕ್ಟರು "ಅವಳು ಕುಡಿದ ಅಮಲಿನಲ್ಲಿದ್ದಾಳೆ" ಎಂದ. "ನಾನು ಮಧುಮೇಹರೋಗಿ" ಎಂದು ನಾನು ಹೇಳಿದೆ. ಆ ಇನ್ನೊಬ್ಬ ನೌಕರ ಅದ್ಭುತವಾಗಿ ನಡೆದುಕೊಂಡ. "ನನಗೆ ಮಧುಮೇಹ ರೋಗದ ವಿಷಯವೆಲ್ಲಗೊತ್ತು. ನಾನು ಪ್ರಥಮ ಚಿಕಿತ್ಸೆಯಲ್ಲಿ ನುರಿತವ" ಎಂದು ಹೇಳಿ ನನ್ನ ತೋಳನ್ನು ತನ್ನ ತೋಳಒಳಗಡೆ ಸೇರಿಸಿ ಸ್ಟೇಷನ್ ಪ್ಲಾಟ್‌ಫಾರಮ್ಮಿನ ಹೊರಗಡೆ ಕರೆದುಕೊಂಡುಹೋಗಿ ಒಂದು ಆಫೀಸಿನ ಒಳಹೊಕ್ಕ. ಅಲ್ಲಿ ಬೆಚ್ಚಗಿರುವಂತೆ ಕಲ್ಲಿದ್ದಲು ಬೆಂಕಿ, ಟೇಬಲ್ಲಿನ ಮೇಲೆ

ಅನೇಕ ಪತ್ರಿಕೆಗಳು ಹಾಗೂ ಟೀ ಪೊಟ್ಟಣಗಳು, ಬಿಸ್ಕತ್ತು ಪೊಟ್ಟಣಗಳು, ಕುದುರೆ ಜೂಜು ವಿಚಾರ ಜಾಹೀರಾತುಗಳೂ ಇದ್ದವು. "ಇಲ್ಲಿ ಕುಳಿತಿರು" ಎಂದು ಅವನು ಹೇಳಿದ. ಹಾಗೇ ಮಾಡಿದೆ. ನಾನೂ ಎಂದೂ ಕುಡಿಯದೆ ಇದ್ದಷ್ಟು ಚೆನ್ನಾದ ಸಿಹಿ ಟೀಯನ್ನು ಅವನು ಮಾಡಿಕೊಟ್ಟ. ತನ್ನ ತಿಂಡಿಪೆಟ್ಟಿಗೆಯಿಂದ ಒಂದು ಕಜ್ಜಾಯವನ್ನೂ ತೆಗೆದುಕೊಟ್ಟ. ಸಾಧಾರಣವಾಗಿ ರೋಗಿಗೆ ಇಂಥ ಸಮಯದಲ್ಲಿ ಜನ ಸಿಹಿತಿಂಡಿಕೊಟ್ಟರೆ (ರೋಗ ಪರಿಸ್ಥಿತಿಯಿಂದಾಗಿ) ತಿಂಡಿ ರುಚಿಯಾಗಿದೆ ಎನ್ನಿಸುವುದೇ ಇಲ್ಲ. ಆದರೆ ಈ ಹೊತ್ತು ಆ ಸಿಹಿ ಟೀ ಕುಡಿದನಂತರ ನನಗೆ ತುಂಬ ಮೇಲು ಎನಿಸಿತು. ಬಹು ಆನಂದ ದಿಂದಲೇ ನಾನು ಕಜ್ಜಾಯವನ್ನೂ ತಿಂದೆ. "ವಿಲಕ್ಷಣವಾದ ವಿನಯಶೀಲ ನೀನು" ಎಂದು ಆ ರೈಲು ಅಧಿಕಾರಿಗೆ ನಾನು ಮನಃಪೂರ್ವಕವಾಗಿ ಹೇಳಿದೆ. ಅನಂತರ ಮುಂದಿನ ಕುದುರೆ ಜೂಜಿನ ವಿಚಾರವಾಗಿ ಇಬ್ಬರೂ ಮಾತನಾಡುತ್ತ ಜೂಜಿನ ಪುಸ್ತಕಗಳನ್ನು ಪರಿಶೀಲಿಸುತ್ತ ಕಾಲಕಳೆದೆವು. ಬೆಳಗಿನ ಜಾವ ೪–೩೦ ಗಂಟೆ ಆಯಿತು. ದುಡ್ಡು ತೆಗೆದು ಕೊಳ್ಳದೆ ಆಕ್ಸ್‌ಫರ್ಡಿಗೆ ಟಿಕೀಟನ್ನು ಕೊಟ್ಟು ಆತ ನನ್ನನ್ನು ರೈಲಿನಲ್ಲಿ ಕೂಡಿಸಿದ. ಟೋಪಿಯನ್ನು ಆಡಿಸುತ್ತ ಗುಡ್‌ಬೈ ಹೇಳಿದ. ನಾನು ದಾರಿತಪ್ಪಿ ಬ್ರಿಸ್ಟಲ್ಲಿಗೆ ಬಂದು ಎಷ್ಟು ಆಶ್ಚರ್ಯಕರವಾದ ಮನುಷ್ಯನನ್ನು ನೋಡಿದಂತಾಯಿತು ಎಂದುಕೊಂಡೆ. ಕೊನೆಗೆ ಆಕ್ಸ್‌ಫರ್ಡನ್ನು ೯ ಗಂಟೆ ತಡವಾಗಿ ತಲುಪಿದ್ದಾಯಿತು.

ಮಧುಮೇಹ ರೋಗದಿಂದಾಗಿ ನನಗೆ ದಿನನಿತ್ಯದ ಬಾಳೂ ಸದಾ ಅದ್ಭುತವಾಗಿ ದ್ದಂತೆಯೇ ಕಾಣಿಸುತ್ತದೆ. ಹಲವು ಬಾರಿ ಇದು ಹಠಾತ್ತಾಗಿ ಮನಸ್ಸಿಗೆ ಬರುತ್ತದೆ. ಅಂಗಡಿಯಲ್ಲಿ ಸಾಮಾನುಗಳನ್ನು ತೆಗೆದುಕೊಳ್ಳುತ್ತಿರುವಾಗ ದಿನ ಜುಜಡದ ಕೆಲಸವನ್ನೇ ಮಾಡುತ್ತಿದ್ದೇನೆ ಎನ್ನಿಸುವುದರ ಬದಲಾಗಿ ನಾನು ಸಹಜಬಾಳನ್ನೇ ಬಾಳುತ್ತಿದ್ದೇನಲ್ಲ ಎಂಬ ಸುಖಕಲ್ಪನೆ ಮೂಡುತ್ತದೆ. ಕೆಟ್ಟಹವ, ಈ ಅಂಗಡಿ ಬಿಟ್ಟು ಬೇರೆ ಅಂಗಡಿಗೆ ಹೋಗಬೇಕಾಗಿರುವುದು, ವಿವಿಧ ಸ್ಥಳಗಳಿಗೆ ಹೋಗಿ ಅಲ್ಲಿಲ್ಲ ಹಣ ಪಾವತಿ ಮಾಡ ಬೇಕಾಗುವುದು ಇಂಥ ಬೇಸರ ಬರಿಸುವ ಪರಿಸ್ಥಿತಿಗಳಲ್ಲು ಆ ಸುಖ ಕಲ್ಪನೆಯಿಂದಲೇ ಕಾಲ ಹಾಕುತ್ತೇನೆ. ನೀನು ಈಗ ಚೆನ್ನಾಗಿರುವಂತೆ ಕಾಣಿಸುತ್ತೀಯೆ" ಎಂದು ಯಾರಾದರೂ ಹೇಳಿದರೆ ಅದರಿಂದ ನನಗೆ ಪರಮಸಂತೋಷ. ಅವ್ಯಕ್ತರೋಗವನ್ನು ಅವ್ಯಕ್ತವಾಗಿಯೇ ಇಟ್ಟಿರುವುದು ವಾಸಿ.

ಮೈಕೇಯಲ್ಲಿಗೆ ನನ್ನ ಸಕ್ಕರೆ ಕೊರತೆ ಪ್ರಸಂಗಗಳಲ್ಲಿ ಸಹಾನುಭೂತಿ ಇದ್ದರೂ ನನ್ನ ಸ್ಥಿತಿಯನ್ನು ಸರಿಯಾಗಿ ಅರ್ಥಮಾಡಿಕೊಂಡೇ ಇರಲಿಲ್ಲ. ದೈಹಿಕವಾಗಿ ಅನೇಕ ವೇಳೆ ಏನು ಕೇಡೂ ಕಾಣಬರದ ಸಕ್ಕರೆ ಕೊರತೆ ಸ್ಥಿತಿಯನ್ನು ಅನಾರೋಗ್ಯಸ್ಥಿತಿ ಎಂದು ಹೆಂಗಸು ವ್ಯಕ್ತಿ ನಂಬುವಂತೆ ಗಂಡಸುವ್ಯಕ್ತಿ ಸಾಮಾನ್ಯವಾಗಿ ನಂಬುವುದಿಲ್ಲವೆಂದು ತೋರುತ್ತದೆ. ಅನಾರೋಗ್ಯ ಸ್ಥಿತಿ ಎಂದರೆ, ಮೈಕೇಯಲ್ಲೂ ಒಳಗೊಂಡಂತೆ ಇಂಥವರ ಭಾವನೆಯಲ್ಲಿ, ಎತ್ತಿ ಕಾಣುವ ಕಾಲು ಮೂಳೆಮುರಿತ, ಕೆಂಡಾಮುಂಡಲಜ್ವರ ಅಂಥವು. ಮೈಕೇಯಲ್ಲಿನೊಡನೆ ನಾನು ಓಡಾಡುತ್ತಿದ್ದ ಕಾಲದಲ್ಲಿ ನನಗೆ ಸಕ್ಕರೆ ಕೊರತೆ ಲಕ್ಷಣಗಳು ತೀವ್ರವಾಗಿರಲಿಲ್ಲ. ತೀವ್ರವಾಗಿದ್ದಿದ್ದರೆ ಹೇಗಾಗುತ್ತಿತ್ತೋ ಕಾಣೆ. ಹೇಗೂ ಅದು ಈಗ ಮುಗಿದುಹೋಗಿದ್ದ ವಿಷಯ. ಚೆಲ್‌ಟೆನ್‌ಹ್ಯಾಮಿನಲ್ಲಿ ನಾನು ಇದ್ದ

ಎರಡುವರೆ ವರ್ಷಗಳ ಕೊನೆ ದಿನಗಳಲ್ಲಿ ನನ್ನ ಹೃದಯಾಂತರಾಳದ ಆಸೆಯನ್ನು ಭಂಗ ಮಾಡಿ ಮೈಕೇಯಲ್ ಒಬ್ಬ ಐರಿಶ್ ದೇಶೀಯ ಹುಡುಗಿಯನ್ನು ಮದುವೆ ಆದ. ಅವಳು ಆರೋಗ್ಯವಂತಳಾಗಿದ್ದಳು, ನಾನು ರೋಗಿಷ್ಠೆ ಎಂಬುದು ಕಾರಣ ಅಲ್ಲ. ಅವಳು ಐರ್‌ಲೆಂಡ್ ದೇಶೀಯೆ ಪೂರ್ಣವಾಗಿ; ನಾನು ಅರ್ಧಮಾತ್ರ ಹಾಗೆ ಎಂಬುದೇ ಕಾರಣ. ಜೊತೆಗೆ ನಾನು ಮಾತಾಡುವಾಗ ಇಂಗ್ಲೀಷರಂತೆ (ಐರಿಶ್ ಜನರಂತೆ ಅಲ್ಲ) ಉಚ್ಚಾರಣೆ ಮಾಡುತ್ತಿದ್ದೆ. ಅಲ್ಲದೆ ನಮ್ಮ ಸ್ನೇಹಗಾಢವಾಗಿದ್ದ ದಿನಗಳಿಗಿಂತ ಈಚೆಗೆ ನನ್ನ ಅಲಕ್ಷ್ಯ ರೀತಿಯ ನಡವಳಿಕೆಯನ್ನು ನಾನು ಕಡಿಮೆ ಮಾಡಿದ್ದೆ. ಧಾರ್ಷ್ಟ್ಯವನ್ನು ಕಳೆದುಕೊಂಡಿದ್ದೆ. ಮಧುಮೇಹ ರೋಗಿ ಎಂದು ನನಗೆ ನನ್ನ ದೇಹಸ್ಥಿತಿಯ ವಿಷಯದಲ್ಲಿ ಮನವರಿಕೆ ಆದದ್ದೇ ಇದಕ್ಕೆ ಕಾರಣ.

ಚಿಕಿತ್ಸೆಗೆ ಇನ್‌ಸುಲಿನ್ನೇ ಅಗತ್ಯವಾದ ಮಧುಮೇಹರೋಗ, ಸ್ವೇಚ್ಛಾಹಾರ, ಜಡಜೀವನ ಇವುಗಳಿಂದ ವಯಸ್ಕರಿಗೆ ಮಾತ್ರ ಬರುವ ಮಧುಮೇಹ ರೋಗದಂತಲ್ಲ. ಬದಲು ಅದು ಹಠಾತ್ತಾಗಿ ಯಾರಮೇಲಾದರೂ ಯಾವಾಗಲಾದರೂ ಎರಗುವರೋಗ; ನನಗೆ ಆಗಿದ್ದಂತೆ. ಇಂಥ ಮಧುಮೇಹರೋಗಕ್ಕೆ ಕಾರಣ ಏನು ಎಂದು ಇನ್ನೂ ಸರಿಯಾಗಿ ತಿಳಿಯದು. ಸಾವಿರಾರು ಸಂಭವಗಳಿವೆ-ವೈರಸ್ ರೋಗಗಳ (ರೂಬೆಲ್ಲ, ಗದ್ದಕಟ್ಟು ಇತ್ಯಾದಿ) ಜಟಿಲತೆಯ ಲಕ್ಷಣವಾಗಿ, ಪ್ರಯಾಣದಲ್ಲಿ ಆಘಾತ, ತೀರ ಹತ್ತಿರದವರ ಸಾವು ಮುಂತಾದ ತೀವ್ರ ಭಾವೋದ್ರೇಕಗಳು ಕಾರಣವಾಗಿ—ಇತ್ಯಾದಿ. ನನಗೆ ಈ ರೀತಿ ಏನೂ ಆಗಿರಲಿಲ್ಲವಾಗಿ ಡಾಕ್ಟರುಗಳು ನನ್ನ ರೋಗದ ಕಾರಣ ಪತ್ತೆಮಾಡಬೇಕೆಂದು ನನ್ನ ಆದುವರೆಗಿನ ಬದುಕಿನ ವಿವರಗಳನ್ನು ತಿಳಿದುಕೊಳ್ಳಲು ವಿಧವಿಧವಾಗಿ ಪ್ರಶ್ನಿಸಿದರು—ಪ್ರಣಯಭಂಗವೆ? ಕುಟುಂಬದಲ್ಲಿ ಜಗಳವೆ? ಆಸ್ತಿ ಕಳೆದುಕೊಂಡಿರುವೆನೆ? ಯಾವುದೋ ಪ್ರಸಂಗದಲ್ಲಿ ದಿಕ್ಕುಕಾಣದಂತೆ ಆಗಿದ್ದೆನೆ? ಇತ್ಯಾದಿ. ಆದರೆ ಹೀಗೆ ಯಾವುದೂ ನನಗೆ ಆಗಿರಲಿಲ್ಲ. ಭದ್ರವಾದ ಆಶ್ರಯದಲ್ಲಿ ನಾನು ಸುಖವಾಗಿಯೇ ಇದ್ದವಳು.

ಮಧುಮೇಹರೋಗ ಎಷ್ಟುಮಟ್ಟಿಗೆ ಆನುವಂಶಿಕ ಎನ್ನುವುದೂ ತಲೆಕೆಡಿಸುವ ವಿಷಯ. ತಾಯಿ ತಂದೆಗಳಲ್ಲಿ ಒಬ್ಬರು ಇನ್‌ಸುಲಿನ್ ಅಗತ್ಯವಿದ್ದ ಮಧುಮೇಹ ರೋಗಿಗಳಾಗಿದ್ದರೆ ೩% ಮಕ್ಕಳಿಗೆ ಅಂಥದೇ ರೋಗ ಬರುವ ಸಂಭವವಿದೆ. ಇನ್‌ಸುಲಿನ್ ಅಗತ್ಯವಿಲ್ಲದ ರೋಗ ತಂದೆತಾಯಿಗಳಲ್ಲಿ ಒಬ್ಬರಿಗೆ ಮಾತ್ರ ಇದ್ದರೆ ಅವರ ೨೦% ಮಕ್ಕಳಿಗೆ ವಯಸ್ಸಾದ ಮೇಲೆ ಅಂಥದೇ ರೋಗ ಬರುವಸಂಭವವಿದೆ. ತಂದೆತಾಯಿಗಳಿಬ್ಬರೂ ಇನ್‌ಸುಲಿನ್ ಅಗತ್ಯವಾದ ರೋಗಿಗಳಾಗಿದ್ದರೆ ಅವರ ೧೨% ಮಕ್ಕಳಿಗೆ ಅಂಥ ರೋಗ ಬರಬಹುದು. ಇಬ್ಬರೂ ಇನ್‌ಸುಲಿನ್ ಅಗತ್ಯವಿರದ ರೋಗಿಗಳಾಗಿದ್ದರೆ ಅವರ ೪೦% ಮಕ್ಕಳಿಗೆ ಅಂಥದೇ ರೋಗ ಬರುವುದು ಸಾಧ್ಯ. ಪ್ರಕೃತ ನನ್ನ ತಾಯಿಯ ಅಜ್ಜನಿಗೆ ಮಧುಮೇಹ ರೋಗ ಇತ್ತು. ಈತ ಮೂಳೆ ಚಕ್ಕಳವಾಗಿ, ಮಂಕನಾಗಿ, ಟೀ ಕುಡಿಯುವುದು ಮೂತ್ರ ಮಾಡುವುದು ಇವೆರಡರಲ್ಲಿ ನಿರತನಾಗಿ ೧೦ ವರ್ಷ ಹಾಸಿಗೆ ಹತ್ತಿಮಲಗಿದ್ದವ. ಕೆನಡಾದೇಶದ ಶಸ್ತ್ರತಜ್ಞ ಫ್ರೆಡರಿಕ್ ಬ್ಯಾಂಟಿಂಗ್ ಮತ್ತು ಅವನ ಸಹಾಯಕ ಚಾರ್ಲ್ಸ್‌ಬೆಸ್ಟ್ ಇವರು ದನಗಳ ಮೇದೋಜೀರಕಾಂಗಗಳಿಂದ ಪಡೆದು

ಇನ್‌ಸುಲಿನ್ ಎಂದು ಹೆಸರಿಸಿದ ಹಾರ್ಮೋನನ್ನು ಟೊರೆಂಟೋ ಆಸ್ಪತ್ರೆಯಲ್ಲಿ ಮಧುಮೇಹರೋಗದಿಂದ ಮೃತಪ್ರಾಯನಾಗಿದ್ದ ೧೪ ವರ್ಷದ ಲಿಯೋನಾರ್ಡ್ ಥಾಂಪ್‌ಸನ್ನಿಗೆ ಇಂಜೆಕ್ಷನ್ ಕೊಟ್ಟು ಬದುಕಿಸಿದ ಮಹತ್ವದ ೧೯೨೨ನೆ ಇಸವಿಯಲ್ಲಿ ನನ್ನ ಮುತ್ತಜ್ಜ ಮಧುಮೇಹದಿಂದಲೇ ಮೃತಿಹೊಂದಿದ್ದ. ಆದರೆ ನನಗೂ ಅವನಿಗೂ ಇದ್ದ ರಕ್ತಸಂಬಂಧ ದೂರವೇ ಎಂದು ಹೇಳಬೇಕು. ನನಗೆ ತಿಳಿದಮಟ್ಟಿಗೆ ನನ್ನ ಕುಟುಂಬದಲ್ಲಿ ಇನ್ಯಾರಿಗೂ ಈ ರೋಗವಿರಲಿಲ್ಲ.

ಮಧುಮೇಹ ರೋಗದಿಂದ ನರಳಿದವರಲ್ಲಿ ಅನೇಕ ಪ್ರಸಿದ್ಧ ಪುರುಷರಿದ್ದಾರೆ: ಈಜಿಪ್ಟಿನ ಅಧ್ಯಕ್ಷನಾಗಿದ್ದ ನಾಸರ್; ರಷ್ಯದ ಅಧ್ಯಕ್ಷನಾಗಿದ್ದ ಯೂರಿ ಆಂಡ್ರೊಪವ್; ಲಾರೆನ್ಸ್‌ಹಾರ್ಡಿಯುಗ್ಮನಟರಲ್ಲಿ ತೆಳುಮನುಷ್ಯ ಸ್ಟಾನ್‌ಲಾರೆಲ್; "ಅಲಿವರ್" ಎಂಬ ಕವನ ನಾಟಕವನ್ನು ಬರೆದಿರುವ ಲೈಯೊನೆಲ್‌ಬಾರ್ಟ್; ಷೇಕ್ಸ್‌ಪಿಯರ್‌ನ ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದ ನಟ ಅಲೆನ್‌ಹೋವರ್ಡ್; ಇತ್ಯಾದಿ. ಏನು ಕಾರಣವಾಗಿಯೋ ಬಹುಸಂಖ್ಯೆಯಲ್ಲಿ ಗ್ರಂಥಗಳನ್ನು ರಚಿಸಿರುವವರು ಈ ರೋಗಕ್ಕೆ ಈಡಾಗಿರುವುದಿದೆ. ಹೆಮಿಂಗ್‌ವೇ ಒಬ್ಬ; ಎಚ್. ಜಿ. ವೆಲ್ಸ್ ಇನ್ನೊಬ್ಬ. ಇವನು ೧೯೩೪ರಲ್ಲಿ ಬ್ರಿಟಿಷ್ ಡಯಾಬೆಟಿಕ್ ಅಸೋಸಿಯೇಷನ್ (B.D.A.) ಎಂಬ ಸ್ವಸಹಾಯಕ ಸಂಘವನ್ನು ಸ್ಥಾಪಿಸಿದ. ತನ್ನ ಔನ್ನತ್ಯದ ಕಾಲದಲ್ಲಿ ಈತ ಮಧುಮೇಹ ರೋಗ ವಿಷಯದ ಪ್ರಸಾರಕ್ಕೆ ಬೆಂಬಲ ನೀಡಿದ್ದರಿಂದ ಮಧುಮೇಹ ರೋಗಿಗಳು ಕೆಲಸ ಮಾಡಲಾಗದೆ, ಕೆಲಸಕ್ಕೆ ನೇಮಕಗೊಳ್ಳಲಾರದೆ ಸಾವು ಎದುರು ನೋಡುತ್ತಿರುವಂಥ ಹತಾಶಸ್ಥಿತಿ ಮುಟ್ಟ ಹಾಕಲ್ಪಟ್ಟಿತು. B.D.A.ನಲ್ಲಿ ಈಗ ೧೦೦೦೦ಕ್ಕೂ ಮೀರಿದ ಸದಸ್ಯರಿದ್ದಾರೆ. B.D.A. ಯವರು ಸಿದ್ಧಗೊಳಿಸಿರುವ ಕಾರ್ಡನ್ನು ಸದಾ ಹತ್ತಿರವಿಟ್ಟುಕೊಂಡಿರುವಂತೆ ಆದೇಶಿಸಿ ಡಾಕ್ಟರುಗಳು ಮಧುಮೇಹ ರೋಗಿಗಳಿಗೆ ಕೊಡುವುದು ರೂಢಿಯಾಗಿದೆ. ಈ ಕಾರ್ಡಿನಲ್ಲಿ "ನಾನು ಮಧುಮೇಹ ರೋಗಿ. ಇನ್‌ಸುಲಿನ್ ಚಿಕಿತ್ಸೆ ಪಡೆಯುತ್ತಿದ್ದೇನೆ. ನಾನು ಹುಶಾರಾಗಿಲ್ಲದಿರುವುದನ್ನು ಕಂಡರೆ ದಯವಿಟ್ಟು ನನಗೆ ೨ ಚಮಚ ಸಕ್ಕರೆಯನ್ನಾಗಲಿ ಗ್ಲೂಕೋಸನ್ನಾಗಲಿ, ಸಾಧ್ಯವಿದ್ದರೆ ನೀರಲ್ಲಿ ಕದರಿ ಕೊಡಿ. ಅದರಿಂದ ಗುಣವಾಗದಿದ್ದರೆ ದಯವಿಟ್ಟು ಆಂಬ್ಯುಲೆನ್ಸನ್ನು ಬರಮಾಡಿ" ಎಂದು ನಮೂದಿಸಿರುತ್ತದೆ.

ನನ್ನ ಕಾರ್ಡು ಬಹಳ ಸಾರಿ ಉಪಯೋಗಕ್ಕೆ ಬಂದಿದೆ. ನನ್ನ ಸ್ನೇಹಿತೆಯ ಮದುವೆಗೆ ಹೋಗಿದ್ದವಳು ಚರ್ಚಿನಿಂದ ಸತ್ಕಾರ ಸಮಾರಂಭದ ಸ್ಥಳಕ್ಕೆ ಬೈಸಿಕಲ್ಲಿನ ಮೇಲೆಯೇ ಹೊರಟೆ. ಎತ್ತರ ಎತ್ತರಕ್ಕೆ ಸಾಗುತ್ತಿದ್ದ ರಸ್ತೆಯಲ್ಲಿ ಅರ್ಧದೂರ ಹೋದ ನಂತರ ಮುಂದೆ ಹೋಗಲು ಆಗಲಿಲ್ಲ. ಬೈಸಿಕಲ್ಲನ್ನು ರಸ್ತೆಯಲ್ಲೆ ಮಲಗಿಸಿ ಅದರ ಪಕ್ಕದಲ್ಲಿ ನಾನೂ ಮಲಗಿದೆ. ನನ್ನ ಹಿಂದೆ ಒಂದು ಪೋಲೀಸು ಕಾರು ಬರುತ್ತಿತ್ತು. ಅದು ನನ್ನ ಹತ್ತಿರ ನಿಂತು ಅದರೊಳಗಿನಿಂದ ಇಬ್ಬರು ಯುವಕ ಪೋಲೀಸರು ಹೊರಬಂದರು. "ಏನಾದರೂ ತೊಂದರೆಯೆ?" ಎಂದು ಅವರು ಕೇಳಿದಾಗ ನನಗೆ ಜವಾಬು ಹೇಳಲಾಗಲಿಲ್ಲ. ಅವರಲ್ಲಿ ಒಬ್ಬ "ಹುಶಾರಿಲ್ಲವೆ" ಎಂದು ಕೇಳಿದ್ದಕ್ಕೆ ತಲೆ ಆಡಿಸಿದೆ. ಆ ಯುವಕ "ಕ್ಷಮಿಸಿ" ಎಂದು ಹೇಳುತ್ತ ನನ್ನ ಕೈಚೀಲವನ್ನು ತೆಗೆದು ಅದರೊಳಗೆ ಹುಡುಕಿ ನನ್ನ ಕಾರ್ಡನ್ನು ತೆಗೆದು ಓದಿದ. ಜೊತೆಯವನನ್ನು ನನ್ನ ಹತ್ತಿರವೇ ಇರಹೇಳಿ

ತಾನು ಪಕ್ಕದ ಮನೆಗೆ ಹೋಗಿ ಮರುನಿಮಿಷದಲ್ಲಿ ಬಂದು ಬಟ್ಟಲು ಸಕ್ಕರೆ ಹಾಕಿದ ಹಾಲನ್ನು ತಂದು ಕೊಟ್ಟ. ನಾನು ಅದನ್ನು ಕುಡಿದ ತಕ್ಷಣವೇ ನನಗೆ ಎಷ್ಟೋ ಮೇಲು ಎನ್ನಿಸಿತು. ಬೈಸಿಕಲ್ಲಿನ ಮೇಲೆ ನಾನು ಮುಂದಕ್ಕೆ ಹೋಗಲು ಅವರು ಬಿಡದೆ ನನ್ನನ್ನು ಪೋಲೀಸು ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ ಡಾಕ್ಟರು ನಾನು ಪ್ರಯಾಣವನ್ನು ಬೈಸಿಕಲ್ಲಿನ ಮೇಲೆ ಮುಂದುವರಿಸಬಹುದು ಎಂದು ಅನುಮತಿಕೊಟ್ಟ ಮೇಲೆಯೇ ಅವರು ನನ್ನನ್ನು ಬಿಡುಗಡೆ ಮಾಡಿದರು. ಮುಂಚೆ ಪೋಲೀಸರ ವಿಚಾರದಲ್ಲಿ ನಾನು ಏನೇನು ಕೆಟ್ಟ ಮಾತುಗಳನ್ನು ಆಡಿದ್ದೆನೋ ಅವನ್ನೆಲ್ಲ ಈಗ ವಾಪಸ್ಸು ತೆಗೆದು ಕೊಳ್ಳುತ್ತೇನೆ; ಪೋಲೀಸರು ಇಷ್ಟು ಒಳ್ಳೆಯವರಾಗಿರುವುದರ ಅನುಭವವಾಗಿದೆ.

ಮಧುಮೇಹ ರೋಗಿಗಳಿಗೆ ಯಾವುದು ಒಳಿತೋ ಅದು ನನಗೆ ಸಾಮಾನ್ಯವಾಗಿ ಬೇಡದ್ದಾಗಿರುತ್ತದೆ. ಆದರೆ ಆಟ ಇದಕ್ಕೆ ಹೊರತು. ಅದರಲ್ಲೂ ಕ್ರಿಕೆಟ್ ಎಂದರೆ ನನಗೆ ಬಹು ಇಷ್ಟ. ಆಂಥೊನಿ, ಡೊ ಮತ್ತು ನಾನು ನಮ್ಮ ಮನೆಯ ಹಿಂದಿನ ಬಯಲಿನಲ್ಲಿ ಆ ಆಟ ಆಡುತ್ತಿದ್ದೆವು. ನನ್ನ ಅಭಿಪ್ರಾಯದಲ್ಲಿ ಕ್ರಿಕೆಟ್ ಮಧುಮೇಹ ರೋಗಿಗಳಿಗೆ ಯುಕ್ತವಾದ ಆಟ. ರಕ್ತದ ಸಕ್ಕರೆಯ ವಿನಿಯೋಗವಾಗುವಷ್ಟುಗೆಯ್ಮೆ, ಪರ್ಯಾಲೋಚನೆಗೆ ತಕ್ಕಷ್ಟು ಸಮಯ, ಆಹಾರ ಸೇವನೆಗಾಗಿ ವಿರಾಮ, ಎಲ್ಲವೂ ಕ್ರಿಕೆಟ್ ಆಟದಲ್ಲಿ ಲಭಿಸುತ್ತವೆ. ಚೆಲ್ಸೆನ್‌ಹ್ಯಾಮಿನ ಸ್ತ್ರೀಯರ ಕಾಲೇಜನ್ನು ಬಿಟ್ಟ ನಾನು ಮಧ್ಯ ಯುಗದ ಇತಿಹಾಸದ ಪರಿಶೋಧನೆ ಮಾಡಬೇಕೆಂದು ಕೇಂಬ್ರಿಡ್ಜಿಗೆ ಹೋದಾಗ ವಿಶ್ವವಿದ್ಯಾಲಯದ ಕ್ರಿಕೆಟ್ ತಂಡಕ್ಕೆ ಸೇರಿದೆ. ಆಕ್ಸ್‌ಫರ್ಡಿನವರ ಮೇಲೆ ಪಂದ್ಯ ಆಡಿದೆವು. ನಾನು ೬೪ ಸಾರಿ ಬೌಲ್ ಮಾಡಿ ೪೫ ರನ್ನುಗಳನ್ನು ಕೊಟ್ಟು ೮ ವಿಕೆಟ್‌ಗಳನ್ನು ಪಡೆದೆ. ನನಗೆ ಪರಮ ಸಂತೋಷವಾಯಿತು. ಟೀ ತೆಗೆದುಕೊಳ್ಳಲು ಕಲೆತಾಗ ಟೀಮಿನವರೆಲ್ಲ ನನ್ನನ್ನು ಅಭಿನಂದಿಸಿದರು. ನನ್ನ ಮುಖ ಕೆಂಪೇರಿತು. ಚಟ್ಟನೆ ಮನಸ್ಸಿಗೂ ಹೊಳೆಯಿತು—ಆ ಸಮಯದಲ್ಲಿ ನಾನು ಮಧುಮೇಹ ರೋಗಿ ಎಂಬುದೇ ಮರೆತುಹೋಗಿತ್ತು. ಅದರ ಸೂಚನೆಯಾಗಿ ಒಮ್ಮೆಯಾದರೂ ಏನೂ ತೋರಿಬಂದಿರ ಲಿಲ್ಲ. "ಮೃಗ" ಹಂಗಾಮಿಯಾಗಿ ಮಾಯವಾಗಿತ್ತೇನೋ.

ಕೇಂಬ್ರಿಡ್ಜಿನಲ್ಲಿ ನನಗೆ ಇಷ್ಟವಾಗಿದ್ದ ಇನ್ನೊಂದೇ ಚಟುವಟಿಕೆ ಎಂದರೆ ನೃತ್ಯ. ಕ್ರಿಕೆಟ್ಟನ್ನೂ ಇದನ್ನೂ ನಾನು ಈಗಲೂ ಇಚ್ಛಿಸುತ್ತೇನೆ. ನಮ್ಮ ಕಾಲೇಜಿನಲ್ಲಿ ಪದವಿ ಯೋತ್ತರ ವಿದ್ಯಾರ್ಥಿನಿಯರ ನೃತ್ಯ ಶಿಕ್ಷಕನಿಗೆ ನೃತ್ಯವೆಂದರೆ ಅದು ಮನೋರಂಜ ನೆಯೇ ಆಗಿರಬೇಕೆಂಬ ಹಠ. ಈ ದೃಷ್ಟಿಯಿಂದ ಅವನು ನೃತ್ಯವನ್ನು ಚಟುವಟಿಕೆ ತುಂಬಿರುವಂತೆ ರೂಪಿಸುತ್ತಿದ್ದ. ಅಂಥ ನೃತ್ಯ ಮಾಡಿದಾಗ ರಕ್ತದ ಸಕ್ಕರೆ ಅಗಾಧವಾಗಿ ವಿನಿಯೋಗವಾಗುತ್ತಿತ್ತು. ಕ್ರಿಸ್‌ಮಸ್ಸಿನಲ್ಲಿ ಒಂದು ನೃತ್ಯಕಾರ್ಯಕ್ರಮದಲ್ಲಿ ನಾನು ಮೂರು ಪಿಹಿ ಕಡಬುಗಳನ್ನು (ಇದು ಮಧುಮೇಹ ರೋಗಿಗಳಿಗೆ ತ್ಯಾಜ್ಯ ಆಹಾರ) ಧ್ವಂಸಮಾಡಿ ನೃತ್ಯ ಕೂಟದಲ್ಲಿ ಸೇರಿಕೊಂಡೆ. ಬೇರೆ ಕಾರ್ಯಕ್ರಮಗಳು ಮುಗಿದು ಎಷ್ಟೋ ಹೊತ್ತಾಗಿದ್ದರೂ ನಾವು ಕುಣಿದದ್ದೂ ಕುಣಿದದ್ದೆ. ಕೊನೆಗೆ ತೂರಾಡುತ್ತ ಬಂದು ಮಾತಿಗೆ ಕುಳಿತಾಗ ನಾನು ಮಧುಮೇಹ ರೋಗಿ ಎಂಬ ವಿಷಯ ಹೊರಬಿತ್ತು. ನಾನು ಇಂಜೆಕ್ಷನ್ ತೆಗೆದುಕೊಳ್ಳುತ್ತಿರುವೆನೆ, ಸೂಜಗಳಲ್ಲಿ ಉತ್ತಮವಾದವು ಯಾವುವು,

ಅವಕ್ಕೆ ಎಷ್ಟು ಬೆಲೆ ಎಂದು ನೃತ್ಯ ಶಿಕ್ಷಕ ಎಲ್ಲಾ ವಿಚಾರಿಸಿದ. ಉಪಯುಕ್ತವಾಗಿರುವಂಥವೇ ಆದ ಸಿರಿಂಜ ಗಳು ಹಾಗೂ ಸೂಜಿಗಳನ್ನು ಸರಕಾರಿ ಆಸ್ಪತ್ರೆಗಳು ಮುಫತ್ತಾಗಿ ಕೊಡುವುದಾದರೂ ನಾನು "ಔಷಧಿ ಅಂಗಡಿಗಳಲ್ಲಿ ಸಿಕ್ಕುವ ಒಂದು ಸಾರಿ ಮಾತ್ರ ಬಳಸಿ ಬಿಸಾಡುವಂಥ ಸಿರಿಂಜುಗಳನ್ನು ಕೊಳ್ಳುತ್ತೇನೆ. ಅವುಗಳ ಸೂಜಿಗಳು ಸರಕಾರೀ ಸೂಜಿಗಳಿಗಿಂತ ತೆಳುವಾಗಿಯೂ ಚೂಪಾಗಿಯೂ ಇದ್ದು ಚುಚ್ಚಿಕೊಳ್ಳಲು ಸುಲಭ" ಎಂದು ನಾನು ವಿನೀತಳಾಗಿಯೇ ಜವಾಬು ಕೊಟ್ಟೆ. ಆಮೇಲೆ ಈ ಮಾತುಕಥೆ ನನಗೆ ಮರೆತುಹೋಯಿತು. "ವಿದ್ಯಾರ್ಥಿ ವಿದ್ಯಾರ್ಥಿನಿಗಳ ಔಷಧೋಪಚಾರಗಳಿಗೆಂದೇ ಮೀಸಲಾಗಿರುವ ಒಂದು ಮೊಬಲಗು ಇದೆ. ಕೇಂಬ್ರಿಡ್ಜಿನ ಕಾಲೇಜಿನವರು ಸಾಮಾನ್ಯವಾಗಿ ಬಹು ಆರೋಗ್ಯವಾಗಿರುವುದರಿಂದ ವರ್ಷಾಂತರಗಳಿಂದಲೂ ಈ ಮೊಬಲಗನ್ನು ವಿನಿಯೋಗಿಸಿಯೇ ಇಲ್ಲ. ಈಗ ಆ ಮೊಬಲಿಗಿನಲ್ಲಿ ಸ್ವಲ್ಪ ಹಣವನ್ನು ಕಳುಹಿಸಿದೆ" ಎಂದು ನೃತ್ಯ ಶಿಕ್ಷಕ ಒಂದು ಕಾಗದ ಬರೆದು ಅದರ ಜೊತೆ ೫೦ ಪೌಂಡುಗಳ ಚೆಕ್ಕನ್ನಿಟ್ಟು ಮಾರನೇ ದಿನವೇ ಕಳುಹಿಸಿದ. ನಾನು ಕೇಂಬ್ರಿಡ್ಜಿನಲ್ಲಿದ್ದ ಮೂರು ವರ್ಷಗಳೂ ಸಿರಿಂಜ್ ಮತ್ತು ಸೂಜಿಗಳಿಗಾಗಿ ಕಾಲೇಜೇ ಹಣವನ್ನು ಒದಗಿಸುತ್ತಿತ್ತು.

ಕೇಂಬ್ರಿಡ್ಜಿನಲ್ಲಿದ್ದ ಕಾಲದಲ್ಲೆ ಸಕ್ಕರೆ ಕೊರತೆಯ ಪರಿಣಾಮದ ಇನ್ನೊಂದು ಅನುಭವ ಆಯಿತು. ವಾರಾಂತ್ಯದಲ್ಲಿ ನಾನು ಮನೆಗೆ ಬಂದಿದ್ದೆ. ಬಿಸಿಲು ಚೆನ್ನಾಗಿ ಇದ್ದುದರಿಂದ ಶಾಟು ನಿಕ್ಕರ್ ಹಾಕಿಕೊಂಡು ಮನೆ ತೋಟದಲ್ಲಿ ತರಕಾರಿ ಪಟವನ್ನು ಕುಕ್ಕುತ್ತ ಕಳೆಕೀಳುತ್ತಿದ್ದೆ. ಏಕೋ ಮೈಬಿಸಿ ಏರಿದಂತಾಗಿ ಸುಸ್ತಾಯಿತು. ಒಂದು ಬಗೆ ಖಿನ್ನತೆಯೂ ಉಂಟಾಯಿತು. ಕುಕ್ಕಿ ಕಳೆಕೀಳುವುದು ಮುಂದುವರಿದಂತೆ ಖಿನ್ನತೆಯೂ ಹೆಚ್ಚಾಯಿತು. ಆದರೂ ಮೊಂಡುಮೊಂಡಾಗಿ ಕಳೆ ಕೀಳುತ್ತಲೇ ಇದ್ದೆ. ನೆಲ ಎಷ್ಟು ಗಟ್ಟಿ ಎಂದು ಅದರಮೇಲೆ ಆಕ್ರೋಶ ಹುಟ್ಟಿತು. ನಾನು ಬದುಕಿದ್ದೇನೆ ಏಕೆ ಎಂದು ನನ್ನ ಮೇಲೇ ಕ್ರೋಧ ಉಂಟಾಯಿತು. ಕೆಲಸ ಬಿಟ್ಟು ಮನೆಯ ಒಳಕ್ಕೆ ಹೋಗಿ ರೆಫ್ರಿಜಿರೇಟರಿನಿಂದ ತಂಪು ಪಾನೀಯವನ್ನು ತೆಗೆದುಕೊಂಡು ಬಂದೆ. ತೋಟದ ಬಯಲಿನಲ್ಲಿ ಬಿದ್ದುಕೊಂಡು ಅತಿಬೇಸರದಿಂದ ಅದನ್ನು ಗುಟುಕಿಸಿದೆ. ನನ್ನ ತಲೆಯ ಮೇಲೆ ಅಲೆಗಳು ಹಾಯ್ದಂತಾಯಿತು. ಗಂಟೆಗಟ್ಟಲೆಯಿಂದಲೂ ಹೀಗೆಯೇ ಬಿದ್ದುಕೊಂಡಿದ್ದೇನೆ ಎನ್ನಿಸಿತು. ಎಲ್ಲಿಯೋ ದೂರಕ್ಕೆ ಹೋಗುತ್ತ ಇದ್ದೇನೆ ಎಂತಲೂ ಅನ್ನಿಸಿತು, ಗಂಟೆಗಟ್ಟಲೆ ಅಲ್ಲ ದಿನಗಳಗಟ್ಟಲೆ. ನಾನು ಎಲ್ಲಿಗೆ ಹೋದೆ ಎಂದು ಗೊತ್ತುಹತ್ತಿದಂತಾಯಿತು. ಸಾಕ್ಷಾತ್ ನರಕಕ್ಕೆ. ಏಕೆಂದರೆ ಅಲ್ಲಿಂದ ಹೊರಕ್ಕೆ ದಾರಿಯೇ ಇಲ್ಲ. ದಿನಗಳು ವರ್ಷಗಳಾದವು. ಒಳ್ಳೆಯ ಕಾಲ ಬರುತ್ತೆಂದು ಭರವಸೆ ಇಲ್ಲ; ಸೌಖ್ಯವಿಲ್ಲ; ಯಾವ ಶುಭವೂ ಇಲ್ಲ; ಯಾರೂ ನನ್ನನ್ನು ಸಂಪರ್ಕಿಸಲಾರರು; ವರ್ಷವರ್ಷಗಳು ನನಗೆ ಸಹಾಯ ಮಾಡಲಾರರು—

ವಾಸ್ತವವಾಗಿ ನಾನು ಬಯಲಿನಲ್ಲಿ ಬಿದ್ದುಕೊಂಡಿದ್ದುದು 5 ನಿಮಿಷಗಳಿಗಿಂತ ಕಡಿಮೆ ಕಾಲ ಎಂದು ನನ್ನ ತಾಯಿ ಹೇಳುತ್ತಾಳೆ. ಅವಳು ನನ್ನನ್ನು ಎಚ್ಚರಿಸಲು ಪ್ರಯತ್ನಿಸಿ ಸಾಧ್ಯವಾಗದೆ ಡಾಕ್ಟರಿಗೆ ಹೇಳಿ ಕಳುಹಿಸಿದಳಂತೆ. ಆದರೆ ಅವನು ಬರುವುದರೊಳಗೇ ತಾಯಿಗೆ ದಿಗ್ಭ್ರಮೆ ಹಿಡಿಯುವಂತೆ ನಾನು ತಟ್ಟನೆ ಎದ್ದು ಕೂತೆ. ನನಗೆ

ಏನೂ ಆಗಿರಲಿಲ್ಲವೇನೋ ಎನ್ನಿಸುವಂತೆ ಅಡಿಗೆ ಮನೆಗೆ ಹೋದೆ. ಅಲ್ಲಿ ಒಂದು ಪೀಚ್ ಹಣ್ಣನ್ನು ತಿಂದೆ. ಅಷ್ಟು ಹೊತ್ತಿಗೆ ಡಾಕ್ಟರು ಬಂದ. ಆಗ ನಾನು ಅಡುಗೆ ಮನೆಯಲ್ಲಿ ಕುಳಿತಿದ್ದು ಬಿಸ್ಕತ್ತನ್ನು ತಿನ್ನುತ್ತಿದ್ದೆ. ಡಾಕ್ಟರನ ಆಗಮನ ಇತ್ಯಾದಿಗಳನ್ನು ನಾನು ಗಣನೆಗೇ ತಂದುಕೊಳ್ಳಲಿಲ್ಲ. ನಿಧಾನವಾಗಿ ಪ್ರಸಕ್ತ ವಿಷಯಗಳು ತಲೆಗೆ ಹತ್ತಲು ಪ್ರಾರಂಭವಾಯಿತು. ವರ್ಷಾಂತರಗಳ್ಲಲೆ ನರಕದಲ್ಲಿದ್ದಂಥದುದರ ನೆನಪು ಮಸುಕಾಯಿತು. ದೇವರ ದಯೆ.

ನಾನು ರೆಫ್ರಿಜರೇಟರಿನಿಂದ ತೆಗೆದುಕೊಂಡು ಬಂದಿದ್ದ ಪಾನೀಯ ಎಲ್ಲರೂ ಕುಡಿಯುವ ಸಿಹಿಪಾನೀಯವೇ ಆಗಿದ್ದಿದ್ದರೆ ಎಲ್ಲವೂ ಸರಿಯಾಗಿಯೇ ಇರುತ್ತಿತ್ತು. ಸಕ್ಕರೆ ಕೊರತೆಯಿಂದಾಗಿ ಬಹುಶಃ ನನ್ನ ಮಿದುಳು ಸರಿಯಾಗಿ ಕೆಲಸಮಾಡುತ್ತಿರಲಿಲ್ಲವಾಗಿ ಎಲ್ಲರ ಬಳಕೆಯ ಸಿಹಿಪಾನೀಯದ ಬದಲು ಮಧುಮೇಹರೋಗಿಗೆಂದೇ ಇಟ್ಟಿದ್ದ ಸಕ್ಕರೆ ರಹಿತ ಪಾನೀಯವನ್ನು ತೆಗೆದುಕೊಂಡು ಬಂದು ಕುಡಿದಿದ್ದೆ. ಬಹುದಿವಸಗಳು ನನಗೆ ಈ ಪ್ರಸಂಗವನ್ನು ಮರೆಯಲು ಅಸಾಧ್ಯವಾಯಿತು. ಎಲ್ಲಿ ಈ ಅನುಭವವೂ ಮರುಕಳಿಸುತ್ತ ಕಾಲುಹಾಕಿಕೊಂಡು "ಮೃಗಕ್ಕೆ" ಇನ್ನೊಂದು ಮುಖ ಹುಟ್ಟಿದಂತಾಗುತ್ತೋ ಎಂದು ಇದರ ವಿಷಯವಾಗಿ ಒಂದು ಭೀತಿಯೇ ಉಂಟಾಯಿತು.

ಸಕ್ಕರೆ ಕೊರತೆ ತೊಂದರೆ ಇನ್ನೇನು ಉದ್ಭವಿಸುತ್ತದೆ ಎಂದು ಅನೇಕವೇಳೆ ನನಗೆ ಗೊತ್ತಾಗುತ್ತದೆ. ಆದರೂ ಅದನ್ನು ತಪ್ಪಿಸಲು ಏನಾದರೂ ಮಾಡಿಕೊಳ್ಳುವಷ್ಟು ಸಮಯೋಪಾಯ ಹೊಳೆಯುವುದಿಲ್ಲ. ಹುಡುಕಿ ಏನಾದರೂ ಸೇವಿಸುವಷ್ಟು ಶಕ್ತಿಯೂ ಇಲ್ಲವೆಂದು ಭಾಸವಾಗುತ್ತದೆ. ಅಲ್ಲದೆ ಇಂಥ ಸಮಯದಲ್ಲಿ ನನ್ನ ಸ್ಥಿತಿ ಹೀಗೆ ಅಸಹಾಯಕವಾಗಿರುತ್ತದೆ ಎಂಬ ವಿಷಯವನ್ನು ಸಂಗಡಿಗರೊಡನೆ ಹೇಳುವುದಕ್ಕೆ ನಾಚಿಕೊಂಡು ಸುಮ್ಮನಿರುತ್ತೇನೆ. ಒಂದು ವಾರಾಂತ್ಯದಲ್ಲಿ ತಾಯಿಯನ್ನು ಕರೆದುಕೊಂಡು ಆಮ್‌ಸ್ಟರ್ ಡ್ಯಾಮಿಗೆ ಪ್ರವಾಸ ಹೋಗಿದ್ದೆ. ಇಬ್ಬರಿಗೂ ಕಾಲುನೋವು ಬರುವಷ್ಟು, ನನಗೆ ರಕ್ತದಲ್ಲಿ ಸಕ್ಕರೆ ಕೊರತೆ ಉಂಟಾಗುವಷ್ಟು ಅಲ್ಲಿ ಸುತ್ತಾಡಿದೆವು. ನಾನು ಇನ್ನೇನು ಸಕ್ಕರೆ ಕೊರತೆ ತೊಂದರೆಗೆ ಎರವಾಗುತ್ತೇನೆ ಎಂದು ತಾಯಿಗೂ ಗೊತ್ತಾಗಿತ್ತು. ಊಟದ ಸಮಯವೂ ಆಗಿದ್ದುದರಿಂದ ಚಟ್ಟನೆ ಯಾವುದಾದರೂ ಹೋಟಲಿಗೆ ಹೋಗಿ ತಿನ್ನಲು ಏನಾದರೂ ನನಗೆ ದೊರೆಯುವಂತೆ ಮಾಡಬೇಕು; ಇನ್ನೇನು ಮಾಡಹೋಗುವುದಕ್ಕಿಂತಲೂ ಅದು ಶ್ರೇಷ್ಠ ಎಂದು ಯೋಚಿಸಿ ತಾಯಿ ಯಾವುದಾದರೂ ಹೋಟಲಿಗೆ ಹೋಗೋಣ ಎಂದಳು. ಆದರೆ ನಾನು ನನಗೆ ತಿನ್ನಲು ಏನೂ ಬೇಡ ಎಂದು ಹೇಳುತ್ತ ದಾರಿಯಲ್ಲಿ ಸಿಕ್ಕ ಹೋಟಲುಗಳನ್ನೆಲ್ಲ ಬಿಟ್ಟು ಮುಂದು ಮುಂದಕ್ಕೆ ನಡೆದೆ. ತಾಯಿಯೂ ಅಷ್ಟುಕಾಲ ಹಿಂಬಾಲಿಸಿದಳು. ಕೊನೆಗೆ ಅವಳು ಮುಂದೆ ಸಿಕ್ಕಿದ ಹೋಟಲಿಗೆ ನನ್ನನ್ನು ಎಳೆದುಕೊಂಡೇ ಹೋದಳು. ಅಲ್ಲಿ ನನಗೆ ಸಾಕ್ಷಾತ್ ಅದಿರುವಾಯುವೇ ಅಡರಿತು.

ನನ್ನ ಅರಿವಿಗೆ ಅನಂತರ ಬಂದಿದ್ದು ಇದು: ಒಬ್ಬ ಧಾಂಡಿಗ ಡಚ್ ಮನುಷ್ಯ ನನ್ನ ಕೈಗಳನ್ನು ಹಿಂಗಟ್ಟು ಮುರಿಹಾಕಿ ಭದ್ರವಾಗಿ ಹಿಡಿದಿದ್ದ; ನನ್ನ ತಾಯಿ ನನ್ನ ಬಾಯೊಳಕ್ಕೆ ಸಿಹಿ ಪಾನೀಯವನ್ನು ಹಾಕುತ್ತಿದ್ದಳು; ಅವಳ ಕೈ ನಡಗುತ್ತಿತ್ತು. ಪಾಪ ನನಗೆ ಈಚೀಚೆಗೆ ಸಕ್ಕರೆ ಕೊರತೆ ಅವ್ಯಕ್ತವಾಗಿ ಇಷ್ಟರಮಟ್ಟಿಗೆ ಕಂಡುಬಂದು ಕಾಡಿಸುವ

ವಿಚಾರ ಅವಳಿಗೆ ಗೊತ್ತಿತಲಿಲ್ಲ. ನಾನು ಅವಳಿಗೆ ತಿಳಿಸಿರಲಿಲ್ಲ. ತತ್ಫಲವಾಗಿ ಅವಳು ಬಹುವಾಗಿ ಗಾಬರಿಗೊಂಡಿದ್ದಳು. ಅಂತೂ ನಾನು ಬಹುಬೇಗ ಚೇತರಿಸಿಕೊಂಡು ಹ್ಯಾಮ್‌ಬರ್ಗ್‌ರನ್ನು (ಒಂದು ಬಗೆ ತಿನಿಸು) ತಂದುಕೊಡುವಂತೆ ಹೋಟಲಿನ ಮಾಣಿಗೆ ಹೇಳಿದೆ. ದಯಾಳುವಾದ ಆ ಡಚ್ ಮನುಷ್ಯನೂ ಸಹಾನುಭೂತಿ ವ್ಯಕ್ತಪಡಿಸುತ್ತಿದ್ದ ಅವನ ಹೆಂಡತಿಯೂ ತಮ್ಮ ತಿಂಡಿ ತೀರ್ಥಗಳನ್ನು ಮುಗಿಸಿ ಹೊರ ಹೊರಟರು. ಹೋಗುವಾಗ ಅವನು ನನ್ನ ಹತ್ತಿರ ಬಂದು "ನಿನ್ನ ಬಾಳಿನ ಉದ್ದಕ್ಕೂ ದೇವರು ನಿನ್ನನ್ನು ರಕ್ಷಿಸಲಿ" ಎಂದು ಹಾರೈಸಿ ಹೇಳಿದ. ಕಣ್ಣೀರು ತುಂಬಿ ಹರಿದುಹೋಗುವುದನ್ನು ತಡೆದುಕೊಳ್ಳುವುದಕ್ಕೆಂದೇ ಕೆಟ್ಟ ಧೈರ್ಯದಿಂದ ಅವನ ಕಡೆ ತಿರುಗಿ "ನಿಮಗೆ ತುಂಬ ವಂದನೆಗಳು" ಎಂದು ಹೇಳಿ ಮುಗಿಸಿದೆ.

ರಕ್ತದಲ್ಲಿ ಸಕ್ಕರೆ ಕೊರತೆಯ ಫಲವಾಗಿ ನಾನು ಅಂಗಡಿಯಲ್ಲಿ ಕೊಂಡುತರುತ್ತಿದ್ದ ಸಾಮಾನುಗಳನ್ನು ರಸ್ತೆಯಲ್ಲಿ ಚೆಲ್ಲಾಡಿದ್ದುಂಟು. ಬಸ್ಸನ್ನು ಹತ್ತಿ ಒಳಗೆ ಅದರ ತಳದಲ್ಲಿ ಮಲಗಿದ್ದುಂಟು. ಆ ವೇಳೆ ನನ್ನನ್ನು ದಾಟುತ್ತ ಇಳಿದು ಹೊರಗೆ ಹೋಗುವವರನ್ನು ನೋಡಿ ನಕ್ಕಿದ್ದುಂಟು. ಮನೋರೋಗತಜ್ಞನೊಬ್ಬನೂ ಅವನ ಹೆಂಡತಿಯೂ ನನ್ನನ್ನು ಕಾರಿನಲ್ಲಿ ಕರೆದುಕೊಂಡು ಹೋಗುತ್ತಿದ್ದಾಗ ಕಾರಿನ ಹಿಂಬದಿಯಲ್ಲಿ ನಿದ್ದೆ ಹೊಡೆಯುತ್ತಿದ್ದು ಎಚ್ಚೆತ್ತ ಮೇಲೆ ಅವರನ್ನು ಹುಚ್ಚರೆಂದು ನಿಂದಿಸಿದ್ದುಂಟು. ಆದರೆ ಇಂಥ ಪರಿಸ್ಥಿತಿಗಳಿಂದ ಮಧುಮೇಹ ರೋಗ ನನಗೆ ಅನಿರೀಕ್ಷಿತವಾದ ಲಾಭವೊಂದನ್ನು ಗಳಿಸಿಕೊಟ್ಟಿದೆ—ಯಾವುದೆಂದರೆ ಸಮಯದಲ್ಲಿ ಸ್ನೇಹಿತರ ಸಹಾಯ; ಅನೇಕ ವೇಳೆ ಅಪರಿಚಿತರದು ಕೂಡ. ಅಂದರೆ ಇಂಥ ಸಹಾಯಗಳು ಮೇಲೆ ಹೇಳಿದಂಥ ವಿಚಿತ್ರ ಪ್ರಸಂಗಗಳಲ್ಲೆಲ್ಲ ಯಾವಾಗಲೂ ದೊರೆತಿದೆ ಎಂದು ಹೇಳಲಾರೆ.

ಕೇಂಬ್ರಿಡ್ಜಿನ ಹತ್ತಿರ ಒಂದು ಹಳ್ಳಿಯಲ್ಲಿ ನಡೆದ ವಿನೋದ ಕೂಟಕ್ಕೆ ಹೋಗಿದ್ದೆ. ಕಲಾಪಗಳು ಮುಗಿದ ನಂತರ ರಾತ್ರಿ ಅಲ್ಲಿಯ ಪ್ರಮುಖ ನಿವಾಸದಲ್ಲಿಯೇ ಕಳೆಯುವಂತೆ ಆಹ್ವಾನ ಬಂತು. ಆಹ್ವಾನ ನೀಡಿದವರು ನಿವಾಸದ ಯಜಮಾನ, ೯೦ ವರ್ಷಕ್ಕೆ ಮೇಲ್ಪಟ್ಟ ಹಿರಿಯ ಮತ್ತು ಅವನ ಹೆಂಡತಿ. ಅವರು ಮನೆಯಲ್ಲಿ ನನಗೆ ಬಿಟ್ಟುಕೊಟ್ಟ ಕೊಠಡಿ ಸೊಗಸಾಗಿ ಅಣಿಮಾಡಲ್ಪಟ್ಟಿತ್ತು. ಯಾವುದಕ್ಕೂ ಕೊರತೆ ಇಲ್ಲದೆ ಸುಖನಿದ್ರೆಗೆ ಮೋಸವಿಲ್ಲದಂತಿತ್ತು. ಆದರೆ ಅದು ಆ ದೊಡ್ಡ ಬಂಗಲೆಯ ಒಂದು ಕೊನೆಯಲ್ಲಿದ್ದು ಅಲ್ಲಿಗೂ ಮಿಕ್ಕವರು ಇದ್ದ ಭಾಗಕ್ಕೂ ಬಹು ದೂರವಾಗಿತ್ತು.

ಈಗ ನನ್ನ ರೋಗದ ವಿಲಕ್ಷಣತೆಯನ್ನು ಹೇಳುವುದು ಒಳ್ಳೆಯದು. ನನ್ನಲ್ಲಿ ಅನೇಕ ವೇಳೆ ರಕ್ತದ ಸಕ್ಕರೆ ಕೊರತೆ ರಾತ್ರಿ ನಾನು ನಿದ್ರಿಸುತ್ತಿರುವಾಗ ಸಂಭವಿಸುತ್ತದೆ. ಕೊರತೆ ಹೆಚ್ಚು ಪ್ರಮಾಣದ್ದೇ ಆಗಿದ್ದರೆ ಕೆಲವು ವೇಳೆ ಬೆವರಿ ಚಳಿಯಾಗಿ ಎಚ್ಚರವಾಗುತ್ತದೆ. ಆಗ ಸಕ್ಕರೆಯನ್ನು ಸೇವಿಸಿ ತೊಂದರೆಯನ್ನು ನಿವಾರಿಸಿಕೊಳ್ಳಬಹುದು. ಅದಕ್ಕಾಗಿಯೇ ಸಕ್ಕರೆಯನ್ನು ನಾನು ಪಕ್ಕದಲ್ಲಿಟ್ಟುಕೊಂಡೇ ಮಲಗುತ್ತೇನೆ. ಆದರೆ ಹಾಗೆ ಎಚ್ಚರವಾಗದೆ ಕೊರತೆ ಹೆಚ್ಚುತ್ತಲೇ ಹೋದರೆ ಬೆಳಗಿನ ಜಾವ ೪ ಗಂಟೆ ಹೊತ್ತಿಗೆ ರಕ್ತದ ಸಕ್ಕರೆ ಕನಿಷ್ಠ ಪ್ರಮಾಣಕ್ಕೆ ಇಳಿದು ನನಗೆ ಮಂಪರ ಬಂದಿರುತ್ತದೆ, ಇಲ್ಲವೇ ಎಚ್ಚರವಾದಾಗ ಲಕ್ವ ಹೊಡೆದಿರುತ್ತದೆ.

ಆ ಹೊತ್ತು ಈ ಹಳ್ಳಿ ಬಂಗಲೆಯಲ್ಲಿ ಮುಂಜಾನೆ ನನಗೆ ಎಚ್ಚರವಾದಾಗ, ಕತ್ತಿನಿಂದ ಕೆಳಗಿನ ದೇಹಭಾಗವೆಲ್ಲ ನನ್ನ ಸ್ವಾಧೀನ ತಪ್ಪಿಹೋಗಿತ್ತು. ಪಕ್ಕದಲ್ಲಿ ಇಟ್ಟುಕೊಂಡಿದ್ದ ಸಕ್ಕರೆ ಕಾಣಿಸುತ್ತಲೇ ಇತ್ತು. ಆದರೆ ಎಷ್ಟು ಪ್ರಯತ್ನ ಪಟ್ಟರೂ ಅದನ್ನು ಎಟುಕಿಸಿಕೊಳ್ಳುವುದಕ್ಕೆ ಆಗಲಿಲ್ಲ. ಏನುಮಾಡಲೂ ತೋರದೆ ಚೀರಲು ಪ್ರಾರಂಭಿಸಿದೆ. ಅಂಥ ಭವ್ಯವಾದ ಮನೆಯಲ್ಲಿ ಬೆಳಗಿನ ಆಹಾರ ಸೇವನೆಯ ಕಾಲಕ್ಕೆ ಮುಂಚೆ, ಪಕ್ಷಾಘಾತವಾಗಿ ತೊದಲು ಮಾತನ್ನಷ್ಟೆ ಆಡಬಲ್ಲ, ಪ್ರಸಕ್ತ ಕಿರಚಿಕೊಳ್ಳುತ್ತಿರುವ ವ್ಯಕ್ತಿ ಇದ್ದು ಅದು ನಾನೇ ಆಗಿದ್ದುದು ವಿಧಿವಿಲಾಸ. ನಾಚಿಕೊಂಡು ಮೊದಲು ಐದು ನಿಮಿಷ ಮೆಲ್ಲನೇ ಚೀರಿದೆ. ಯಾರೂ ಬರಲಿಲ್ಲ. ಇನ್ನೈದು ನಿಮಿಷ ಜೋರಾಗಿಯೇ ಕಿರಚಿಕೊಂಡೆ. ಆಗಲೂ ಯಾರೂ ಇಲ್ಲ. ಹಾಸಿಗೆಯಿಂದ ದಢೀರನೆ ಬಿದ್ದರೆ ಆ ಶಬ್ದವನ್ನಾದರೂ ಕೇಳಿ ಯಾರಾದರೂ ಬರುವರೋ ಎಂದರೆ ನನಗೆ ಅಲ್ಲಾಡಲೇ ಆಗದಂತಿದ್ದು ಅದು ಸಾಧ್ಯವಾಗಲಿಲ್ಲ. ಮುಖ ಬೆವತು ಬೆವರು ಕಣ್ಣಮೇಲೆ ಹರಿದಾಗ ಒರಸಿಕೊಳ್ಳಲೂ ಆಗದಿತ್ತು. ಚೀರುವುದನ್ನು ಬಿಟ್ಟು ಇನ್ನೇನನ್ನೂ ಮಾಡಲಾಗದ ಪರಿಸ್ಥಿತಿ ಉಂಟಾಗಿದ್ದುದರಿಂದ ಅದನ್ನೇಮಾಡಿದೆ. ಸುಸ್ತಾಗುವವರೆಗೂ ಚೀರುವುದು, ಅನಂತರ ಸುಧಾರಿಸಿಕೊಳ್ಳುವುದು, ಪುನಃ ಚೀರುವುದು ಹೀಗೆಯೇ ೩ ಗಂಟೆಗಳಷ್ಟು ಕಾಲಕಳೆಯಿತು. ಏಳುವರೆಗಂಟೆ ಹೊತ್ತಿಗೆ ನಾನು ಮಲಗಿದ್ದಭಾಗದ ಹೊರಬಾಗಿಲು ತೆಗೆದ ಶಬ್ದವಾಗಿ ಯಾರೋ ನನ್ನೆಡೆಗೆ ಬರುತ್ತಿರುವುದು ಕೇಳಿಸಿತು. ಕ್ಷಣಗಳನಂತರ ಹಳೆಯ ಮೇಲುಡುಪನ್ನು ಹಾಕಿಕೊಂಡಿದ್ದ ಮನೆ ಯಜಮಾನಿ ಕಾಣಿಸಿಕೊಂಡಳು. ಅವಳಿಗೆ ೭೫ ವರ್ಷ. ಯಜಮಾನನಿಗಿಂತ ತುಂಬ ಚಿಕ್ಕವಳು. ಈಕೆ ನನ್ನ ಸ್ಥಿತಿಯನ್ನು ನೋಡಿ ಕಿಂಚಿತ್ತಾದರೂ ವಿಚಲಿತಳಾಗಲಿಲ್ಲ. ನನ್ನ ಹತ್ತಿರ ಇದ್ದ ಸಕ್ಕರೆಯನ್ನು ನೋಡಿ ನನಗೆ ಬೇಕಾಗಿದ್ದು ಅದೇಯೋ ಎಂದು ಕೇಳಿದಳು. ಹೌದೆಂದು ತಲೆ ಆಡಿಸಿದೆ. ಕಾಲಪರಿಜ್ಞಾನ ಉಳ್ಳವರು ಮಾತ್ರ ಮಾಡುವಂತೆ ಆಕೆ ತಕ್ಷಣ ಹೊರಗೆ ಹೋಗಿ ಒಂದು ಪಾತ್ರೆಯಲ್ಲಿ ಟೀ, ೨ ಕಪ್ಪುಸಾಸರುಗಳನ್ನು ತಂದಳು. ನನ್ನ ಹಾಸಿಗೆಯ ಅಂಚಿನಲ್ಲಿ ಕುಳಿತು ೨ ಕಪ್ಪುಗಳಿಗೂ ಟೀ ಸುರಿದಳು. ೨ ಕಪ್ಪುಗಳಿಗೂ ನನ್ನ ಹತ್ತಿರ ಇದ್ದ ಸಕ್ಕರೆ ಹಾಕಿದಳು. ತಾನು ದಿನ ಬೆಳಗೆದ್ದರೆ ಮಾಡುವ ಕೆಲಸ ಇದೇಯೇನೋ ಎನ್ನುವಂತೆ ಒಂದು ಕಪ್ಪನ್ನು ಎತ್ತಿಕೊಂಡು ನನಗೆ ಕುಡಿಸಲು ಪ್ರಾರಂಭಿಸಿದಳು. ತೊದಲದೆ ಮಾತನಾಡಲು ನನಗೆ ಸಾಧ್ಯ ಆದ ಕೂಡಲೆ ಅವಳಿಗೆ ವಂದನೆ ಸಲ್ಲಿಸಿದೆ. "ಅದೇನೂ ಬೇಡತಾಯಿ, ಯಾವಾಗಲೂ ಹೊತ್ತಿಗೆ ಮುಂಚೆ ಟೀ ಸೇವಿಸಿದರೆ ನನಗೆ ತೃಪ್ತಿ, ಇಂದು ಸಕ್ಕರೆ ಹಾಕಿರುವುದರಿಂದ ತೃಪ್ತಿ ಇನ್ನೂ ಹೆಚ್ಚು ಎಂದು ಹೇಳಿ ನನಗೆ ಟೀ ಕುಡಿಸುವಾಗ ದಿಂಬನ ಮೇಲೆ ಚೆಲ್ಲಿದ್ದನ್ನು ಒರಸುತ್ತ ತನ್ನ ತೋಟದ ಗಿಡಗಳ ರೋಗದ ವಿಚಾರ ಮಾತಾಡುತ್ತ ವಿಷಯವನ್ನು ಮರೆಸಿದಳು.

ಸಕ್ಕರೆಕೊರತೆ ಉಂಟಾದಾಗ ಬಹುಸಾರಿ ಅಂಬ್ಯುಲೆನ್ಸಿನಲ್ಲಿ ನನ್ನನ್ನು ಆಸ್ಪತ್ರೆಗೆ ಸಾಗಿಸಿದ್ದಾಗಿದೆ. ಎಷ್ಟೋ ಬಾರಿ ಆಂಬ್ಯುಲೆನ್ಸಿನಲ್ಲಿ ಹೋಗಿರುವುದರಿಂದ ಅಂಬ್ಯುಲೆನ್ಸಿನ ಜನ ಬಹು ಒಳ್ಳೆಯವರಾಗಿರುತ್ತಾರೆ ಎಂಬ ಭಾವನೆ ನನ್ನ ಮನಸ್ಸಿನಲ್ಲಿ ಬೇರೂರಿದೆ. ಆಸ್ಪತ್ರೆಯ ಅಪಘಾತ ವಿಭಾಗದಲ್ಲಿರುವ ಜನರೂ ಅಷ್ಟೆ, ಸಕ್ಕರೆ ಕೊರತೆ ಪ್ರಸಂಗಗಳ

ಅಂತ್ಯದಲ್ಲಿ ಇಂಥ ಸದ್ಭಾನೆಗಳುಂಟಾಗುತ್ತವಲ್ಲ ಇವು ವ್ಯಗದ ಪೀಡೆಯನ್ನೂ ಸಹ್ಯವಾಗುವಂತೆ ಮಾಡುತ್ತವೆ.

ಆಘಾತಗೊಂಡ ಒಬ್ಬೊಬ್ಬರಿಗೂ ಆಘಾತವಿಭಾಗದಲ್ಲಿ ಒಂದೊಂದು ಚಿಕ್ಕಕೊಠಡಿ ಇದೆ. ಎಲ್ಲ ಕೊಠಡಿಗಳಲ್ಲೂ ಒಂದೇ ರೀತಿಯ ಅಣಿ. ಎಲ್ಲವುಗಳಲ್ಲಿಯೂ ಗೂಡಿನಲ್ಲಿ ಸಿರಿಂಜ್ ಮತ್ತು ಸೂಜಿಗಳು, ರಬ್ಬರ್ ಕೊಳವೆಗಳು ಮತ್ತು ಪ್ಲಾಸ್ಟಿಕ್ ಚೀಲಗಳಲ್ಲಿ ಮೊಹರು ಮಾಡಿಟ್ಟಿರುವ ವಿಶಿಷ್ಟಸಲಕರಣೆಗಳು. ಎಲ್ಲ ಕೊಠಡಿಗಳಲ್ಲೂ ಛಾವಣಿಯಲ್ಲಿ ಮಂಕು ಹಸಿರುಛಾಯೆಯ ಬಿಳಿದೀಪ. ನಾನು ಇಂಥ ಕೊಠಡಿಯಲ್ಲಿದ್ದಾಗ ಕೆಲವುಬಾರಿ ಕೊಠಡಿಯಬಾಗಿಲು ಮುಚ್ಚದೆ ಮರೆತಿರುವರು. ಆಗ ಹೊರಗಡೆ ಡಾಕ್ಟರುಗಳೂ ದಾದಿಯರೂ ಓಡಾಡುವುದು ಕಾಣಿಸುವುದು. ದಾದಿಯರು ತಮ್ಮತಮ್ಮಲ್ಲಿ ಸಣ್ಣ ಧ್ವನಿಯಲ್ಲಿ ಡಾಕ್ಟರುಗಳು ಮಾಡಿದ ತಪ್ಪುಗಳನ್ನು ಎತ್ತಿ ಆಡಿಕೊಳ್ಳುವುದು ಕೇಳಿಸುವುದು. ಇವೆಲ್ಲ ನಮಗೆ ಸಂಬಂಧಪಟ್ಟಿಲ್ಲವಂಥವೇ ಆಗಿದ್ದರೆ ಎಷ್ಟು ಹಿತವಾದಂಥವು.

ಒಂದು ಸಲ ಸಕ್ಕರೆ ಕೊರತೆಯಿಂದ ಲಕ್ವಹೊಡೆದವಳಾಗಿ ಆಸ್ಪತ್ರೆಗೆ ದಾಖಲಾಗಿದ್ದೆ. ಪೂರ್ಣ ಲಕ್ವಆಗಿದ್ದರಿಂದ ಕಣ್ಣು ಹೊರಳಿಸುವುದುಬಿಟ್ಟು ಇನ್ನೇನು ಮಾಡಲೂ ಸಾಧ್ಯವಿರಲಿಲ್ಲ. ಕಣ್ಣಿಗೂ ಸಹ ಎಲ್ಲ ಎರಡೆರಡಾಗಿ ನಾಲ್ಕುನಾಲ್ಕಾಗಿ ಕಾಣಿಸುತ್ತಿದ್ದವು. ಡಾಕ್ಟರಿಗೆ ನಾನು ಮಧುಮೇಹರೋಗಿ ಎಂದು ಆಂಬ್ಯುಲೆನ್ಸಿನವರೇ ಹೇಳಿದ್ದರು. ನನ್ನ ಕಣ್ಣುಗಳ ಪರಿಯನ್ನು ನೋಡಿ "ಇವಳಿಗೆ ಮಯಕ ಬರುತ್ತಿದೆ. ಶೀಘ್ರವಾಗಿಯೇ ಇವಳಿಗೆ ಇನ್‌ಸುಲಿನ್ ಇಂಜೆಕ್ಷನ್ ಕೊಟ್ಟರೆ ವಾಸಿ" ಎಂದು ಡಾಕ್ಟರು ಹೇಳಿದಾಗ ನನಗೆ ಬಹು ಗಾಬರಿ ಆಯ್ತು. "ನನಗೆ ಬೇಕಾಗಿರುವುದು ಸಕ್ಕರೆ, ಇನ್‌ಸುಲಿನ್ನಲ್ಲ" ಎಂದು ಹೇಳಲು ಪ್ರಯತ್ನಿಸಿದೆ, ಸಾಧ್ಯವಾಗಲಿಲ್ಲ. ಇನ್‌ಸುಲಿನ್ ಕೊಟ್ಟದ್ದೇ ಆದರೆ ನನ್ನ ಕಥೆ ಮುಗಿದಂತೆಯೇ. ಏನೊ ಶಬ್ದ ಮಾಡಿ ಡಾಕ್ಟರು ನನ್ನ ಕಡೆ ನೋಡಿದಾಗ ತಲೆ ಅಲ್ಲಾಡಿಸಲು ಪ್ರಯತ್ನಿಸಿದೆ. ಆದರೆ ಅದು ಲೊಳಲೊಳ ಆಡಿತೇ ವಿನಾ "ಬೇಡ" ಎಂದು ಅರ್ಥವಾಗುವಂತಿರಲಿಲ್ಲ. ಡಾಕ್ಟರು ಇನ್‌ಸುಲಿನ್ ತುಂಬಿದ ಸಿರಿಂಜನ್ನು ತಂದೇ ತಂದ. ಇನ್‌ಜೆಕ್ಷನ್ ಚುಚ್ಚಲು ನನ್ನ ರಟ್ಟೆಯನ್ನೂ ಶುದ್ಧಿಮಾಡಿದ. "ದೇವರೇ, ನನಗೆ ಸಹಾಯ ಮಾಡು" ಎಂದು ಮೊರೆ ಇಡುವ ಬದಲು "ದೇವರೆ, ಈತ ಇಂಜೆಕ್ಷನ್ ಕೊಡುವುದನ್ನು ತಪ್ಪಿಸು" ಎಂದು ಮನಸ್ಸಿನಲ್ಲಿ ಮೊರೆ ಇಟ್ಟೆ. ನನಗೆ ರೋಷ ಉಕ್ಕಿಬಂತು. ತಲೆ ಅರ್ಥಹೀನವಾಗಿ ಅಲ್ಲಾಡುವಂತಿದ್ದರೂ "ಇಂಜೆಕ್ಷನ್ ಬೇಡ" ಎಂದು ಸೂಚಿಸಲು ಏನೇನೋ ಮಾಡಿದೆ. ನನ್ನ ಹಣೆಯ ಮೇಲಿನ ಬೆವರನ್ನು ಒರೆಸುತ್ತಿದ್ದ ದಾದಿ "ಆತಂಕ ಪಡಬೇಡ" ಎಂದು ಧೈರ್ಯ ಹೇಳಿದಳು. ಆ ಮಾತನ್ನು ಕೇಳಿ ನಾನು ಆದಷ್ಟು ಜೋರಾಗಿ ನರಳಿದೆ. ಆಗ ದಾದಿ "ಡಾಕ್ಟ್ರೆ, ಇದೇಕೋ ಇನ್ನೇನೋ ತೊಂದರೆ ಎಂದು ತೋರುತ್ತಲ್ಲ" ಎಂದಳು. ಅದನ್ನು ಕೇಳಿ ಮನಸ್ಸಿನಲ್ಲೇ ಅವಳನ್ನು ಹರಸುತ್ತ "ಹೌದು" ಎಂದು ಸೂಚಿಸಲು ಇನ್ನೊಂದು ಬಾರಿ ಹಾಗೆಯೇ ನರಳಿದೆ. ಡಾಕ್ಟರು ನನ್ನನ್ನು ಅನುಮಾನದಿಂದ ನೋಡುತ್ತ" ಹಾಗೇನೂ ಇಲ್ಲವೆಂದು ತೋರುತ್ತೆ, ಆದರೂ ಖಾತರಿಗಾಗಿ ಇವಳ ರಕ್ತಪರೀಕ್ಷೆ ಮಾಡಿಸೋಣ ಎಂದು ಹೇಳಿದ. ನನಗೆ ಜೀವದಲ್ಲಿ ಜೀವ ಬಂದಹಾಗಾಯಿತು. ಡಾಕ್ಟ್ರು ನನ್ನ ಬೆರಳನ್ನು ಚುಚ್ಚಿ ಸಕ್ಕರೆ ಪರೀಕ್ಷೆ ಮಾಡುವ ಹೀರುಕಾಗದದ ಚೂರೊಂದನ್ನು ಬಂದ ರಕ್ತದಲ್ಲಿ ತೋಯಿಸಿದ.

ಸಕ್ಕರೆ ಅಧಿಕವಾಗಿಲ್ಲದಿದ್ದುದು ಅವನಿಗೆ ಕೇವಲ ಆಶ್ಚರ್ಯ ಅಷ್ಟೆ. ಆಗಬಹುದಾಗಿದ್ದ ಅನಾಹುತದ ವಿಚಾರ ಅವನ ತಲೆ ಕೆಡಿಸಿದಂತೆ ತೋರಲಿಲ್ಲ. "ನಿನಗೆ ಇನ್‌ಸುಲಿನ್ನಿನ ಬದಲು ಗ್ಲೂಕೋಸ್ ಇಂಜೆಕ್ಷನ್ ಕೊಡುತ್ತೇನೆ" ಎಂದು ಹೇಳಿದ. ಗ್ಲೂಕೋಸ್ ಇಂಜೆಕ್ಷನ್ ಕೊಟ್ಟ ಕೆಲವು ಸೆಕೆಂಡುಗಳಲ್ಲೆ ನನಗೆ ದೇಹಾದ್ಯಂತ ಅಲ್ಪಸ್ವಲ್ಪ ಚಲನೆ ಸಾಧ್ಯವಾಯಿತು. ದಾದಿಯನ್ನು ವಂದಿಸಿ ಅನಂತರ ಡಾಕ್ಟರನ್ನು ವಂದಿಸಿದೆ. ದಾದಿ ಅಳುಕಿದ್ದು ಕಾಣಿಸಿತು. ಆದರೆ ಡಾಕ್ಟರು "ಅದೇನೂ ಪರವಾಗಿಲ್ಲ" ಎಂದು ಹೇಳಿದ ಮಹಾರಾಯ.

ಮಧುಮೇಹರೋಗ ಮುಕ್ತಳಾಗಿ ನಾನು ಆರೋಗ್ಯವಂತಳಾಗುತ್ತೇನೆಂದು ಯೋಚಿಸಿದ್ದೆ ಆದರೆ ನಾನು ತಿಳಿಗೇಡಿ ಅಷ್ಟೆ. ಆದರೂ ಇದರ ಚಿಕಿತ್ಸೆಯ ವಿಷಯದಲ್ಲಿ ಹೊಸ ವಿಧಾನಗಳನ್ನು ಅನುಸರಿಸಲು ನನಗೆ ಯಾವಾಗಲೂ ಆಸಕ್ತಿ. ಸೌಮ್ಯ ಮಧುಮೇಹರೋಗಿಗಳಲ್ಲಿ ಸಲ್ಫಗುಂಪಿನ ಔಷಧಿಗಳನ್ನು ಕೊಟ್ಟು ಚಿಕಿತ್ಸಿಸುವುದಿದೆ. ನಾನೂ ಅವನ್ನು ತೆಗೆದುಕೊಂಡರೆ ಆಕಸ್ಮಾತ್ತಾಗಿ ನನ್ನಲ್ಲಿ ಉತ್ಪತ್ತಿ ಆಗುವ ಕಿಂಚಿತ್ ಪ್ರಮಾಣದ ಇನ್‌ಸುಲಿನ್ನು ನಾನು ಬದುಕಿರಲು ಸಾಧ್ಯವಾದಷ್ಟು ಅಧಿಕವಾದೀತೇನೋ ಎಂದು ಆಸೆ. ಇದು ಕತ್ತಲಿನಲ್ಲಿ ಪ್ರಯತ್ನಿಸುವ ಈಡಿನಂತೆ. ಹೇಗಾದರಾಗಲಿ ಎಂದು ಬೆಳಗ್ಗೆ ಸಂಜೆ ಒಂದೊಂದು ಮಾತ್ರೆ ನುಂಗುತ್ತಿದ್ದೆ. ಇದೇ ಸಮಯದಲ್ಲಿ ಐರ್‌ಲೆಂಡಿಗೆ ಪ್ರವಾಸ ಹೋಗಿದ್ದೆ. ದಿನದಿನವೂ ಅಲ್ಲಿಸುತ್ತಾಟ, ಸರೋವರಗಳ ಮೇಲೆ ದೋಣಿಯಲ್ಲಿ ಹೋಗುವುದು, ಊರ ಹೊರಗೆ ಹಣ್ಣುಗಳನ್ನು ಶೇಖರಿಸುತ್ತ ತಿನ್ನುತ್ತ ಅಲೆದಾಡುವುದು ಇವುಗಳಿಂದ ನನಗೆ ರಕ್ತದಲ್ಲಿ ಸಕ್ಕರೆ ಕೊರತೆಯುಂಟಾಗಿ ಸುಸ್ತಾಗಿ ಕೈಲಿ ಏನೂ ಹರಿಯದ ತನಕ ತಲ್ಲೀನಳಾಗುತ್ತಿದ್ದೆ. ಆದರೆ ವಾಸ್ತವವಾಗಿ ನನ್ನಲ್ಲಿ ರಕ್ತದ ಸಕ್ಕರೆಯುಮಟ್ಟ ಏರಿರುವುದು ಗೊತ್ತಾಯಿತು. ನಾನು ಇನ್‌ಸುಲಿನ್ ಇಂಜೆಕ್ಷನ್‌ಗಳನ್ನು ಬಿಟ್ಟಿರಲಾರೆ, ನನ್ನ ದೇಹದಲ್ಲಿ ಅದು ಉತ್ಪತ್ತಿ ಆಗುವುದೇ ಇಲ್ಲ ಎಂದು ಖಾತರಿ ಆಯಿತು. ಹಳೆಯ ಆಚರಣೆಯೇ ಗತಿ ಎಂದುಕೊಂಡು ನಿರಾಶಳಾಗಿ ಇಂಗ್ಲೆಂಡಿಗೆ ವಾಪಸಾದೆ. ಪಾಲಿಷ್ ಮಾಡದ ಧಾನ್ಯಾಹಾರಗಳು, ಸಿಪ್ಪೆಸುಲಿದ ಹಣ್ಣುಗಳಿಗಿಂತ ಸಿಪ್ಪೆಸುಲಿಯದ ಹಣ್ಣುಗಳು, ಇತ್ಯಾದಿಗಳು ಜೀರ್ಣವಾಗಲು ಹೆಚ್ಚು ಕಾಲಬೇಕಾದ್ದರಿಂದ ಅವು ದೇಹದಲ್ಲಿ ಹೆಚ್ಚು ಕಾಲ ತಂಗುತ್ತವೆ. ಆದ್ದರಿಂದ ಅಂಥವುಗಳನ್ನು ಸೇವಿಸಿದರೆ ಇನ್‌ಸುಲಿನ್ನಿನ ಅಗತ್ಯ ಕಡಿಮೆ ಆಗುವುದೆಂದು ಲೆಕ್ಕಹಾಕಿದ್ದೆ. ಈಗ್ಗೆ ೪ ವರ್ಷಗಳ ಹಿಂದೆ ಇಂಥ ಹಣ್ಣುಗಳು ಆಹಾರಗಳನ್ನೇ ತಿನ್ನಲು ಪ್ರಾರಂಭಿಸಿದ್ದೆ. ಇದಕ್ಕೆ ಮೊದಲು ಡಾಕ್ಟರುಗಳು ಆಗ ಹೇಳಿದ್ದಂತೆ ಪಿಷ್ಟಪದಾರ್ಥಗಳ ಸೇವನೆಯನ್ನು ಕಡಿಮೆಮಾಡಿದ್ದೆ. ಈಗ ಕೌಡುತೆಗೆಯದ ಹಿಟ್ಟಿನಿಂದ ಮಾಡಿದ ಬ್ರೆಡ್ಡನ್ನು ಹೆಚ್ಚಾಗಿ ತಿನ್ನಲು ಪ್ರಾರಂಭಿಸಿದೆ. ಮೊದಮೊದಲಲ್ಲಿ ಇದು ಹಿತವಾಗಿದ್ದಂತಿತ್ತು. ಆದರೆ ಶೀಘ್ರದಲ್ಲೆ ಬ್ರೆಡ್ ಅಂದರೆ ವಾಕರಿಕೆ ಬರುವಂತಾಯಿತು. ನನ್ನ ಲೆಕ್ಕಾಚಾರ ತಪ್ಪಾಯಿತು.

ಮಧುಮೇಹರೋಗದಲ್ಲಿ ಇನ್‌ಸುಲಿನ್ನಿನ ಪಾತ್ರದ ವಿಷಯವಾಗಿ ಬಹಳ ವರ್ಷಗಳಿಂದ, ಬಹಳ ಕಡೆಗಳಲ್ಲಿ (ಬ್ರಿಸ್ಟಲ್, ಡಂಡೀ, ನ್ಯೂಕ್ಯಾಸೆಲ್ ಮುಂತಾದ ವಿಶ್ವವಿದ್ಯಾಲಯಗಳಲ್ಲಿ) ಪರಿಶೋಧನೆಗಳು ನಡೆಯುತ್ತಿವೆ. ಇವುಗಳಲ್ಲಿ ಒಂದು ಮೇದೋ

ಜೀರಕಾಂಗವನ್ನು ನಾಟಿಹಾಕಿದರೆ ಹೇಗೆ ಎಂಬುದು. ೧೯೭೯ರಲ್ಲಿ ಬ್ರಿಟನ್ನಿನಲ್ಲಿ ಮೊತ್ತ ಮೊದಲಾಗಿ ಈ ವಿಧಾನ ಕೇಂಬ್ರಿಡ್ಜಿನ ಅಡ್ಡೆನ್ ಬ್ರೂಕನ ಆಸ್ಪತ್ರೆಯಲ್ಲಿ ಪ್ರಾರಂಭವಾಯಿತು. ರೋಗವ್ಯಕ್ತಿ ಹೆಂಗಸು. ಅವಳೂ ನನ್ನಂತೆಯೇ ಭಿದುರ ರೀತಿಯ ಮಧುಮೇಹರೋಗಿ. ಜೊತೆಗೆ ಇದರ ಜಟಿಲತೆಯಾಗಿ ಅವಳಿಗೆ ಮೂತ್ರಪಿಂಡರೋಗವೂ ಪ್ರಾಪ್ತವಾಗಿತ್ತು. ಮೇದೋಜೀರಕಾಂಗದ ನಾಟಿಯಿಂದ ಮಾತ್ರ ಅವಳು ಬದುಕುವ ಸಾಧ್ಯತೆ ಇತ್ತು. ಮೇದೋಜೀರಕಾಂಗದ ನಾಟಿಯ ಜೊತೆಗೆ ಅವಳಿಗೆ ಮೂತ್ರಪಿಂಡ ನಾಟಿಯನ್ನೂ ಮಾಡಿದರು. ಅಂತಿಮವಾಗಿ ಅವಳು ಮಧುಮೇಹರೋಗವಿಮುಕ್ತಳಾಗಿ ಆಸ್ಪತ್ರೆಯಿಂದ ಬಿಡುಗಡೆ ಆದಳು. ೧೯೮೩ರಿಂದ ಮೇದೋಜೀರಕಾಂಗ ನಾಟಿಮಾಡಿದ ೧೭ ರೋಗಿಗಳ ಪೈಕಿ ಆರು ಜನರಲ್ಲಿ ಮಧುಮೇಹರೋಗ ಪೂರ್ಣವಾಗಿ ವಾಸಿ ಆಗಿದೆ.

ಅಮೇರಿಕದಲ್ಲಿ ಇಂಥ ಅಂಗನಾಟಿಯ ಬದಲು “ಕೃತಕ ಮೇದೋಜೀರಕಾಂಗ”ವನ್ನು ಅಳವಡಿಸುವುದು ಜನಪ್ರಿಯವಾಗಿದೆ. ವಾಸ್ತವವಾಗಿ ಇದು ನಿಧಾನವಾಗಿ ಸ್ವಲ್ಪಸ್ವಲ್ಪ ಇನ್‌ಸುಲಿನ್ನನ್ನು ದೇಹದ ಒಳಹೊಗಿಸುವ ಪಂಪ್ ಅಷ್ಟೆ. ಭಿದುರಮಧುಮೇಹ ರೋಗಿಗಳ ಮಹಾಪೀಡೆ ಆದ ರಕ್ತದ ಸಕ್ಕರೆಯ ಹಠಾತ್ ಕೊರತೆ ಆಧಿಕ್ಯಗಳನ್ನು ಈ “ಇನ್‌ಸುಲಿನ್ ಇನ್‌ಫ್ಯೂಸರ್” ಎಂದು ವೈಜ್ಞಾನಿಕ ಹೆಸರಿರುವ ಈ ಸಲಕರಣೆ ತಪ್ಪಿಸುತ್ತದೆ. ೧೯೮೪ರಲ್ಲಿ ನನಗೂ ಇಂಥ ಪಂಪನ್ನು ಅಳವಡಿಸಿದರು. ೧೩ ಸೆಂ.ಮೀ. ಉದ್ದ, ೯ ಸೆಂ.ಮೀ.ಅಗಲವಾಗಿ ಭಾರವಾಗಿದ್ದು ಒಡ್ಡೊಡ್ಡಾಗಿದ್ದ ಆಕಾರದ ಈ ಪಂಪಿನಲ್ಲಿ ಸಿರಿಂಜಿನಿಂದ ಇನ್‌ಸುಲಿನ್ನನ್ನು ಬಹುನಿಧಾನವಾಗಿ ನೂಕುತ್ತ ದೇಹದ ಒಳಹುಗಿಸುವುದಕ್ಕೆ ಒಂದು ಪುಟ್ಟ ಮೋಟಾರೂ, ಅದನ್ನು ಓಡಿಸುವುದಕ್ಕೆ ಒಂದು ಬ್ಯಾಟರಿಯೂ ಅಡಕವಾಗಿರುತ್ತವೆ. ನನ್ನ ಹೊಟ್ಟೆಯ ಮೇಲೋ ತೊಡೆಯ ಮೇಲೋ ತೋಳಿನ ಮೇಲೋ ಎಲ್ಲಿಯೋ ಇದರ ಸೂಜಿಯನ್ನು ಚುಚ್ಚಿಕೊಂಡು ಇಡೀ ಪಂಪನ್ನು ೨೪ ಗಂಟೆಯೂ ಅದೇ ಸ್ಥಳದಲ್ಲಿ ಇಟ್ಟುಕೊಂಡಿರಬೇಕಾಗಿತ್ತು. ಇವೆಲ್ಲ ನನಗೆ ಒಗ್ಗದೇ ಇದ್ದರೂ ಒಂದು ತಿಂಗಳು ಹಾಗೂ ಹೀಗೂ ಹೆಣಗಿದೆ. ಸ್ನಾನಮಾಡಬೇಕಾದರೆ, ಬಟ್ಟೆ ಬದಲಿಸಬೇಕಾದರೆ, ಪಂಪಿನ ಸಾಮಾನುಗಳನ್ನೆಲ್ಲ ಕಳಚಿ ಪುನಃ ಅದನ್ನು ಜೋಡಿಸಿ ಚುಚ್ಚಿಕೊಂಡು, ಸರಿಯಾಗಿದೆಯೋ ಎಂದು ನೋಡಿಕೊಂಡು ಪಂಪು ಹೊರಕ್ಕೆ ಕಾಣಿಸದಂತೆ ಮರೆಯಾಗಿ ಹುದುಗಿಸಕೊಳ್ಳಬೇಕಾಗಿತ್ತು. ಪ್ಲಾಸ್ಟರ್ ಹಾಕಿ ಮೈಗೆ ಅಂಟಿಸಿಕೊಂಡಿದ್ದುದು ಎಷ್ಟೋ ಸಲ ಬಿದ್ದುಹೋಗುತ್ತಿತ್ತು. ಇದೂ ಒಂದು “ಮೃಗ”ವಾಗಿ ನನಗೆ ಭಾಸವಾಗುತ್ತಿತ್ತು. ಸಣ್ಣ ಮೃಗ ಅಷ್ಟೆ. ಪಂಪು ಅಳವಡಿಸಲ್ಪಟ್ಟವರಲ್ಲಿ ಅರ್ಧ ಮಂದಿ ನನ್ನಂತೆಯೇ ಒಗ್ಗಿಕೊಳ್ಳಲಾರದವರಾಗಿದ್ದರೂ ಮಿಕ್ಕವರು ಅದರ ವಿಷಯದಲ್ಲಿ ಪ್ರಸನ್ನರಾಗಿಯೇ ಇರುತ್ತಾರೆ. ಸ್ತ್ರೀಯರಿಗಿಂತ ಪುರುಷರು ಅದನ್ನು ಹೆಚ್ಚಾಗಿ ಖಾಯಷುಮಾಡುತ್ತಾರೆ. ದಿನ ಪೂರ್ತ ಕೆಲಸಮಾಡುವ ಇನ್‌ಸುಲಿನ್‌ಇನ್‌ಫ್ಯೂಸರ್ ಇರುವುದು ಸುರಕ್ಷಿತವೆಂದೇ ಅವರ ಭಾವನೆ. ಅದರವಿಲಕ್ಷಣ ಆಕಾರ ಇತ್ಯಾದಿಗಳನ್ನು ಅವರು ಮನಸ್ಸಿಗೆ ತಂದುಕೊಳ್ಳುವುದಿಲ್ಲ. ಪಂಪನ್ನು ಒಗ್ಗಿಸಿಕೊಳ್ಳಲಾರದವರೂ ಅದು ರಕ್ತದ ಸಕ್ಕರೆ ಮಟ್ಟವನ್ನು ಸಮಸ್ಥಿತಿಯಲ್ಲಿಟ್ಟಿರುತ್ತದೆ ಎಂದು ಒಪ್ಪುತ್ತಾರೆ.

ಇನ್‌ಸುಲಿನ್ನನ್ನು ಬಾಯಿಮೂಲಕ ಸೇವಿಸಲಾಗುದುದು ಐನಾತಿ ದುರದೃಷ್ಟ. ಅದು ಪ್ರೋಟೀನ್ ವಸ್ತು ಆಗಿರುವುದರಿಂದ ಬಾಯಿ ಮೂಲಕ ಸೇರಿಸಿದ ಇನ್‌ಸುಲಿನ್ ಜೀರ್ಣನಾಳವ ರಸಗಳಿಂದ ನಾಶವಮಾಡಲ್ಪಡುತ್ತದೆ. ಇನ್‌ಜೆಕ್ಷನ್ ಮೂಲಕವೇ ಅದನ್ನು ಪ್ರಯೋಗಿಸಬೇಕಾಗಿರುವುದರ ಬದಲು ಬೇರೆ ಇನ್ನೇನಾದರೂ ಸುಲಭಸಾಧ್ಯ ಮಾರ್ಗ ವಿದೆಯೆ ಎಂದು ಯಾರಾದರೂ ಕಂಡುಹಿಡಿದರೆ ಎಷ್ಟು ಚೆನ್ನ.

ಮೇಲೆ ಹೇಳಿರುವ ವಿಷಯುಗಳನ್ನು ನಾನು ಲೇಖನಿ ಹಿಡಿದು ಮೇಜಿನ ಮುಂದೆ ಕೂತು ಬರೆಯುತ್ತಿದ್ದೇನೆ. ನನ್ನ ಮೈಮೇಲೆಲ್ಲ ಸೂಜಿ ಚುಚ್ಚಿದ ಗುರುತುಗಳಿವೆ. ನನ್ನ ರಕ್ತದಲ್ಲಿ ಸಕ್ಕರೆ ಅಧಿಕ ಮಟ್ಟದಲ್ಲಿದೆ. ನನ್ನ ಕಾಲ ಬೆರಳುಗಳು ಜೋವು ಹಿಡಿದಿವೆ. ಕೈಬೆರಳ ತುದಿಗಳು ಬಿಳಚಿಕೊಂಡಿವೆ. ಸುಸ್ತಿನಿಂದ ಮೈ ಭಾರವಾದಂತಿದೆ. ಮನಸ್ಸಿಗೆ ಯಾವಾಗಲೂ ಮಧ್ಯಾಹ್ನ ಮೂರು ಗಂಟೆಯಂತೆ ಭಾಸವಾಗುತ್ತದೆ. ಪ್ರತಿದಿನ 2–3 ಇನ್‌ಜೆಕ್ಷನ್‌ಗಳನ್ನು ತೆಗೆದುಕೊಳ್ಳುತ್ತೇನೆ. ಇದುವರೆಗೆ ೧೦,೦೦೦ ಕ್ಕೂ ಹೆಚ್ಚು ಸಾರಿ ಚುಚ್ಚಿಕೊಂಡಿರಬೇಕು. ಸಕ್ಕರೆ ಹಾಗೂ ಸಿಹಿ ತಿನಿಸುಗಳನ್ನು ನನ್ನ ಕೈಚೀಲದಲ್ಲಿಟ್ಟು ಕೊಂಡಿದ್ದು ಹೊರಗೆ ಹೋದಾಗ ಚೀಲವನ್ನು ಗಟ್ಟಿಯಾಗಿ ಹಿಡಿದಿರುತ್ತೇನೆ. ಹೆಚ್ಚು ಕಡಿಮೆ ವಾರಕ್ಕೊಂದುಬಾರಿ ಸಕ್ಕರೆ ಕೊರತೆ ಕಾಣಬರುತ್ತದೆ. ಅದು ಯಾವಾಗ ಎರಗೀತೋ ಎಂಬ ಹೆದರಿಕೆಯಿಂದ ತರಗುಟ್ಟುತ್ತೇನೆ. ಬಿರುಗಾಳಿಯಲ್ಲಿ ಸಿಕ್ಕಿಕೊಂಡ ಹಕ್ಕಿ ಒದ್ದಾಡುವಂತೆ. ವರ್ಷಗಳು ಉರುಳಿದಂತೆ ಬೇರೆ ಜಟಿಲತೆಗಳು ಉದ್ಭವಿಸುವುವೆಂದು ನನಗೆ ಗೊತ್ತು. ನನ್ನ ಮಧುಮೇಹ ರೋಗವನ್ನು ಮೊತ್ತಮೊದಲಾಗಿ ಪತ್ತೆಮಾಡಿದ ವೆಸ್ಟ್‌ಮಿನಿಸ್ಟರ್ ಆಸ್ಪತ್ರೆಯ ಡಾ. ಜೇಮ್ಸ್ ಆಗಲೇ ಎಚ್ಚರಿಸಿದ್ದ. ವಯಸ್ಸಾದಂತೆ ಸಾಮಾನ್ಯವಾಗಿ ದೇಹದ ಯಾವ ಯಾವ ಅಂಗಗಳು ಹಾಗೂ ಕ್ರಿಯೆಗಳು ಶಿಥಿಲಗೊಳ್ಳು ತ್ತವೋ ಅವು–ಹೃದಯ, ರಕ್ತಪರಿಚಲನೆ, ಮೂತ್ರಪಿಂಡಗಳು, ಕಣ್ಣುಗಳು ಇತ್ಯಾದಿ ಮಧುಮೇಹ ರೋಗಿಯಲ್ಲಿ ಶಿಥಿಲಗೊಳ್ಳುವ ಸಂಭವ ಇನ್ನೂ ಹೆಚ್ಚಾಗಿಯೇ ಇರುವುದಲ್ಲದೆ ಮುಂದಾಗಿಯೇ ಆಗುತ್ತದೆ.

ಆದರೂ ನಾನು ಅದೃಷ್ಟವಂತೆಯೇ ಸರಿ. ಏಕೆಂದರೆ ರೋಗ ನನ್ನನ್ನು ಚಿರ ದುಃಖಿಯಾಗಿ ಮಾಡಿಲ್ಲ. ಸಂತೋಷವಾಗಿಯೇ ಇರುವುದು ನನ್ನ ಹುಟ್ಟು ಸ್ವಭಾವ. ಮಧುಮೇಹರೋಗ, "ಮೃಗದ" ಕಾಟ ಇರುವ ಈಗಲೂ ನಾನು ಅನೇಕ ವೇಳೆ ಸಂತೋಷವಾಗಿಯೇ ಇರುತ್ತೇನೆ. ಸೌಖ್ಯದಿನಗಳಲ್ಲಿ ರಕ್ತದ ಸಕ್ಕರೆಯನ್ನು ತೊಂದರೆ ಇಲ್ಲದ ರೀತಿಯಲ್ಲಿ ವಿಲೆ ಮಾಡುತ್ತೇನೆಂಬುದು ನನಗೆ ಸಮಾಧಾನದ ವಿಷಯ. "ಮೃಗದ" ಕಾಟ ಪ್ರಾರಂಭವಾಗುತ್ತದೆಂದು ಹೆದರಿ ಈಗ ಪರದಾಡುವುದಿಲ್ಲ. ಹಾಗೆ ಹೆದರಿಕೆ ಉಂಟಾದರೂ ಅರ್ಧಗಂಟೆಗೊಮ್ಮೆ ನಾನು ಆರೋಗ್ಯವಾಗಿಯೇ ಇದ್ದೇನೆಂದು ಹೇಳಿ ಕೊಳ್ಳುತ್ತ ಧೈರ್ಯ ತೆಗೆದುಕೊಳ್ಳುತ್ತೇನೆ.

ಮಧುಮೇಹ ರೋಗ ನನಗೆ ನೀಡಿರುವುದು ನನ್ನಿಂದ ಅದು ವಸೂಲು ಮಾಡಿರು ವುದಕ್ಕಿಂತ ಹೆಚ್ಚಾಗಿಯೇ ಇದೆ. ಸಕ್ಕರೆ ಕೊರತೆ ಪ್ರಸಂಗಗಳನೇಕವು ಜನರ ಒಳ್ಳೆ ಸ್ವಭಾವವನ್ನು ನನಗೆ ತೋರಿಸಿಕೊಟ್ಟಿವೆ. ಇಲ್ಲದಿದ್ದರೆ ನಾನು ಅದನ್ನು ಕಾಣದೇ ಹೋಗುತ್ತಿದ್ದೆ. ಎಲ್ಲ ವಿಷಯುಗಳಲ್ಲೂ ಈಗ ನಾನು ಹೆಚ್ಚಾಗಿ ಹೊಂದಿಕೊಂಡು ನಡೆದು

ಕೊಳ್ಳುತ್ತೇನೆ. ಅನುಕಂಪ, ತಾಳ್ಮೆ, ಅರ್ಥಮಾಡಿಕೊಳ್ಳುವಿಕೆ ಇವನ್ನೆಲ್ಲ ರೂಢಿಸಿಕೊಂಡಿದ್ದೇನೆ. ಭಾರತದಿಂದ ಹಿಂತಿರುಗಿ ಬಂದಾಗ ಅಲ್ಲಿಯ ದಾರುಣ ಬಡತನದ ನೆನಪನ್ನು ತಡೆಯುಲು ಅಸಾಧ್ಯವಾಗಿತ್ತು. ಕೆಲವು ಕಡೆಗಳಲ್ಲಿ ಸಮೃದ್ಧಿ, ಹಲ ಜನರ ಲೋಲುಪತೆ, ಮಿಕ್ಕವರ ಆತ್ಮ ವ ರ್ಚಕ ಇವುಗಳಿಂದಾಗಿಯೇ ಆ ಬಡತನ ಪ್ರಾಪ್ತವಾಗಿದೆ ಎಂದು ದೂಷಿಸುತ್ತಿದ್ದೆ. ಈಗಲೂ ಹಾಗೆ ಮಾಡುವುದಕ್ಕೆ ಅಳುಕುತ್ತದೆ. ಆ ಕಾರಣಗಳ ಹಿನ್ನೆಲೆಯಾಗಿ ಏನಿದೆಯೋ ಅವುಗಳಿಂದಾಗಿ ಜನ ಹೇಗೆ ಬದಲಾಗಿದ್ದಾರೋ ಯಾರಿಗೆ ಗೊತ್ತು ? ಪ್ರತಿದಿನವೂ ಎದ್ದ ನಂತರ ನಾನು ಬದುಕಿಯೇ ಇರುವುದು ಆಶ್ಚರ್ಯವೆನ್ನಿಸುತ್ತೆ. ಏಕೆ ಬದುಕಿದ್ದೇನೆ ಎಂದು ಲಘುವಾಗಿ ಕೇಳಿಕೊಳ್ಳುವುದೂ ಉಂಟು—ನನಗೆ ಕೆಂದು ಬಣ್ಣದ ಕೂದಲು ಇರುವುದೇಕೆ? ಮುಖದಲ್ಲಿ ಕಲೆಗಳಿರುವುದೇಕೆ ? ಸೇಬು ಶ್ಯಾಂಪೇನ್ ಮಧ್ಯ ಇವು ಇಷ್ಟವಾಗಿರುವುದು ಏಕೆ, ಎಂಬುವನ್ನು ಕೇಳಿಕೊಳ್ಳುವಂತೆಯೇ ವಾಸ್ತವವಾಗಿ ನಾನು ಬದುಕಿರುವುದು ಏಕೆ ಎಂದು ಶ್ರದ್ಧಾಯುಕ್ತವಾಗಿ ವಿಚಾರಿಸಲು ನನಗೆ ಇಷ್ಟವಿಲ್ಲ. ಜೊತೆಗೆ ನನಗೆ ಮಧುಮೇಹ ರೋಗ ಆಗಿರುವುದು ಏಕೆ ಎಂದೂ ನಿಜವಾಗಿ ಕೇಳಿಕೊಂಡಿಲ್ಲ. ನಾನು ಆ ಬಗೆಯ ರೋಗಿ ಆಗಿರಬೇಕೆಂಬುದು ದೈವೇಚ್ಛೆ ಆಗಿದ್ದರೆ ಆ ಪ್ರಶ್ನೆಯ ಬಗ್ಗೆ ಹಂಬಲಿಸುವುದು ಕಾಲದಂಡ. ದೇವರು ಇಷ್ಟು ಸುಲಭವಾಗಿ ಅರ್ಥವಾಗುವಂತಿದ್ದರೆ ಆ ದೇವರಲ್ಲಿ ನಂಬಿಕೆ ಭಕ್ತಿಗಳು ಕಡಿಮೆ ಆಗುವುದೂ ಸಾಧ್ಯ. ಹಾಗೇ ಮುಂದುವರಿದ ನಾನು ದೇವರಿಗೂ ಬುದ್ಧಿವಾದ ಹೇಳಬಯಸಬಹುದು....ಅದೆಲ್ಲ ನನಗೆ ಇಷ್ಟವಿಲ್ಲ. ದೇವರಲ್ಲಿ ನಂಬಿಕೆ ಕೆಡಿಸಿಕೊಳ್ಳಲಾರೆ.

[ಟೆರೀಸ ಮ್ಯಾಕ್‌ಲೀನ್ ಈ ಲೇಖನವನ್ನು ೧೯೭೮ರ ವಸಂತಕಾಲದಲ್ಲಿ ಬರೆದು ಮುಗಿಸಿದಳು. ಸ್ವಲ್ಪ ಕಾಲಾನಂತರವೇ ಮಾರ್ಟಿನ್ ಬ್ರೆಟ್ ಎಂಬಾತನನ್ನು ಮದುವೆ ಆಗಿ ಕೇಂಬ್ರಿಡ್ಜ್‌ಗೆ ತೆರಳಿ ಅಲ್ಲಿಯೇ ವಾಸಿಸುತ್ತಿದ್ದಾಳೆ. ೧೯೮೦ರ ಜನವರಿಯಲ್ಲಿ ಟೆರೀಸಳಿಗೆ ಗಂಡುಮಗು ಆಯಿತು. ಮಗುವಿಗೆ ಪೀಟರ್ ಎಂದು ನಾಮಕರಣ ಮಾಡಿದ್ದಾರೆ. —ಡೈಜೆಸ್ಟಿನ ಸಂಪಾದಕ]

ಅನು : ಎಸ್. ಶಾಮರಾವ್

ಶೀಲ ಮನುಷ್ಯನ ಬಂಡವಾಳ ಹೇಗೋ ಹಾಗೆಯೇ ಅನು ಆತನ ಅಚ್ಚಳಿಯದ ಸ್ಮಾರಕ.

ಗಾಂಧೀಜಿ

ರಸ್ತೆಮೇಲೆ ಸಾವು

ರಾಜ್ ಚೆಂಗಪ್ಪ

ವಾಹನಗಳ ಸಂಖ್ಯೆ ಒಂದೇ ಸಮನೆ ಹೆಚ್ಚುತ್ತಿರುವ ನಮ್ಮ ದೇಶದಲ್ಲಿ ಪ್ರತಿದಿನವೆಂಬಂತೆ ರಸ್ತೆ ಅಪಘಾತಗಳ ಪರಿಣಾಮವಾಗಿ ಅಪಾರ ಸಾವುನೋವುಗಳು ಉಂಟಾಗುತ್ತಿರುವುದು ಎದೆಗೆಡಿಸುವ ಕಠೋರ ವಾಸ್ತವತೆ. ೧೯೮೬ ನೆಯ ಇಸವಿಯೊಂದರಲ್ಲಿಯೇ ಸುಮಾರು ೪೦,೦೦೦ ಮಂದಿ ರಸ್ತೆಗಳ ಮೇಲೆ ಕೊನೆಯುಸಿರೆಳೆದಿದ್ದಾರೆ; ಒಂದೂ ಮುಕ್ಕಾಲು ಲಕ್ಷದಷ್ಟು ಜನರು ಗಾಯಗೊಂಡಿದ್ದಾರೆ. ೧೯೮೦ ರ ಅಂಕಿಸಂಖ್ಯೆಗಳೊಂದಿಗೆ ಹೋಲಿಸಿದರೆ, ಅನಂತರದ ಆರು ವರ್ಷಗಳಲ್ಲಿ, ಮಾರಕ ಅಪಘಾತಗಳಿಗೀಡಾಗಿ ದುರಂತವನ್ನಪ್ಪಿದ ನತದೃಷ್ಟರ ಸಂಖ್ಯೆ ಶೇ. ೬೦ ರಷ್ಟು ಏರಿರುವುದು ತಿಳಿದುಬರುತ್ತದೆ. ಗಾಯಗೊಳ್ಳುವವರಲ್ಲಿ ಶೇ. ೪೦ ಮಂದಿ ತೀವ್ರವಾಗಿಯೇ ಗಾಯಗೊಳ್ಳುತ್ತಾರೆ. ತಲೆಬುರುಡೆ ಸೀಳುವುದರಿಂದ ಹಿಡಿದು, ದೇಹದ ವಿವಿಧ ಅಂಗಾಂಗಗಳನ್ನು ಕಳೆದುಕೊಳ್ಳುವುದರ ವರೆಗಿನ ಗಂಭೀರ ಸನ್ನಿವೇಶಗಳ ಫಲವಾಗಿ, ಈ ಜನರು ಮಾನಸಿಕ ಮತ್ತು/ಅಥವಾ ದೈಹಿಕ ನ್ಯೂನತೆಗಳಿಗೆ ಬಲಿಯಾಗಿ ಸಾಯುವತನಕ ನರಳುವಂತಾಗುವುದು ಎಷ್ಟು ದುರದೃಷ್ಟಕರ!

“ಹಿಂದೆಂದೂ ಕಂಡರಿಯದಂಥ ರೀತಿಯಲ್ಲಿ ಇಂದು ರಸ್ತೆ ಅಪಘಾತಗಳು ಸಂಭವಿಸುತ್ತಿವೆ; ಜೀವಹಾನಿ ಉಂಟಾಗುತ್ತಿದೆ” ಎನ್ನುತ್ತಾರೆ ನವದೆಹಲಿಯ ಕೇಂದ್ರ ರಸ್ತೆ ಸಂಶೋಧನ ಸಂಸ್ಥೆಯ ಪರಿಸರ ಹಾಗೂ ರಸ್ತೆ ಸಂಚಾರ ಸುರಕ್ಷತಾ ವಿಭಾಗದ ಮುಖ್ಯಸ್ಥರಾಗಿರುವ ಡಾ. ಎಸ್. ಎಮ್. ಸರೀನ್. ಭಾರತದ ಪ್ರಮಾಣದಷ್ಟು ಅತ್ಯಧಿಕ ಸಂಖ್ಯೆಯ ಅಪಘಾತ ನಡೆಯುವ ದೇಶ ಇಡೀ ಪ್ರಪಂಚದಲ್ಲಿ ಇನ್ನೊಂದಿಲ್ಲ. ಪ್ರತಿವರ್ಷ ಪ್ರತಿ ನೂರು ವಾಹನಗಳಲ್ಲಿ

೧೯೮೮ ನೆಯ ಜುಲೈ ತಿಂಗಳ ‘ರೀಡರ್ಸ್ ಡೈಜೆಸ್ಟ್’ ಸಂಚಿಕೆಯಲ್ಲಿ ಪ್ರಕಟವಾದ ರಾಜ್ ಚೆಂಗಪ್ಪ ಅವರ ‘ಡೆತ್ ಆನ್ ಅವರ್ ರೋಡ್ಸ್’ ಎಂಬ ಲೇಖನದ ಸಂಕ್ಷಿಪ್ತ ಅನುವಾದ.

ಮೂರು, ಅಪಘಾತಕ್ಕೆ ಈಡಾಗುತ್ತಿವೆ. ಗ್ರೇಟ್ ಬ್ರಿಟನ್ ಹಾಗೂ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಅಪಘಾತಕ್ಕೀಡಾಗುವ ವಾಹನಗಳ ಸಂಖ್ಯೆ ನೂರಕ್ಕೆ ಸುಮಾರು ಒಂದು ಮಾತ್ರ. ಯೂರೋಪಿನ ಅನೇಕ ರಾಷ್ಟ್ರಗಳಲ್ಲಿ ರಸ್ತೆ ಅಪಘಾತಕ್ಕೆ ಒಳಗಾಗುವವರ ಸಂಖ್ಯೆಯು ೧೬ ರಷ್ಟು ಜನರು ಭಾರತದಲ್ಲಿ ಬಲಿಯಾಗುತ್ತಾರೆ.

ಈ ದುರ್ಮರಣಗಳ ಮೆರವಣಿಗೆಗೆ ಕಾರಣವೇನು? ಕಾರಣಗಳು ಹಲವು; ಮೊದಲನೆಯದು, ವಾಹನಗಳ ಉತ್ಪಾದನ ಸ್ಫೋಟ. ಕಳೆದೊಂದು ದಶಕದಲ್ಲಿ ಭಾರತದಲ್ಲಿ ವಾಹನಗಳ ಸಂಖ್ಯೆ ನಾಲ್ಕರಷ್ಟು ಹೆಚ್ಚಾಗಿದೆ. ಈಗ ಸುಮಾರು ಹತ್ತು ಮಿಲಿಯ ವಾಹನಗಳು ಭಾರತದ ರಸ್ತೆಗಳಲ್ಲಿ ಓಡಾಡುತ್ತಿವೆ. ಇವುಗಳಲ್ಲಿ ದ್ವಿಚಕ್ರ ವಾಹನಗಳ ಸಂಖ್ಯೆಯೇ ಆರು ಮಿಲಿಯ. ವಿದೇಶೀ ಸಹಯೋಗದೊಂದಿಗೆ ಕಾರುಗಳನ್ನೂ ವಿವಿಧ ಶ್ರೇಣಿಯ ದ್ವಿಚಕ್ರವಾಹನಗಳನ್ನೂ ಉತ್ಪಾದಿಸುವ ಸಂಸ್ಥೆಗಳಿಗೆ ಸರ್ಕಾರ ಉತ್ತೇಜನ ನೀಡುತ್ತಿರುವುದರಿಂದ ಮಾರುತಿಯಂಥ ಅತಿವೇಗದ ಚಿಕ್ಕ ಕಾರುಗಳು ಮತ್ತು ಮೊಪೆಡ್ ಹಾಗೂ ಸ್ಕೂಟರ್‌ಗಳು ಅಧಿಕಾಧಿಕ ಸಂಖ್ಯೆಯಲ್ಲಿ ಮಾರುಕಟ್ಟೆಗೆ ಬರುತ್ತಿವೆ. ಪರಿಣಾಮವಾಗಿ ಅಪಾಯಸಂಭವ ಇನ್ನಷ್ಟು ಹೆಚ್ಚುತ್ತಿದೆ. ಈ ಹೊಸ ವಾಹನಗಳ ವೇಗವನ್ನು ಬೇಗ ಹೆಚ್ಚಿಸಲು ಹಾಗೂ ತತ್‌ಕ್ಷಣ ಬ್ರೇಕ್ ಹಾಕಿ ನಿಲ್ಲಿಸಲು ಸುಲಭ ಸಾಧ್ಯವಾದ್ದರಿಂದ ಸ್ವಾಭಾವಿಕವಾಗಿಯೇ ವೇಗಸಂಚಾರಕ್ಕೆ ಪ್ರೇರಣೆ ದೊರೆತಿದೆ.

೧೯೮೦ ಮತ್ತು ೧೯೮೫ರ ಅಂಕಿ ಸಂಖ್ಯೆಗಳನ್ನು ಹೋಲಿಸುವಾಗ, ಪ್ರತಿ ಸಾವಿರ ವಾಹನಗಳಲ್ಲಿ, ಅಪಘಾತಕ್ಕೀಡಾಗುವ ವಾಹನಗಳ ಸಂಖ್ಯೆ ೩೪ ರಿಂದ ೨೩ಕ್ಕೆ ಇಳಿದಿರುವುದು ತಿಳಿದುಬರುವುದಾದರೂ, ಪ್ರಪಂಚದ ಬೇರಾವ ದೇಶದಲ್ಲಿಯೂ ವಾಹನಗಳ ಉತ್ಪಾದನ ಪ್ರಮಾಣಕ್ಕೆ ಹೊಂದಿಕೊಳ್ಳುವಂತೆ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಾ ಇಲ್ಲ. ವಾಸ್ತವವಾಗಿ ಹೇಳುವುದಾದರೆ, ಅಭಿವೃದ್ಧ ರಾಷ್ಟ್ರಗಳಲ್ಲಿ ಮತ್ತು ಮೂರನೆಯ ಜಗತ್ತಿನ ದೇಶಗಳಲ್ಲಿ ಅಪಘಾತಗಳ ಸಂಖ್ಯೆ ಕಡಮೆಯಾಗುತ್ತ ಬಂದಿದೆ. ಆದರೆ ನಮ್ಮ ಭಾರತದಲ್ಲಿ?

ಹತ್ತಿರ ಹತ್ತಿರ ಮೂರನೆಯ ಒಂದರಷ್ಟು ಅಪಘಾತಗಳು ನಡೆಯುವುದು ಭಾರತದ ಹನ್ನೆರಡು ಮುಖ್ಯ ರಾಜಧಾನಿ ನಗರಗಳಲ್ಲಿಯೇ. ಅಗಲವೂ ವಿಶಾಲವೂ ಆದ ರಸ್ತೆಗಳಿರುವ ದೆಹಲಿಯಲ್ಲಿ ಪ್ರತಿದಿನ ಏನಿಲ್ಲವೆಂದರೂ ನಾಲ್ಕು ಮಂದಿ ಅಪಘಾತಗಳಲ್ಲಿ ಸಾವನ್ನಪ್ಪುತ್ತಾರೆ, ೧೮ ಮಂದಿ ಗಾಯಗೊಳ್ಳುತ್ತಾರೆ. ಮುಂಬಯಿಯಲ್ಲಿ ಪ್ರತಿ ೨೦ ನಿಮಿಷಗಳಿಗೊಂದರಂತೆ ಅಪಘಾತ ನಡೆದರೆ, ಮದ್ರಾಸು–ಬೆಂಗಳೂರುಗಳಲ್ಲಿ ವರ್ಷಕ್ಕೆ ಸುಮಾರು ೪೦೦ ರಸ್ತೆ ಸಾವುಗಳು ಸಂಭವಿಸುವುದು ವರದಿಯಾಗಿದೆ.

ಕೆಲವು ಚಿಕ್ಕ ನಗರಗಳೂ ಯಮರಾಯನಿಗೆ ತಮ್ಮ ಕಾಣಿಕೆ ನೀಡುತ್ತ ಬಂದಿವೆ. ಉದಾಹರಣೆಗೆ, ಪೂನಾದಲ್ಲಿ ಪ್ರತಿವರ್ಷ ೨೫೦ಕ್ಕಿಂತಲೂ ಹೆಚ್ಚು ಜನರು ಅಪಘಾತಗಳಲ್ಲಿ ಪ್ರಾಣ ಕಳೆದುಕೊಳ್ಳುತ್ತಾರೆ. ೧೯೮೧–೮೫ರ ನಡುವಣ ಅವಧಿಯಲ್ಲಿ ರಸ್ತೆ ಸಾವುಗಳ ಸಂಖ್ಯೆ ನಾಗಪುರದಲ್ಲಿ ದ್ವಿಗುಣವಾಗಿದೆ, ಲಖ್ನೋದಲ್ಲಿ ತ್ರಿಗುಣವಾಗಿದೆ.

ನಗರಗಳಂತೆ ರಾಷ್ಟ್ರೀಯ ಹೆದ್ದಾರಿಗಳೂ ಮರಣ ಕ್ಷೇತ್ರಗಳಾಗಿವೆ. ಹೆದ್ದಾರಿಗಳಲ್ಲಿ ಅಪಘಾತಕ್ಕೆ ಒಳಗಾಗುವವರ ಪರಿಸ್ಥಿತಿ ಇನ್ನೂ ಚಿಂತಾಜನಕ. ಸೂಕ್ತ ವೈದ್ಯಕೀಯ

ನೆರವಾಗಲೀ ಸಕಾಲಿಕ ಪೋಲೀಸ್ ಸಹಾಯವಾಗಲೀ ಅವರಿಗೆ ತತ್‌ಕ್ಷಣ ಸಿಗುವುದಿಲ್ಲ. ನಗರಗಳಲ್ಲಿ ಕೂಡ ರಸ್ತೆಸಾವಿಗೀಡಾಗುವವರಲ್ಲಿ ಶೇ. ೪೦ ಮಂದಿ ಪಾದಚಾರಿಗಳೇ. ಇವರಲ್ಲಿ ಶೇ. ೮೨ರಷ್ಟು ಮಂದಿ ಕೂಡುಕಾದಿಗಳಲ್ಲಲ್ಲ, ಬದಲಿಗೆ ನೇರಮಾರ್ಗಗಳಲ್ಲಿಯೇ ಅಪಘಾತಕ್ಕೆ ಬಲಿಯಾಗುತ್ತಾರೆ. ದೆಹಲಿಯ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ' ನಡೆಸಿದ ಸರ್ವೇಕ್ಷೆಯೊಂದರಿಂದ ಈ ವಿಷಯ ತಿಳಿದುಬಂದಿದೆ. ಶೇ. ೨೧ರಷ್ಟು ಜನರಂತೂ ರಸ್ತೆದಾಟುವ ಸ್ಥಳಗಳಲ್ಲಿಯೇ ದುರಂತಕ್ಕೆ ಬಲಿಯಾಗುತ್ತಾರೆ.

ಪಾದಚಾರಿಗಳನ್ನು ಬಿಟ್ಟರೆ, ಹೆಚ್ಚು ಸಂಖ್ಯೆಯಲ್ಲಿ ರಸ್ತೆಸಾವಿಗೆ ಬಲಿಯಾಗುವವರು ದ್ವಿಚಕ್ರವಾಹನಗಳ ಚಾಲಕರೇ. ಕಾರ್ ಡ್ರೈವರ್ ಹಾಗೂ ದ್ವಿಚಕ್ರವಾಹನಗಳ ಚಾಲಕರ ರಸ್ತೆ ಅಪಮೃತ್ಯು ಪ್ರಮಾಣ ಒಂದಕ್ಕೆ ಐದು. ರಾಜಧಾನಿ ನಗರಗಳಲ್ಲಿ ರಸ್ತೆ ಸಾವಿಗೆ ಈಡಾಗುವ ಬಡಪಾಯಿಗಳಲ್ಲಿ ಶೇ. ೨೫ ಮಂದಿ ದ್ವಿಚಕ್ರವಾಹನ ಚಾಲಕರು. ಬಸ್ಸುಗಳು ಕೂಡ ನಗರಗಳಲ್ಲಿ ಮಹಾಹಂತಕರೆನಿಸಿವೆ. ಮದ್ರಾಸಿನ ಪಲ್ಲವನ್ ಸಾರಿಗೆ ಸಂಸ್ಥೆಗೆ ಸೇರಿದ ಬಸ್ಸುಗಳ ಅಪಘಾತದಲ್ಲಿ ಎಷ್ಟು ಜನರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ ಎಂದರೆ 'ಪಲ್ಲವನ್ ಕೊಲ್ಲವನ್' (ಕೊಲೆಗಾರ ಪಲ್ಲವನ್) ಎಂಬ ಮಾತೇ ಅಲ್ಲಿ ಬಳಕೆಗೆ ಬಂದಿದೆ.

ಇಷ್ಟೊಂದು ಅಪಘಾತಗಳಿಗೆ ಕಾರಣವಾದರೂ ಏನು? ದುರ್ನಡತೆಯ ಚಾಲಕರೂ ನಿಕೃಷ್ಟ ವಾಹನಗಳು, ಚೆನ್ನಾಗಿಲ್ಲದ ರಸ್ತೆಗಳು--ಎನ್ನುತ್ತದೆ ಸಾರಿಗೆ ಇಲಾಖೆ. ಅರ್ಧದಷ್ಟು ಅಪಘಾತಗಳಿಗೆ, ಚಾಲಕರಿಗೆ ಸರಿಯಾಗಿ ವಾಹನಗಳನ್ನು ನಡೆಸುವುದು ಹೇಗೆಂದು ತಿಳಿಯದೆ ಇರುವುದೇ ಕಾರಣ ಎಂಬುದನ್ನು ಅಧ್ಯಯನಗಳು ತೋರಿಸಿವೆ. ಕೇಂದ್ರ ರಸ್ತೆ ಸಂಶೋಧನ ಸಂಸ್ಥೆಯವರು ೧,೧೫೨ ಜನ ಚಾಲಕರನ್ನು ಕುರಿತಂತೆ ನಡೆಸಿದ ಒಂದು ಸರ್ವೇಕ್ಷಣೆಯಿಂದ, ಡ್ರೈವಿಂಗ್ ಲೈಸೆನ್ಸ್ ಹೊಂದಿದವರಲ್ಲಿ ಶೇ. ೫೦ರಷ್ಟು ಮಂದಿಗೆ ಸಂಚಾರ ನಿಯಮಗಳೇ ಗೊತ್ತಿಲ್ಲದಿರುವುದು ತಿಳಿದುಬಂದಿದೆ. ಶೇ. ೨೦ ಮಂದಿಗೆ ಮಾತ್ರ, ಓವರ್‌ಟೇಕ್ ಮಾಡುವ ಸರಿಯಾದ ಕ್ರಮ ತಿಳಿದಿತ್ತು; ಮೂರನೆಯ ಎರಡರಷ್ಟು ಚಾಲಕರಿಗೆ ರಸ್ತೆ ಸಂಕೇತಗಳ ಬಗ್ಗೆ ಏನೇನೂ ತಿಳಿದಿರಲಿಲ್ಲ.

ಎಲ್ಲೆಡೆಯಲ್ಲೂ ಡ್ರೈವಿಂಗ್ ಪರೀಕ್ಷೆಗಳನ್ನು ಅವಸರದಲ್ಲಿ ಮಾಡಲಾಗುತ್ತಿದೆ. ಲೈಸೆನ್ಸ್ ಕೊಡುವ ವ್ಯವಸ್ಥೆಯೇ ಭ್ರಷ್ಟಾಚಾರದಿಂದ ಕೂಡಿದೆ. ಮುಂಬಯಿಯ ಪ್ರಾದೇಶಿಕ ಸಾರಿಗೆ ಕಛೇರಿಯ ಆವರಣದಲ್ಲಿ ಕಾಣಸಿಗುವ ದಳ್ಳಾಳಿಗಳು ಕೆಲವೇ ನೂರು ರೂಪಾಯಿಗಳನ್ನು ವ್ಯಯಿಸಿ, ಯಾರಿಗೆ ಬೇಕಾದರೂ ಡ್ರೈವಿಂಗ್ ಲೈಸೆನ್ಸ್ ಕೊಡಿಸುವಲ್ಲಿ ಯಶಸ್ವಿಯಾಗುತ್ತಿದ್ದಾರೆ, ಮುಗ್ಧರ ಸುಲಿಗೆ ಮಾಡುತ್ತಿದ್ದಾರೆ.

ವಾಹನಗಳ ಅರ್ಹತಾ ಪರೀಕ್ಷೆಗಳೂ ನೆಪಮಾತ್ರಕ್ಕೆ ನಡೆಯುತ್ತಿವೆ. ಅನೇಕ ರಾಷ್ಟ್ರಗಳಲ್ಲಿ ಪ್ರತಿವರ್ಷವೂ ವಾಹನಗಳ ಅರ್ಹತೆ ಪರೀಕ್ಷೆ ನಡೆಸಬೇಕೆಂಬ ಕಾನೂನಿದೆ. ಆದರೆ ಭಾರತದಲ್ಲಿ ಖಾಸಗಿ ವಾಹನಗಳನ್ನು, ಅವು ೧೫ ವರ್ಷ ಓಡಿದನಂತರವೇ ಮತ್ತೆ ಪರೀಕ್ಷಿಸಲಾಗುತ್ತಿದೆ. ಟ್ರಕ್‌ಗಳನ್ನು ಪ್ರತಿವರ್ಷ ಪರೀಕ್ಷಿಸಬೇಕೆಂದಿದ್ದರೂ, ಇವುಗಳ ಅರ್ಹತೆಯನ್ನು ಸರಿಯಾಗಿ ಪರೀಕ್ಷಿಸಲು ಅಗತ್ಯವಾಗಿರುವ ಉಪಕರಣಗಳೇ ನಮ್ಮಲ್ಲಿಲ್ಲ. ಅಷ್ಟೇ ಅಲ್ಲ, ನಿಪುಣ ಪರೀಕ್ಷಕರ ಸಂಖ್ಯೆಯೂ ಕಡಿಮೆ. ಒಬ್ಬನೇ ಒಬ್ಬ ವಾಹನ

ಪರೀಕ್ಷಕನು, ಹೊಸ ಡ್ರೈವರನ್ನು ಪರೀಕ್ಷಿಸುವುದು, ವಾಹನಗಳಿಗೆ ಅರ್ಹತಾಪತ್ರ ನೀಡುವುದು—ಇವುಗಳಿಗೆ ಸಂಬಂಧಿಸಿದಂತೆ ಪ್ರತಿದಿನ ಸುಮಾರು ೫೦೦ ವ್ಯವಹಾರ ಗಳನ್ನು ನಿಭಾಯಿಸಬೇಕಾದ ಅನಿವಾರ್ಯ ಪರಿಸ್ಥಿತಿಯಿದೆ.

ಸಾರಿಗೆ ವಾಹನಗಳ ಚಾಲಕರಿಗೆ ಅಗತ್ಯವಾಗಿರುವ ವೈದ್ಯಕೀಯ ಪರೀಕ್ಷೆಗಳನ್ನು ನಡೆಸುವ ವಿಚಾರದಲ್ಲಿಯೂ ಉದಾಸೀನ ಪ್ರವೃತ್ತಿಯಿದೆ. ತಿರುವನಂತಪುರದ ರಾಷ್ಟ್ರೀಯ ಸಾರಿಗೆ ಯೋಜನೆ ಮತ್ತು ಸಂಶೋಧನ ಸಂಸ್ಥೆ ಈಚೆಗೆ ಕ್ವಿಲಾನಿನಲ್ಲಿ ೧೬೩ ಟ್ರಕ್ ಚಾಲಕರನ್ನು ಪರೀಕ್ಷಿಸಿದಾಗ, ಅವರಲ್ಲಿ ಶೇ. ೯೦ ಮಂದಿಗೆ ದೃಷ್ಟಿದೋಷವಿದ್ದುದು ತಿಳಿದುಬಂದಿದೆ.

ನಮ್ಮಲ್ಲಿ 'ಟ್ರ್ಯಾಫಿಕ್ ಇಂಜನಿಯರಿಂಗ್' ಇನ್ನೂ ಸಾಕಷ್ಟು ಸುಧಾರಿಸಿಲ್ಲ ದಿರುವುದು ಅಪಘಾತಗಳಿಗೆ ಇನ್ನೊಂದು ಮುಖ್ಯ ಕಾರಣ. ಮುಂಬಯಿ ಮತ್ತಿತರ ಮುಖ್ಯ ರಾಜಧಾನಿ ನಗರಗಳಲ್ಲಿ 'ಟ್ರ್ಯಾಫಿಕ್ ಇಂಜನಿಯರಿಂಗ್' ವಿಭಾಗಗಳಿ ದ್ದರೂ ಅವುಗಳ ಶಿಫಾರಸ್‌ಗಳನ್ವಯ ಯೋಜನಾ ಕಾರ್ಯಚಟುವಟಿಕೆಗಳು ನಡೆಯು ತ್ತಿಲ್ಲ.

ಬೆಂಗಳೂರಿನ ಟ್ರ್ಯಾಫಿಕ್ ಪೋಲೀಸ್ ವಿಭಾಗದ ಮುಖ್ಯಸ್ಥ ಅಜಯ್ ಕುಮಾರ್ ಸಿಂಗ್ ಅವರ ಅಭಿಪ್ರಾಯದಂತೆ, "ಎಷ್ಟೋ ಸಲ ಬಸ್‌ಸ್ಟಾಪ್‌ಗಳೂ ಅಂಗಡಿಮುಂಗಟ್ಟುಗಳೂ ಇತರ ಕಟ್ಟಡಗಳೂ ಅಲ್ಲಲ್ಲಿ ತಲೆಯೆತ್ತುವುದು ನಮಗೆ ಮೊದಲು ತಿಳಿಯುವುದೇ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ಸಮರ್ಪಕ ಸಂಚಾರ ನಿಯಂತ್ರಣ ವ್ಯವಸ್ಥೆಯಾದರೂ ಹೇಗೆ ಸಾಧ್ಯ?"

ಟ್ರ್ಯಾಫಿಕ್ ಪೋಲೀಸರ ಸಂಖ್ಯೆಯನ್ನು ಕೂಡ, ನಮ್ಮ ದೇಶದಲ್ಲಿ, ಉತ್ಪಾದನೆ ಯಾಗುತ್ತಿರುವ ವಾಹನಗಳ ಸಂಖ್ಯೆಗೆ ಅನುಪಾತವಾಗಿ ಏರಿಸುತ್ತಿಲ್ಲ. ಒಂದೇ ಒಂದು ಉದಾಹರಣೆ ನೀಡುವುದಾದರೆ, ಬೆಂಗಳೂರಿನಲ್ಲಿ ಟ್ರ್ಯಾಫಿಕ್ ಪೋಲೀಸರ ಸಂಖ್ಯೆ ೧೯೭೦ರಲ್ಲಿದ್ದಷ್ಟೇ ಈಗಲೂ ಇದೆ. ಆದರೆ ಈ ಏಳೆಂಟು ವರ್ಷಗಳ ಅವಧಿಯಲ್ಲಿ ವಾಹನ ಗಳ ಸಂಖ್ಯೆ ಶೇ. ೧೫೦ರಷ್ಟು ಹೆಚ್ಚಾಗಿದೆ. ಹೀಗಾಗಿ ಪೋಲೀಸರು ಹೊಸ ಹೊಸ ಸುರಕ್ಷತಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೂ ಅವು ನಿರೀಕ್ಷಿಸಿದಷ್ಟು ಪರಿಣಾಮ ಕಾರಿಯಾಗುತ್ತಿಲ್ಲ; ಯಶಸ್ವಿಯಾಗುತ್ತಿಲ್ಲ. ಸುರಕ್ಷಿತ ಸಂಚಾರಕ್ಕೆ ಸಂಬಂಧಿಸಿದ ಸೂಚನೆಗಳನ್ನೂ ಜನರು ಗಮನಿಸುತ್ತಿಲ್ಲ. ಸಂಚಾರ ನಿಯಮಗಳನ್ನು ಜನರಿಗೆ ತಿಳಿಸುವ ವಿಚಾರದಲ್ಲಿ ಕೂಡ ಕೆಲವು ಟ್ರ್ಯಾಫಿಕ್ ಪೋಲೀಸರಿಗೆ ಆಸಕ್ತಿಯಿಲ್ಲ. ಅಥವಾ ಕೆಲವರು ಈ ವಿಚಾರದಲ್ಲಿ ಆಸಕ್ತಿ ತಾಳಿದರೂ ಜನರು ದಿವ್ಯನಿರ್ಲಕ್ಷ್ಯ ತೋರಿಸುತ್ತಾರೆ. ಸಂಚಾರ ನಿಯಮಗಳನ್ನು ಉಲ್ಲಂಘಿಸಿದ ವ್ಯಕ್ತಿಗಳು ಪೋಲೀಸರ ಕೈಬಿಸಿಮಾಡಿ ಪಾರಾಗುವುದೂ ಉಂಟು.

ಡಾಕ್ಟರರು 'ಸುವರ್ಣಕ್ಷಣ'ವೆಂದು ಕರೆಯುವ ಅವಧಿಯೊಳಗೆ, ಎಂದರೆ ಅಪಘಾತ ನಡೆದ ಅನತಿಕಾಲದಲ್ಲಿಯೇ, ಗಾಯಾಳುಗಳಿಗೆ ವೈದ್ಯಕೀಯ ನೆರವು ಸಿಗುತ್ತಿಲ್ಲ. ದುರದೃಷ್ಟವಶಾತ್, ನಮ್ಮ ಅನೇಕ ನಗರಗಳಲ್ಲಿ ಅಂಬ್ಯುಲೆನ್ಸ್ ಸೌಲಭ್ಯ ಗಳಿಲ್ಲ. ಅಪಘಾತಕ್ಕೀಡಾದ ಜನರನ್ನು ರಿಕ್ಷಾಗಳಲ್ಲಿ ಅಥವಾ ಟ್ಯಾಕ್ಸಿಗಳಲ್ಲಿ ತುಂಬಿಕೊಂಡೇ

ಆಸ್ಪತ್ರೆಗೆ ಕೊಂಡೊಯ್ಯುತ್ತಾರೆ. ಆಸ್ಪತ್ರೆ ತಲುಪುವುದರೊಳಗೆ ಅವರ ಪರಿಸ್ಥಿತಿ ಇನ್ನಷ್ಟು ಉಲ್ಬಣಿಸಿದರೂ ಆಶ್ಚರ್ಯವಿಲ್ಲ.

ದೆಹಲಿಯ ಅಖಿಲಭಾರತ ವೈದ್ಯವಿಜ್ಞಾನ ಸಂಸ್ಥೆಯ ನ್ಯೂರೋಸರ್ಜರಿ ವಿಭಾಗದ ಮುಖ್ಯಸ್ಥರಾಗಿರುವ ಡಾ. ಪಿ. ಎನ್. ಟಂಡನ್ ಹೀಗೆನ್ನುತ್ತಾರೆ: "ಅಪಘಾತ ನಡೆದ ಸ್ಥಳದಲ್ಲಿಯೇ ಪ್ರಥಮ ಚಿಕಿತ್ಸೆ ದೊರೆತ ಪಕ್ಷದಲ್ಲಿ ಸಾವುಗಳ ಸಂಖ್ಯೆಯನ್ನು ಶೇ. ೩೫ರಷ್ಟು ಕಡಮೆ ಮಾಡಬಹುದು." ಇದೇ ಅಭಿಪ್ರಾಯವನ್ನು ಸಮರ್ಥಿಸುತ್ತಾ, ಮದ್ರಾಸ್ ಮುಖ್ಯಾಸ್ಪತ್ರೆಯ ಮಾಜೀ ಡೀನ್ ಹಾಗೂ ಮದ್ರಾಸ್ ವೈದ್ಯಕೀಯ ಶಿಕ್ಷಣ ಖಾತೆಯ ಈಗಿನ ನಿರ್ದೇಶಕರಾಗಿರುವ ಡಾ. ಎಸ್. ಆರ್ಮುಗಂ ಹೇಳುವುದು ಹೀಗೆ: "ಆಸ್ಪತ್ರೆಗೆ ಸೇರಿಸುವ ಮೊದಲೇ ತುರ್ತು ಪ್ರಥಮ ಚಿಕಿತ್ಸೆ ನೀಡಬಲ್ಲ, ವೈರ್‌ಲೆಸ್ ಸೌಕರ್ಯವನ್ನು ಹೊಂದಿದ ಅಂಬ್ಯುಲೆನ್ಸ್‌ಗಳ ತೀವ್ರ ಅಗತ್ಯ ಈಗ ನಮಗಿದೆ."

ಎಲ್ಲ ಆಸ್ಪತ್ರೆಗಳಲ್ಲಿಯೂ ಅಪಘಾತಗಳಲ್ಲಿ ಗಾಯಗೊಂಡವರಿಗಾಗಿಯೆ ಪ್ರತ್ಯೇಕ ಚಿಕಿತ್ಸಾ ಘಟಕವಿರಬೇಕು. ತೀವ್ರ ತಲೆಗಾಯ ಆದವರಿಗಂತೂ ಶೀಘ್ರದಲ್ಲಿ ವಿಶೇಷ ಚಿಕಿತ್ಸೆ ಅವಶ್ಯಕ. ಆದರೆ ಇಂಥ ಚಿಕಿತ್ಸೆ ಎಲ್ಲೆಡೆ ಸಿಗುವುದಿಲ್ಲವಾದ್ದರಿಂದ, ಅಂಥ ಗಾಯಾಳುಗಳನ್ನು ಬಹುದೂರ ಕೊಂಡೊಯ್ಯಬೇಕಾಗುತ್ತದೆ. ಉದಾಹರಣೆಗೆ, ಕೆಲವು ಸಲ ಜಮ್ಮು ಮತ್ತು ಕಾಶ್ಮೀರದಲ್ಲಿ ಅಪಘಾತಕ್ಕೆ ಈಡಾದವರನ್ನು ಚಿಕಿತ್ಸೆಗಾಗಿ ದೆಹಲಿಗೆ ಸಾಗಿಸಬೇಕಾಗಿ ಬರುವುದೂ ಉಂಟು.

ಇದಕ್ಕಿಂತಲೂ ಕೆಡುಕೆನಿಸುವ ಇನ್ನೊಂದು ಸಂಗತಿಯಿದೆ. ಅಪಘಾತಕ್ಕೆ ಬಲಿಯಾದ ನತದೃಷ್ಟರಿಗೆ ಕಾನೂನು ರೀತ್ಯ ಸಿಗಬೇಕಾದ ಪರಿಹಾರವೂ ಬೇಗ ದೊರೆಯುತ್ತಿಲ್ಲ. ೧೯೮೨ರ ಒಂದು ಕಾನೂನಿನ ಅನ್ವಯ, ಅಪಘಾತಕ್ಕೆ ಕಾರಣ ಯಾರೇ ಆಗಿರಲಿ, ವ್ಯಕ್ತಿ ಸತ್ತರೆ ಅವನ ಕುಟುಂಬದವರಿಗೆ ೧೫,೦೦೦ ರೂಪಾಯಿಗಳನ್ನು ಮತ್ತು ಖಾಯಂ ಅಂಗವಿಕಲತೆಗೀಡಾದ ಪಕ್ಷದಲ್ಲಿ ಅವನಿಗೆ ೭,೫೦೦ ರೂಪಾಯಿಗಳನ್ನೂ ಕೊಡಬೇಕು. ಮೊಕದ್ದಮೆ ನ್ಯಾಯಾಲಯದಲ್ಲಿ ತೀರ್ಮಾನವಾಗುವವರೆಗಿನ ಅವಧಿಗೆ, ನೊಂದವರಿಗೆ ಮಧ್ಯಂತರ ಪರಿಹಾರ ಸಿಗಲಿ ಎಂಬುದೇ ಈ ಕಾನೂನಿನ ಉದ್ದೇಶ. ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿದ ೪೫ ದಿನಗಳೊಳಗಾಗಿ ಈ ಹಣ ನೊಂದವರಿಗೆ ಸಂದಾಯವಾಗಬೇಕು. ಆದರೆ ಇಂಥ ಪರಿಹಾರ ಧನ ಸಂದಾಯವಾಗಲು ಮರಣೋತ್ತರ ಶವಪರೀಕ್ಷಾ ವರದಿಗಳು ಹಾಗೂ ಜೀವವಿಮಾ ಪ್ರಮಾಣಪತ್ರಗಳಂತಹ ಕೆಲವು ದಾಖಲೆಗಳು ಅಗತ್ಯವಾದ್ದರಿಂದ ಮತ್ತು ಈ ದೇಶದಲ್ಲಿ ಅವು ಸಕಾಲದಲ್ಲಿ ಸಿಗದಿರುವುದರಿಂದ, ಹೆಚ್ಚಿನ ಸಂದರ್ಭಗಳಲ್ಲಿ, ನೊಂದವರಿಗೆ ಸಕಾಲಿಕ ನೆರವು ಸಿಗುತ್ತಿಲ್ಲ.

ರಸ್ತೆ ಅಪಘಾತಗಳಿಂದ ಮೃತರ ಕುಟುಂಬದವರು ಅಥವಾ ಗಾಯಾಳುಗಳಿಗಷ್ಟೇ ತೊಂದರೆಯಲ್ಲ, ಇಡೀ ದೇಶಕ್ಕೇ ತೊಂದರೆ. ಆಗಾಗ ನಡೆಯುವ ಅಪಘಾತಗಳ ಪರಿಣಾಮವಾಗಿ, ಭಾರತ ೯೦೦ ಕೋಟಿ ರೂಪಾಯಿಗಳಷ್ಟು ವಾರ್ಷಿಕ ನಷ್ಟ ಅನುಭವಿಸುತ್ತಿದೆ ಎನ್ನಲಾಗಿದೆ.

ರಸ್ತೆಗಳ ಮೇಲೆ ಘಟಿಸುವ ದುರಂತಗಳ ಬಗ್ಗೆ ಸರ್ಕಾರ ತೀವ್ರವಾಗಿ ಆಲೋಚನೆ ನಡೆಸತೊಡಗಿರುವುದು ಶುಭಸಂಕೇತವಾಗಿದೆ; ರಸ್ತೆ ಸಾವುಗಳನ್ನು ತಡೆಯಲು ಸಾರಿಗೆ ಇಲಾಖೆ ಸಾಧ್ಯವಿದ್ದಷ್ಟೂ ಶ್ರಮಿಸುತ್ತಿದೆ. ೧೯೮೬ರ ಮೇ ತಿಂಗಳಿನಲ್ಲಿ ಸಾರಿಗೆ ಸಚಿವ ರಾಜೇಶ್‌ಪೈಲಟ್ ಅವರ ನೇತೃತ್ವದಲ್ಲಿ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಂಸ್ಥೆ ಅಸ್ತಿತ್ವಕ್ಕೆ ಬಂದಿದೆ. ಮೋಟರ್ ವಾಹನಗಳಿಗೆ ಸಂಬಂಧಿಸಿದ ಕಾನೂನನ್ನೂ ಪರಿಷ್ಕರಿಸಲು ಉದ್ದೇಶಿಸಲಾಗಿದೆ. ಪ್ರಸ್ತಾವದಲ್ಲಿರುವ ಕೆಲವು ಬದಲಾವಣೆಗಳು ಹೀಗಿವೆ:

ಅಪಘಾತಕ್ಕೆ ಕಾರಣನಾದ ವಾಹನಚಾಲಕರು ಮತ್ತೆ ಪರೀಕ್ಷೆಗೆ ಹಾಜರಾಗ ಬೇಕು. ಅವನು ವೈದ್ಯಕೀಯ ಅರ್ಹತಾ ಪತ್ರವನ್ನೂ ಪಡೆಯಬೇಕು. ವಾಣಿಜ್ಯೋದ್ದೇಶಗಳಿಗಾಗಿ ಬಳಕೆಯಾಗುವ ವಾಹನಗಳ ತಪಾಸಣೆಗಾಗಿ ಪ್ರತ್ಯೇಕ ಘಟಕಗಳನ್ನು ರೂಪಿಸಬೇಕು. ಡ್ರೈವಿಂಗ್ ಲೈಸೆನ್ಸ್ ನೀಡುವುದಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ನೋಂದಣಿ ವ್ಯವಸ್ಥೆ ಜಾರಿಗೆ ಬರಬೇಕು. (ಇಂಥ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿದ ಪಕ್ಷದಲ್ಲಿ, ದೆಹಲಿಯಲ್ಲಿ ಲೈಸೆನ್ಸ್ ರದ್ದಾದ ವ್ಯಕ್ತಿ ಇನ್ನಾವುದೋ ರಾಜ್ಯದಲ್ಲಿ ಹೊಸ ಲೈಸೆನ್ಸ್ ಪಡೆಯುವುದು ಸಾಧ್ಯವಾಗುವುದಿಲ್ಲ) ಎಲ್ಲ ರಾಷ್ಟ್ರೀಯ ಹೆದ್ದಾರಿಗಳಲ್ಲಿಯೂ, ಅಪಘಾತಕ್ಕೀಡಾದವರಿಗೆ ತುರ್ತು ಪ್ರಥಮ ಚಿಕಿತ್ಸೆ ನೀಡುವಂಥ ಸರಕಾರೀ ಸುರಕ್ಷಾದಳಗಳನ್ನು ರೂಪಿಸಲೂ ಉದ್ದೇಶಿಸಲಾಗಿದೆ. ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಈಗಾಗಲೇ ಇಂಥ ದಳಗಳು ಕಾರ್ಯಪ್ರವೃತ್ತವಾಗಿವೆ.

ಆದರೆ ಇಷ್ಟುಮಾತ್ರ ಸಾಲದು. ಮುಖ್ಯವಾಗಿ, ಕಳಪೆ ದರ್ಜೆಯ ವಾಹನಗಳು ಉತ್ಪಾದನೆಯಾಗದಂತೆ ತಡೆಯಬೇಕು. ದ್ವಿಚಕ್ರವಾಹನಗಳಲ್ಲಿ ಸಾಧಾರಣವಾಗಿ ಹಿಂದೆ ಕುಳಿತವನಿಗೇ ಹೆಚ್ಚು ತೀವ್ರ ಗಾಯಗಳಾಗುವುದರಿಂದ, ಇಬ್ಬರೂ ಹೆಲ್ಮೆಟ್ ಧರಿಸುವುದು ಕಡ್ಡಾಯವಾಗಬೇಕು. ವಾಹನಗಳ ಬಣ್ಣಗಳ ಬಗ್ಗೆಯೂ ಗಮನ ಹರಿಸಬೇಕಾದ ಅಗತ್ಯವಿದೆ. ಉದಾಹರಣೆಗೆ, ರಾತ್ರಿಯಲ್ಲಿ ಕಪ್ಪು ಬಣ್ಣದ ವಾಹನಗಳಿಗಿಂತ ಹೆಚ್ಚು ಸ್ಪಷ್ಟವಾಗಿ ಹಾಗೂ ಸುಲಭವಾಗಿ ಹಳದಿ ಅಥವಾ ಕಿತ್ತಳೆಬಣ್ಣದ ವಾಹನಗಳನ್ನು ದೂರದಿಂದ ಗುರುತಿಸುವುದು ಸಾಧ್ಯ.

ನಗರಗಳಲ್ಲಿ ಉತ್ತಮ ಹಾಗೂ ಸುಧಾರಿತ ಸಾರಿಗೆ ವ್ಯವಸ್ಥೆಗಳನ್ನು ರೂಪಿಸಿ ರಸ್ತೆ ಅಪಘಾತಗಳನ್ನು ತಡೆಯುವುದು ಸಾಧ್ಯವೆಂದು ಟ್ರಾಫಿಕ್ ತಜ್ಞರು ಅಭಿಪ್ರಾಯ ಪಡುತ್ತಾರೆ. ಪಶ್ಚಿಮ ಬಂಗಾಳದ ಸಾರಿಗೆ ಖಾತೆಯ ಮುಖ್ಯ ಟ್ರ್ಯಾಫಿಕ್ ಹಾಗೂ ಸಾರಿಗೆ ಯೋಜಕರಾಗಿರುವ ಅಮಿಯಾ ಬಂದೋಪಾಧ್ಯಾಯ ಅವರು ಹೇಳುವಂತೆ, "ಕಿಕ್ಕಿರಿದ ಜನಸಂದಣಿಯಿಂದ ಕೂಡಿದ ಮಹಾನಗರಗಳಲ್ಲಿ ರೈಲ್ವೆ ಸಾರಿಗೆಯನ್ನು ಇನ್ನಷ್ಟು ವಿಸ್ತರಿಸಬೇಕಾದ ಅಗತ್ಯವಿದೆ."

ಹೇಳುವುದೇನೋ ಸುಲಭ; ಆದರೆ ಕಾರ್ಯಗತಗೊಳಿಸುವುದು ತುಂಬ ಕಷ್ಟ, ೧೨೫ ಕಿ. ಮೀ. ಗಳಷ್ಟು ಉದ್ದದ ರೈಲುಮಾರ್ಗ ನಿರ್ಮಾಣಕ್ಕೆ ಬೆಂಗಳೂರಿನಲ್ಲಿ ೬೫೦ ಕೋಟಿ ರೂಪಾಯಿ ವೆಚ್ಚ ತಗಲುತ್ತದೆಂದು ಅಂದಾಜು ಮಾಡಲಾಗಿದೆ. ಇನ್ನೂ ಉತ್ತಮವೆನಿಸಿದ ಭೂಗತ ರೈಲುಮಾರ್ಗಗಳ ನಿರ್ಮಾಣವೆಚ್ಚ ಇನ್ನೂ ಅಧಿಕ. ಕಲ್ಕತ್ತದ ಭೂಗತ ರೈಲುಮಾರ್ಗ ನಿರ್ಮಾಣಕ್ಕೆ, ಪ್ರತಿ ಕಿ. ಮೀ. ಉದ್ದಕ್ಕೆ ೫೦

ಕೋಟಿ ರೂಪಾಯಿಗಳ ವೆಚ್ಚ ತಗಲಿದೆ. ದೆಹಲಿ ೪೦ ಕಿ. ಮೀ. ದೂರದ ಭೂಗತ ರೈಲುಮಾರ್ಗ ನಿರ್ಮಿಸುತ್ತಿದ್ದು ಇದರ ಅಂದಾಜು ವೆಚ್ಚ ೨೦೦೦ ಕೋಟಿ ರೂಪಾಯಿ.

ಆದರೆ ರಸ್ತೆ ಅಪಘಾತಗಳಿಂದಾಗುತ್ತಿರುವ ಸಾವುನೋವು ಕಷ್ಟನಷ್ಟಗಳನ್ನು ಕಂಡಾಗ, ಇದನ್ನು ತಡೆಯಲು ಭೂಗತ ರೈಲು ಸಂಚಾರ ವ್ಯವಸ್ಥೆಗಿಂತ ಉತ್ತಮವಾದ ಬೇರಾವುದೇ ಪರಿಹಾರ ಮಾರ್ಗ ಇಲ್ಲವೆನಿಸುತ್ತಿದೆ. ವಿಧಾನ ಯಾವುದೇ ಆಗಿರಲಿ, ರಸ್ತೆ ಅಪಘಾತಗಳು ಕಡಮೆಯಾಗುವಂತೆ ಮಾಡುವ ಹೊಸ ಸಾರಿಗೆ–ಸಂಚಾರ ವ್ಯವಸ್ಥೆಯ ಬಗ್ಗೆ ಸರ್ಕಾರ ಶೀಘ್ರವೇ ಕಾರ್ಯಪ್ರವೃತ್ತವಾಗಬೇಕಾದ ಆವಶ್ಯಕತೆಯಿದೆ.

ಅನು : ಶಂಸ ಐತಾಳ

ಇತರರು ನಮ್ಮ ನಂಬಿಕೆಗಳನ್ನು ಸ್ವೀಕರಿಸಲೇಬೇಕೆನ್ನುವುದು ಅಸಹನೀಯ ಪರಮಾವಧಿ.

ಯಾವನು ಕಾನೂನಿಗೆ ಪೂರ್ಣ ಮರ್ಯಾದೆ ಕೊಡುವನೋ ಅವನು ಕಾನೂನು ಭಂಗ ಚಳವಳಿಗೆ ಅತ್ಯಂತ ಅರ್ಹ.

ಗಾಂಧೀಜಿ

ಕಣಾದ ಋಷಿ

ಎಚ್. ಸಂಜೀವಯ್ಯ

ಕಣಾದ ಋಷಿ ವೈಶೇಷಿಕ ದರ್ಶನದ ಆದಿ ಪ್ರತಿಪಾದಿಕ. ಇವನು ಬರೆದ ಸೂತ್ರ ಹತ್ತು ಅಧ್ಯಾಯಗಳಲ್ಲಿದೆ; ಪ್ರತಿ ಅಧ್ಯಾಯದಲ್ಲೂ ಎರಡು ಪ್ರಕಾರಗಳಿವೆ. ವಾಯು ಪುರಾಣದಲ್ಲಿ ಇವನು ದ್ವಾರಕಾ ನಗರಕ್ಕೆ ಸಮೀಪದ ಪ್ರಭಾಸ ಎಂಬಲ್ಲಿ ಜನಿಸಿದ ಎಂದು ತಿಳಿಸಿದೆ. ಇವನಿಗೆ ಆಲೂಕ್ಯ ಎಂಬ ಹೆಸರೂ ಇದ್ದಿತು. ಇವನ ತಂದೆ ಉಲೂಕ, ಗುರು ಸೋಮಶರ್ಮ. ಇವನು ಇದ್ದ ಕಾಲ ಸರಿಯಾಗಿ ತಿಳಿದಿಲ್ಲ; ಬುದ್ಧನ ಕಾಲಕ್ಕಿಂತ ಹಿಂದಿನವನು ಎಂದು ತಿಳಿದಿರಬಹುದು.

ಧರ್ಮದ ವಿವರಣೆಯ ಘೋಷಣೆಯೊಂದಿಗೆ ವೈಶೇಷಿಕ ಸೂತ್ರ ಪ್ರಾರಂಭವಾಗುತ್ತದೆ. ಇಹ–ಪರ ಎರಡನ್ನೂ ಮುಟ್ಟಲು ಅದು ಪ್ರಯತ್ನಿಸುತ್ತದೆ. ಪರದ ಬಗ್ಗೆ ಬೆಳೆದ ಅದರ ಆಲೋಚನೆಗಳು ಭಾರತೀಯ ಮೀಮಾಂಸೆಯ ಪ್ರಧಾನ ಪ್ರವಾಹದಲ್ಲಿ ಬೆರೆತು ಹೋಗಿವೆ. ಅದನ್ನು ಕುರಿತು ಇಲ್ಲಿ ವಿಚಾರಮಾಡುವುದಿಲ್ಲ. ಇಹವನ್ನು ಕುರಿತು, ವಸ್ತು ಪ್ರಪಂಚವನ್ನು ಕುರಿತು ಕಣಾದ ಋಷಿ ಪ್ರತಿಪಾದಿಸಿರುವ ವಿಚಾರಗಳನ್ನು ಮಾತ್ರ ತಿಳಿಯಲು ಇಲ್ಲಿ ಪ್ರಯತ್ನ ಮಾಡಿದೆ. ಇದನ್ನು ಅಡಿಗಲ್ಲಾಗಿಟ್ಟುಕೊಂಡು ಭೌತ ವಿಜ್ಞಾನದ ಬೆಳವಣಿಗೆಯನ್ನು ಗುರುತಿಸುವುದು ನಮ್ಮ ಉದ್ದಿಶ್ಯ. ಭೌತ ವಿಜ್ಞಾನ ಅಳತೆ ವಿಜ್ಞಾನ. ಅದರ ಕಕ್ಷೆಯಲ್ಲಿ ಬರುವ ಯಾವ ವಿಷಯವಾದರು ಅಳತೆಗೆ ಸಿಕ್ಕಬೇಕು, ಸಂಖ್ಯೆಗಳಲ್ಲಿ ತಿಳಿಸಲು ಬರಬೇಕು. ವ್ಯಾಪ್ತಿಯಲ್ಲಿ ಅಗು ಚಲನೆ, ಶಕ್ತಿ ರೂಪಾಂತರ, ವಸ್ತುರಚನೆ, ಮೂಲ ಕಣಗಳು, ಅವುಗಳ ಬಿಡಿ ಮತ್ತು ಒಟ್ಟು ಸ್ವಭಾವಗಳು—ಹೀಗೆ ಹಲವಾರು ಪ್ರಕಾರಗಳನ್ನು ಒಳಗೊಳ್ಳುತ್ತದೆ.

ಭೌತ ವಿಜ್ಞಾನದ ಬೆಳವಣಿಗೆ ಮನುಷ್ಯ ತನ್ನ ಸುತ್ತಿನ ಜಗತ್ತನ್ನು ನೋಡಿ, ಬೆರಗಾಗಿ, ಮನಸ್ಸನ್ನು ಗಟ್ಟಿಮಾಡಿಕೊಂಡು, ಅದನ್ನು

ಅರ್ಥಮಾಡಿಕೊಳ್ಳಲು ಸಂಕಲ್ಪಮಾಡಿದ ಕ್ಷಣದಿಂದ ಆರಂಭವಾದದ್ದು. ಇದು ಮೂಲತಃ ಸಮಷ್ಟಿಕ್ರಿಯೆ, ಫಲರೂಪದಲ್ಲಿ ವ್ಯಷ್ಟಿಕ್ರಿಯೆಯಾಗುತ್ತದೆ. ಸತ್ಯ ಧುಕ್ಕೆಂದು ಒಮ್ಮೆಗೇ ಕಾಣಿಸಿಕೊಳ್ಳುವುದಿಲ್ಲ. ಬಹುಜನರ ಅವಲೋಕನೆಯಲ್ಲಿ, ಸಂತೆಮಾಳದ ಗದ್ದಲದಲ್ಲಿ, ಮಠದ ಕೂಟಗಳಲ್ಲಿ, ಅನ್ನಛತ್ರಗಳಲ್ಲಿ ಅದು ಧ್ವನಿಪಡೆದು ಕಣಾದ ಋಷಿಯ, ಅರಿಸ್ಟಾಟಲನ, ನ್ಯೂಟನ್ನನ ಮನಸ್ಸಿನ ಕುಲುಮೆಯಲ್ಲಿ ರೂಪು ತಾಳುತ್ತದೆ. ಎಂದೂ ಅದು ಪರಿಪೂರ್ಣವಾಗಿ ಮೂಡಿಬರುವುದಿಲ್ಲ; ಎಲ್ಲಾ ಸರಿಯಾಗಿಯೂ ಕಾಣಿಸಿಕೊಳ್ಳುವುದಿಲ್ಲ. ಅರಪೆಯ ಅಸಂತುಷ್ಟಿಯಲ್ಲೇ ಅದರ ಆವಿಷ್ಕಾರ.

ವಸ್ತು ಜಗತ್ತಿನ ಅರಿವು ಪಂಚೇಂದ್ರಿಯಗಳ ಮೂಲಕ ಉಂಟಾಗುತ್ತದೆ. ಕಣ್ಣು, ಕಿವಿ, ಚರ್ಮ, ಮೂಗು, ನಾಲಿಗೆ—ಇವು ಪಂಚೇಂದ್ರಿಯಗಳು. ಅರಿವಿನ ಆಕರ ಮನಸ್ಸು. ಅರಿಯುವ ಮನಸ್ಸು (ಗಳು) ಇಲ್ಲದಿದ್ದರೂ ವಸ್ತುಜಗತ್ತು ಇರುತ್ತದೆ ಎಂಬ ನಿಲುವು ವೈಶೇಷಿಕ ದರ್ಶನದ್ದು. ಈ ನಿಲುವೆ ವಿಜ್ಞಾನ ಬೆಳವಣಿಗೆಯ ಅಡಿಗಲ್ಲು. ಜಗತ್ತಿನ ಎಲ್ಲ ವ್ಯಾಪಾರಗಳೂ ವಸ್ತುಗಳ ಸ್ವಭಾವದಿಂದಲೆ ಸಂಭವಿಸುತ್ತದೆ, ಇದಕ್ಕೆ ಅಲೌಕಿಕವಾದ ಯಾವ ಚೇತನದ ಮಧ್ಯಪ್ರವೇಶವೂ ಬೇಕಿಲ್ಲ ಎಂಬ ನಂಬಿಕೆಗೆ ಇದು ಆಧಾರವಾಯಿತು.

ಜಗತ್ತು ಒಂದು ಭೂತದಿಂದ (ಧಾತು) ಆಗಿದಿಯೊ ಇಲ್ಲ ಅನೇಕ ಭೂತಗಳಿಂದ ಆಗಿದೆಯೊ ಎಂಬ ಚರ್ಚೆ ಎಲ್ಲ ದರ್ಶನಗಳಲ್ಲೂ ನಡೆದಿದೆ. ಜಗತ್ತು ಪಂಚಭೂತಗಳಿಂದ ಆಗಿದೆ ಎಂಬುದು ವೈಶೇಷಿಕ ದರ್ಶನದ ನಂಬಿಕೆ. ಆಕಾಶ (ಈಥರ್), ಗಾಳಿ (ವಾಯು). ಬೆಂಕಿ (ಅಗ್ನಿ), ನೀರು (ಅಪ್) ಮತ್ತು ಭೂಮಿ (ಪೃಥ್ವಿ)—ಇವು ಪಂಚಭೂತಗಳು. ಆಕಾಶಕ್ಕೆ ಬೇರೆ ದರ್ಶನಗಳಲ್ಲಿರುವ 'ದೇಶ' ಎಂಬ ಅರ್ಥವನ್ನು ಇಲ್ಲಿ ಊಹಿಸಿಕೊಳ್ಳಬಾರದು; ಅದಕ್ಕೆ ಇಲ್ಲಿ ಸರ್ವವ್ಯಾಪಕವಾದ ಈಥರಿನ ಅರ್ಥ ಇದೆ. ದೇಶ ಕಾಲಗಳೂ ವೈಶೇಷಿಕ ಚಿಂತನೆಯಲ್ಲಿ ಸೇರಿವೆ, ಇವು ಅನಂತ, ಅವಿಭಾಜ್ಯ.

ಪಂಚಭೂತಗಳು ನಮ್ಮ ಅನುಭವಕ್ಕೆ ಬರುವುದು ಅವುಗಳ ವಿಶೇಷ ಗುಣಗಳಿಂದ. ಆಕಾಶದ ಗುಣ ಶಬ್ದ, ಗಾಳಿಯ ಗುಣ ಸ್ಪರ್ಶ, ಬೆಂಕಿಯ ಗುಣ ಬಣ್ಣ (ರೂಪ), ನೀರಿನ ಗುಣ ರುಚಿ (ರಸ), ಮತ್ತು ಭೂಮಿಯ ಗುಣ ವಾಸನೆ (ಗಂಧ), (ಈ ವಿವರಣೆಯಲ್ಲಿ ಸ್ವಲ್ಪ ವ್ಯತ್ಯಾಸಗಳೂ ಇರಬಹುದು. ಆದರೆ ಅವು ಇಲ್ಲಿ ಮುಖ್ಯವಲ್ಲ). ಎಲ್ಲ ವಸ್ತುಗಳ ನಿರ್ಮಾಣ ಆಗಿರುವುದು ಗಾಳಿ, ಬೆಂಕಿ, ನೀರು ಮತ್ತು ಭೂಮಿಯಿಂದ. ಈ ನಾಲ್ಕು ಭೂತಗಳು ಪರಮಾಣು ಸ್ವರೂಪದವು. ಪರಮಾಣುಗಳು ಗೋಳಾಕಾರವಾಗಿವೆ. ಗಾತ್ರ, ದ್ರವ್ಯಾಂಶ, ತೂಕ ಮುಂತಾದ ಗುಣಗಳಲ್ಲಿ ಅವುಗಳ ನಡುವೆ ವ್ಯತ್ಯಾಸವಿಲ್ಲ. ವ್ಯತ್ಯಾಸ ಇರುವುದು ಅವುಗಳ ವಿಶೇಷ ಗುಣಗಳಲ್ಲಿ.

ಪರಮಾಣುಗಳು ಬಿಡಿಯಾಗಿರುವಾಗ ಕಣ್ಣಿಗೆ ಕಾಣುವುದಿಲ್ಲ. ಗಾಳಿಯನ್ನು ಬಿಟ್ಟು ಉಳಿದ ಭೂತಗಳ ಪರಮಾಣುಗಳು ಬಿಡಿಯಾಗಿ ಇರುವುದಿಲ್ಲ. ಎರಡು ಪರಮಾಣುಗಳು ಸೇರಿ ಒಂದು ದ್ವ್ಯಣುಕವಾಗುತ್ತದೆ. ಮೂರು ದ್ವ್ಯಣುಕಗಳು ಸೇರಿ ಒಂದು ತ್ರ್ಯಣುಕವಾಗುತ್ತದೆ. ತ್ರ್ಯಣುಕಕ್ಕೆ ಒಂದು ನಿರ್ದಿಷ್ಟ ಪ್ರಮಾಣ ಉಂಟು. ಅದು ವಸ್ತುವಿನ ಗುಣವನ್ನು ಹೊಂದಿರುತ್ತದೆ. ಬಿಸಿಲುಕೋಲಿನಲ್ಲಿ ಕಾಣುವ

ಧೂಳಿನ ಕಣವನ್ನು ತ್ರ್ಯಣುಕಕ್ಕೆ ಹೋಲಿಸಬಹುದು. ಇಂಥ ತ್ರ್ಯಣುಕಗಳಿಂದಲೆ ಎಲ್ಲ ಪದಾರ್ಥಗಳೂ ಆಗಿರುವುದು.

ಸಂಯುಕ್ತ ವಸ್ತುಗಳು ಎರಡು ಅಥವಾ ಹೆಚ್ಚು ಭೂತಗಳಿಂದ ಆಗಬಹುದು. ವೈಶೇಷಿಕ ಕಲ್ಪನೆಯಂತೆ ಸಂಯುಕ್ತ ವಸ್ತುಗಳ ನಿರ್ಮಾಣ ಬೆಂಕಿಯ ಪರಮಾಣುಗಳ ಸಂಯೋಗದಿಂದ ನಡೆಯುತ್ತದೆ. ಬೆಂಕಿಯ ಪರಮಾಣುಗಳ ಸಂಘಟ್ಟಣೆಯಿಂದ ಪರಮಾಣುಗಳು ಮೊದಲು ಬಿಡಿಬಿಡಿಯಾಗುತ್ತದೆ. ನಂತರ ಅವು ದ್ವ್ಯಣುಕ, ತ್ರ್ಯಣುಕಗಳಾಗಿ ಸಂಯುಕ್ತವಸ್ತು ಹುಟ್ಟಿಕೊಳ್ಳುತ್ತದೆ. ಭೂತಗಳ ಅಣುಗಳು ಪ್ರಕ್ರಿಯಲ್ಲಿ ನೇರವಾಗಿ ಭಾಗಿಯಾಗುವುದಿಲ್ಲ.

ಸೃಷ್ಟಿ ಆವರ್ತದ ಮೊದಲಲ್ಲಿ ಎಲ್ಲ ಭೂತಗಳೂ ಪರಮಾಣು ರೂಪದಲ್ಲಿದ್ದು ವಿಶಿಷ್ಟ (ಆದಿ) ಚಲನೆಯನ್ನು ಹೊಂದಿರುತ್ತದೆ. ಅವು ಒಟ್ಟುಗೂಡುವುದಕ್ಕೆ ಈ ಚಲನೆಯೆ ಕಾರಣ. ಆವರ್ತದ ಕೊನೆಯಲ್ಲಿ (ಪ್ರಳಯದಲ್ಲಿ) ಪರಮಾಣುಗಳು ಕಳಚಿಕೊಂಡು ಮತ್ತೆ ಬಿಡಿಯಾಗುತ್ತವೆ. ಮುಂದಿನ ಆವರ್ತ ಆರಂಭ ಆಗುವವರೆಗೆ ಅವು ಬಿಡಿಯಾಗಿಯೆ ಇರುತ್ತವೆ. ಪರಮಾಣುಗಳಿಗೆ ಅಳಿವಿಲ್ಲ; ಈಶ್ವರನಂತೆ ಅವೂ ನಿತ್ಯ.

ಪರಮಾಣುಗಳ ಕಲ್ಪನೆ ಮೂಡಿದ್ದು ಹೀಗೆ: ಒಂದು ಮಡಕೆಯನ್ನು ಒಡೆದು ಎರಡು ಭಾಗ ಮಾಡಬಹುದು. ಈ ಭಾಗಗಳನ್ನು ಮತ್ತೆ ಮತ್ತೆ ಒಡೆದು ಚಿಕ್ಕ ಚಿಕ್ಕ ಚೂರುಗಳನ್ನಾಗಿ ಮಾಡಬಹುದು. ಈ ಕ್ರಿಯೆ ಮುಂದೆ ವಿಭಜಿಸಲಾಗದ ತುಣುಕುಗಳು ನಿರ್ಮಾಣವಾಗುವವರೆಗೆ ನಡೆಯುತ್ತದೆ. ಮತ್ತೆ ವಿಭಜಿಸಲಾಗದ ವಸ್ತುವಿನ ತುಣುಕುಗಳೆ ಪರಮಾಣುಗಳು. ಇಂಥ ಚಿತ್ರ ಸುಮಾರು ಎರಡು ಸಾವಿರ ವರ್ಷಗಳ ಕಾಲ ದಾರ್ಶನಿಕರ ಮನಸ್ಸಿನಲ್ಲಿ ಗಟ್ಟಿಯಾಗಿ ನಿಂತಿತ್ತು.

ಕಾಲದೇಶಗಳ ಕಲ್ಪನೆ ಮೂಡಿದ್ದು ಹೀಗೆ: ಹಿಂದೆ ಮುಂದೆ, ಎಡ ಬಲ, ದೂರ ಹತ್ತಿರ, ಮೇಲೆ ಕೆಳಗೆ ಎಂದೆಲ್ಲ ನಾವು ಹೇಳುತ್ತೇವೆ. ಇದು ಅಳತೆಗೆ ಒಳಪಡುವ ಪ್ರಾಚಲ, ಉದ್ದವನ್ನು ನಮ್ಮ ಮುಂದೆ ನಿಲ್ಲಿಸುತ್ತದೆ. ಮೂರು ಉದ್ದಗಳ ವಿವರಣೆಗೆ ಸಿಕ್ಕುವ ಜಾಗವೆ ದೇಶ. ಘಟನೆಗಳನ್ನು ಕುರಿತಂತೆ ಹಿಂದೆ, ಈಗ, ಮುಂದೆ ಎಂದು ನಾವು ಮಾತಾಡುತ್ತೇವೆ. ಇದನ್ನು ಗುರುತಿಸುವ ಪ್ರಾಚಲ ಕಾಲ. ಏನೂ ನಡೆಯದೆ ಇದ್ದರೂ ಏನೊ ಕಳೆಯುತ್ತಿರುವಂತೆ ಭಾಸವಾಗುತ್ತದೆ; ಇದು ನಿರಂತರವಾಗಿ ಮುಂದೆ ಮುಂದೆ ಹರಿಯುತ್ತಿರುವಂತೆ ಭಾಸವಾಗುತ್ತದೆ; ಜಗತ್ತಿನ ಎಲ್ಲ ಘಟನೆಗಳೂ ಇದರ ಹಾದಿಯಲ್ಲಿ ಹುಟ್ಟಿ ಅಳಿಯುವಂತೆ ಕಾಣುತ್ತವೆ. ಎಲ್ಲದಕ್ಕೂ ಕಾರಣ ಎಂದು ನಂಬಿದ್ದುದೂ ಉಂಟು. ದೇಶ—ಕಾಲಗಳ ಧಾರೆ ಸಮಸ್ತ ಘಟನೆಗಳನ್ನು ಒಳಗೊಳ್ಳುವ ರಂಗ. ಉದಯ, ವಿಕಾಸ, ಲಯ ಸಂಭವಿಸುವುದು ಇಲ್ಲೆ.

ಒಂದು ಕಾರ್ಯಕ್ಕೆ ಒಂದು ಕಾರಣ ಇರುತ್ತದೆ ಎಂದು ವೈಶೇಷಿಕ ದರ್ಶನ ತಿಳಿಸುತ್ತದೆ. ಕಾರಣ ತಿಳಿಯದೆ ಇರುವಾಗ ಅದು ಸ್ವಭಾವವನ್ನೊ, ಅದೃಷ್ಟವನ್ನೊ ಆಶ್ರಯಿಸಿ ವಿವರಣೆಯನ್ನು ನೀಡುತ್ತದೆ. ಅದೃಷ್ಟ ಕಣ್ಣಿಗೆ ಕಾಣದ ಗುಣ. ಸೂಜಿಗಳು ಕಾಂತದ ಕಡೆಗೆ ಚಲಿಸುವುದು, ಗಿಡಗಳಲ್ಲಿ ನೀರು ಚಲಿಸುವುದು, ಬೆಂಕಿ ಮೇಲ್ಮುಖವಾಗಿ ಚಲಿಸುವುದು, ಗಾಳಿ ಅಡ್ಡವಾಗಿ ಚಲಿಸುವುದು, ಸೃಷ್ಟಿಯ ಆರಂಭದಲ್ಲಿ

ಪರಮಾಣುಗಳು ಒಟ್ಟಿಗೆ ಸೇರುವುದು—ಇದೆಲ್ಲಾ ಅದೃಷ್ಟದಿಂದ. ಭಾರವಾದ ವಸ್ತುಗಳು ಕೆಳಗೆ ಬೀಳುವುದು ಅವುಗಳ ಸ್ವಭಾವ ಭಾರತ್ವ (ಗುರುತ್ವ) ದಿಂದ. ನೀರು ಹರಿಯುವುದು ದ್ರವತ್ವದಿಂದ. ಕಾರಣಗಳು ಪಕ್ಕನೆ ಗೊತ್ತಾಗದಿರಲೂಬಹುದು. ಕಾಂತಸೂಜಿ ಯಾವಾಗಲೂ ಉತ್ತರ ದಿಕ್ಕಿಗೆ ಮುಖ ಮಾಡಿ ನಿಲ್ಲುವುದು ಇದಕ್ಕೆ ತಕ್ಕ ಉದಾಹರಣೆ.

ಒಂದು ವಸ್ತು ಚಲಿಸಲು ಒಂದು ಕಾರಣ ಇರಲೇಬೇಕು. ಈ ಕಾರಣ ದಬ್ಬುವುದಾಗಿರಬಹುದು, ಇಲ್ಲವೆ ಎಳೆಯುವುದಾಗಿರಬಹುದು. ಇಂಥ ಒಂದು ಕಾರಣವಿಲ್ಲದೆ ವಸ್ತುವಿನ ಚಲನೆ ಸಾಧ್ಯವಿಲ್ಲ. ಅವಲೋಕನೆಗೆ ಬಂದದ್ದನ್ನು ಕಾರ್ಯ—ಕಾರಣ ಸಂಬಂಧದ ಚೌಕಟ್ಟಿನಲ್ಲಿ ವಿವರಿಸಬೇಕು ಎಂಬುದು ವೈಶೇಷಿಕ ದರ್ಶನದ ನಿಲುವು. ಈಶ್ವರನಲ್ಲಿ ನಂಬಿಕೆಯಿದ್ದರೂ ಅದು ಅವನು ಕೇವಲ ನಿಮಿತ್ತ ಕಾರಣನಾಗಬಹುದು ಎಂಬುದಕ್ಕೆ ಸೀಮಿತ.

ಬೆಳಕಿನ ಪ್ರತಿಫಲನ ಮತ್ತು ಪಾರದರ್ಶಕತೆಯನ್ನು ವಿವರಿಸಲು ವೈಶೇಷಿಕದ ದರ್ಶನ ಅದರ ಪರಮಾಣು ಸ್ವಭಾವವನ್ನೆ ಆಶ್ರಯಿಸುತ್ತದೆ. ಬೆಳಕಿನ ಪರಮಾಣುಗಳು ಚೆಂಡಿನಂತೆ ಹಿಂದಕ್ಕೆ ನೆಗೆಯುವುದರಿಂದ ಪ್ರತಿಫಲನ ಸಂಭವಿಸುತ್ತದೆ; ಪರಮಾಣುಗಳು ವಸ್ತುವಿನಲ್ಲಿ ತೂರಿಹೋಗುವುದರಿಂದ ಪಾರದರ್ಶಕತೆ ಸಿದ್ಧಿಸುತ್ತದೆ. ರಶ್ಮಿ ಭಂಗದ ವಿಚಾರ ಸ್ಪಷ್ಟವಾಗುವುದಿಲ್ಲ. ಬೆಳಕಿನ ನೇರಪಥ ಚಲನೆಯನ್ನು ಪರಮಾಣು ಕಲ್ಪನೆಯಿಂದಲೆ ವಿವರಿಸಬಹುದು. ಬೆಳಕಿನ ಕಣಗಳು ಊಹಾತೀತ ವೇಗದಿಂದ ಚಲಿಸುತ್ತವೆ.

ಕಣಾದ ಋಷಿ ಮಂಡಿಸಿದ ಪರಮಾಣು ವಾದವೆ ಅತ್ಯಂತ ಪ್ರಾಚೀನವಾದುದು. ಅಷ್ಟು ಹಿಂದೆ ಎಲ್ಲ ವಸ್ತುಗಳ ಕಟ್ಟಡ ಇಟ್ಟಿಗೆಗಳು ನಾಲ್ಕು ಭೂತಗಳ ಪರಮಾಣುಗಳೆಂದು ಊಹಿಸುವುದು ಒಂದು ಮಹತ್ವದ ಸಂಗತಿಯೆ. ಇಂದು ಕೂಡ ಎಲ್ಲ ವಸ್ತುಗಳ ಕಟ್ಟ ಕಡೆಯ ಕಟ್ಟಡ ಇಟ್ಟಿಗೆಗಳ ಬಗ್ಗೆ ಸರಿಯಾದ ತಿಳಿವಳಿಕೆ ಇಲ್ಲ. ಕಣಾದ ಋಷಿಗೆ ತಿಳಿಯದೆ ಇದ್ದ ಎಷ್ಟೋ ವಿಚಾರಗಳು ಈಗ ತಿಳಿದಿವೆ ನಿಜ. ಆದರೆ ಆ ಋಷಿ ತೋರಿಸಿದ ಮಾರ್ಗ ಮಾತ್ರ ಎಂದಿಗೂ ಅನುಕರಣೀಯ.

ನಾನು ಅಪಜಯವನ್ನು ಅರಿಯದ ಹುಟ್ಟು ಯೋಧ.

ಗಾಂಧೀಜಿ

ಸಾವಿಗೆ ನಾನೇಕೆ ಹೆದರುವುದಿಲ್ಲ

ಹೆರಾಲ್ಡ್ ಕುಶ್ನರ್

ನಾನು ಅಭ್ಯಸಿಸಿದ ವ್ಯಕ್ತಿಯೊಬ್ಬ ಉದ್ವೇಗಕ್ಕೊಳಗಾಗಿದ್ದ. "ಎರಡು ವಾರಗಳ ಹಿಂದೆ" ಆತ ಹೇಳಿದ. "ನನ್ನ ಸಹೋದ್ಯೋಗಿಯಾಗಿದ್ದವನ ಶವಸಂಸ್ಕಾರಕ್ಕೆ ಹೋಗಿದ್ದೆ. ಈ ಮೊದಲು ಆತ ಇರಲೇ ಎನ್ನುವ ಹಾಗೆ, ಈಗಾಗಲೇ ಕಛೇರಿಯಲ್ಲಿ ಅವನ ಸ್ಥಾನ ಭರ್ತಿಯಾಗಿದೆ. ಒಂದು ದಿನ ಈ ಘಟನೆಯು ನನ್ನ ಬದುಕಿನಲ್ಲೂ ಸಂಭವಿಸಬಹುದು. ಮತ್ತೆ ಆ ಮೊದಲಿನ ನನ್ನ ಇರುವಿಕೆಯನ್ನೇ ಜನ ಮರೆಯಬಹುದೆಂಬ ಯೋಚನೆಯನ್ನು ನಾನು ಬಿಡಲಾರದವನಾಗಿದ್ದೇನೆ."

ಸಾವಿನ ಭಯ ಈತನನ್ನು ಕಂಗೆಡಿಸಿರಲಿಲ್ಲ ಬದಲು ತನ್ನ ಬದುಕು ಗಮನಾರ್ಹವಾಗದೆ ಕೊನೆಗೊಳ್ಳುವುದರ ಬಗ್ಗೆ ಅವನು ಕಳವಳಗೊಂಡಿದ್ದ.

ಒಂದಲ್ಲ ಒಂದು ದಿನ ನಾವೂ ಈ ಪ್ರಶ್ನೆಯನ್ನು ಎದುರಿಸಬೇಕಾಗಬಹುದು. ಆಹಾರಸೇವನೆ, ನಿದ್ದೆ, ಕೆಲಸ, ಸಂತಾನೋತ್ಪತ್ತಿಗಿಂತ ಹೆಚ್ಚಿನದೇನಾದರೂ ಜೀವನದಲ್ಲಿದೆಯೆ? ಅಥವಾ ಮಿಂಚಿ ಮರೆಯಾಗುವುದಷ್ಟೇ ಬದುಕಿನರ್ಥವೆ?

Biblical Book of Ecclesiastes 'ನ್ನು' ಬರೆದ ಹಿರಿಯ ವಿದ್ವಾಂಸನ ಈ ಪ್ರಶ್ನೆಯನ್ನು ವಿಮರ್ಶಿಸಿದ್ದಾನೆ. ಮೊದಲಲ್ಲಿ ಆತ ನಿಷ್ಠುರನಾಗಿದ್ದ. 'ತೀರಾ ನಿರರ್ಥಕ ಮತ್ತು ಹುರುಳಿಲ್ಲದ ವಿಚಾರ' ಎಂದಿದ್ದ. ಆದರೆ ಪ್ರಪಂಚದ ಕೆಡುಕು ಮತ್ತು ಅನ್ಯಾಯಗಳನ್ನು ಪಟ್ಟಿ ಮಾಡಿದ ನಂತರ, ಐಶ್ವರ್ಯ, ಬುದ್ಧಿವಂತಿಕೆ, ಸುಖ ಮತ್ತು ಧಾರ್ಮಿಕತೆಗಳು ಬದುಕಿನ ಕೊನೆಯ ಹಂತಗಳೆಂದು ನಿರ್ಧರಿಸಿದ ಅನಂತರ ಅವನು ವಿಭಿನ್ನ ಉತ್ತರವೊಂದನ್ನು ತಲುಪಿದ, "ನೀನು ಸೇವಿಸುವ ಆಹಾರವನ್ನು

೧೯೮೭ರ ಜುಲೈ ತಿಂಗಳಿನ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಹೆರಾಲ್ಡ್ ಕುಶ್ನರ್ ಅವರ "ವೈ ಐ ಯಾಮ್ ನಾಟ್ ಅಫ್ರೈಡ್ ಟು ಡೈ' ಎಂಬ ಲೇಖನದ ಅನುವಾದ.

ಸಂತೋಷದಿಂದ ಸ್ವೀಕರಿಸು. ಪ್ರೀತಿಸುವ ಹೆಣ್ಣಿನೊಂದಿಗೆ, ನಿನಗೆ ಪ್ರಸಾದಿತವಾಗಿ ನ್ಯಾಯವಾಗುವ ದಿನಗಳನ್ನು ಆನಂದದಿಂದ ಕಳೆ. ಸಾಧ್ಯವಿರುವ ಕಾರ್ಯವನ್ನು ಸರ್ವ ಸಾಮರ್ಥ್ಯದಿಂದ ನಿರ್ವಹಿಸು."

ಈತನ ಅಭಿಪ್ರಾಯದಂತೆ, ಬದುಕು ಪವಿತ್ರವಾದುದು, ವಿಶೇಷವಾದುದು, ಆದರೆ ಅರ್ಥಹೀನವಾಗುವ ಸಾಧ್ಯತೆಯೂ ಇಲ್ಲದಿಲ್ಲ. ಅವನು ಕಂಡುಕೊಂಡ ಉತ್ತರವು ಕೆಲವೇ ಹಿರಿಯ ಸಾಧನೆಗಳಿಂದಲ್ಲ ಬದಲು ಸಾವಿರಾರು ಚಿಕ್ಕ ವಿಚಾರಗಳಲ್ಲಿ, ಪ್ರತಿದಿನವನ್ನೂ ಸಾಧ್ಯವಾದಷ್ಟೂ ಪರಿಪೂರ್ಣವಾಗಿ ಜೀವಿಸುವುದರ ಮೂಲಕ.

ಇದು ಹೇಗೆ ಸಾಧ್ಯ? ನನ್ನ ಮತ್ತು ಇತರರ ಜೀವನವನ್ನು ಪರಿಶೋಧಿಸಿದ ಬಳಿಕ, ಜೀವನದಲ್ಲಿ ಪರಿಪೂರ್ಣತೆಯ ಕಲ್ಪನೆಯನ್ನು ನೀಡುವ ನಾಲ್ಕು ತತ್ವಗಳನ್ನು ನಾನು ಕಂಡುಕೊಂಡಿದ್ದೇನೆ.

೧. ಸವಾಲು ಮತ್ತು ನೋವನ್ನು ಸ್ವೀಕರಿಸುವುದು :

ನೋವನ್ನು ಸ್ವೀಕರಿಸುವುದಕ್ಕೆ ನಾವು ಸದಾ ಸಿದ್ಧರಾಗಿರಬೇಕಾಗಿರುತ್ತದೆ. ಇಲ್ಲವಾದಲ್ಲಿ ಆಶಾವಾದಿಗಳಾಗುವುದಕ್ಕಾಗಲೀ, ಪ್ರೀತಿಸುವುದಕ್ಕಾಗಲೀ ಸಾಧ್ಯವಾಗುವುದಿಲ್ಲ. ನೋವಿನ ಅನುಭವವನ್ನು ಸ್ವೀಕರಿಸಲು ಸಿದ್ಧರಾಗದಿದ್ದಲ್ಲಿ, ಸಂತೋಷದ ಅನುಭವವೂ ನಮಗಾಗುವುದಿಲ್ಲ.

ಪ್ರತಿವರ್ಷವೂ ಸಾವಿರಾರು ಜನ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ, ಏಕೆ? ನೋವಿನ ಬಗೆಗೆ ಸಮಾಜದ ಮನೋವೃತ್ತಿಯೇ ಇದಕ್ಕೆ ಕಾರಣವಿರಬಹುದೆಂದು ನನ್ನ ಸಂಶಯ. ಪ್ರತಿಯೊಂದು ನೋವನ್ನೂ ಶಮನಗೊಳಿಸುವ ಗುಳಿಗೆಯಿದೆಯೆಂಬ ಭ್ರಮೆಗೆ ನಾವು ಒಳಗಾಗಿದ್ದೇವೆ. ನಿರಾಕರಣೆಯ ನೋವು, ಕಳೆಗುಂದುವ ಆರೋಗ್ಯದ ನೋವು, ಛಿದ್ರಗೊಳ್ಳುವ ಕನಸುಗಳ ನೋವು—ಮರೆಯಾಗುವುದು ಸುಲಭವಲ್ಲ. ಆದರೆ ಎಷ್ಟೋ ಜನಕ್ಕೆ ಈಗ ಹೇಗೆ ವ್ಯವಹರಿಸಬೇಕೆಂಬುದೇ ಗೊತ್ತಿರುವುದಿಲ್ಲ.

ಕೆಲವು ವರ್ಷಗಳ ಹಿಂದೆ, ೧೪ ವರ್ಷಗಳ ನನ್ನ ಮಗ Aaron, ಅಪರೂಪದ ಕಾಯಿಲೆಯಿಂದ ತೀರಿಹೋದ. ಆ ನಷ್ಟವು ನನ್ನನ್ನು ಇಂದಿಗೂ ನೋಯಿಸುತ್ತದೆ. ಆದರೆ ಅದನ್ನು ಸ್ವೀಕರಿಸುವ ದಾರಿಯನ್ನು ನಾನು ಕಂಡುಕೊಂಡಿದ್ದೇನೆ ಮತ್ತು ಉಳಿದಿದ್ದೇನೆ. ಇತರರು ನಮ್ಮ ಬಗ್ಗೆ ಕಾಳಜಿ ವಹಿಸುವಂತೆ ಮಾಡುವುದರ ಮೂಲಕ ದೇವರು ನಮ್ಮನ್ನು ಸಂರಕ್ಷಿಸಿದ್ದಾನೆ. ನಮ್ಮ ಉದಾಹರಣೆಗಳಿಂದ, ಇತರರು ಕಷ್ಟಗಳನ್ನು ಭರವಸೆ ಹಾಗೂ ಧೈರ್ಯದಿಂದ ಎದುರಿಸುವುದನ್ನು ಕಲಿತುಕೊಳ್ಳುತ್ತಾರೆ.

ನಿರಾಶೆ ಮತ್ತು ದುರಂತದಿಂದ ದೂರವಾಗುವುದೆಂದರೆ, ಆತ್ಮದ ಒಂದು ಭಾಗವನ್ನು ಕಳಚಿಕೊಂಡಂತೆ, ನೋವು ಜೀವನದ ಅವಿಭಾಜ್ಯ ಅಂಗ ಆದರದು ಶಾಶ್ವತವಲ್ಲ ಮತ್ತು ಸಹಿಸುವಂಥದ್ದು. ತುಂಡಾದ ಎಲುಬು ಮತ್ತೆ ಸೇರುವಂತೆ, ಕಾಲಕ್ರಮೇಣ ಛಿದ್ರಗೊಂಡ ಹೃದಯವೂ ಸಮಸ್ಥಿತಿಗೆ ಬರುತ್ತದೆ. ಜೀವನ ಎನ್ನುವುದು ನೋವಿಗೂ ಅತೀತವಾಗಿರುತ್ತದೆ.

೨. ಜನರಿಗೆ ಹತ್ತಿರವಾಗಿರಿ :

ನಾವು ನಮ್ಮ ಜೀವನವನ್ನು ಹಂಚಿಕೊಳ್ಳುವ ಕೆಲವೇ ವ್ಯಕ್ತಿಗಳೊಂದಿಗೆ ಆತ್ಮೀಯವಾಗಿ ತಾದಾತ್ಮ್ಯ ಹೊಂದಲು ಇಚ್ಛಿಸುತ್ತೇವೆ. ಒಮ್ಮೆ ದೂರದರ್ಶನದಲ್ಲಿ ನೋಡಿದ ನಾಟಕದ ನೆನಪಾಗುತ್ತಿದೆ. ಮಧುಚಂದ್ರಕ್ಕೆ ಹೊರಟವರಿಬ್ಬರು ಪ್ರವಾಸೀ ನಾವೆಯ ಅಡ್ಡ ಹಲಗೆಯ ಮೇಲೆ ನಿಂತಿರುತ್ತಾರೆ. "ನಾನು ನಾಳೆ ಸಾಯಬೇಕಾಗಿದ್ದಲ್ಲಿ," ಹೆಣ್ಣು ಹೇಳುತ್ತಾಳೆ "ನನ್ನ ಜೀವನವು ಪರಿಪೂರ್ಣವಾಗಿದೆಯೆಂದು ನಾನು ತಿಳಿಯುತ್ತೇನೆ. ಏಕೆಂದರೆ, ನಾನು ನಿನ್ನ ಪ್ರೀತಿಯನ್ನು ಅರಿತಿದ್ದೇನೆ" ಅವಳ ಗಂಡ ಆಕೆಯನ್ನು ಚುಂಬಿಸುತ್ತಾನೆ. ಮತ್ತು ಅವರು ನಾವೆಯ ಹೆಸರನ್ನು ಉಚ್ಚರಿಸುತ್ತಾ ಅಲ್ಲಿಂದ ಸರಿಯುತ್ತಾರೆ—TITANIC.

ಬೇಸಿಗೆಯ ಒಂದು ದಿನ ಸಮುದ್ರದಂಡೆಯಲ್ಲಿ ಓರ್ವ ಬಾಲಕ ಮತ್ತು ಬಾಲಕಿಯು ಮರಳಿನ ಕೋಟೆಯೊಂದನ್ನು ದೊಡ್ಡದಾಗಿ ಕಟ್ಟುತ್ತಿರುವುದನ್ನು ನಾನು ಗಮನಿಸಿದೆ. ಇನ್ನೇನು ಕೆಲಸ ಮುಗಿಯಬೇಕೆನ್ನುವಾಗ, ದೊಡ್ಡ ಅಲೆಯೊಂದು ಅಪ್ಪಳಿಸಿ, ಕೋಟೆಯನ್ನು ಮರಳರಾಶಿಯನ್ನಾಗಿ ಮಾಡಿತು. ಮಕ್ಕಳು ಅಳಬಹುದೆಂದು ನಾನು ನಿರೀಕ್ಷಿಸಿದೆ. ಆದರೆ ಅದಕ್ಕೆ ವ್ಯತಿರಿಕ್ತವಾಗಿ ಅವರು ನಗುತ್ತಾ ದಡಕ್ಕೆ ಓಡಿದರು. ಮತ್ತು ಇನ್ನೊಂದು ಕೋಟೆಯ ಕೆಲಸವನ್ನು ಆರಂಭಿಸಿದರು !

ಸಮಯ ಹಾಗೂ ಶ್ರಮವನ್ನುಪಯೋಗಿಸಿ ನಾವು ನಿರ್ಮಿಸುವುದೆಲ್ಲವೂ ಮರಳಿನ ಮೇಲೆ ಕೋಟೆ ನಿರ್ಮಿಸಿದಂತೆ. ಯಾವುದೇ ಕ್ಷಣದಲ್ಲಿ ತೆರೆ ಬಂದು ಅಪ್ಪಳಿಸಿ, ನೆಲಸಮಗೊಳಿಸಬಹುದು. ಹೀಗಾದಾಗ, ಆಧರಿಸಲು ಆತ್ಮೀಯರಿದ್ದವರು ನಗಬಲ್ಲರು ಮತ್ತು ಮರಳಿಯತ್ನಿಸಬಲ್ಲರು.

೩. ಉತ್ತಮ ಬದಲಾವಣೆಗೆ ಕಾರಣರಾಗಿ :

ನಮ್ಮೆಲ್ಲರಲ್ಲಿ, ಅಪಾರ ಐಶ್ವರ್ಯ ಯಾ ಪ್ರಕಾಂಡ ಪ್ರತಿಭೆ ಇಲ್ಲದಿರಬಹುದು. ಆದರೆ ನಮ್ಮ ಅಳಿವಿನ ನಂತರವೂ ಉಳಿಯುವ ವಿಧಾನದಲ್ಲಿ ನಮ್ಮ ಕ್ರಿಯಾಶಕ್ತಿಯನ್ನು ವಿನಿಯೋಗಿಸಬಹುದು.

ಬೋಧನೆಯಿಂದ ಬದಲಾವಣೆಯನ್ನು ಉಂಟುಮಾಡಬಹುದು. ಅಂದರೆ ಕೇವಲ ತರಗತಿಯೊಳಗಣ ಶಿಕ್ಷಣವೆಂದಲ್ಲ. ಅನುಭವೀ ಲೆಕ್ಕಿಗ ಅಥವಾ ಕಾರ್ಖಾನೆಯ ಕೆಲಸಗಾರ ಹೊಸಬನಿಗೆ ಹೇಳಿಕೊಡುವುದಾಗಿರಬಹುದು. ಹೀಗೆ ಇತರರ ಜೀವನವನ್ನು ರೂಪಿಸುವುದರಲ್ಲಿ, ಸಣ್ಣರೀತಿಯಲ್ಲಿ, ಆದರೆ ಮಹತ್ವಪೂರ್ಣವಾಗಿ, ಪಾತ್ರವಹಿಸಿದಾಗ ಸಿಗುವ ತೃಪ್ತಿಯು ಅಪಾರವಾದುದು.

೪. ಸಾಯುವವರೆಗೆ ಬದುಕು :

ತತ್ವಜ್ಞಾನಿ Horace Kallen ಒಮ್ಮೆ ಹೇಳಿದ್ದ, "ಕೆಲವರು ಸಾವಿನ ಭಯದೊಡನೆ ಜೀವನವನ್ನು ರೂಪಿಸಿಕೊಳ್ಳುತ್ತಾರೆ. ಇನ್ನು ಕೆಲವರು, ಜೀವನದ ಆನಂದದೊಡನೆ ಬದುಕನ್ನು ರೂಪಿಸಿಕೊಳ್ಳುತ್ತಾರೆ. ಮೊದಲನೆಯವರು ಸಾಯುತ್ತಾ

ಬದುಕುತ್ತಾರೆ. ಎರಡನೇಯವರು ಸಾಯುವಾಗಲೂ ಬದುಕಿರುತ್ತಾರೆ. ನಾನು ಸಾಯುವಾಗಲೂ ಬದುಕಲು ಇಚ್ಛಿಸುವೆ."

ಅಮರಕಾರ್ಯಕ್ಕಾಗಿ ಹುಡುಕಾಟವನ್ನು ನಿಲ್ಲಿಸಿದಾಗ, ಬದುಕು ಅರ್ಥಪೂರ್ಣವಾಗುತ್ತದೆ. ಖುಷಿ ನೀಡುವ ಚಿಕ್ಕಚಿಕ್ಕ ಕ್ಷಣಗಳಿಂದ ದಿನಗಳನ್ನು ತುಂಬುವ ಬದಲು ಏಕಾಗ್ರತೆಯನ್ನು ಸಾಧಿಸಿದಾಗ, "ಜೀವನವೆಂದರೇನು ?" ಎಂಬುದಕ್ಕೆ ಈ ಕೆಳಗಿನ ಉತ್ತರವು ಲಭಿಸುವ ಸಾಧ್ಯತೆಯಿದೆ.

ಮಹತ್ವದ ಕೃತಿಗಳನ್ನು ರಚಿಸುವುದಾಗಲೀ, ಅಪಾರ ಐಶ್ವರ್ಯ, ಶಕ್ತಿಯನ್ನು ಸಂಪಾದಿಸುವುದಾಗಲೀ ಮಾತ್ರ ಜೀವನವಲ್ಲ. ಬದುಕು–ಪ್ರೀತಿಸುವುದು (ಶೇಖರಿಸು) ಮತ್ತು ಪ್ರೀತಿಸಲ್ಪಡುವುದನ್ನು ಆಧರಿಸಿದೆ. ಆನಂದಿಸುತ್ತಾ ಆಹಾರವನ್ನು ಸೇವಿಸುವುದು ಮತ್ತು ಸೂರ್ಯನ ಬೆಳಕಿನಲ್ಲಿ ಕುಳಿತಿರುವುದು. ಬದಲಾಗಿ, ಅವಸರದಿಂದ ತಿಂದು, ಕಛೇರಿಗೆ ದಾವಂತದಿಂದ ಧಾವಿಸುವುದಲ್ಲ. ಸೂರ್ಯನ ನಿರ್ಗಮನದ ನಶ್ವರ ಕ್ಷಣಗಳನ್ನು ಸವಿಯುವುದು. ಎಲೆಗಳ ಬಣ್ಣ ಬದಲಾಯಿಸುವಿಕೆಯನ್ನು ನೋಡುತ್ತಾ ಆನಂದಿಸುವುದು ಮಾನವ ಸಂಬಂಧದ ಅಪರೂಪದ ಕ್ಷಣಗಳನ್ನು ಅನುಭವಿಸುವುದು.

ಜೀವನವನ್ನು ನಾವು ನಿಧಿಯ ಸಂಗ್ರಹವೆಂದು ಭಾವಿಸಬೇಕು. ಹೊಸ ಸ್ನೇಹಿತನೊಬ್ಬನು ಸಿಕ್ಕಿದಂತೆ, ಹೊಸ ಅನುಭವವನ್ನು ಪಡೆದಂತೆ, ಹೊಸ ಸತ್ಯವೊಂದನ್ನು ಕಂಡಂತೆ, ನಾವು ಹಿಂದಿಗಿಂತ ಶ್ರೀಮಂತರಾಗುತ್ತೇವೆ. ಬದುಕು–ಒಂದು ಉತ್ತಮ ಪುಸ್ತಕದಂತೆ—ನಾವು ಅದರೊಳಗೆ ಲೀನವಾದಷ್ಟೂ ಅದು ನಮ್ಮೊಂದಿಗೆ ವಿಲೀನವಾಗುತ್ತದೆ. ತಿಳುವಳಿಕೆ ನೀಡಿ, ನಡವಳಿಕೆಯನ್ನು ಅಭಿವೃದ್ಧಿಗೊಳಿಸುತ್ತದೆ. ಹಿಂದಿನ ಘಟನೆಗಳ ಅರ್ಥವು ಸ್ಪಷ್ಟವಾಗುತ್ತದೆ. ಕೊನೆಯಲ್ಲಿ ಸಂತೃಪ್ತಿಗೊಳಿಸುವ ಪರಿಪೂರ್ಣತೆಯಿರುತ್ತದೆ.

'Ecclesiasts'ನ ಲೇಖಕನು, ಯಾವ ವಿಚಾರವು ತನ್ನ ಜೀವನವನ್ನು ಕೇವಲ ಮರೆಯಾಗುವುದಕ್ಕಿಂತ ಮಹತ್ವಪೂರ್ಣವಾಗಿ ಮಾಡಿದೆಯೋ, ಅದು ಸಾವಿನಲ್ಲಿ ಮರೆಯಾಗಬಹುದು ಎಂದಿದ್ದಾನೆ. ಆದರೆ ಆತನ ಅಭಿಪ್ರಾಯದ ಪ್ರಕಾರ, ಮಾನವ ಜೀವನಕ್ಕೆ ಕೇವಲ ಅಸ್ತಿತ್ವಕ್ಕಿಂತ ಹೆಚ್ಚಿನ ಅರ್ಥವಿರಬೇಕು. ಒಂದು ಕಾರ್ಯದಲ್ಲಿ ಮಗ್ನವಾಗಿದ್ದಾಗ, ಅಥವಾ ಕುಟುಂಬದೊಡನೆ ಸಂತೋಷವಾಗಿದ್ದಾಗ, ಪ್ರೀತಿಸಿದಾಗ ಅಥವಾ ಪ್ರೀತಿಸಲ್ಪಟ್ಟಾಗ, ಉದಾರಿಯಾದಾಗ ಅಥವಾ ಬುದ್ಧಿಜೀವಿಯಾದಾಗ ಜೀವನವು ಇರುವಿಕೆಗಿಂತ ಹೆಚ್ಚಿನ ಮಹತ್ವ ಉಳ್ಳದ್ದೆಂಬುದು ಮನಸ್ಸಿಗೆ ವೇದ್ಯವಾಗುವುದು. ಮಾನವೀಯತೆಯ ಭಾವವು ತತ್ವ ಅಥವಾ ತರ್ಕಶಾಸ್ತ್ರಕ್ಕಿಂತ ಹೆಚ್ಚಿನದು.

ಒಂದು ಹುತ ಮುಂದೆ ಹೋಗೋಣ. ಜೀವನವನ್ನು ಭಗವಂತನ ಇರುವಿಕೆಯನ್ನು ಮರೆತು ಅರ್ಥೈಸಲು ಸಾಧ್ಯವೆ ?

ಪರಮಾತ್ಮನು ಜೀವನಕ್ಕೆ ಅಸ್ತಿತ್ವಕ್ಕಿಂತ ಹೆಚ್ಚಿನ ಅರ್ಥವನ್ನು ಹೇಗೆ ನೀಡಿದ್ದಾನೆ ? ನೈತಿಕ ಋಣವನ್ನು ಹೇರುವುದರ ಮೂಲಕ. ಆಹಾರ, ನಿದ್ದೆ, ವ್ಯಾಯಾಮದ ಅಗತ್ಯವಿರುವಷ್ಟೇ ಸಹಜವಾಗಿ, ನಾವು ಉಪಕಾರಿಗಳೂ, ಉದಾರಿಗಳೂ ಬುದ್ಧಿಜೀವಿಗಳೂ ಆಗಬಯಸುತ್ತೇವೆ ಮತ್ತು ದೇವನು ಇದನ್ನು ನಿರೀಕ್ಷಿಸುತ್ತಾನೆ. ಗಳಿಸಿದ್ದೆ ?

ಕಳೆದದ್ದೆ? ಲಾಭವೆ? ನಷ್ಟವೆ? ಮಾನವನು ಕೇವಲ ಪರಿಣಾಮಗಳಿಂದ ವಸ್ತುಸ್ಥಿತಿಯನ್ನು ವಿಮರ್ಶಿಸಬಹುದು. ಭಗವಂತನೊಬ್ಬನೇ ಪರಿಣಾಮದ ಮಾನದಂಡಕ್ಕೆ ಅತೀತವಾಗಿ, ಇರುವಿಕೆಯಿಂದ ವಿಮರ್ಶಿಸಬಲ್ಲ.

ದೇವರು ನಮ್ಮ ಸೋಲನ್ನು ಕ್ಷಮಿಸುವುದಷ್ಟೇ ಅಲ್ಲ ನಮ್ಮ ಗೆಲುವನ್ನು ಇತರರು ಅಥವಾ ನಾವೇ ಗುರುತಿಸುವ ಮೊದಲು ಗುರುತಿಸಬಲ್ಲ. ದೇವರೊಬ್ಬನೇ, ನಾವು ಉಪಯೋಗಿಸಿರದ ಕೋಪೋದ್ರಿಕ್ತ ಮಾತುಗಳಿಗಾಗಿ, ನಿಗ್ರಹಿಸಿದ ಭಾವನೆಗಳಿಗಾಗಿ ನಮ್ಮನ್ನು ಮೆಚ್ಚಬಲ್ಲ. ತಾಳ್ಮೆ ಮತ್ತು ಒಳ್ಳೆಯ ಗುಣಗಳು ಸುತ್ತಲಿನ ಜನರಿಂದ ಗುರುತಿಸಲ್ಪಡದೆ ಇದ್ದಾಗ ಭಗವಂತನು ಗುರುತಿಸಬಲ್ಲ. ಇಂತಹ ಒಳ್ಳೆಯ ಕಾರ್ಯಗಳು ಎಂದೂ ವ್ಯರ್ಥವಾಗುವುದಿಲ್ಲ. ಏಕೆಂದರೆ ಪರಮ ಚೇತನವು ಅದಕ್ಕೆ ನಿತ್ಯತೆಯನ್ನು ನೀಡುವುದು.

ನಾನು ಇತ್ತೀಚಿಗೆ ೫೧ ದಾಟಿದ್ದೇನೆ. ಇನ್ನೂ ಕೆಲಕಾಲ ಬದುಕುವ ಭರವಸೆಯಿದೆ. ಆದರೆ ಸಾವಿನ ನಿರೀಕ್ಷೆಯು ನನ್ನಲ್ಲಿ ಭವಿಷ್ಯವನ್ನುಂಟುಮಾಡುವುದಿಲ್ಲ. ನಾನು ಪ್ರೀತಿಸಿದ್ದೇನೆ. ಪ್ರೀತಿಸಲ್ಪಟ್ಟಿದ್ದೇನೆ. ಖಾಸಗೀ ಮತ್ತು ವೃತ್ತಿಕ್ಷೇತ್ರಗಳಲ್ಲಿ ಸವಾಲುಗಳನ್ನು ಎದುರಿಸಿದ್ದೇನೆ ಮತ್ತು ತಕ್ಕಮಟ್ಟಿಗೆ ಉತ್ತೀರ್ಣನಾಗಿದ್ದೇನೆ. ನನ್ನ ಯೋಚನೆಗಳು ಮತ್ತು ಕಾರ್ಯಗಳು ಇತರರ ಬದುಕಿನಲ್ಲಿ ಸ್ವಲ್ಪ ಮಟ್ಟಿಗಾದರೂ ಬದುಕುಳಿಯಬಹುದೆಂಬ ಭರವಸೆಯಿಂದ, ಜೀವನದ ಕೊನೆಯ ಹಂತವನ್ನು ನಾನು ನಿಶ್ಚಿಂತೆಯಿಂದ ನಿರೀಕ್ಷಿಸಬಹುದು. ದೇವರು ನನ್ನೊಡನೆ ಇರುವನೆಂಬ ನಂಬಿಕೆಯಿಂದಷ್ಟೇ ಅಲ್ಲ, ಅವನು ನನ್ನನ್ನು ಇಲ್ಲಿಯವರೆಗೆ ನಡೆಸಿರುವನೆಂಬುದರಿಂದಾಗಿ, ಸಾವಿನ ನೆರಳಿನ ಕಣಿವೆಯಲ್ಲಿ ನಾನು ಭಯವಿಲ್ಲದೆ ಸಂಚರಿಸಬಹುದು.

ಒಂದು ವಿಚಾರವನ್ನು ಮಾತ್ರ ಸ್ಪಷ್ಟವಾಗಿ ಅರಿತಿರುವೆ–ಏನೆಂದರೆ, ನಿಮಗೆ ಸಾವಿನ ಭಯವಿಲ್ಲದಾದಾಗ, ನೀವು ನಿಜವಾದ ಅರ್ಥದಲ್ಲಿ ಬದುಕಿರುತ್ತೀರಿ.

ಅನು : ಲೀಲಾ ಮಣ್ಣಾಲ

ಹಿಂಸೆಯಿಂದ ಹಿಂಸೆಯೇ ಪ್ರಾಪ್ತವಾದೀತೆ ಹೊರತು, ಅಹಿಂಸೆಯಲ್ಲ, ಶಾಂತಿಯಲ್ಲ.

ಗಾಂಧೀಜಿ

ಸುಮಿತ್ರಾನಂದನ ಪಂತ್—ಒಂದು ಪರಿಚಯ

ಲಕ್ಷ್ಮೀನಾರಾಯಣ ಅರೋರಾ

ವಿರಹಿಯಾಗಿದ್ದಿರಬೇಕು ಆ ಮೊದಲ ಕವಿ
ನಿಟ್ಟುಸಿರಿನಿಂದ ಹುಟ್ಟಿರಬೇಕು ಹಾಡು
ಸದ್ದಿಲ್ಲದೆ ಉಕ್ಕಿಹೊರಬಂದ ಕಣ್ಣೀರು
ಗೊತ್ತಿಲ್ಲದೆ ತನಗೆ ತಾನೇ ಕವಿತೆಯಾಗಿದ್ದಿರಬೇಕು

—ಸುಮಿತ್ರಾನಂದನ ಪಂತ್

ಸುಮಿತ್ರಾನಂದನ ಪಂತರು ಹಿಂದಿ ಸಾಹಿತ್ಯದಲ್ಲಿ ಯುಗಪ್ರವರ್ತಕರೆನಿಸಿದ ಮಹಾಕವಿಗಳಲ್ಲಿ ಒಬ್ಬರು. ಅನೇಕ ಸಂದರ್ಭಗಳಲ್ಲಿ ಒಬ್ಬ ಸಾಹಿತಿ ಅಥವಾ ಕಲಾವಿದ ತನ್ನ ಬರವಣಿಗೆ ಇಲ್ಲವೆ ಕಲೆಯಲ್ಲಿ ದೊಡ್ಡ ದೊಡ್ಡ ಆದರ್ಶಗಳನ್ನು, ಸೂಕ್ಷ್ಮ ಸಂವೇದನಶೀಲತೆಯನ್ನು, ಎಲ್ಲಿಲ್ಲದ ಸಹೃದಯತೆಯನ್ನು ಅಂಕಿತಗೊಳಿಸಬಲ್ಲವನಾದರೂ ಆತನದೇ ವಾಸ್ತವ ಬದುಕಿನ ಪುಟಗಳಲ್ಲಿ ಇಣುಕಿ ನೋಡಿದರೆ ಅನೇಕ ವಿರೋಧಾಭಾಸಗಳು ಕಂಡುಬರುವ ಸಾಧ್ಯತೆ ಇರುತ್ತದೆ. ಕೆಲವೇ ಮಂದಿ ಋಜುಸ್ವಭಾವದವರು ಮಾತ್ರ ತಮ್ಮ ಬದುಕಿಗೂ ಬರವಣಿಗೆಗೂ ಹೆಚ್ಚಿನ ಅಂತರವಿಲ್ಲದಂತೆ ತಮ್ಮ ಆದರ್ಶ ಸೂಕ್ಷ್ಮತೆ ಸಹೃದಯತೆಗಳನ್ನು ಎರಡೂ ಕಡೆಗಳಲ್ಲಿ ಅಳವಡಿಸಿಕೊಂಡಿರುವುದನ್ನು ಕಾಣಬಹುದು. ಅಂತಹ ಅಪರೂಪದ ವ್ಯಕ್ತಿಗಳಲ್ಲಿ ಸುಮಿತ್ರಾನಂದನ ಪಂತರೂ ಒಬ್ಬರು.

ಭಾರತೀಯ ಜ್ಞಾನಪೀಠದ ಪ್ರತಿಷ್ಠಿತ ಪುರಸ್ಕಾರವನ್ನು ೧೯೬೮ರಲ್ಲಿ ತಮ್ಮ 'ಚಿದಂಬರಾ' ಕೃತಿಗಾಗಿ ಪಡೆದುಕೊಂಡ ಪಂತರು ಸಾಗಿಬಂದ ಕಾವ್ಯದ ಹಾದಿ ವಿಶಿಷ್ಟವಾಗಿದೆ. ಆಧುನಿಕ ಕಾಲದಲ್ಲಿ ಹಿಂದಿ ಕಾವ್ಯಸಾಹಿತ್ಯ ತೊಟ್ಟ ದಿರುಸುಗಳನ್ನು ಇಟ್ಟ ಹೆಜ್ಜೆಗಳನ್ನು ಅವರ ಕಾವ್ಯದಲ್ಲಿ ಕ್ರಮಾನುಗತವಾಗಿ ಕಾಣಬಹುದಾಗಿದೆ. ಪ್ರಕಾರವೈವಿಧ್ಯದ ದೃಷ್ಟಿಯಿಂದ ಆಧುನಿಕ ಹಿಂದಿ ಕಾವ್ಯದಲ್ಲಿ ಕಂಡುಬರುವ ಸಾಹಿತ್ಯ ಪ್ರವೃತ್ತಿಗಳಿಗೆ ಅವರ ರಚನೆ

ಗಳು ಒಂದು ಐತಿಹಾಸಿಕ ದಾಖಲೆಯಂತಿದೆ. ಛಾಯಾವಾದ, ರಹಸ್ಯವಾದ, ಪ್ರಗತಿ ವಾದ, ಪ್ರಯೋಗವಾದ, ಮಾನವತಾವಾದ ಹೀಗೆ ಬಗೆಬಗೆಯ ಜಾಡಿನಲ್ಲಿ ಹರಿದು ಬಂದ ಸಾಹಿತ್ಯಧಾರೆಯ ಸರ್ವತೋಮುಖ ಪರಿಚಯ ನಮಗೆ ಪಂತರ ರಚನೆಗಳಲ್ಲಿ ಲಭ್ಯವಾಗುತ್ತದೆ.

ಸುಮಿತ್ರಾನಂದನ ಪಂತರು ಮೇ ೨೦, ೧೯೦೦ರಂದು ಉತ್ತರ ಪ್ರದೇಶದ ಅಲ್ಮೋರಾದಿಂದ ಸುಮಾರು ೫೩ ಕಿ. ಮೀ. ದೂರದಲ್ಲಿರುವ ಕೌಸಾನಿಯಲ್ಲಿ ಹುಟ್ಟಿದರು. ಅವರ ತಂದೆ ಪಂಡಿತ ಗಂಗಾದತ್ತ ಪಂತರು ಅಲ್ಲಿಯ ಚಹಾ ತೋಟದಲ್ಲಿ ಮ್ಯಾನೇಜರ್ ಆಗಿದ್ದರಲ್ಲದೆ ಸ್ವತಃ ಸೌದೆ ವ್ಯಾಪಾರವನ್ನೂ ಮಾಡುತ್ತಿದ್ದರು. ಹುಟ್ಟಿದ ಆರು ಗಂಟೆಗಳ ಅವಧಿಯಲ್ಲಿಯೆ ದುರದೃಷ್ಟವಶಾತ್ ಪಂತರು ತಾಯಿ ಸರಸ್ವತಿಯವ ರನ್ನು ಕಳೆದುಕೊಂಡರು. ನಾಲ್ಕು ಮಂದಿ ಸಹೋದರರು ಮತ್ತು ನಾಲ್ಕು ಮಂದಿ ಸಹೋದರಿಯರ ಪೈಕಿ ಪಂತರೇ ಕೊನೆಯವರು. ಸಹೋದರರಾದ ಹರದತ್ತ ದೇವೀದತ್ತ ರಂತೆ ಅವರ ಹುಟ್ಟುಹೆಸರು ಗುಸಾಯಿದತ್ತ ಎಂಬುದಾಗಿತ್ತು. ನಾಲ್ಕನೆಯ ತರಗತಿಯ ವರೆಗೆ ಕೌಸಾನಿಯ ವರ್ನ್ಯಾಕ್ಯುಲರ್ ಶಾಲೆಯಲ್ಲೇ ಪಂತರು ಓದುಬರಹ ಕಲಿತರು. ಅನಂತರ ಅಲ್ಮೋರಾದ ಸರ್ಕಾರಿ ಶಾಲೆಗೆ ಸೇರಿದರು. ಒಂಬತ್ತನೆಯ ತರಗತಿಯವರೆಗೆ ಅಲ್ಲಿ ಓದಿದ ಗುಸಾಯಿದತ್ತ ತಮ್ಮ ಹೆಸರನ್ನು ಸುಮಿತ್ರಾನಂದನ ಪಂತ ಎಂದು ಬದಲಾಯಿಸಿಕೊಂಡರು. ಕೌಸಾನಿ ಮತ್ತು ಅಲ್ಮೋರಾದ ಸುತ್ತಮುತ್ತಲ ಪ್ರದೇಶವೆಲ್ಲ ಪ್ರಕೃತಿಯ ಸೊಬಗಿನ ಬೀಡು. ಘಟ್ಟಪ್ರದೇಶ, ಬಗೆಬಗೆಯ ಹೂಗಿಡಮರಗಳು, ಪಶು ಪಕ್ಷಿಗಳು—ನಿಸರ್ಗ ಎಳೆಯ ವಯಸ್ಸಿನ ಸೂಕ್ಷ್ಮ ಸಂವೇದಿಯಾದ ಪಂತರನ್ನು ತನ್ನ ಮಡಿಲಿಗೆ ಕೈಬೀಸಿ ಕರೆಯಿತು.

ಅನಂತರ ೧೯೧೮ರಲ್ಲಿ ಒಂದು ವರ್ಷಕಾಲ ಅವರು ವಾರಾಣಸಿಗೆ ತೆರಳಿ ಅಲ್ಲಿ ಜಯನಾರಾಯ್ಣ ಹೈಸ್ಕೂಲಿನಲ್ಲಿ ಓದಿ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಜುಲೈ ೧೯೧೯ರಲ್ಲಿ ಪ್ರಯಾಗದ ಮ್ಯೋರ್ ಸೆಂಟ್ರಲ್ ಕಾಲೇಜನ್ನು ಸೇರಿ ಹಿಂದೂ ಬೋರ್ಡಿಂಗ್‌ನಲ್ಲಿ ವಾಸಮಾಡತೊಡಗಿದರು. ೧೯೨೧ರಲ್ಲಿ ಅಸಹಕಾರ ಚಳವಳಿ ನಡೆದಾಗ ಮಹಾತ್ಮ ಗಾಂಧಿಯವರ ಎದುರಿನಲ್ಲಿ ಕಾಲೇಜು ಬಿಟ್ಟು ಚಳವಳಿಗೆ ಧುಮುಕ ಬಯಸುವ ಹುಡುಗರ ಎಣಿಕೆ ನಡೆದಾಗ ಪಂತರ ಅಣ್ಣ ಹಿಂದಿನಿಂದ ಅವರ ಕೈಯನ್ನು ಎತ್ತಿಬಿಟ್ಟರು. ಅದೇ ಪ್ರೇರಣೆಯಾಗಿ ಪಂತರ ಸಂಪ್ರದಾಯಿಕ ವಿದ್ಯಾಭ್ಯಾಸ ಅಲ್ಲಿಗೇ ಕೊನೆಗೊಂಡಿತು.

ಸೋದರತ್ತೆ, ತಂದೆ ಮತ್ತು ಅಣ್ಣಂದಿರು ಇವರೆಲ್ಲರಿಗಿಂತ ಮಿಗಿಲಾಗಿ ಪ್ರಕೃತಿಯ ಮಡಿಲಲ್ಲಿ ಬಾಲ್ಯಾವಸ್ಥೆಯನ್ನು ಕಳೆದ ಪಂತರು ಕಾವ್ಯರಚನೆಗೆ ಮೊದಲ ಪ್ರಯತ್ನ ವನ್ನು ಮಾಡಿದ್ದು ಎಳಸೆಯ ವಯಸ್ಸಿನಲ್ಲಿ. ಹದಿನೇಳನೆಯ ವಯಸ್ಸಿನ ಹೊತ್ತಿಗೆ ಪ್ರೌಢ ಕಾವ್ಯ ರಚನೆಗೆ ಅವರ ಲೇಖನಿ ಸಿದ್ಧವಾಗಿತ್ತು. ಅವರ ಮೊದಲ ಕವನ ಸಂಗ್ರಹ 'ವೀಣಾ' ಪ್ರಕಟಗೊಂಡಿದ್ದು ೧೯೧೯ರಲ್ಲಿ.

ಪಂತರು ಬದುಕಿನುದ್ದಕ್ಕೂ ಒಂದು ಬಗೆಯ ಹೋರಾಟಕ್ಕೊಳಗಾಗಬೇಕಾ ಯಿತು. ದೈನಂದಿನ ಬದುಕಿನ ಮಟ್ಟಿಗೆ ಹೇಳುವುದಾದರೆ ಉದ್ಯೋಗ ದೊರಕುವುದು

ಕಷ್ಟವಾಗಿತ್ತು, ಕುಟುಂಬದ ಕಡೆಯಿಂದ ಯಾವುದೇ ಬಗೆಯ ನೆರವು ಬೆಂಬಲಗಳನ್ನು ನಿರೀಕ್ಷಿಸುವಂತಿರಲಿಲ್ಲ. ಅವಿವಾಹಿತರಾಗಿ ಉಳಿದ ಕಾರಣ ನಿತ್ಯಜೀವನದ ಎಲ್ಲಕ್ಕೂ ಸ್ವತಃ ತಲೆಕೊಟ್ಟು ನಿವಾರಿಸಿಕೊಳ್ಳುವ ಆಗತ್ಯ ಹೆಜ್ಜೆಹೆಜ್ಜೆಗೂ ಕಂಡುಬರುತ್ತಿತ್ತು. ಕಲ್ಪನಾ ಪ್ರಪಂಚದಲ್ಲಿ ವಿಹರಿಸುತ್ತಿದ್ದ ಕವಿಚೇತನಕ್ಕೆ ಯಾರದಾದರೂ ಲೌಕಿಕ ಬೆಂಬಲ ಅವಶ್ಯ ವಾಗಿ ಬೇಕಾಗಿತ್ತು. ಹಾಗಾಗಿ ಕೆಲವಾರು ಮಂದಿ ಆಪ್ತಮಿತ್ರ ಮಹನೀಯರು ಕವಿಯ ಬದುಕಿಗೆ ಬೆನ್ನಾಗಿ ನಿಂತರು. ಕುಂವರ ಸುರೇಶಸಿಂಹ (೧೯೩೧–೩೯), ನರೇಂದ್ರಶರ್ಮಾ (೧೯೩೯–೪೦), ಹರಿವಂಶರಾಯ್ ಬಚ್ಚನ್ (೧೯೪೧–೪೩), ನೃತ್ಯಪಟು ಉದಯ ಶಂಕರ್ (೧೯೪೩–೪೭), ಹರಿವಂಶರಾಯ್ ಬಚ್ಚನ್ (ಪುನಃ ೧೯೪೭–೪೮), ಕೃಷ್ಣಾ ನಂದ ಪಾಂಡೆ (೧೯೪೮–೪೯) ಮುಂತಾದವರು ಕವಿಗೆ ಬೆಂಬಲವಾಗಿ ನಿಂತವರಲ್ಲಿ ಮುಖ್ಯರು. ಒಟ್ಟಿನಲ್ಲಿ ಐವತ್ತು ವರ್ಷವಾಗುವವರೆಗೆ ಕವಿ ಪಂತರಿಗೆ ತಮ್ಮದೇ ಆದ ಮನೆಯೆಂಬುದಿರದೆ 'ಅನಿಕೇತನ'ರಾಗಿಯೆ ಉಳಿದಿದ್ದರು.

ಈ ಅವಧಿಯಲ್ಲಿ ಅನೇಕ ಮಂದಿ ಮಹಾವ್ಯಕ್ತಿಗಳ ಸಂಪರ್ಕ ಪಡೆದುಕೊಳ್ಳುವ ಸುಯೋಗ ಪಂತರಿಗೆ ಒದಗಿತು. ರವೀಂದ್ರನಾಥ ಠಾಕೂರ್, ಮಹಾತ್ಮಾ ಗಾಂಧಿ ಮತ್ತು ಅರವಿಂದರು ಅವರ ಮೇಲೆ ಪ್ರಭಾವ ಬೀರಿದವರಲ್ಲಿ ಪ್ರಮುಖರು. ಪಂತರ ಕಾವ್ಯರಚನೆ ಯಲ್ಲಿ ಈ ಮಹನೀಯರಿಂದ ಸಾಕಷ್ಟು ಪ್ರೇರಣೆ ದೊರೆತಿರುವುದನ್ನು ಗುರುತಿಸ ಬಹುದು. ಕಮ್ಯುನಿಸ್ಟ್ ನಾಯಕ ಪಿ. ಸಿ. ಜೋಶಿಯವರ ವಿಚಾರಧಾರೆಯ ಪ್ರಭಾವಕ್ಕೂ ಪಂತರು ಕೆಲವು ಕಾಲ ಒಳಗಾಗಿದ್ದರು. ಸಾಹಿತ್ಯ ರಚನೆಯೊಟ್ಟಿಗೆ ಅವರೂ ೧೯೩೮ರಲ್ಲಿ 'ರೂಪಾಭ' ಎಂಬ ಮಾಸಪತ್ರಿಕೆಯನ್ನು ಸಂಪಾದಿಸಿ ಹೊರತರತೊಡಗಿದರು. ಅಲ್ಲದೆ ೧೯೪೮ರಲ್ಲಿ 'ಲೋಕಾಯತನ' ಎಂಬ ಸಂಸ್ಥೆಯನ್ನು ಸ್ಥಾಪಿಸುವ ಯೋಜನೆ ತಯಾರಿ ಸಿದರು. ಆದರೆ ಪತ್ರಿಕೆ ಕೆಲವು ಕಾಲ ಮಾತ್ರ ನಡೆದು ನಿಂತುಹೋಯಿತು, ಯೋಜನೆ ಯಾದರೊ ಕಾರ್ಯರೂಪಕ್ಕೆ ಇಳಿಯಲೆ ಇಲ್ಲ.

೧೯೫೦ ರಿಂದ ಈಚೆಗೆ ಪಂತರ ವೈಯಕ್ತಿಕ ಬದುಕಿನಲ್ಲಿ ಹೊಸತಿರುವು ಕಂಡು ಬಂತು. ಪ್ರಯಾಗದ ಆಕಾಶವಾಣಿಯಲ್ಲಿ ಅವರು ಹಿಂದೀ ಚೀಫ್ ಪ್ರೊಡ್ಯೂಸರ್ ಆಗಿ ೧೯೫೦ರಲ್ಲಿ ನೇಮಕಗೊಂಡರು. ೧೯೫೭ರವರೆಗೆ ಆ ಕೆಲಸವನ್ನು ನಿರ್ವಹಿಸಿ ಅಲ್ಲಿಂದ ಮುಂದೆ ಸಾಕಷ್ಟು ವರ್ಷಗಳವರೆಗೆ (೧೯೬೭ರವರೆಗೆ) ಆಕಾಶವಾಣಿಯ ಸಾಹಿತ್ಯ ಸಲಹೆ ಗಾರರಾಗಿ ಸೇವೆಸಲ್ಲಿಸಿದರು. ಮೊದಲ ಏಳು ವರ್ಷಗಳಕಾಲ ತಿಂಗಳಿಗೆ ಸಾವಿರ ರೂಪಾಯಿ ಗಳಷ್ಟು ಸಂಬಳ ದೊರೆಯುತ್ತಿತ್ತು. ಈ ವೇಳೆಗಾಗಲೆ ಪಂತರು ಸಾಹಿತ್ಯಕ್ಷೇತ್ರದಲ್ಲಿ ಸಾಕಷ್ಟು ಪ್ರತಿಷ್ಠಿತರೆನಿಸಿದ್ದರು. ರೇಡಿಯೊ ಕಾರ್ಯಕ್ರಮಗಳಿಗೆ ಸಂಬಂಧಪಟ್ಟಂತೆ ದೆಹಲಿ ಆಕಾಶವಾಣಿಗೂ ಅವರ ಸೇವೆ ದೊರೆತ್ತಿತ್ತು. ರೇಡಿಯೊವಿಗೆ 'ಆಕಾಶವಾಣಿ' ಎಂಬ ಹೆಸರನ್ನು ಮೊದಲಬಾರಿಗೆ ಸೂಚಿಸಿದವರು ಪಂತರೇ ಎಂದು ಹೇಳಲಾಗುತ್ತದೆ.

೧೯೬೧ರ ಕೊನೆಯವೇಳೆಗೆ ಪಂತರು ಆರು ಜನರ ನಿಯೋಗವೊಂದರ ಜೊತೆ ಯಲ್ಲಿ ರಷ್ಯಾ ಪ್ರವಾಸವನ್ನು ಮಾಡಿದರು. ಅನಂತರ ಅಲ್ಲಿಂದಲೇ ಪಶ್ಚಿಮಜರ್ಮನಿ, ಫ್ರಾನ್ಸ್, ಇಂಗ್ಲೆಂಡ್ ಮುಂತಾದ ಐರೋಪ್ಯ ದೇಶಗಳಿಗೂ ಹೋಗಿಬಂದರು. ಅದೇ ವರ್ಷ ಅವರಿಗೆ ಭಾರತ ಸರ್ಕಾರ ಪದ್ಮಭೂಷಣ ಪದವಿಯನ್ನು ನೀಡಿ ಗೌರವಿಸಿತು.

ಆದರೆ ೧೯೬೭ರಲ್ಲಿ ಸರ್ಕಾರದ ಭಾಷಾ ವಿಧೇಯಕವೊಂದನ್ನು ಪಂತರು ಒಪ್ಪದೇ ತಮಗೆ ನೀಡಿದ್ದ ಪದ್ಮಭೂಷಣವನ್ನು ಸರ್ಕಾರಕ್ಕೇ ಹಿಂದಿರುಗಿಸಿದರು. ("ಪದ್ಮಭೂಷಣ ಎಂಬುದು ನನಗೆ ಖರದೂಷಣದಂತೆಯೂ ಪದ್ಮವಿಭೂಷಣವೆಂಬುದು ವಿಭೀಷಣನಂತೆಯೋ ಕೇಳಿಸುತ್ತದೆ" ಎಂಬುದಾಗಿ ಅವರು ತಮಾಷೆಯಾಗಿ ಹೇಳುತ್ತಿದ್ದರಂತೆ) ೧೯೬೧ರಲ್ಲಿಯೆ ಅವರ 'ಕಲಾ ಔರ್ ಬೂಢಾಚಾಂದ್' ಎಂಬ ಕಾವ್ಯಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ಲಭಿಸಿತು. ೧೯೬೫ರಲ್ಲಿ ಹಿಂದಿ ಸಾಹಿತ್ಯ ಸಮ್ಮೇಳನ ಅವರಿಗೆ 'ಸಾಹಿತ್ಯ ವಾಚಸ್ಪತಿ' ಎಂಬ ಬಿರುದನ್ನು ನೀಡಿಗೌರವಿಸಿತು. ಅಂತೆಯೆ ಅವರ ಸಾಹಿತ್ಯಸೇವೆಯನ್ನು ಗುರುತಿಸಿ ಉತ್ತರಪ್ರದೇಶ ಸರ್ಕಾರ ಅದೇ ವರ್ಷ ಹತ್ತುಸಾವಿರ ರೂಪಾಯಿಗಳ ವಿಶೇಷ ಪುರಸ್ಕಾರವೊಂದನ್ನು ಅವರಿಗೆ ನೀಡಿ ಸನ್ಮಾನಿಸಿತು. ಈಗಾಗಲೆ ಹೇಳಿರುವಂತೆ ೧೯೫೮ರಲ್ಲಿ ಪ್ರಕಟವಾದ ಅವರ ಕೃತಿ 'ಚಿದಂಬರಾ' ಎಂಬುದಕ್ಕೆ ಭಾರತೀಯ ಜ್ಞಾನಪೀಠದ ಒಂದು ಲಕ್ಷ ರೂಪಾಯಿಯ ಪುರಸ್ಕಾರ ೧೯೬೯ರಲ್ಲಿ ದೊರೆಯಿತು.

ಬದುಕಿನ ಕಡೆಯ ಕೆಲವು ವರ್ಷಗಳಲ್ಲಿ ಆರೋಗ್ಯಸಂಬಂಧವಾದ ಅನೇಕ ಸಮಸ್ಯೆಗಳನ್ನು ಪಂತರು ಎದುರಿಸಬೇಕಾಯಿತು. ಮಧುಮೇಹ ರೋಗ ಅವರನ್ನು ಕಾಡುತ್ತಿತ್ತು. ೧೯೭೦ರಲ್ಲಿ ಮೊದಲಬಾರಿಗೆ ಅವರು ಕಾಶ್ಮೀರಕ್ಕೆ ಹೋಗಿ ಅಲ್ಲಿಯ ಪ್ರಕೃತಿ ಸೌಂದರ್ಯವನ್ನು ಮನಸಾರೆ ಆಸ್ವಾದಿಸಿ ಬಂದರು. ಜೂನ್ ೧೯೭೧ರಲ್ಲಿ ತಮ್ಮ ಸೋದರ ಸಂಬಂಧಿಯಾಗಿದ್ದ ಶಾಂತಿ ಜೋಶಿಯವರ ಒತ್ತಾಯದ ಮೇರೆಗೆ ಸುಮಿತಾ ಎಂಬ ಬಾಲಕಿಯನ್ನು ದತ್ತು ತೆಗೆದುಕೊಂಡರು. ಇಳಿವಯಸ್ಸಿನಲ್ಲಿ ದತ್ತುಪುತ್ರಿಯ ಲಾಲನೆಪಾಲನೆ ಅವರಿಗೆ ಅಪಾರ ಸಂತೋಷವನ್ನೂ ನೆಮ್ಮದಿಯನ್ನೂ ತಂದುಕೊಟ್ಟಿತು. ಎಪ್ಪತ್ತೇಳು ವರ್ಷಗಳು ತುಂಬು ಜೀವನವನ್ನು ನಡೆಸಿದ ಪಂತರು ೧೯೭೭ರ ಡಿಸೆಂಬರ್ ಕೊನೆಯವಾರದಲ್ಲಿ ಸ್ವರ್ಗಸ್ಥರಾದರು.

ಸುಮಿತ್ರಾನಂದನ ಪಂತರ ಪ್ರಮುಖವಾದ ಕೃತಿಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು : 'ವೀಣಾ' (೧೯೧೯), 'ಗ್ರಂಥಿ' (೧೯೨೦), 'ಪಲ್ಲವ' (೧೯೨೬), 'ಗುಂಜನ'(೧೯೩೨), 'ಯುಗಾಂತ'(೧೯೩೬), 'ಯುಗವಾಣಿ'(೧೯೩೯), 'ಗ್ರಾಮ್ಯಾ' (೧೯೪೦), 'ಸ್ವರ್ಣಕಿರಣ' (೧೯೪೭), 'ಸ್ವರ್ಣಧೂಲಿ' (೧೯೪೭), 'ಯುಗಾಂತರ' (೧೯೪೮), 'ಉತ್ತರಾ' (೧೯೪೯), 'ರಜತಶಿಖರ' (೧೯೫೧), 'ಶಿಲ್ಪೀ' (೧೯೫೨), 'ಅತಿಮಾ' (೧೯೫೫), 'ಸೌವರ್ಣ' (೧೯೫೭), 'ವಾಣೀ' (೧೯೫೮), 'ರಶ್ಮಿಬಂಧ' (೧೯೫೮), 'ಕಲಾ ಔರ್ ಬೂಢಾ ಚಾಂದ್'(೧೯೫೯), 'ಲೋಕಾಯತನ್'(೧೯೬೪). ಮೇಲ್ಕಂಡ ಕೃತಿಗಳಿಂದ ಆಯ್ದ ಕವನಗಳು ಸಂಗ್ರಹಗೊಂಡಿರುವ 'ಪಲ್ಲವಿನಿ' ಎಂಬ ವಿಶಿಷ್ಟ ಸಂಗ್ರಹದಲ್ಲಿ ೧೯೧೮ ರಿಂದ ಮೊದಲುಗೊಂಡು ೧೯೩೬ರವರೆಗಿನ ಹತ್ತೊಂಬತ್ತು ವರ್ಷಗಳ ಅವರ ಸಾಧನೆಯ ಹೆಜ್ಜೆ ಗುರುತುಗಳನ್ನೂ 'ಚಿದಂಬರಾ' ಕೃತಿಯಲ್ಲಿ ೧೯೩೭ ರಿಂದ ೧೯೫೭ರವರೆಗಿನ ಸುಮಾರು ಇಪ್ಪತ್ತು ವರ್ಷಗಳ ಬೆಳವಣಿಗೆಯ ವಿವಿಧ ಹಂತಗಳನ್ನೂ ಗುರುತಿಸಬಹುದಾಗಿದೆ.

ಹಿಂದಿ ಸಾಹಿತ್ಯದಲ್ಲಿ ಪಂತರು ಸೌಂದರ್ಯಪ್ರೇಮಿ, ಆಶಾವಾದಿ ಕವಿ. ಇಂಗ್ಲಿಷಿನ ವರ್ಡ್ಸ್‌ವರ್ತ್ ಕವಿಯ ನೆನಪು ಅವರ ಮೊದಲ ಕೃತಿಗಳನ್ನು ಅವಲೋಕಿಸಿದಾಗ

ಸಹಜವಾಗಿ ಮೂಡಿಬರುತ್ತದೆ. ವರ್ಡ್ಸ್‌ವರ್ತ್, ಷೆಲ್ಲಿ, ಕೀಟ್ಸ್, ಕಾಳಿದಾಸ, ರವೀಂದ್ರನಾಥಠಾಕೂರ್ ಮುಂತಾದ ಮಹಾಕವಿಗಳ ಪ್ರಭಾವವನ್ನು ಅವರು ಮೈಗೂಡಿಸಿಕೊಂಡಿದ್ದವರು. ಪಂತ್ ಅವರ ಕಾವ್ಯವನ್ನು ಸಾಮಾನ್ಯವಾಗಿ ಮೂರುಭಾಗಗಳಲ್ಲಿ ವಿಂಗಡಿಸಬಹುದು. ಮೊದಲನೆಯದಾಗಿ ವೀಣಾ-ಗುಂಜನ ಕಾಲ (೧೯೧೮-೩೨), ಎರಡನೆಯದಾಗಿ ಯುಗಾಂತ-ಗ್ರಾಮ್ಯಾ ಕಾಲ (೧೯೩೬-೪೦) ಹಾಗೂ ಮೂರನೆಯದಾಗಿ ಸ್ವರ್ಣಕಿರಣ-ಲೋಕಾಯತನ ಕಾಲ (೧೯೪೭-೬೪), ಛಾಯಾವಾದ, ಪ್ರಗತಿವಾದ ಮತ್ತು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಅವರ ರಚನೆಗಳಲ್ಲಿ ಕಂಡುಬರುವ ವೈವಿಧ್ಯಪೂರ್ಣವಾದ ನಡೆಯನ್ನು ಈ ಬೇರೆಬೇರೆ ಅವಧಿಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು.

ಮೊದಲಿಗೆ ಪ್ರಕೃತಿ ಕವಿಯೆಂದೇ ಸಿದ್ಧಹಸ್ತರಾಗಿದ್ದ ಪಂತರು ತಮ್ಮ ಕಾವ್ಯರಚನೆಯ ಪ್ರಾರಂಭದ ದಿನಗಳಲ್ಲಿ ವ್ಯಕ್ತಪಡಿಸಿದಂತಹ ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದು: 'ಕವಿತೆಯನ್ನು ರಚಿಸುವ ಪ್ರೇರಣೆ ಮೊಟ್ಟಮೊದಲಿಗೆ ನನಗೆ ದೊರೆತಿದ್ದು ಪ್ರಕೃತಿಯನ್ನು ಅವಲೋಕಿಸುವುದರ ಮೂಲಕ. ಇದರ ಕೀರ್ತಿ ನನ್ನ ಹುಟ್ಟುನೆಲವಾದ ಕೂರ್ಮಾಚಲ ಪ್ರದೇಶಕ್ಕೆ ಸೇರಬೇಕು. ಕವಿಯಾಗುವುದಕ್ಕೆ ಮೊದಲೇ ನನಗೆ ನೆನಪಿರುವಂತೆ ಗಂಟೆಗಟ್ಟಲೆ ನಾನು ಒಬ್ಬಂಟಿಗನಾಗಿ ನಿಸರ್ಗ ದೃಶ್ಯಗಳನ್ನು ಕಣ್ಣೆವೆಯಿಕ್ಕದೆ ನೋಡುತ್ತ ಕುಳಿತಿರುತ್ತಿದ್ದೆ. ಯಾವುದೋ ಒಂದು ಬಗೆಯ ಗೊತ್ತಿಲ್ಲದ ಸೆಳೆತ ನನ್ನೊಳಗೆ ಒಂದು ರೀತಿಯ ಅವ್ಯಕ್ತವಾದ ಸೊಬಗಿನ ಬಲೆಯನ್ನು ಹೆಣೆದು ಮನಸ್ಸನ್ನು ತನ್ಮಯಗೊಳಿಸುತ್ತಿತ್ತು. ಕಣ್ಣು ಮುಚ್ಚಿ ಮಲಗಿದಾಗಲೆಲ್ಲ ಆ ನೋಟ ಸುಮ್ಮನೆ ನನ್ನ ಕಣ್ಣ ಮುಂದೆ ಸುಳಿದಾಡುತ್ತಿತ್ತು. ಕ್ಷಿತಿಜದಲ್ಲಿ ಸಾಕಷ್ಟು ದೂರದವರೆಗೆ ಹರಡಿರುವ, ಒಂದಕ್ಕಿಂತ ಒಂದು ಮೇಲೇರಿನಿಂತ ಈ ಹಚ್ಚಹಸುರು ಬಣ್ಣದ ನೀಲಧೂಮಿಲವಾದ ಕೂರ್ಮಾಚಲದ ಪರ್ವತಶ್ರೇಣಿಗಳು ತಮ್ಮ ಶಿಖರಗಳ ಮೇಲೆ ಹಿಮುವರ್ತ್‌ಪರ್ವತದ ಬೆಳ್ಳಿ ಕಿರೀಟವನ್ನು ಧರಿಸಿ ತಮ್ಮ ಔನ್ನತ್ಯದಿಂದ ಆಗಸದ ಸ್ತಬ್ಧ ನೀಲವರ್ಣವನ್ನು ಮತ್ತು ಎತ್ತರಕ್ಕೆ ಹಿಡಿದಿಟ್ಟವೆಯೇನೊ ಎನಿಸುತ್ತಿತ್ತು. ಎಂಥ ಮನುಷ್ಯನನ್ನೇ ಆಗಲಿ ಇವು ತಮ್ಮ ನೀರವ ಸಮ್ಮೋಹಕರ ಅಚ್ಚರಿಯ ಕಡಲಲ್ಲಿ ಮುಳುಗಿಸಬಲ್ಲವೇನೊ. ನನ್ನೊಳಗೆ ಪ್ರಪಂಚ ಮತ್ತು ಬದುಕಿನ ಬಗೆಗೆ ಒಂದು ಬಗೆಯ ಗಾಂಭೀರ್ಯದಿಂದ ಕೂಡಿದ ಅಚ್ಚರಿಯ ಭಾವನೆ ಆ ಪರ್ವತದಂತೆಯೆ ನಿಶ್ಚಯವಾಗಿ ಮನೆಮಾಡಿರುವುದಕ್ಕೆ ಪ್ರಾಯಃ ಆ ಪರ್ವತ ಪ್ರದೇಶದ ವಾತಾವರಣವೇ ಕಾರಣವೇನೊ ಎಂದು ನಾನು ಭಾವಿಸಿದ್ದೇನೆ."

೧೯೩೧ರಲ್ಲಿ ಅನಾರೋಗ್ಯದ ನಿಮಿತ್ತ ವಿಶ್ರಾಂತಿ ತೆಗೆದುಕೊಳ್ಳಲು ಪಂತರು ತಮ್ಮ ಅಭಿಮಾನಿ ಹಾಗೂ ಮಿತ್ರರಾದ ಕುಂವರ ಸುರೇಶಸಿಂಹರ ಊರಾದ ಕಾಲಾಕಾಂಕರ ಎಂಬಲ್ಲಿಗೆ ಹೋದರು. ನಿಸರ್ಗದ ಮಡಿಲಿನಂತಿದ್ದ ಆ ಪ್ರದೇಶದ ಸ್ವಚ್ಛವಾದ ಏಕಾಂತವಾದ ವಾತಾವರಣ ಮನಸ್ಸಿಗೆ ನೆಮ್ಮದಿಯನ್ನೂ ಹೊಸಹುರುಪನ್ನೂ ನೀಡಿತು. ಗಂಗಾನದಿಯ ದಡದಲ್ಲಿದ್ದ ಈ ಗ್ರಾಮದ ಅಂಚಿನಲ್ಲಿ ಸುರೇಶರಿಗೆ ಸೇರಿದ್ದ ಎತ್ತರದ ದಿಣ್ಣೆಯೊಂದರ ಮೇಲಿದ್ದ ಕಾಟೇಜಿನಲ್ಲಿ ಅವರು ಸುಮಾರು ಹತ್ತುವರ್ಷಗಳ ಕಾಲ ತಂಗಿ

ದ್ದರು. ಪಂತರೇ ಹೇಳುವಂತೆ "ನನ್ನ ಹರಯದ ಅತ್ಯಮೂಲ್ಯ ವರ್ಷಗಳೆನಿಸಿದ ೩೦ ರಿಂದ ೪೦ ವರ್ಷಗಳ ಕಾಲ ವಾನಪ್ರಸ್ಥ ಸ್ಥಿತಿಯಲ್ಲಿ ಜ್ಞಾನಸಾಧನೆಮಾಡುತ್ತಾ ಪಶುಪಕ್ಷಿಗಳ ನಡುವೆ ಕಳೆದುಹೋಯಿತು." ಅನೇಕ ಬಗೆಯ ನೋವುಂಡಿದ್ದ ಮನಸ್ಸು ಸಾಧನೆಯಲ್ಲಿ ಬೆಂದು 'ಗುಂಜನ'ದಲ್ಲಿ ಹೀಗೆ ಅಭಿವ್ಯಕ್ತಿಪಡೆಯಿತು :

ತಪಿಸು ಎಲೆ ಮಧುರ-ಮಧುರ ಮನ
ವಿಶ್ವವೇದನೆಯಲ್ಲಿ ತಪಿಸು ಪ್ರತಿಕ್ಷಣ, ಜಗವ ಬದುಕಿನ ಬೆಂಕಿಯಲಿ ಕರಗು,
ಕಲುಷವ ಕಳೆದು ಬೆಳಗಿ ಮೆದುವಾಗು, ತಪಿಸು ಎಲೆ ಮಧುರ—ಮಧುರ ಮನ

'ವೀಣಾ' ಕೃತಿಯಲ್ಲಿ ಪ್ರಕೃತಿಯ ಬಗೆಗೆ ಕವಿಯ ಮನಸ್ಸಿನಲ್ಲಿರುವ ಜಿಜ್ಞಾಸೆ ವ್ಯಕ್ತವಾಗುತ್ತದೆ. ನಿಸರ್ಗಸೌಂದರ್ಯಕ್ಕೆ ಮರುಳಾಗಿ ಅದನ್ನು ಅನುಕರಿಸಲು ಹೋಗಿ ಅದರಲ್ಲಿ ತಾನೇ ಮುಳುಗಿ ತಾದಾತ್ಮ್ಯವನ್ನು ಅರಸಬಯಸುತ್ತದೆ ಕವಿಹೃದಯ. ನೆರಳು, ಕತ್ತಲೆ, ತೊರೆ, ಬಳ್ಳಿ, ಬೆಳಗು, ಹಕ್ಕಿ ಹೀಗೆ ಪ್ರಕೃತಿಯ ವಿವಿಧ ಮುಖಗಳನ್ನು ಒಬ ಪುಟ್ಟ ಹುಡುಗಿಯ ಕಣ್ಣಿನಿಂದ ಕಾಣಲು ಕವಿ ಇಲ್ಲಿ ಪ್ರಯತ್ನಿಸಿದ್ದಾರೆ. ಪ್ರಕೃತಿಯ ಒಡನಾಟದಲ್ಲಿ ಕವಿ ಅನುಭವಿಸಿದ ಆನಂದದ ಅಭಿವ್ಯಕ್ತಿ 'ಪಲ್ಲವ' ಕೃತಿಯಲ್ಲಿ ದೊರೆಯುತ್ತದೆ. ಕಲ್ಪನಾ ಪ್ರಧಾನವಾದ ಇಲ್ಲಿಯ ಕವನಗಳು ಪ್ರಕೃತಿಯ ಚಿತ್ರಶಾಲೆಯಂತಿವೆ. 'ಗುಂಜನ'ದಲ್ಲಿ ಕಂಡುಬರವ ನಿಸರ್ಗಕವನಗಳೆಲ್ಲ ಹೆಚ್ಚುಕಡಮೆ ಸೌಂದರ್ಯಾನುಭೂತಿಯಿಂದ ಹುಟ್ಟಿಕೊಳ್ಳುವ ಆನಂದಕ್ಕೆ ಕಿರೀಟವಿಟ್ಟಂತಿವೆ. ಕವನಗಳು ಹೆಣ್ತನವನ್ನೂ ಮೈಗೂಡಿಸಿಕೊಂಡಿವೆ. ಶುದ್ಧ ಪ್ರಕೃತಿ ವರ್ಣನೆಗಿಂತ ಮಿಗಿಲಾಗಿ ಇಲ್ಲಿ ಒಂದು ವಿಶಿಷ್ಟ ವಿಚಾರ, ಆಧ್ಯಾತ್ಮಿಕ ಭಾವನೆ, ಒಳತುಡಿತ ವ್ಯಕ್ತಗೊಂಡಿರುವುದನ್ನು ಕಾಣಬಹುದು. 'ನೆಲೆಗೊಳಿಸು ಜಗದಲಿ ನಿನ್ನತನವನ್ನು', 'ಮಾನವ ಜಗದಲಿ ಸುಖ ದುಃಖದೊಡನೆ ದುಃಖ ಸುಖದೊಡನೆ ಹಂಚಿಹೋಗಲಿ', 'ನಗುಮೊಗದಿ ನೋವ ಬರಮಾಡಿಕೊಳ್ಳುವುದ ಈವರೆಗೆ ಕಲಿಯಲಿಲ್ಲ ನಾನು', 'ಎನ್ನದೇ ಕೊಂಬೆಯ ಮುಳ್ಳುಗಳು ಎನ್ನ ಮನ ಚುಚ್ಚಲಾರವು', 'ಮಾನವ ಬದುಕು ಅಪೂರ್ಣವೆನಿಸುತ್ತದೆ, ನಾನು ಬಯಸಿಯೆ ಉದಾಸಗೊಳ್ಳುತ್ತೇನೆ'—ಹೀಗೆ ಬಗೆಬಗೆಯ ಭಾವನೆಗಳು 'ಗುಂಜನ'ದಲ್ಲಿ ಗರಿಗೆದರಿವೆ. ಕವಿಯೆ ಒಂದೆಡೆ ಹೇಳಿರುವಂತೆ "ನಾನು 'ಪಲ್ಲವ'ದಿಂದ 'ಗುಂಜನ'ಕ್ಕೆ ಬರುತ್ತಿರುವಂತೆ ಸುಂದರಂನಿಂದ ಶಿವಂನ ಭೂತಲದ ಮೇಲೆ ಹೆಜ್ಜೆಯಿಡುತ್ತಿರುವಂತೆ ಭಾಸವಾಗುತ್ತಿದೆ. 'ಗುಂಜನ'ದಲ್ಲಿ ನನ್ನ ಬಹಿರ್ಮುಖಿ ಸ್ವಭಾವ ಸುಖದುಃಖಗಳಲ್ಲಿ ಸಮಾನತೆಯನ್ನು ಕಂಡುಕೊಂಡು ಅಂತರ್ಮುಖಿಯಾಗುವತ್ತ ಪ್ರಯತ್ನಿಸುತ್ತಿದೆ. ಇದರಲ್ಲಿ ನನ್ನ ಕಲ್ಪನೆ ಹೆಚ್ಚು ಸೂಕ್ಷ್ಮವಾಗಿಯೂ ಭಾವಾತ್ಮಕವಾಗಿಯೂ ಆಗಿದೆ." ಈ ಸಂಗ್ರಹದಲ್ಲಿ ಬರುವ 'ನೌಕಾ ವಿಹಾರ' ಎಂಬ ಪದ್ಯ ತುಂಬ ಉತ್ಕೃಷ್ಟವಾಗಿದ್ದು ಜನಪ್ರಿಯವಾಗಿದೆ.

'ಗುಂಜನ'ವಾದ ಮೇಲೆ ಕವಿ 'ಜ್ಯೋತ್ಸ್ನಾ' ಎಂಬ ನಾಟ್ಯರೂಪಕವನ್ನು ಬರೆದರು. ಹೊಸ ಆದರ್ಶಗಳನ್ನೊಳಗೊಂಡ ಈ ರೂಪಕದಲ್ಲಿ ಹೊರಕ್ರಾಂತಿ ಮತ್ತು ಒಳಕ್ರಾಂತಿ ಹುಟ್ಟುವ ನೆಲೆ ಒಂದೇ ಆದರೂ ಅವುಗಳ ಕಾರ್ಯವಿಧಾನದಲ್ಲಿ ಭಿನ್ನವೆಂಬುದು

ತ್ತದೆ ಎಂಬ ಅಂಶವನ್ನು ಪ್ರತಿಪಾದಿಸಲಾಗಿದೆ. ಕವಿ ಒಳಕ್ರಾಂತಿಗೆ ಹೆಚ್ಚು ಮಹತ್ವ ನೀಡುತ್ತಾರೆ. ಕಲ್ಪನಾಪ್ರಧಾನವಾಗಿರುವ ಕಾರಣ ಪ್ರಾಯಃ 'ಜ್ಯೋತ್ಸ್ನಾ' ಹೆಚ್ಚು ಜನರನ್ನು ಮುಟ್ಟಲಿಲ್ಲ ಎಂದು ಪಂತರೇ ಒಂದುಕಡೆ ಹೇಳಿದ್ದಾರೆ.

'ಯುಗಾಂತ'ದಿಂದ ಮೊದಲುಗೊಂಡು 'ಗ್ರಾಮ್ಯಾ'ವರೆಗಿನ ರಚನೆಗಳಲ್ಲಿ ಕವಿಯ ಮೇಲೆ ಮಾನವತಾವಾದದ ಪ್ರಭಾವ ವಿಶೇಷವಾಗಿ ಬಿದ್ದಿರುವುದು ಕಂಡುಬರುತ್ತದೆ. ಹಳ್ಳಿಯ ಪ್ರಾಕೃತಿಕ ದೃಶ್ಯಗಳನ್ನು ತಮ್ಮ ಲೇಖನಿಯ ಮೂಲಕ ಸೆರೆಹಿಡಿಯುವುದ ರೊಂದಿಗೆ ಕವಿ ಹಳ್ಳಿಯ ಜನರ ಬದುಕನ್ನು ಹತ್ತಿರದಿಂದ ನೋಡಲೆತ್ನಿಸಿದ್ದಾರೆ. ಕೋಗಿಲೆಯ ಕಂಠದಿಂದ ಉಲಿಯುವ, ಮಾವಿನ ಚಿಗುರಿನಿಂದ ಹೊಂಬಣ್ಣದ ಮೈಯನ್ನು ಅಲಂಕರಿಸಿಕೊಳ್ಳುವ, ಎಣೆಯಿಲ್ಲದ ಸೊಬಗಿನ ರಾಶಿಯೆನಿಸಿದ ಹಳ್ಳಿಗಳ ಪ್ರಕೃತಿಶ್ರೀ ಮೋಡಕಟ್ಟದ ವಿಸ್ಮಯದುಂಬಿದ ಮೌನ ನೀಲಾಗಾಸದ ಕೆಳಗಡೆಯಲ್ಲಿ ತನ್ನ ತಾಯ ಮಡಿಲಲ್ಲಿ ಇಂದಿನ ಘೋರವಾದ ಕುರೂಪತೆಯಿಂದ ಕೂಡಿದ ಅಸಹ್ಯವೆನಿಸುವ ಬಡತನ ತುಂಬಿಕೊಂಡು ಬಿಡಿಸಿಕೊಳ್ಳಲಾಗದೆ ತಲೆತಗ್ಗಿಸಿಕೊಂಡು ಕುಳಿತಿರುವುದು ಅವರಿಗೆ ಕಂಡುಬಂತು.

> ಮುಕ್ಕೋಟಿ ಮಕ್ಕಳು, ಚಿತ್ತಲೆಮೈ, ಅರೆಹೊಟ್ಟೆ, ಶೋಷಿತ ಬಡಜನ
> ಮೌಢ್ಯ ಅನಾಗರಿಕತೆ ಅವಿದ್ಯೆ ಬಡತನ—ತಲೆತಗ್ಗಿಸಿರುವಳು ತರುತಲನಿವಾಸಿನಿ!

"ಹಳ್ಳಿಯ ಜನತೆಯನ್ನು ನಾನು ಕೇವಲ ರಕ್ತಮಾಂಸಗಳಿಂದ ಕೂಡಿದ ಜೀವಗಳ ರೂಪದಲ್ಲಿ ನೋಡಿಲ್ಲ, ಮರಣೋನ್ಮುಖವಾದ ಸಂಸ್ಕೃತಿಯೊಂದರ ಅವಯವದ ರೂಪದಲ್ಲಿ ಮನಗಂಡಿದ್ದೇನೆ. ಸಾಮಂತ ಯುಗದ ಪಳೆಯುಳಿಕೆಗಳಾಗಿ ಹಳ್ಳಿಗಳು ನನಗೆ ಕಂಡುಬರುತ್ತಿವೆ" ಎಂಬುದಾಗಿ ಕವಿ ಒಂದೆಡೆ ಉದ್ಗರಿಸಿದ್ದಾರೆ. 'ಗ್ರಾಮ್ಯಾ'ದಲ್ಲಿ ಬರುವ 'ಗ್ರಾಮಶ್ರೀ' ಎಂಬ ಕವನ ಬಹಳ ಜನರ ಮೆಚ್ಚುಗೆ ಗಳಿಸಿತ್ತು.

'ಸ್ವರ್ಣಕಿರಣ'ದ ಅನಂತರ ಪಂತರ ಕಾವ್ಯ ರಚನೆ ಅರವಿಂದರ ಚೇತನಾವಾದದ ಪ್ರಭಾವಕ್ಕೆ ಒಳಗಾಯಿತು. ವಿರಾಟ್ ಕಲ್ಪನೆಗಳು ಕವಿಗೆ ಹೆಚ್ಚು ಹೆಚ್ಚು ಪ್ರಿಯವೆನಿಸ ತೊಡಗಿದವು. ಆತ್ಮದ ಶ್ರೇಷ್ಠತೆಯ ವಿಚಾರವಾಗಿ ಹೆಚ್ಚು ಒತ್ತು ಸಿಗತೊಡಗಿತು.

ಪರಬ್ರಹ್ಮವನ್ನು ಕುರಿತಂತೆ ಆತ್ಮ ನಿವೇದನೆ ಸಹ ಪಂತರ ರಚನೆಗಳಲ್ಲಿ ಕಂಡುಬರು ತ್ತದೆ. ಅವರು ರಹಸ್ಯವಾದಿ ಕವಿ ಎಂದು ಕರೆಸಿಕೊಳ್ಳುವುದಕ್ಕೆ ರವೀಂದ್ರನಾಥ ಠಾಕೂರರ 'ಗೀತಾಂಜಲಿ' ಸಹ ಪ್ರಮುಖ ಕಾರಣ. ಅವರನ್ನು ಪ್ರಕೃತಿ ಮೂಲರಾದ ರಹಸ್ಯವಾದಿ ಕವಿ ಎನ್ನಬಹುದು. ಸೌಂದರ್ಯದ ಬಗ್ಗೆ ಅವರಿಗಿದ್ದ ವಿಶೇಷ ಆಕರ್ಷಣೆ ಪ್ರಕೃತಿ, ಹೆಣ್ಣು ಮತ್ತು ವ್ಯಾಪಕವಾದ ಬದುಕಿನತ್ತ ಸೂಕ್ಷ್ಮದೃಷ್ಟಿ ಇವುಗಳ ಮೂಲಕ ರಹಸ್ಯವಾದಿಯನ್ನಾಗಿ ಮಾಡಿತು.

ಮಾರ್ಕ್ಸ್‌ವಾದಿ ಪ್ರಭಾವವನ್ನು ಕೂಡ ಅವರ 'ಯುಗವಾಣಿ' ಮತ್ತು 'ಗ್ರಾಮ್ಯಾ' ದಂತಹ ರಚನೆಗಳಲ್ಲಿ ಕಾಣಬಹುದು. ಪ್ರಪಂಚ, ಇತಿಹಾಸ ಮತ್ತು ಸಮಾಜ ಗಳನ್ನು ಕುರಿತಂತೆ ಸಾಮ್ಯವಾದ ಮಾಡುವ ರೀತಿಯಲ್ಲಿಯ ಪಂತರು ಸಹ ನಿರೂಪಣೆ ಮಾಡುತ್ತಾರೆ. ಪ್ರಪಂಚವನ್ನು ಸತ್ಯವೆಂದು ಒಪ್ಪಿಕೊಳ್ಳುವುದು, ಸಾಮೂಹಿಕ ಅಥವಾ

ಸಮಷ್ಟಿ ದೃಷ್ಟಿಯಿಂದ ಎಲ್ಲದರ ಬಗೆಗೆ ಯೋಚಿಸುವುದು, ಬಂಡವಾಳಶಾಹಿಯು ಎಲ್ಲ ಕಷ್ಟಕಾರ್ಪಣ್ಯಗಳಿಗೂ ಮೂಲ ಕಾರಣವೆಂದು ನಿರೂಪಿಸಿ ಅದು ಸಾವಿನ ಹಂತದಲ್ಲಿದೆ ಯೆಂದು ಘೋಷಿಸುವುದು, ಸಾಮ್ಯವಾದದ ಮೂಲಕ ಸ್ವರ್ಣಯುಗವೊಂದು ಪಾದಾರ್ಪಣೆ ಮಾಡುತ್ತಿದೆಯೆಂದು ಭಾವಿಸುವುದು—ಇವೆಲ್ಲ ಪಂತರ ರಚನೆಯಲ್ಲಿ ವಿಪುಲವಾಗಿ ಕಂಡುಬರುತ್ತದೆ. ಇದೇ ಪ್ರೇರಣೆಯಿಂದ ಅವರು ರೈತ ಮತ್ತು ಕಾರ್ಮಿಕ ರನ್ನು ಪ್ರಶಂಸೆಮಾಡುತ್ತಾ ಕೆಲವಾರು ಕವನಗಳನ್ನು ರಚಿಸಿದ್ದಾರೆ.

'ಸ್ವರ್ಣ ಕಿರಣ'ದಿಂದ 'ಲೋಕಾಯತನ'ದವರೆಗೆ ಕವಿ ರಚಿಸಿದ ಸುಮಾರು ಹನ್ನೊಂದು ಕೃತಿಗಳಲ್ಲಿ ಭಾವಿ ಮಾನವನ ಭವಿಷ್ಯದ ಬಗೆಗೆ ಕಾತರ, ವಿಭಿನ್ನ ಮನೀಷಿಗಳ ಚೇತನದಡಿಯಲ್ಲಿ ಪಲ್ಲವಿಸಿದ ಕವಿಯ ದೃಷ್ಟಿ, ಅವರ ಜೀವನ ದರ್ಶನ ಅಭಿವ್ಯಕ್ತವಾಗು ತ್ತವೆ. ಇವೆಲ್ಲದರ ಪರಾಕಾಷ್ಠೆಯನ್ನು 'ಲೋಕಾಯತನ'ದಲ್ಲಿ ಕಾಣಬಹುದು.

೧೯೬೪ ರಲ್ಲಿ ಹೊರಬಂದ 'ಲೋಕಾಯತನ' ಸುಮಿತ್ರಾನಂದನ ಪಂತರ ವಿರಾಟ್ ಕಲ್ಪನೆಯ ಸಮಗ್ರ ಪರಿಚಯ ಮಾಡಿಕೊಡುವ ಮಹಾ ಕಾವ್ಯ. ಈ ಭೂಮಿಯ ಮೇಲೆ ಮನುಷ್ಯನನ್ನೇ ಪರಮಾತ್ಮನ ರೂಪದಲ್ಲಿ ಪ್ರತಿಷ್ಠಾಪಿಸಿ ನೋಡಲೆತ್ನಿಸುವ ಕಾವ್ಯ ಇದು. ವಿಚಾರವಾಹಿನಿಯಲ್ಲಿ ಏಕಸೂತ್ರತೆ ಕಂಡುಬರುವುದರಿಂದ ಇದನ್ನು ವೈಚಾರಿಕ ಮಹಾಕಾವ್ಯ ಎಂದೂ ಹೇಳಬಹುದು. ಕಥಾವಸ್ತುವಿನ ಬೆಳವಣಿಗೆಯ ದೃಷ್ಟಿಯಿಂದ ಈ ಕಾವ್ಯ ಸ್ವಲ್ಪ ಅಡ್ಡಾದಿಡ್ಡಿಯಾಗಿ ಶಿಥಿಲವಾಗಿ ಕಂಡುಬರುತ್ತದೆ. ಕವಿಯೆ ಇದರಲ್ಲಿ ನಾಯಕನ ರೂಪದಲ್ಲಿ ಕಂಡುಬರುತ್ತಾರೆ. ಪಾತ್ರಗಳು ಹೆಚ್ಚಾಗಿ ಕಲ್ಪನಾ ಪ್ರಸೂತ ವೆನಿಸುತ್ತವೆಯೆ ಹೊರತು ಜೀವಂತವೆನಿಸುವುದಿಲ್ಲ. ಆದರೆ 'ಲೋಕಾಯತನ' ಭವಿಷ್ಯದ ಕಾವ್ಯ. ಪ್ರತೀಕಗಳ ಬಳಕೆ ಇದರಲ್ಲಿ ಅಪಾರವಾಗಿ ಕಂಡುಬರುತ್ತದೆ. ಮಾನವ ಚೇತನ ಮೊದಲಿನಿಂದ ಬೆಳೆದುಬಂದ ಬಗೆಯ ಐತಿಹಾಸಿಕ ಚಿತ್ರಣ ಇದರಲ್ಲಿದೆ. ಅರವಿಂದರ ಪ್ರಭಾವ ಈ ಕೃತಿಯಮೇಲೆ ದಟ್ಟವಾಗಿ ಕಂಡುಬರುತ್ತದೆ.

'ಲೋಕಾಯತನ'ದ ಮೂಲ ಆಶಯವನ್ನು ವ್ಯಕ್ತಪಡಿಸುವ ಒಂದೆರಡು ಸಾಲು ಗಳನ್ನು ಇಲ್ಲಿ ಉಲ್ಲೇಖಿಸಬಹುದು :

ನಾನು ವಿಶ್ವಮಾನಸ ಸಮುಸ್ತನನೂ ದಾಟಿ
ಪೂರ್ವ ಪಶ್ಚಿಮಗಳ ಅತಿಕ್ರಮಿಸಿ
ಇತಿಹಾಸ, ಧರ್ಮ, ಸಂಸ್ಕೃತಿಗಳ
ಶಿಬಿರಗಳ ಮೇಲೆ, ಹೊಸಯುಗದ ಹೆಜ್ಜೆಯೂರಿ—
ನೀಡುತಿರುವೆ ನಿನಗೆ ಜೀವನ ದರ್ಶನ—
ಈ ಮಹತ್ ಕಲ್ಪ ಪರಿವರ್ತನೆಯ ಕ್ಷಣ—
ಕಟ್ಟು ಹೊಸ ಭವಿಷ್ಯದ
ಭೂ ಜೀವನ ಭಗವದ್ದರ್ಪಣವಾಗಲಿ

ಒಟ್ಟಿನಲ್ಲಿ ಹೇಳುವುದಾದರೆ ಎಳೆತನದಿಂದಲೂ ಸುಮಿತ್ರಾನಂದನ ಪಂತರ ಹೃದಯದಲ್ಲಿ ಬದುಕಿನ ಶುಭದತ್ತ ಶುಭ್ರತೆಯತ್ತ ನಿರಂತರ ಒಲವು ಬೆಳೆದುಕೊಂಡು ಬಂದಿರುವುದನ್ನು ಕಾಣಬಹುದು. ಸೌಂದರ್ಯ ಕವಿ ಪ್ರಕೃತಿ ಕವಿಯೆಂದು ಖ್ಯಾತ

ರಾಗಿದ್ದರೂ ಬದುಕನ್ನು ಇನ್ನೂ ಮಂಗಳಕರವಾಗಿ ಕಾಣುವ ಅಪಾರ ಕಳಕಳಿ ಅವರ ಕಾವ್ಯದಲ್ಲಿ ಕಾಣದೊರೆಯುತ್ತದೆ. ವಸ್ತು ಮತ್ತು ನಿರೂಪಣಾ ಶೈಲಿ ಎರಡರ ದೃಷ್ಟಿಯಿಂದಲೂ ಅವರ ರಚನೆಗಳಲ್ಲಿ ಎದ್ದು ಕಾಣುವ ಸ್ವೋಪಜ್ಞತೆ ಮಹತ್ವಪೂರ್ಣವಾದುದು. ವಿಮರ್ಶಕರೊಬ್ಬರು ಹೇಳುವಂತೆ ಪ್ರಕೃತಿ ಪ್ರೇಮವನ್ನು ಕುರಿತಂತೆ ಮಾರ್ಮಿಕ ಬೆಳವಣಿಗೆ ಪಂತರ ಕಾವ್ಯದಲ್ಲಿ ಕಂಡುಬರುವಷ್ಟು ಆಳವಾಗಿ ಅಗಾಧವಾಗಿ ಪ್ರಾಯಃ ಬೇರೆಡೆ ಹುಡುಕುವುದು ಕಷ್ಟಸಾಧ್ಯವೇನೊ. ರಾಷ್ಟ್ರೀಯ ಭಾವನೆಗೂ ದನಿಕೊಟ್ಟ ಪಂತರು ಇತರ ಅನೇಕ ಕವಿಗಳಂತೆ ಕೇವಲ ಗಾಂಧೀಜಿಯವರ ಗುಣಗಳನ್ನು ಮಾತ್ರ ಹಾಡಿ ಹೊಗಳದೆ ಗಾಂಧೀ ವಾದದ ಒಳಸತ್ವವನ್ನು ಗ್ರಹಿಸಿ ತಮ್ಮ ಕಾವ್ಯದ ಮೂಲಕ ಚಿತ್ರೀಕರಿಸಿದರು. ರೈತ, ಕಾರ್ಮಿಕ, ಹೆಣ್ಣು ಇವರೆಲ್ಲರ ಶೋಷಣೆಯನ್ನು ಪ್ರತಿಭಟಿಸಿ ಇವರೆಲ್ಲರ ಬಿಡುಗಡೆಗಾಗಿ ದನಿಯೆತ್ತಿ ಆಗ್ರಹಿಸಿದರು. ಮಾರ್ಕ್ಸ್‌ವಾದ ಹಾಗೂ ಅರವಿಂದರ ನವಚೇತನಾವಾದವನ್ನು ಮೈಗೂಡಿಸಿಕೊಂಡು ತಮ್ಮದೇ ಆದ ರೀತಿಯಲ್ಲಿ ವೈಚಾರಿಕ ಕ್ರಾಂತಿಗೆ ಅನುವು ಮಾಡಿಕೊಟ್ಟರು, ಖಡೀ ಬೋಲೀ ಹಿಂದಿಯ ಭಾಷಾಶೈಲಿಗಳ ಬೆಳವಣಿಗೆಗೆ ಅವರು ಸಲ್ಲಿಸಿರುವ ಕೊಡುಗೆ ಸ್ಮರಣೀಯವಾದುದು.

ತಮ್ಮ ವೈವಿಧ್ಯಮಯವಾದ ಕಾವ್ಯರಚನೆಯ ಮೂಲಕ ಪಂತರು ಸಮನ್ವಯ ಸಾಧನೆ ಮಾಡಿರುವುದನ್ನು ನೋಡಬಹುದು. ಬಗೆಬಗೆಯ ವಿರೋಧಿ ವಸ್ತುಗಳ, ವ್ಯಕ್ತಿತ್ವಗಳ, ಭಾವನೆಗಳ ನಡುವೆ ಸಮನ್ವಯವನ್ನು ಸಾಧಿಸಿ ಅವೆಲ್ಲಕ್ಕಿಂತ ಮೇಲೇರಿ ಬದುಕನ್ನು ಕಂಡ, ಅನುಭವಿಸಿದ, ಆಸ್ವಾದಿಸಿ ಜೀವನ ದರ್ಶನವನ್ನು ರೂಪಿಸಿಕೊಂಡ ಅಪೂರ್ವ ವ್ಯಕ್ತಿತ್ವ ಅವರದು. ಪಂತರು ಈ ಶತಮಾನದ ಶ್ರೇಷ್ಠ ಭಾರತೀಯ ಕವಿಗಳ ಸಾಲಿನಲ್ಲಿ ನಿಲ್ಲಬಲ್ಲ ಅಗ್ರಮಾನ್ಯರಲ್ಲಿ ಒಬ್ಬರೆಂದು ನಿಸ್ಸಂಶಯವಾಗಿ ಹೇಳಬಹುದು.

ಕೆಟ್ಟದ್ದನ್ನು ಮಾಡದಿರಬೇಕಾದರೆ ಕೆಟ್ಟದ್ದರಿಂದ ಪೂರ್ಣವಾಗಿ ದೂರವಿರಬೇಕು.

ಗಾಂಧೀಜಿ

ನಾಲ್ಕು ಕವನಗಳು

ಸುಮಿತ್ರಾನಂದನ ಪಂತ್

ಕವನ

ಜೀವವನು ಜೀವದೊಡನೆ
ಬೆಸೆದೆಯೇಕೆ !
ಅದೂ ಗೊತ್ತಿಲ್ಲದ ಕಾಣದ
ಜೀವದೊಡನೆ !

ಗೋಪ್ಯವಾಗಿರಲಾರದು
ಈಗ ಈ ಮರ್ಮಕಥೆ
ಉಮ್ಮಳಿಸುತ್ತಿರುವ ವಿರಹವ್ಯಥೆಯನು
ತಾಳಲಾರದು ಜೀವ
ಪುಟಿಯುತಿದೆ ಹಾಡಾಗಿ
ಎದೆಯಾಳದ ನೋವು ತನಗೆ ತಾನೆ !

ಈ ಜೀವಗಳ ಬಂಧನ ಅಲೌಕಿಕ
ಮೈಮೀರಿದ ಮನ

ಒಳಬೇಗುದಿಯಲಿ ತಪತಪಿಸುವ ತನು
ಮುಗ್ಧ ಹೃದಯ ಸೌಂದರ್ಯ ಜ್ಯೋತಿಗೆ
ದಗ್ಧ ಕಾಮನೆಗಳನರ್ಪಿಸುತಿದೆ !

ಇನ್ನೇನನೂ ಬೇಡಲಾರೆ ಬಯಸಿ ನಿನ್ನಿಂದ !
ಜೀವವನು ಜೀವದೊಡನೆ
ಬೆಸೆದೆಯೇಕೆ !

ಹೊಸ ನೋಟ

ಬಿಟ್ಟಿದವು ಛಂದಸ್ಸಿನ ಬಂಧಗಳು
ಪ್ರಾಸದ ಬೆಳ್ಳಿಗಟ್ಟು
ಈಗ ಹಾಡುಗಳು ಮುಕ್ತ
ಯುಗವಾಣಿ ಹರಿಯಬಲ್ಲುದು ಅನಾಯಾಸದಲಿ !
ಕಲಾತ್ಮಕ ಭಾವಗಳು
ಜಗದ ರೂಪ—ನಾಮಗಳಾದವು
ಬದುಕಿನ ಸೆಣಸಾಟ ಸುಖವೀಯುತಿದೆ
ಸೊಬಗಿನ ತಾಣವಾಗಿದೆ !

ಸುಂದರ, ಶಿವ, ಸತ್ಯ
ಕಲೆಯ ಈ ಊಹೆಯ ಆಳತೆಗೋಲುಗಳು
ಸ್ಥೂಲವಾಗಿ ನಿಂದಿವೆ
ಜಗದ ಬದುಕಿನೊಡನೆ ಒಂದಾಗಿ ನಡೆದಿವೆ !
ಮಾನವ ಸ್ವಭಾವವೇ
ಮಾನವ ಆದರ್ಶಗಳನನುಗೊಳಿಸಿ
ಅಪೂರ್ಣವನು ಪೂರ್ಣವಾಗಿಸಿ
ಅಸುಂದರವನು ಸುಂದರವಾಗಿಸುತಿದೆ !

ಹಾಡು ಕೋಗಿಲೆ

ಹಾಡು ಕೋಗಿಲೆ, ಸಿಡಿಸು ಬೆಂಕಿಯ ಕಿಡಿ !
    ಸವೆದ ಹಳತೆಲ್ಲವೂ ನಶಿಸಲಿ ಮಣ್ಣಾಗಲಿ
    ಧ್ವಂಸವಾಗಲಿ ಜಗದ ಜಗ್ಗದ ಕಟ್ಟುಪಾಡುಗಳು
    ಬೆಂಕಿ ಬಾ, ಪ್ರಳಯದ ಹೊಸ ಹೆಜ್ಜೆಯನಿಡುತಲಿ
    ಚಿಗುರೊಡೆಯಲಿ ಹೊಸ ಮಾನವತೆ !

ಹಾಡು ಕೋಗಿಲೆ, ಕಂಪನ ತುಂಬಿದ ದನಿಯಲಬ್ಬರಿಸು !
    ಜಾತಿ ಕುಲ ವರ್ಣಗಳ ದಟ್ಟ ಎಲೆಗಳುದುರಲಿ
    ಕುರುಡು ಗೂಡಿನ ನಡೆನುಡಿಗಳೀಗಲೆ ಅಳಿಯಲಿ
    ವ್ಯಕ್ತಿ-ರಾಷ್ಟ್ರಗತ ರಾಗದ್ವೇಷ ಕಹಿ
    ಕರಗಲಿ, ಸಾಯಲಿ ಮರೆಯಾಗಲಿ ಈ ಕ್ಷಣವೆ !

ಹಾಡು ಕೋಗಿಲೆ, ಹಾಡು, ವ್ಯರ್ಥ ಚಿಂತನೆ ಬೇಡ!
ಹೊಸನೆತ್ತರ ಚಿಗುರಿನ ಮೈಯಲಿ ತುಂಬು
ಹೊಸ ಸ್ನೇಹದ ಕಂಪನು ಹರಯಕೆ ಬೆರೆಸು
ಹೊಸ ಜಗಜೀವನದಲಿ ಜೇನನು ಮರಿಸು
ಸವಿದಾ ಜೇನನು ಜನ ಮಾಡಲಿ ಝೇಂಕಾರ!

ಹಾಡು ಕೋಗಿಲೆ, ಹೊಸ ಹಾಡನು ಮಾಡು!
ಮಾನವ ಹಿತಕಾಗಿ ಹೊಸ ಮನಸನು ರಚಿಸು
ಹೊಸದಾಗಲಿ ಮೈಮನ ನಾಲಗೆ ತೊಡುಗೆಗಳು
ಸ್ನೇಹ ಸೌಹಾರ್ದದಿ ಸಿಂಗೊಳ್ಳಲಿ ಮನಸು
ಹೊಸದಾಗಲಿ ಮನುಜನ ಬಾಳಿನ ಹಾದಿ!

ಹಾಡು ಕೋಗಿಲೆ, ಸನಾತನ ಸಂದೇಶವ ಹಾಡು!
ಮಾನವ ಎಂದೆಂದೂ ದಿವ್ಯ, ಬೆಳಕಿನ ಕಿಡಿ
ಮಣ್ಣಾಗುವ ಮೈಯಿನ ದೂಳಲ್ಲ
ದೇಶಕಾಲಗಳ ಅಡೆತಡೆಯಿಲ್ಲ
ಮಾನವನ ಪರಿಚಯವೆಂದರೆ ಮಾನವತೆಯಷ್ಟೆ!

ಕೋಗಿಲೆ, ಹಾಡು, ಆರಳಲಿ ಈ ಕ್ಷಣ ಬಾನೆಲ್ಲ!

ಮಾನವ

ಸುಂದರವಾಗಿದೆ ಹಕ್ಕಿ, ಹೂವು ಸುಂದರ
ಮಾನವ! ನೀ ಎಲ್ಲಕ್ಕಿಂತ ಅತಿಸುಂದರ
ಎಲ್ಲದರಿಂದ ಎಳ್ಳಷ್ಟನು ಆಯ್ದು ರೂಪುದಳೆದ
ನೀ ಸೃಷ್ಟಿಯಲ್ಲೆಲ್ಲ ಎಂದೆಂದೂ ಅನುಪಮ!
ಹೊಸ ಹರಯದ ಬಿಸಿರಕ್ತಾವರಿಸಿದ ಮೈ
ಮೃದು ತ್ವಚೆ, ಅಂಗಗಳು ಸೊಬಗಿನ ಸೆಲೆ
ಇಡೀ ಪ್ರಕೃತಿಯ ನೆರಳು ಬೆಳಕಿನ ಬಣ್ಣಬಣ್ಣಗಳು
ನಿನ್ನ ಅಂದದ ಮುಂದೆ ಏನೇನೂ ಅಲ್ಲ, ಅತಿ ಸಪ್ಪೆ!...

ಯೌವನದ ಹುರುಪು ಮಿಂಚುವ ಮೈಕಾಂತಿ
ಹೊಸ ಸತಿಪತಿಯರ ಪರಸ್ಪರ ಸಮರ್ಪಣ
ಆಹ್ಲಾದ ಎಷ್ಟು ಚೆನ್ನ, ಸೌಂದರ್ಯ ಎಷ್ಟುಸೊಗಸು,

ಅಹಾ, ಮೊದಲ ಪ್ರೇಮದ ಜೇನು ಸಿಹಿ ಸ್ವರ್ಗ!
ಆಸೆ ಅಭಿಲಾಷೆ, ಗರಿಗೆದರಿದ ಕನಸುಗಳು
ನಿರಂತರ ದುಡಿಮೆ ಸಾಧನೆ ವಿಘ್ನಗಳ ಮೆಟ್ಟಿ
ನಂಬಿಕೆ, ಸತ್ಯಾಸತ್ಯಗಳ ವಿವೇಕ

ದೃಢ ಶ್ರದ್ಧೆ, ಸತ್ಯ-ಪ್ರೇಮ ಅಪರಿಮಿತ!
ಸಹೃದಯತೆ, ತ್ಯಾಗ, ಸಹಾನುಭೂತಿ
ಮನದಾಳದ ಈ ದಿವ್ಯ ವಿಭೂತಿಗಳು
ನಾಗರಿಕತೆಯ ಈ ಪಾರ್ಥಿವ ಸ್ತಂಭಗಳು
ಸಂಸ್ಕೃತಿ ಸ್ವರ್ಗದ ಮಡಿಲು—ಮಾಗದ ಸಹಜ ಸಿರಿ!

ಮಾನವಗೆ ಮಾನವನ ಮೇಲೆ ನೆಚ್ಚಿಕೆ
ಪರಿಚಯ, ಮಾನವತೆಯ ಬೆಳವಣಿಗೆ
ವಿಜ್ಞಾನ ಜ್ಞಾನಗಳ ಅನ್ವೇಷಣ
ಎಲ್ಲವೂ ಒಂದೇ, ಒಂದರಲೆ ಎಲ್ಲ ಈ ಪರಿಜ್ಞಾನ!
ಇದೇ ಆ ದೇವರ ವರದಾನ ನಿನಗೆ
ಪ್ರತಿಕ್ಷಣ ಹೊಸಹೊಸದನು ಅನುಭವಿಸು,
ಮೂರು ಲೋಕದಲಿ ಏನಿದೆ ತಾನೆ ಕೊರತೆ
ಮನುಷ್ಯನಾಗಿ ಉಳಿಯುವಿಯಾದರಷ್ಟೆ ಸಾಕು!

ಕನ್ನಡಕ್ಕೆ : ಲಕ್ಷ್ಮೀನಾರಾಯಣ ಅರೋರ

ಪ್ರಕೃತಿಯ ನಿಯಮಗಳನ್ನು ತಿಳಿದು ಅಥವಾ ತಿಳಿಯದೆಯೇ ಉಲ್ಲಂಘಿಸುವುದು ಅಸತ್ಯದ ಒಂದು ರೂಪ.

ಗಾಂಧೀಜಿ

"ಅನಕ್ಷರತೆ ಮತ್ತು ವಯಸ್ಕರ ಶಿಕ್ಷಣ"

ವಸಂತಕುಮಾರ ಹೆಬ್ಬರಳು

ಸಾಕ್ಷರತೆ ಮಾನವನ ಬದುಕಿನಲ್ಲಿ ಬಹಳ ಮುಖ್ಯವಾದುದ್ದು. ಪ್ರತಿಯೊಬ್ಬರಿಗೂ ನೀರು, ಗಾಳಿ, ಆಹಾರ ಹೇಗೆ ಮುಖ್ಯವೋ ಹಾಗೆಯೇ 'ಸಾಕ್ಷರತೆ' ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವದ ಪ್ರಗತಿಗೆ ಸಾಧನ ಹಾಗೂ ಮಾನವನ ಕಾಮಧೇನು. ಶಾಂತಿ–ಅಶಾಂತಿ : ಸುಖ–ದುಃಖ : ನೋವು ಮತ್ತು ನಲಿವು ಮುಂತಾದ ಭಾವನೆಗಳ ಮೂಲವೇ ಮನಸ್ಸು. ಈ ಮನಸ್ಸು ಸುಧಾರಿಸುವುದೇ ಶಿಕ್ಷಣ. ಅಲ್ಲದೆ ವಿಚಾರವಂತ ಪ್ರಾಜ್ಞ ಜನತೆಯ ನವ ನಿರ್ಮಾಣಕ್ಕೆ ದೀನದಲಿತರ ಅಭಿವೃದ್ಧಿಗೆ ಸಮಗ್ರ ಬೆಳವಣಿಗೆಗೆ ಶಿಕ್ಷಣ ಪ್ರತಿಯೊಬ್ಬ ನಾಗರೀಕನಿಗೂ ಅತ್ಯಾವಶ್ಯಕ.

ಒಂದು ನಾಡಿನ ಮುನ್ನಡೆ ಅಲ್ಲಿಯ ವಿದ್ಯಾವಂತರನ್ನು ವಿದ್ಯಾಮಟ್ಟವನ್ನು ಅವಲಂಬಿಸಿದೆ. ವಿದ್ಯೆಯಿಂದ ಜ್ಞಾನ ವಿವೇಕಗಳು ಲಭಿಸುತ್ತವೆ. ಬುದ್ಧಿ ಪ್ರಕಾರವಾಗುತ್ತವೆ. ಸಾಂಸ್ಕೃತಿಕ ಸಾಮಾಜಿಕ ಪ್ರಜ್ಞೆ ಮೂಡುತ್ತದೆ. ಹೊಸ ಸವಾಲುಗಳನ್ನೆದುರಿಸುವ ಸಾಮರ್ಥ್ಯ ಬರುತ್ತದೆ. ಬದುಕು ಹಸನಾಗುತ್ತದೆ. ಸರ್ವ ಸಮಾನತೆ ಪ್ರಜಾಪ್ರಭುತ್ವದ ಪ್ರಮುಖ ಲಕ್ಷಣಗಳಲ್ಲೊಂದು, ಎಲ್ಲಿಯತನಕ ದೇಶದಲ್ಲಿ ಅನಕ್ಷರತೆ ಇರುತ್ತದೋ ಅಲ್ಲಿಯತನಕ ಅಸಮಾನತೆ ಬದುಕಿನ ಸರ್ವಕ್ಷೇತ್ರಗಳನ್ನು ಆಕ್ರಮಿಸಿಕೊಂಡು ಪ್ರಜಾಪ್ರಭುತ್ವಕ್ಕೆ ಶಾಪವಾಗುತ್ತದೆ. ನಮ್ಮ ದೇಶವಾದ ಭಾರತ ಅಜ್ಞಾನ–ಅನಕ್ಷರತೆ–ಬಡತನ ನಿರುದ್ಯೋಗ ಮತ್ತು ಹಲವು ಸಮಸ್ಯೆಗಳಿಂದ ನರಳುತ್ತಿರುವ ರಾಷ್ಟ್ರ. ಅನಕ್ಷರತೆ ಮತ್ತು ಅಜ್ಞಾನದ ಕಾರಣ ಜನತೆ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಳಲ್ಲಿ ಬಹಳವಾಗಿ ಹಿಂದುಳಿದಿದೆ. ಇದಕ್ಕೆ ಮುಖ್ಯ ಕಾರಣ ಸಂಪತ್ತಿನ ಉತ್ಪಾದನೆಗಿಂತ, ಸಂತಾನದ ಉತ್ಪಾದನೆಯೇ ನಮ್ಮ ದೇಶದಲ್ಲಿ ಹೆಚ್ಚು. ಇದು ಸಹ ದೇಶ ಆರ್ಥಿಕವಾಗಿ ಹಾಗೂ ಶೈಕ್ಷಣಿಕ (ಸಾಕ್ಷರತೆಯ ಮಟ್ಟ) ವಾಗಿ

ಹಿಂದುಳಿಯಲು ಕಾರಣವಾಗಿದೆ. ಒಟ್ಟಿನಲ್ಲಿ ಮಹಾತ್ಮಗಾಂಧೀಜಿಯವರು ಹೇಳುವಂತೆ "ಅನಕ್ಷರತೆ ಭಾರತಕ್ಕೆ ಒಂದು ಶಾಪ." ಇದನ್ನು ನಿರ್ಮೂಲನ ಮಾಡಬೇಕು.

ನಮ್ಮ ದೇಶವು ಸ್ವಾತಂತ್ರ್ಯವನ್ನು ಪಡೆದು ನಾಲ್ಕು ದಶಕಗಳು ಕಳೆದರೂ ಸಾಕ್ಷರತೆಯ ಮಟ್ಟ ಕೇವಲ ಶೇ. ೩೬ ಇದೆ. ಅಂದರೆ ಸುಮಾರು ಶೇ. ೬೪ ಜನ ಅನಕ್ಷರಸ್ಥರು. ಇದರಲ್ಲಿ ಶೇ. ೫೩ ಜನ ಪುರುಷರಾದರೆ ಶೇ. ೭೫ ಜನ ಮಹಿಳೆಯರಾಗಿದ್ದಾರೆ. ಪ್ರತಿ ನಾಲ್ಕು ಮಹಿಳೆಯರಲ್ಲಿ ಮೂವರು ಅನಕ್ಷರಸ್ಥರಾಗಿದ್ದಾರೆ. ಸಾಕ್ಷರತೆಯ ಮಟ್ಟವನ್ನು ಹೆಚ್ಚಿಸಲು ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅದರಲ್ಲಿ ೬ ರಿಂದ ೧೪ ವರ್ಷದವರೆಗೆ ಕಡ್ಡಾಯ ಶಿಕ್ಷಣ ೧೫ ರಿಂದ ೩೫ ವಯಸ್ಸಿನ ಅನಕ್ಷರಸ್ಥ ವಯಸ್ಕರನ್ನು ಸಾಕ್ಷರಸ್ಥರನ್ನಾಗಿ ಮಾಡಲು ವಯಸ್ಕರ ಶಿಕ್ಷಣ, ಅಕ್ಷರಸೇನೆ ಕಾರ್ಯಕ್ರಮ ಮತ್ತು ಅನೌಪಚಾರಿಕ ಶಿಕ್ಷಣ ಜಾರಿಯಲ್ಲಿದ್ದರೂ ಜನಸಂಖ್ಯೆಯ ಹೆಚ್ಚಳದಿಂದ ಸಾಕ್ಷರತೆಯ ಮಟ್ಟವೂ ಉತ್ತಮಗೊಂಡಿಲ್ಲದಿರುವುದು ಶೋಚನೀಯವಾಗಿದೆ. ಮಿತಿಮೀರಿದ ಜನಸಂಖ್ಯೆಯಿಂದ ಶಿಕ್ಷಣದ ಸೌಕರ್ಯದ ಕೊರತೆ ಉಂಟಾಗಿ ಅನಕ್ಷರಸ್ಥರ ಸಂಖ್ಯೆ ಬೆಳೆಯುತ್ತಾ ಹೋಗುತ್ತಿದೆ. ಇದರಿಂದ ರೋಗರುಜಿನಗಳು–ವಸತಿಹೀನತೆ–ನಿರುದ್ಯೋಗ– ಆಹಾರದ ಕೊರತೆ ಇನ್ನೂ ಹಲವು ಸಮಸ್ಯೆಗಳು ಹುಟ್ಟಿ ಜನಜೀವನ ಶೋಚನೀಯವಾಗಿದೆ.

ಈ ಎಲ್ಲಾ ಸಮಸ್ಯೆಗಳನ್ನು ನಿವಾರಿಸಲು ಕೇವಲ ಪ್ರಚಾರದಿಂದ, ಶಾಸನ ಮಾಡುವುದರಿಂದ ಸಾಧ್ಯವಿಲ್ಲ. ಇದಕ್ಕೆ ಅತ್ಯುತ್ತಮವಾದ ವಿಧಾನ ಶಿಕ್ಷಣವಾಗಬೇಕು. ಉತ್ತಮ ಗುಣಮಟ್ಟದ ಜೀವನ ಸಾಗಿಸಬೇಕಾದರೆ ಪ್ರತಿಯೊಬ್ಬರಿಗೂ ಜೀವನದ ನಿಯಮಗಳು ತಿಳಿದಿರಬೇಕು ಮತ್ತು ಶಿಕ್ಷಣವನ್ನು ಪಡೆಯಲೇ ಬೇಕು. ಜನಸಂಖ್ಯೆ ಶಿಕ್ಷಣದ ಸ್ಪಷ್ಟ ತಿಳುವಳಿಕೆಯನ್ನು ಪ್ರತಿಯೊಬ್ಬರಿಗೂ ನೀಡುವುದು ಬಹಳ ಅತ್ಯಗತ್ಯವಾಗಿದೆ.

ಕುಟುಂಬ ಕಲ್ಯಾಣ ಯೋಜನೆಯೊಂದೇ ಈ ಕಾರ್ಯ ಮಾಡಲು ಸಾಧ್ಯವಿಲ್ಲ. ಪ್ರತಿಯೊಬ್ಬರಿಗೂ ಈ ಬಗ್ಗೆ ಅರಿವು ಮೂಡಿಸಲು ಜನಸಂಖ್ಯಾ ಶಿಕ್ಷಣವನ್ನು ಇಂದಿನ ಶಿಕ್ಷಣ ಪದ್ಧತಿಯಲ್ಲಿ ಕಡ್ಡಾಯವಾಗಿ ಜಾರಿಗೊಳಿಸುವುದು ಅಗತ್ಯವಾಗಿದೆ. ಇದರಿಂದ ಪ್ರತಿಯೊಬ್ಬರಿಗೂ ಜನಸಂಖ್ಯಾ ಸಮಸ್ಯೆ ಮತ್ತು ಇದರಿಂದ ಹುಟ್ಟುವ ಹಲವು ಸಮಸ್ಯೆಗಳ ಬಗ್ಗೆ ಚಿಂತನೆ ಮಾಡಲು ಸಾಧ್ಯವಾಗುವುದು ಹಾಗೂ ದೇಶದ ಸಮಸ್ಯೆಗಳ ಪರಿಹಾರಗಳ ಅರಿವು ಮೂಡುವುದಲ್ಲದೆ ಇವರಲ್ಲಿ ಜವಾಬ್ದಾರಿತನ ಮತ್ತು ಕರ್ತವ್ಯ ಪ್ರಜ್ಞೆ ಉಂಟಾಗಿ ಮುಂದೆ ಇವರು ಕುಟುಂಬವನ್ನು ಚಿಕ್ಕದಾಗಿ–ಚೊಕ್ಕವಾಗಿ ಇಟ್ಟುಕೊಳ್ಳಲು ಸಾಧ್ಯವಾಗುತ್ತದೆ.

ಕೇಂದ್ರ ಸರ್ಕಾರವು ೧೯೭೮ ರಿಂದ ಈಚೆಗೆ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಅದರಲ್ಲಿ ಗ್ರಾಮೀಣ ಕ್ರಿಯಾತ್ಮಕ ಸಾಕ್ಷರತಾ ಯೋಜನೆ, ರಾಷ್ಟ್ರೀಯ ಸಾಕ್ಷರತಾ ನಿಯೋಗ–ಜನಶಿಕ್ಷಣ ನಿಲಯಗಳು ಇತ್ಯಾದಿ. ಏಳನೇ ಪಂಚವಾರ್ಷಿಕ ಯೋಜನೆಯ ಮುನ್ನುಡಿಯಲ್ಲಿ ಪ್ರಧಾನ ಮಂತ್ರಿಯವರು "ಅಭಿವೃದ್ಧಿ ಎಂದರೆ ಕಾರ್ಖಾನೆಗಳ–ಅಣೆಕಟ್ಟುಗಳ ಹಾಗೂ ರಸ್ತೆಗಳ ನಿರ್ಮಾಣ ಮಾತ್ರವಲ್ಲ. ಮೂಲತಃ ಜನತೆಯ ಅಭಿವೃದ್ಧಿಯಾಗಬೇಕು. ನಮ್ಮ ಗುರಿ ಜನತೆಯ ಸಂಪತ್ತು, ಸಂಸ್ಕೃತಿ ಮತ್ತು

ಚೈತನ್ಯವನ್ನು ವರ್ಧಿಸುವುದು" ಭವಿಷ್ಯದಲ್ಲಿ ನೀವು ಈ ಪ್ರಶ್ನೆಗಳ ಬಗ್ಗೆ ಹೆಚ್ಚಿನ ಗಮನ ನೀಡಬೇಕು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ದೇಶದ ಅಭಿವೃದ್ಧಿಗೆ ಸರ್ಕಾರವು ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಕಡ್ಡಾಯ ಪ್ರಾಥಮಿಕ ಶಿಕ್ಷಣ, ಕೃಷಿ ಕಾರ್ಯಕ್ರಮ, ಕುಟುಂಬ ಯೋಜನೆ, ನೀರಾವರಿ, ಪಶುಸಂಗೋಪನೆ ಹೀಗೆ ಹಲವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡಿದ್ದು ಅನಕ್ಷರತೆ ಮತ್ತು ಅಜ್ಞಾನದ ಕಾರಣ ಪೂರ್ಣ ಯಶಸ್ಸನ್ನು ಪಡೆದಿರುವುದಿಲ್ಲ. ಇದಕ್ಕೆ ವಯಸ್ಕರ ಶಿಕ್ಷಣವು ಮೂಲ ತಳಹದಿಯಾಗಬೇಕು. ಸಜೀವ ಸಂಪತ್ತು ಜೀವಮಯವಾದುದು. ಎಲ್ಲರಿಗೂ ಶಿಕ್ಷಣವನ್ನು ದೊರಕಿಸಿ ಕೊಟ್ಟಾಗ ಮಾತ್ರ ಪ್ರತಿಯೊಂದು ಯೋಜನೆಯೂ ಸಫಲವಾಗಲು ಸಾಧ್ಯವಾಗುತ್ತದೆ.

ಅನಕ್ಷರತೆಯಿಂದ ನಿಜವಾದ ಬದುಕು ಬಹಳ ವ್ಯರ್ಥವಾಗುತ್ತದೆ. ಪ್ರತಿ ಕಣದಲ್ಲೂ ಬದಲಾಗುತ್ತಿರುವ ಸಮಾಜದಲ್ಲಿ ವ್ಯಕ್ತಿ ತನ್ನ ಜ್ಞಾನ ಸಂಪತ್ತನ್ನು ಹೆಚ್ಚಿಸಿ ಕೊಳ್ಳದಿದ್ದರೆ ಆತನ ಜೀವನ ಸ್ಥಿತಿ ಉತ್ತಮಗೊಳ್ಳಲು ಸಾಧ್ಯವಿಲ್ಲ. ಅಲ್ಲದೆ ವಿಜ್ಞಾನ, ವೈದ್ಯಕೀಯ, ವ್ಯವಸಾಯ ಮತ್ತು ಕೈಗಾರಿಕೆ ಯಾವ ರಂಗ ನೋಡಿದರೂ ಹೊಸ ಹೊಸ ವಿಚಾರಗಳು ಹರಿದು ಬರುತ್ತಿವೆ. ಅಲ್ಲದೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಗಳಿಗೆ ಹೊಂದಿಕೊಂಡು ಸಂತೃಪ್ತ ಜೀವನ ಸಾಗಿಸಬೇಕಾದರೆ ವ್ಯಕ್ತಿ ಸಾಕ್ಷರಸ್ಥನಾಗಲೇಬೇಕು. ಸಾಕ್ಷರತೆಯೊಂದೇ ವಯಸ್ಕರ ಶಿಕ್ಷಣವಲ್ಲ. ಆದರೆ ಅದು ವಯಸ್ಕರ ಶಿಕ್ಷಣದ ಒಂದು ಅಂಗ ಮಾತ್ರ. ಅದು ಬದುಕಿನ ಬಹುಮುಖ ಸಮಸ್ಯೆಗಳಿಗೆ ಏಕೈಕ ಪರಿಹಾರವಾಗಲಾರದು ಎಂಬುದು ನಿಜ. ಆದರೆ ವ್ಯಕ್ತಿಯನ್ನು ಆಲೋಚನಾಪರನನ್ನಾಗಿ ಮಾಡಲು, ಸುಖಬಾಳ್ವೆಯನ್ನು ನಡೆಸಲು, ಉತ್ತಮಶೀಲನನ್ನಾಗಿ ಮಾಡಲು, ತನ್ನ ವಿರಾಮ ಕಾಲವನ್ನು ಉಪಯುಕ್ತವಾಗಿ ವಿನಿಯೋಗಿಸಲು ಪ್ರತಿಯೊಬ್ಬ ವ್ಯಕ್ತಿಯೂ ಶಿಕ್ಷಣವನ್ನು ಪಡೆಯಲೇಬೇಕು. ಆದರೆ ಅನಕ್ಷರಸ್ಥರ ಬಹುದೀರ್ಘ ಬದುಕಿಗೆ ಕೊನೆ ಎಂದು ?

ನೂರಕ್ಕೆ ಸುಮಾರು ೭೦ ಜನ ಅನಕ್ಷರಸ್ಥರಿರುವ ಭಾರತದಲ್ಲಿ ಅನಕ್ಷರತಾ ನಿರ್ಮೂಲನ ಕಾರ್ಯವೇ ವಯಸ್ಕರ ಶಿಕ್ಷಣದ ಮೊದಲ ಗುರಿ. ನೆಲ ಉಳುವ ರೈತ ಗುಣ ಅರಿಯಬೇಕು. ಯಂತ್ರ ನಡೆಸುವ ಕಾರ್ಮಿಕ ತಾನು ನಡೆಸುವ ಯಂತ್ರದ ಬಗ್ಗೆ ಮಾಹಿತಿ ಹೊಂದಿರಬೇಕು. ಇದು ಅವಶ್ಯಕ ಹಾಗೂ ಅವುಗಳಲ್ಲಿ ಆಗಿಂದಾಗ್ಗೆ ಆಗುವ ಬದಲಾವಣೆಗಳ ಅರಿವನ್ನು ಸಹ ಪಡೆಯುವುದು ತನ್ನ ಕಸುಬಿನ ಹಿತದಿಂದ ಅಗತ್ಯ. ಇದೇ ರೀತಿ ವಯಸ್ಕ ದೇಶಕ್ಕೆ ತಾನು ಸಲ್ಲಿಸಬೇಕಾದ ಸೇವೆಯನ್ನು ಅರಿಯಬೇಕು ಮತ್ತು ಕಾನೂನು, ಶಿಸ್ತು ಇವುಗಳ ಬಗ್ಗೆ ತಿಳಿವಳಿಕೆ ಪಡೆದಿರಬೇಕು. ಇದರಿಂದ ಶಿಕ್ಷಣ ಯಾವ ಒಂದು ವಯಸ್ಸಿಗೂ ಸೀಮಿತವಾದುದಲ್ಲ, ಶಾಲಾ ಶಿಕ್ಷಣ ಅಂತ್ಯವಾಗುವ ವೇಳೆಗೆ ಜೀವನ ಶಿಕ್ಷಣ ಪ್ರಾರಂಭ—ಅಂತಹ ಜೀವನ ಶಿಕ್ಷಣವೇ "ವಯಸ್ಕರ ಶಿಕ್ಷಣ". ಒಟ್ಟಿನಲ್ಲಿ ಒಂದು ದೇಶದ ಇಡೀ ಭವಿಷ್ಯವೇ ನಿಂತಿರುವುದು ಶಿಕ್ಷಣದ ಮೇಲೆ, ಶಿಕ್ಷಣವೇ ಈ ಎಲ್ಲಾ ಬದುಕಿನ ಬುನಾದಿ. ವ್ಯಕ್ತಿಯ ಜೀವನದ ಒಂದು ಭಾಗ.

ದೇಶದ ಸಾಕ್ಷರತಾ ಪ್ರಮಾಣವು ೧೯೫೧ ರಲ್ಲಿ ಶೇ. ೧೬.೬೭, ೧೯೬೧ ರಲ್ಲಿ

೨೪.೦೨, ೧೯೭೧ರಲ್ಲಿ ೨೯.೪೫, ೧೯೮೧ರಲ್ಲಿ ೩೬.೨೩ಕ್ಕೆ ಏರಿತು. ಆದರೆ ಜನಸಂಖ್ಯೆಯ ಮಿತಿಮೀರಿದ ಹೆಚ್ಚಳದಿಂದ ವಾಸ್ತವವಾಗಿ ಅನಕ್ಷರಸ್ಥರ ಸಂಖ್ಯೆಯು ಅಧಿಕವಾಗುತ್ತಲೇ ಇದೆ. ೧೯೮೧ರ ಜನಗಣತಿಯ ಪ್ರಕಾರ ಅನಕ್ಷರಸ್ಥರ ಸಂಖ್ಯೆ ೪೨.೮೩ ಕೋಟಿಗೆ ಏರಿದೆ. ಕಳೆದ ಮೂರು ದಶಕಗಳಿಂದಲೂ ಏನೆಲ್ಲಾ ಪ್ರಯತ್ನ ಪಟ್ಟರೂ ಕೂಡ ಅನಕ್ಷರಸ್ಥರ ಸಂಖ್ಯೆ ಕಡಿಮೆಯಾಗಿರುವುದಿಲ್ಲ.

ಈ ವೈಪರೀತ್ಯವನ್ನು ಹೋಗಲಾಡಿಸಬೇಕಾದರೆ ಕಡ್ಡಾಯ ಪ್ರಾಥಮಿಕ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ಹೆಚ್ಚು ವಿಸ್ತರಿಸುವುದು. ವಯಸ್ಕರ ಶಿಕ್ಷಣವೆಂದರೆ ಅಕ್ಷರ ಪ್ರಚಾರ, ಅನಕ್ಷರಸ್ಥರನ್ನು ಸಾಕ್ಷರಸ್ಥರನ್ನಾಗಿ ಮಾಡುವ ಕೆಲಸವೆಂಬ ಅಭಿಪ್ರಾಯ ಬಹು ಜನರಲ್ಲಿ ಇತ್ತು. ಈಗಲೂ ಅನೇಕರು ಈ ರೀತಿಯೇ ತಿಳಿದುಕೊಂಡಿದ್ದಾರೆಂದರೆ ತಪ್ಪಾಗಲಾರದು. ಆದರೆ ಕೇಂದ್ರ ಸರ್ಕಾರವು ವಯಸ್ಕರ ಶಿಕ್ಷಣವೆಂದರೆ "ಸಾಕ್ಷರತೆಯನ್ನು ಒಳಗೊಂಡಂತೆ ವ್ಯಕ್ತಿಯ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿ" ಎಂಬ ನಿರೂಪಣೆಯನ್ನು ಕೊಟ್ಟಿದೆ. ಅಂದರೆ ಸಾಕ್ಷರತೆಯಿಂದ ಅರಿವು ಅರಿವಿನಿಂದ ಕ್ರಿಯಾತ್ಮಕತೆ, ಕ್ರಿಯೆಯಿಂದ ಪ್ರಗತಿ—ಉತ್ತಮ ಮಟ್ಟದ ಜನ ಜೀವನ, ಒಟ್ಟಿನಲ್ಲಿ ದೇಶದ ಪ್ರಗತಿ. ಹೀಗೆ ಎಲ್ಲವೂ ಪರಸ್ಪರ ಸಂಬಂಧಿಸಿವೆ.

ಯೋಜನೆಯ ಮುಖ್ಯ ಉದ್ದೇಶಗಳು :

ಅ) ಸಾಕ್ಷರತಾ ಕೇಂದ್ರಗಳನ್ನು ತೆರೆದು ಜನರಲ್ಲಿ ಸ್ವತಂತ್ರದಿಂದ ವಿಚಾರ ಮತ್ತು ಹಕ್ಕುಬಾಧ್ಯತೆಗಳನ್ನು ಅರಿಯುವಂತೆ ಮಾಡುವುದು. ಅಲ್ಲದೆ ಅನಕ್ಷರತೆ, ಅಜ್ಞಾನ, ಮೂಢನಂಬಿಕೆ ಇವುಗಳಿಂದ ವಿಮೋಚನೆಗೊಳ್ಳಲು ತಿಳುವಳಿಕೆ ನೀಡುವುದು.

ಆ) ೧೫ ರಿಂದ ೩೫ ವಯಸ್ಸಿನ ಅನಕ್ಷರಸ್ಥ ವಯಸ್ಕರಿಗೆ, ಕಾರ್ಮಿಕರಿಗೆ, ಮಹಿಳೆಯರಿಗೆ, ಹಿಂದುಳಿದ ಜನಾಂಗದವರಿಗೆ ಮೊಟ್ಟ ಮೊದಲ ಆದ್ಯತೆಯನ್ನು ನೀಡುವುದು.

ಇ) ವೃದ್ಧಾಪ್ಯವೇತನ—ಭೂ ಸುಧಾರಣೆ—ಕಡ್ಡಾಯ ಪ್ರಾಥಮಿಕ ಶಿಕ್ಷಣ—ಜನಸಂಖ್ಯಾ ಶಿಕ್ಷಣ—ಸಣ್ಣ ಉಳಿತಾಯ—ಕುಟುಂಬ ಯೋಜನೆ—ಆರೋಗ್ಯ ಮತ್ತು ನೈರ್ಮಲ್ಯ—ಮಕ್ಕಳ ಪಾಲನೆ ಪೋಷಣೆ—ಪೌಷ್ಟಿಕ ಆಹಾರ—ಉಚಿತ ಕಾನೂನು ನೆರವು ಇನ್ನೂ ಹಲವು ಕಾರ್ಯಕ್ರಮಗಳ ಪರಿಚಯವನ್ನು ಸಾಮಾನ್ಯ ಜನತೆಗೆ ತಿಳಿಸುವುದಲ್ಲದೆ ಅವರ ಅಭಿವೃದ್ಧಿಗೆ ಸಹಾಯಕವಾಗುವುದು.

ಈ) ಗ್ರಾಮಾಂತರ ಪ್ರದೇಶಗಳಲ್ಲಿ ಪುಸ್ತಕ ಭಂಡಾರಗಳು ಮತ್ತು ವಿದ್ಯಾಮಂದಿರಗಳನ್ನು ತೆರೆದು ಜ್ಞಾನಮಟ್ಟವನ್ನು ಹೆಚ್ಚಿಸುವುದಲ್ಲದೆ ಸ್ವಾವಲಂಬಿಗೆ ಮತ್ತು ಪ್ರಗತಿಯ ಮಾರ್ಗದಲ್ಲಿ ಜೀವನ ನಡೆಸಲು "ಜನ ಶಿಕ್ಷಣ ನಿಲಯ"ಗಳ ಸ್ಥಾಪನೆ.

ನಮ್ಮ ಜನರ ಉತ್ತಮ ಜೀವನಕ್ಕಾಗಿ ಈ ಎಲ್ಲಾ ಹಲವಾರು ಗ್ರಾಮೀಣ ಅಭಿವೃದ್ಧಿಯ ಕಾರ್ಯಕ್ರಮಗಳು ಈಡೇರಬೇಕಾದರೆ ಪ್ರತಿಯೊಬ್ಬ ಅನಕ್ಷರಸ್ಥ ವ್ಯಕ್ತಿಯೂ ಸಾಕ್ಷರಸ್ಥನಾಗಲೇಬೇಕು. ಆಗ ಮಾತ್ರ "ಜೀವನ ಸಾರ್ಥಕತೆ"ಯನ್ನು ಪಡೆಯುತ್ತದೆ.

ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಪ್ರತಿ ಕ್ಷಣದಲ್ಲೂ ಬದಲಾವಣೆಯಾಗುತ್ತಿರುವ ದೇಶವನ್ನು ಬಡತನದಿಂದ ಮುಕ್ತಗೊಳಿಸಿ ತ್ವರಿತವಾಗಿ ಪ್ರತಿಯೊಂದು ಅಭಿವೃದ್ಧಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಸಾಧಿಸಲು ಪ್ರತಿಯೊಬ್ಬರಿಗೂ ಶಿಕ್ಷಣ ಬಹಳ ಅಗತ್ಯವಾಗಿದೆ.

ಅನಕ್ಷರತೆಯ ವಿರುದ್ಧ ತೀವ್ರ ಕ್ರಮ ಕೈಗೊಳ್ಳದಿದ್ದರೆ ೨೦೦೦ ದ ಇಸವಿ ಹೊತ್ತಿಗೆ ಇಡೀ ಪ್ರಪಂಚದಲ್ಲಿ ಭಾರತ ಒಂದೇ "ಅನಕ್ಷರಸ್ಥ" ದೇಶವಾಗಿ ಉಳಿಯುವುದೆಂದು ಯುನೆಸ್ಕೊ ತನ್ನ ವರದಿಯಲ್ಲಿ ಹೇಳಿಕೆಯನ್ನು ನೀಡಿರುವುದಲ್ಲದೆ, ಸಾಕ್ಷರತೆಯ ಹೆಚ್ಚಳಕ್ಕೆ ೧೯೯೦ ನೇ ಇಸವಿಯಿಂದ ೨೦೦೦ ದ ಇಸವಿಯವರೆಗೆ ಸಾಕ್ಷರತಾ ದಶಕವನ್ನು ಆಚರಿಸಲು ಕರೆ ನೀಡಿದೆ.

ಆದ್ದರಿಂದ ಪ್ರತಿಯೊಬ್ಬ ವಿದ್ಯಾವಂತ ವ್ಯಕ್ತಿಯಲ್ಲೂ ನನ್ನದೊಂದು ವಿನಂತಿ 'ನಿಮ್ಮ ಮನೆಯವರನ್ನು, ನೆರೆಹೊರೆಯವರನ್ನು ಸಾಕ್ಷರಸ್ಥರನ್ನಾಗಿ ಮಾಡಿ" ಈ ಕಾರ್ಯಕ್ರಮಕ್ಕೆ ಪ್ರತಿಯೊಬ್ಬರೂ ಸಹಕರಿಸಿ.

''ಸಾಕ್ಷರತೆಯನ್ನು ಉಳಿಸಿ—ಬೆಳಸಿ"

ಶೀಲವು ಪ್ರಗತಿಗೆ ಮೂಲ, ಸಂಪತ್ತಿಗೆ ತಳಹದಿ, ಆನಂದ ಶಾಂತಿಗಳಿಗೆ ರಾಜಮಾರ್ಗ.

ಗಾಂಧೀಜಿ

ಶ್ರೀಸಾಮಾನ್ಯ ಉವಾಚ—ಸಂಜೆಗಣ್ಣಿನ ಹಿನ್ನೋಟ

ಪ್ರೊ|| ಎ. ಎನ್. ಮೂರ್ತಿರಾವ್

ಮುಂದುವರಿದುದು

ಮಹಾರಾಜಾ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿದ್ದು ಮೂವತ್ತರ ದಶಕದಲ್ಲಿ ನಿವೃತ್ತರಾದ ಎಂ. ಹಿರಿಯಣ್ಣನವರ ಅಭಿಪ್ರಾಯವನ್ನೂ ಇಲ್ಲಿ ಕಾಣಿಸಬಹುದು. ಅವರು ಉದ್ದಾಮ ಪಂಡಿತರು; ಸಂಸ್ಕೃತ (ಮತ್ತು ಇಂಗ್ಲಿಷ್) ಸಾಹಿತ್ಯ ಮಾತ್ರವಲ್ಲದೆ ಹಿಂದೂಧರ್ಮ—ವೇದೋಪನಿಷತ್ತುಗಳು, ಬ್ರಹ್ಮಸೂತ್ರ, ಭಗವದ್ಗೀತೆ, ದ್ವೈತಾದ್ವೈತ ಮತಗಳ ತತ್ವಗಳು, ಜೈನಬೌದ್ಧ ಮತಗಳು—ಇವೆಲ್ಲವನ್ನೂ ಆಳವಾಗಿ ಅಧ್ಯಯನ ಮಾಡಿದವರು; ಪಾಶ್ಚಾತ್ಯ ತತ್ವಶಾಸ್ತ್ರದ ನಿಕಟ ಪರಿಚಯುವುಳ್ಳವರು; ಚಿಂತನಶೀಲರು, ಅವರು ಬರೆದ 'Outlines of Indian Philosophy' 'Essentials of Indian Philosophy' ಮುಂತಾದ ಪುಸ್ತಕಗಳಿಂದಾಗಿ ಅವರ ಖ್ಯಾತಿ ಪಶ್ಚಿಮ ದೇಶಗಳಿಗೂ ಹಬ್ಬಿತ್ತು. ಅಲ್ಲಿಯ ವಿದ್ವಾಂಸರು ಭಾರತಕ್ಕೆ ಬಂದಾಗ ಹಿರಿಯಣ್ಣನವರನ್ನು ನೋಡಿ ಅವರೊಡನೆ ಮಾತುಕತೆ ನಡೆಸಬೇಕೆಂಬ ಉದ್ದೇಶದಿಂದಲೇ ಮೈಸೂರಿಗೆ ಬರುತ್ತಿದ್ದರು. ಹಿರಿಯಣ್ಣನವರು ತಾವು ಬದುಕಿರುವ ವರೆಗೂ ಸಂಪ್ರದಾಯ ವಿಧಿಸಿದ ಆಚರಣೆಗಳನ್ನು ವಿಧ್ಯುಕ್ತವಾಗಿಯೇ ನಡೆಸಿದರು. ಅದಕ್ಕೆ ಕಾರಣ ಅಭ್ಯಾಸ ಬಲವಿರಬಹುದು; ಬಹುಶಃ ಅದಕ್ಕಿಂತ ಹೆಚ್ಚಾಗಿ "ಈ ಆಚರಣೆಗಳನ್ನು ಬಿಟ್ಟರೆ ಬಂಧುಗಳ ಮನಸ್ಸು ನೊಂದೀತು" ಎಂಬ ಶಂಕೆಯಿರಬಹುದು. ಆದರೆ ತಮ್ಮ ಅಭಿಪ್ರಾಯವನ್ನು ಮುಂದಿನ ಪೀಳಿಗೆಯವರಿಗೆ ಖಚಿತವಾಗಿ ತಿಳಿಸುವುದು ಅವಶ್ಯಕ ಎಂದು ಅವರಿಗೆ ತೋರಿರಬೇಕು. ಸಾವು ಹತ್ತಿರಬಂತು ಎನ್ನಿಸಿದಾಗ "ನನ್ನ ಮರಣಕ್ಕೆ ಸಂಬಂಧಪಟ್ಟಂತೆ ಉತ್ತರಕ್ರಿಯೆಯೇನನ್ನೂ ಮಾಡಬೇಕಾಗಿಲ್ಲ. ವರ್ಷ ವರ್ಷವೂ

ಮರಣದಿನ ಆಚರಿಸುತ್ತಿರುವ 'ತಿಥಿ'ಯನ್ನೂ ಮಾಡಬೇಕಾಗಿಲ್ಲ, ಉತ್ತರಕ್ರಿಯೆಗಳನ್ನು ನಡಸದಿದ್ದರೆ ನನ್ನ ಹತ್ತಿರದ ಬಂಧುಗಳ ಮನಸ್ಸು ನೋಯಬಹುದು. ಆದ್ದರಿಂದ ಅವರ ಸಮಾಧಾನಕ್ಕಾಗಿ, ಅವಶ್ಯಕವೆಂದು ಅವರಿಗೆ ತೋರಿದರೆ, ಸತ್ತ ದಿನದಿಂದ ೧೩ ದಿನ ಆಚರಿಸುವ ಕರ್ಮಗಳನ್ನು ಮಾಡಬಹುದು. ನನ್ನ ದೃಷ್ಟಿಯಲ್ಲಿ ಅದೂ ಅನವಶ್ಯಕ. ವರ್ಷ ವರ್ಷವೂ ತಿಥಿ ಮಾಡುವುದನ್ನಂತೂ ಯಾವ ಶಂಕೆಯೂ ಇಲ್ಲದೆ ಬಿಡಬಹುದು" ಎಂದು ಬರೆದಿದ್ದರಂತೆ, ಇದನ್ನು ಅವರ ಸೋದರಳಿಯಂದಿರಾದ ನಿಟ್ಟೂರು ಶ್ರೀನಿವಾಸರಾಯರೇ ನನಗೆ ಹೇಳಿದರು. ಈ ಅಭಿಪ್ರಾಯವನ್ನು ಒಳಗೊಂಡ ಪ್ರೊ|| ಹಿರಿಯಣ್ಣನವರೇ ೯-೫-೧೯೪೭ ರಲ್ಲಿ ಬರೆದ—ಮೆಮೊರಾಂಡಮ್ಮಿನ ಭಾಗವನ್ನು ಅವರ ಮೊಮ್ಮಗ ಡಾ|| ಅನಂತಸ್ವಾಮಿರಾವ್ ನನಗೆ ತೋರಿಸಿದರು. ಅದರ ಒಕ್ಕಣೆ ಹೀಗಿದೆ: "It is my wish that the final ceremonies should be curtailed as far as possible, and strictly limited to those of the first two weeks, Nothing need be done at any time thereafter."

ಸತ್ತವರು ಕೂಡ ತಮ್ಮ ಸಂಸಾರದವರು ಉತ್ತರಕ್ರಿಯೆಗಳನ್ನು ಮಾಡಿ ದಿವಾಳಿಯೆದ್ದು ಬಡತನದಲ್ಲಿ ಬಳಲಲೆಂದಾಗಲಿ, ದೇಹಶ್ರಮದಿಂದಾಗಿ ಖಾಯಿಲೆ ಬಿದ್ದು ಸತ್ತು ತಮ್ಮ ಜೊತೆಯನ್ನು ಸೇರಿಕೊಳ್ಳಲೆಂದಾಗಲಿ, ಬಯಸಲಾರರು!

ಆದರೆ ಹಿರಿಯರನ್ನು ಒಂದು ದಿನವಾದರೂ ನೆನಪಿಸಿಕೊಳ್ಳಬೇಡವೆ? ನಮ್ಮ ಕೃತಜ್ಞತೆಯ ಅಭಿವ್ಯಕ್ತಿಗಾಗಿ ಮರಣದ ದಿನವನ್ನು ಮೀಸಲು ಮಾಡುವುದರಲ್ಲಿ ತಪ್ಪೇನಿದೆ? ಅದು ನಮ್ಮ ಕರ್ತವ್ಯ ಎಂದೇ ಭಾವಿಸಬೇಕಲ್ಲವೆ? ನಿಜ; ಹಾಗೆ ಭಾವಿಸುವುದು ಸರಿಯೇ, ಆದರೆ ಹಿರಿಯರನ್ನು ನೆನೆದುಕೊಳ್ಳುವುದು ಈಗ ಆಚರಣೆಯಲ್ಲಿರುವ ಕಲಾಪಗಳ ಮೂಲಕವೇ ಆಗಬೇಕಾಗಿಲ್ಲ, ನಾನು ಎಷ್ಟೋ ಸಾರಿ, ಯಾವುದೋ ಸಂದರ್ಭಗಳಲ್ಲಿ, ಯಾವ ಪ್ರಚೋದನೆಯೂ ಇಲ್ಲದೆ, ನನ್ನ ಅಜ್ಜಿಯ ಮತ್ತು ತಾಯಿ ತಂದೆಯರ ಸದ್ಗುಣಗಳನ್ನೂ ಅವರ ಸತ್ಕಾರ್ಯಗಳನ್ನೂ ನೆನೆದುಕೊಂಡಿದ್ದೇನೆ; ಗೌರವದಿಂದ ಮನಸ್ಸಿನಲ್ಲೇ ವಂದನೆ ಸಲ್ಲಿಸಿದ್ದೇನೆ; ಹೆಮ್ಮೆಪಟ್ಟಿದ್ದೇನೆ. ಆ ಘಳಿಗೆಗಳಲ್ಲಾದರೂ ಅವರ ಪ್ರಭಾವದಿಂದ ನನ್ನ ಮನಸ್ಸು ಒಂದು ಹಂತ ಮೇಲಕ್ಕೆ ಏರಿದೆ. ಆ ಮೂಲಕ ಅವರು ನನ್ನಲ್ಲಿ ಇನ್ನೂ ಬದುಕಿದ್ದಾರೆ! ನನ್ನ ಮಟ್ಟಿಗೆ ಇಂಥ ನೆನಪೇ 'ತಿಥಿ'. ಆ ನೆನಪಿಗಾಗಿ ಅವರ ಮರಣದ ದಿನವನ್ನು ಮೀಸಲು ಮಾಡಿಯೂ ಮಾಡಬಹುದು. ಆದರೆ ಅದು ಅಮಂಗಳದ ದಿನ ಎಂದು ಭಾವಿಸಬೇಕಾಗಿಲ್ಲ. ಅಸಹ್ಯ ಎನ್ನಿಸುವ ಕಲಾಪಗಳನ್ನಿಟ್ಟುಕೊಳ್ಳಬೇಕಾಗಿಲ್ಲ. ಸತ್ತವರ ಭಾವಚಿತ್ರಕ್ಕೆ ಹೂವಿನ ಹಾರ ಹಾಕಬಹುದು; ಅವರಿಗೆ ಪ್ರಿಯವಾಗಿದ್ದ ಭಕ್ಷ್ಯವನ್ನು ಮಾಡಿ ನಾಲ್ಕು ಜನಕ್ಕೆ ಕೊಡಬಹುದು; ಬಡವನೊಬ್ಬನಿಗೆ ಹತ್ತೋ ಇಪ್ಪತ್ತೋ ರೂಪಾಯಿಗಳನ್ನು ಕೊಡಬಹುದು.

ನನ್ನ ಅಜ್ಜಿಯೂ ತಾಯಿಯೂ ಬದುಕಿರುವವರೆಗೆ ನಾನು ಶ್ರಾದ್ಧವನ್ನು ಯಥಾವಿಧಿಯಾಗಿ ಆಚರಿಸುತ್ತಿದ್ದೆ; ಆದರೆ ಅದರಲ್ಲಿ ನಂಬಿಕೆಯಿಲ್ಲ ಎಂದು ಹೇಳುತ್ತಲೂ ಇದ್ದೆ.

ನನ್ನ ನಿಲುವು ಇಷ್ಟೇ; ನನಗೆ ಇದೊಂದರಲ್ಲೂ ನಂಬಿಕೆಯಿಲ್ಲ. ಆದರೆ ಅಜ್ಜಿ, ತಾಯಿ, "ಸತ್ತವರಿಗೆ ತಿಥಿ ಮಾಡದಿದ್ದರೆ ಅವರಿಗೆ ಸದ್ಗತಿಯಿಲ್ಲ" ಎಂದು ನಂಬಿದ್ದಾರೆ. ಅವರ ಮನಸ್ಸು ನೋಯದಿರುವುದು ನನಗೆ ಬಹಳ ಮುಖ್ಯ. ಆದರೆ ನನ್ನ ತಮ್ಮಂದಿರೂ ಇತರ ಬಂಧುಗಳೂ ಈಚಿನ ಪೀಳಿಗೆಯವರಾದ್ದರಿಂದ ಅವರ ಮನಸ್ಸು ಒಂದಲ್ಲ ಒಂದು ದಿನ ಸಂಪ್ರದಾಯಕ್ಕಿಂತ ವಿಚಾರ ಶಕ್ತಿಗೆ ಹೆಚ್ಚು ಪ್ರಾಧಾನ್ಯ ಕೊಡಬಹುದು. ಅವರಿಗೆ ನನ್ನ ಅಭಿಪ್ರಾಯ ತಿಳಿಯಬೇಕು. ಆದರೆ ಅವರ ಮೇಲೆ ಯಾವ ಒತ್ತಾಯವೂ ಬಂದಂತಾಗಬಾರದು. ಈ ನಿಲುವಿನಿಂದಾಗಿ ಹಿರಿಯರು ಬದುಕಿದ್ದ ಕಾಲದಲ್ಲಿ ಒಂದು ಕಡೆ ಅಪನಂಬಿಕೆಯನ್ನು ವ್ಯಕ್ತಪಡಿಸುವುದು, ಮತ್ತೊಂದು ಕಡೆ ಆಚರಣೆಗಳನ್ನು ಪಾಲಿಸುವುದು—ಈ ಪದ್ಧತಿಯನ್ನು ಅನುಸರಿಸುತ್ತಿದ್ದೆ.

ನನ್ನ ತಮ್ಮಂದಿರಲ್ಲಿ ಈಗ, ಬದುಕಿರುವವನು ಒಬ್ಬನೇ ಒಬ್ಬ—ಸೂರ್ಯನಾರಾಯಣ. ಎಲ್ಲರೂ ಅವನನ್ನು 'ಮರಿ' ಎಂದೇ ಕರೆಯುತ್ತಾರೆ. ಅವನ ಸಂಪ್ರದಾಯ ನಿಷ್ಠೆ ನನ್ನದಕ್ಕಿಂತ ಸ್ವಲ್ಪ, ಎಲ್ಲೋ ಸ್ವಲ್ಪ ಮಾತ್ರ, ಹೆಚ್ಚಿನದು. ಅವನಿಗೆ ದೇವರಲ್ಲಿ ನಂಬಿಕೆಯುಂಟು. ಅವನ ಮನೆಯಲ್ಲಿ ಶ್ರಾದ್ಧಾದಿಗಳು ಈಗಲೂ ನಡೆಯುತ್ತವೆ. ಆ ಕಾಲದಲ್ಲಿ ನಾನು ಅವನ ಮನೆಯಲ್ಲಿದ್ದರೆ ಸ್ವಲ್ಪ ಮಟ್ಟಿಗೆ (ಶ್ರಾದ್ಧವೆಲ್ಲ ಮುಗಿದ ಮೇಲೆ ಹಿರಿಯರ ನೆನಪಿಗೆ ನಮಸ್ಕಾರ ಮಾಡುವಷ್ಟು ಮಟ್ಟಿಗೆ) ನಾನೂ ಅದರಲ್ಲಿ ಭಾಗವಹಿಸುತ್ತೇನೆ. ಮರಿಯ ಇಂದಿನ ನಿಲುವಿಗೂ ಹಿಂದಿನ ಸಂಪ್ರದಾಯದ ನಿಲುವಿಗೂ ವ್ಯತ್ಯಾಸವಿದೆ. ಈಗ ನಾನು ಉದಾಹರಿಸಲಿರುವ ಪ್ರಸಂಗದಿಂದ ಅದು ಸ್ಪಷ್ಟವಾಗುತ್ತದೆ.

ಇತ್ತೀಚೆಗೆ ನನ್ನ ಹೆಂಡತಿಯ ತಂಗಿ ತೀರಿಕೊಂಡಳು. ಸಂಪ್ರದಾಯದ ಪ್ರಕಾರ, ಉತ್ತರಕ್ರಿಯೆಗಳನ್ನು ಆರಂಭಿಸುವ ಮುನ್ನ ಅವಳ ಮಗ ಕ್ಷೌರ ಮಾಡಿಸಿಕೊಳ್ಳಬೇಕು. ಆದರೆ ಅವನು ಕ್ರಾಪ್ ಬಿಟ್ಟವನು, ಕ್ಷೌರ ಅವನಿಗೆ ಇಷ್ಟವಿಲ್ಲ. ಆದರೂ ಆ ಸಂದರ್ಭದಲ್ಲಿ ಹಟ ಮಾಡಬಾರದು ಎಂದುಕೊಂಡು ಅವನು ಸಂಪ್ರದಾಯವನ್ನು ಪಾಲಿಸಲು ಸಿದ್ಧನಾದ. ಆಗ ಅಲ್ಲಿದ್ದ ನನ್ನ ತಮ್ಮ ಸ್ವಲ್ಪ ಗಡುಸಾಗಿಯೇ ಪುರೋಹಿತರನ್ನು ಕೇಳಿದ.

"ಕ್ಷೌರ ಮಾಡಿಸಿಕೊಳ್ಳಬೇಕು ಅಂತ ಎಲ್ಲಿ ಹೇಳಿದೆ, ಸ್ವಾಮಿ?"

"ಶಾಸ್ತ್ರದಲ್ಲಿ ಹೇಳಿದೆ."

"ಯಾವ ಶಾಸ್ತ್ರದಲ್ಲೋ ಕಾಣೆ. ಆಯಿತು, ಹೇಳಿದೆ ಅಂತಲೇ ಇಟ್ಟುಕೊಳ್ಳೋಣ. ಆ ಶಾಸ್ತ್ರ ಬರೆದವನು ನನ್ನಂತೆ ನಿಮ್ಮಂತೆ ಮನುಷ್ಯ. ಸರ್ವಜ್ಞನಲ್ಲ. ಆಗ ಕ್ಷೌರ ಮಾಡಿಸಿಕೊಳ್ಳುವುದಕ್ಕೆ ಏನೋ ಕಾರಣ ಇದ್ದಿರಬಹುದು. ಇವತ್ತು ಕಾರಣವೇನೂ ಕಾಣುವುದಿಲ್ಲ."

ನನ್ನ ತಮ್ಮನ ಮಾತೇ ನಡೆಯಿತು.

ಈಗ ನಮ್ಮ ಸಂಸಾರದಲ್ಲಿ ನನಗಿಂತ ವಯಸ್ಸಿನಲ್ಲಿ ಹಿರಿಯರಾದವರು ಯಾರೂ ಇಲ್ಲ. ಕಿರಿಯರು ಕಾಲಮಹಿಮೆಯಿಂದಾಗಿ, ವಿದ್ಯಾಭ್ಯಾಸ ಬೆಳೆದದ್ದರಿಂದಾಗಿ, ಸುತ್ತಿನ ವಾತಾವರಣ ಬದಲಾಯಿಸಿದ್ದರಿಂದಾಗಿ, ಸಂಪ್ರದಾಯದ ಹಿಡಿತದಿಂದ ತಕ್ಕಮಟ್ಟಿಗೆ

ಬಿಡುಗಡೆ ಪಡೆದಿದ್ದಾರೆ. ಆದ್ದರಿಂದ ನಾನು ಅನವಶ್ಯಕ ಎನ್ನಿಸುವ ಆಚಾರಗಳನ್ನು ಪಾಲಿಸದಿದ್ದರೂ ಅವರು ನೊಂದುಕೊಳ್ಳುವುದಿಲ್ಲ.

"ನನಗೆ ನಂಬಿಕೆಯಿಲ್ಲ-ಆದರೆ ಇತರರ ಮನಸ್ಸನ್ನು ನೋಯಿಸದಿರುವುದಕ್ಕಾಗಿ...." ಎಂದು ಹೇಳುತ್ತ ಕರ್ಮಗಳನ್ನು ಆಚರಿಸುವುದು ನ್ಯಾಯವೆ? ನಮ್ಮ ನಂಬಿಕೆಯಂತೆ ನಾವು ನಡೆಯದಿದ್ದರೆ ನಮ್ಮ ಬದುಕು ಇಮ್ಮುಖದ, ಕಪಟದ ಬದುಕಾಗುವುದಿಲ್ಲವೆ? ಆಧುನಿಕರೆದುರಿಗೆ ಆಧುನಿಕ, ಸಂಪ್ರದಾಯಸ್ಥರ ನಡುವೆ ಸಂಪ್ರದಾಯಸ್ಥ, ಸಂದೇಹ ವಾದಿಗಳೆದುರಿಗೆ ಸಂದೇಹವಾದಿ—ಇದು ಕಪಟವಲ್ಲದೆ ಮತ್ತೇನು! ನಾವು ಹುಡುಗ ರಾಗಿದ್ದಾಗ ನಮ್ಮ ಮಾಧ್ವಮಿತ್ರರನ್ನು ಕೀಟಲೆ ಮಾಡುವುದಕ್ಕೆ ಒಂದು ಹಾಡು ಹೇಳು ತ್ತಿದ್ದೆವು:

ಆಚಾರ್ ಅಚಾರ್ ಆಚಾರ್ರೆ,*
ಅವರೆಕಾಯಿ ತಿಂಬೋರೆ,
ಬಾಯಲ್ಮಂತ್ರ ಹೇಳೋರೆ,
ಬದನೇಕಾಯಿ ತಿಂಬೋರೆ—

ಪ್ರೊ|| ಎಂ. ಹಿರಿಯಣ್ಣನವರು ಶ್ರಾದ್ಧಾದಿಗಳನ್ನು ಆಚರಿಸುತ್ತಿದ್ದದ್ದೂ ನಾನು ಅವರಂತೆಯೇ ನಡೆದುಕೊಳ್ಳುತ್ತಿದ್ದದ್ದೂ ಈ ಬಗೆಯ ವರ್ತನೆ ತಾನೆ! ಬಾಯಲ್ಲಿ ವೈಚಾರಿಕತೆ, ನಡವಳಿಕೆಯಲ್ಲಿ ಸಂಪ್ರದಾಯ!

ಈ ಆಕ್ಷೇಪಣೆಗೆ ನನ್ನ ಸಮಾಧಾನ ಹೀಗಿದೆ: ಸಮಾಜಹಿತಕ್ಕೆ ಸಂಬಂಧಪಡದ ವಿಷಯಗಳಲ್ಲಿ ನಾವು ಸಂಪ್ರದಾಯಕ್ಕೆ ರಿಯಾಯಿತಿ ತೋರಿಸಬಹುದು. ನಮ್ಮ ಎಲ್ಲ ನಡವಳಿಕೆಗಳಿಗೂ ಸಾಮಾಜಿಕ ಮುಖವೊಂದಿದೆ ಎಂಬುದು ನಿಜ. ಉದಾಹರಣೆಗೆ: ನಾನು ನನ್ನ ಸ್ವಂತ ಮನೆಯನ್ನು ಕೊಳಕಾಗಿಟ್ಟುಕೊಂಡರೆ ನೆರೆಹೊರೆಯವರ ಮೇಲೆ ಅದರ ಪರಿಣಾಮ ಆಗಿಯೇ ಆಗುತ್ತದೆ. ಆದರೂ ನಮ್ಮ ಆಚರಣೆಗಳಲ್ಲಿ ಕೆಲವು ವೈಯಕ್ತಿಕವಾದವು, ಕೆಲವು ಸಮಾಜಹಿತಕ್ಕೆ ಸಂಬಂಧಪಟ್ಟವು ಎಂದು ಸ್ಥೂಲವಾಗಿ ವರ್ಗೀಕರಿಸುವುದು ಸಾಧ್ಯ. ಉದಾ: ವೆಂಕನೋ ಸೀನನೋ ನಾಣನೋ ಗಡ್ಡ ಬೆಳಸಿ (ನನಗೆ ಗಡ್ಡವೆಂದರೆ ಅಲರ್ಜಿಯಿರುವುದು ನಿಜವಾದರೂ!) ಅದರಿಂದ ಸಮಾಜದ ಮೇಲೆ ಗಣನೀಯವಾದ ಪರಿಣಾಮವೇನೂ ಆಗುವುದಿಲ್ಲ. ಆದರೆ ಅವನು 'ಅಸ್ಪೃಶ್ಯ' ಎನ್ನಿಸಿಕೊಂಡವನನ್ನು "ನನ್ನ ಮಗ್ಗುಲಲ್ಲಿ ಕೂಡಬೇಡ" ಎಂದು ದೂರ ಮಾಡಿದರೆ ದರೆ ಅದು ಸಮಾಜಹಿತಕ್ಕೆ ವಿರುದ್ಧವಾದ ವರ್ತನೆ. ನಾನು ನನ್ನ ಮನೆಯಲ್ಲಿ ನನ್ನ ಇಷ್ಟಾನುಸಾರವಾಗಿ ಬ್ಯಾಟರಾಯನನ್ನೋ ಬೀರೇದೇವರನ್ನೋ ಪೂಜಿಸಬಹುದು. ಅದು ನನ್ನ ಹಣೆಬರಹ, ವೈಯಕ್ತಿಕ ವಿಷಯ. ಆದರೆ ಅದೇ ಬ್ಯಾಟರಾಯನಿಗೆ ಬೀದಿಯಲ್ಲಿ

*ಅವರೇಕಾಯಿ, ಬದನೇಕಾಯಿ, ಪರಂಗಿಹಣ್ಣು ಇತ್ಯಾದಿ ಕೆಲವು ಹಣ್ಣುಕಾಯಿಗಳು ನಿಷಿದ್ಧ. ಅವು ವಿಶ್ವಾಮಿತ್ರ ಸೃಷ್ಟಿಯಂತೆ. ತ್ರಿಶಂಕುವಿಗೆ ಬೇರೆ ಸ್ವರ್ಗವನ್ನು ಸೃಷ್ಟಿ ಮಾಡಿದಾಗ ಅವನಿಗಾಗಿ ಹಣ್ಣು ತರಕಾರಿಗಳನ್ನೂ ಸೃಷ್ಟಿಸಬೇಕಷ್ಟೆ! ವಿಶ್ವಾಮಿತ್ರನಿಗೂ 'ಷಡುರುಚಿ ಅನ್ನಕ್ಕೆ ನಲಿದಾಡುವ ಜಿಹ್ವೆ' ಇದ್ದಿರಬೇಕು! ನಾನು ವಿಶ್ವಾಮಿತ್ರನ ಭಕ್ತ!

ಮೆರವಣಿಗೆ ಮಾಡಹೊರಟರೆ ಸಮಾಜದ ನಿಯಮಗಳಿಗೆ ಬದ್ಧನಾಗಿರಬೇಕಾಗುತ್ತದೆ. ಮೊದಲನೆಯ (ವೈಯಕ್ತಿಕ') ವರ್ಗಕ್ಕೆ ಸೇರುವ ವಿಷಯಗಳಲ್ಲಿ, ಸಮರ್ಪಕವಾದ ಕಾರಣಗಳಿದ್ದರೆ, ಸಂಪ್ರದಾಯಕ್ಕೆ ರಿಯಾಯಿತಿ ತೋರಿಸುವುದರಲ್ಲಿ ತಪ್ಪೇನೂ ಇಲ್ಲ ಎನ್ನಿಸುತ್ತದೆ.

ಶ್ರಾದ್ಧಾದಿ ಆಚರಣೆಗಳು ಈ ಮೊದಲ ವರ್ಗಕ್ಕೆ ಸೇರುತ್ತವೆ. ನನ್ನ ಮನೆಯಲ್ಲಿ ನಾನು—ನಂಬಿಕೆಯಿದ್ದೋ ಇಲ್ಲದೆಯೋ—ತಂದೆಯ ಶ್ರಾದ್ಧವನ್ನು ಆಚರಿಸಿದರೆ ಅದರಿಂದ ಸಮಾಜಕ್ಕೆ ಅಹಿತವೇನೂ ಆಗುವುದಿಲ್ಲ. ಆಚರಿಸದಿದ್ದರೆ ನನ್ನ ತಾಯಿಯ ಮನಸ್ಸಿಗೆ ನೋವಾಗುತ್ತದೆ. ಇಂಥ ಸಂದರ್ಭಗಳಲ್ಲಿ ನಂಬಿಕೆಯಿಲ್ಲದಿದ್ದರೂ ಶ್ರಾದ್ಧವನ್ನು ಆಚರಿಸುವುದೇ ಉತ್ತಮ ಎಂದು ನನಗೆ ತೋರುತ್ತದೆ. ನಾನೇನೋ ಈ ಅನಿಸಿಕೆಗೆ ಅನುಸಾರವಾಗಿಯೇ ನಡೆದುಕೊಂಡಿದ್ದೇನೆನ್ನುವುದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದೇನೊ. ಐವತ್ತರ ದಶಕದ ಮಾತು: ಒಂದು ವರ್ಷದ ಅವಧಿಯಲ್ಲಿ ನನಗೆ ಎರಡು ಕಾರ್ ಆಕಸ್ಮಿಕಗಳಾದವು. ಕಾರಿನಲ್ಲಿದ್ದವನು ಚಾಲಕನಾದ ನಾನೊಬ್ಬನೇ. ಆಘಾತ (shock) ಹೊರತು ನನಗೆ ಪೆಟ್ಟೇನೂ ಆಗಲಿಲ್ಲ; ಇತರರಿಗೂ ಏನೂ ಅಪಾಯ ತಟ್ಟಲಿಲ್ಲ. ಆದರೂ ನನ್ನ ಹೆಂಡತಿ ಜಯಲಕ್ಷ್ಮಿಗೆ ನಾನು ಮನೆಯಿಂದ ಹೊರಟಾಗಲೆಲ್ಲ ಆತಂಕ. ಯಾರಿಗೋ ನನ್ನ ಜಾತಕ ತೋರಿಸಿದಳು. ಅವರು "ಗ್ರಹಗಳು ಕ್ರೂರವಾಗಿವೆ. ಒಂಬತ್ತು ದಿನ ನವಗ್ರಹ ಪೂಜೆ ಮಾಡಿದರೆ ಶಾಂತಿಯಾದೀತು" ಎಂದರು. ಅವಳು "ನಿಮಗೆ ಇದರಲ್ಲಿ ನಂಬಿಕೆಯಿಲ್ಲ ಅಂತ ಗೊತ್ತು. ಅದು ಹಾಗಿರಲಿ. ನೀವು ಈ ಪೂಜೆ ನಡಸಲೇಬೇಕು" ಎಂದಳು. ನಡಸದಿದ್ದರೆ ಅವಳ ಮನಸ್ಸಿನಲ್ಲಿ ಸದಾ ಭಯ ಕೊರೆಯುತ್ತಿರುತ್ತದೆ! ನಾನು ಮರುಮಾತಿಲ್ಲದೆ ಒಪ್ಪಿಕೊಂಡೆ: "ನನಗೆ ನಂಬಿಕೆಯಿಲ್ಲ. ನಿನಗೂ ಇರಬಾರದು, ಆದರೆ ನೀನು ಅದನ್ನು ಬಿಡಲಾರೆ. ಸರಿ, ನವಗ್ರಹ ಪೂಜೆ ನಡಸೋಣ. ನಾನು ಮೊದಲ ದಿನ ಸಂಕಲ್ಪ ಮಾಡಿ ನಿನ್ನ ಕೈಗೆ ಒಂದು ಉದ್ಧರಣೆ ನೀರು ಹಾಕುತ್ತೇನೆ. ಅನಂತರ ನೀನೇ ನನ್ನ ಪರವಾಗಿ ಪೂಜೆ ಮಾಡಬಹುದು. ಪೂಜೆ ಮುಗಿದ ಮೇಲೆ ನಾನು ತೀರ್ಥ ಪ್ರಸಾದ ತೆಗೆದುಕೊಳ್ಳುತ್ತೇನೆ, ಗ್ರಹಗಳಿಗೆ ನಮಸ್ಕಾರ ಮಾಡುತ್ತೇನೆ."

ಪೂಜೆ ನಡೆಯಿತು. ನಾನು ಅದಕ್ಕೆ ಒಪ್ಪಿಗೆ ಕೊಟ್ಟದ್ದರಿಂದ ಮತ್ತು ಗ್ರಹಗಳಿಗೆ ನಮಸ್ಕಾರ ಮಾಡಿದ್ದರಿಂದ 'ಟೆಕ್ನಿಕಲ್' (technically) ಆಗಿ ನಾನು ಅದರಲ್ಲಿ ಭಾಗವಹಿಸಿದಂತಾಯಿತು. ಈ ಪ್ರಸಂಗದ ಫಲಶ್ರುತಿಯೇನು? ನನ್ನ ನಿಲುವನ್ನೂ ನಾನು ಹೀಗೆ ಮಾಡಿದೆ ಎಂಬುದನ್ನೂ ನಾನೇ ಸಮಾಜದ ಎದುರಿಗೆ ಒಪ್ಪುತ್ತಿದ್ದೇನಾದ್ದರಿಂದ ಇಲ್ಲಿ 'ಕಪಟ'ದ ಮಾತು ಬರುವಂತಿಲ್ಲ. ಫಲಶ್ರುತಿ: ನನ್ನ ವರ್ತನೆಯಿಂದ ಸಮಾಜಕ್ಕೆ ಹಾನಿಯಾಗಿಲ್ಲ; ನನ್ನ ವೈಚಾರಿಕ ನಿಲುವನ್ನು ನಾನು ಬಿಟ್ಟುಕೊಟ್ಟಿಲ್ಲ; ಜಯಲಕ್ಷ್ಮಿಯ ಮನಸ್ಸಿನಲ್ಲಿದ್ದ ಭಯ ಕಳೆದು ನೆಮ್ಮದಿ ಬಂದಿದೆ. ಆದ್ದರಿಂದ ನನ್ನ ವರ್ತನೆ ಸರಿ!

ನನಗೆ ನಾನೇ ಶಭಾಸುಗಿರಿ ಕೊಟ್ಟುಕೊಂಡದ್ದಾಯಿತಷ್ಟೆ. ಈಗ ನನ್ನ ಮೇಲೆ ಬಂದಿರುವ ಮತ್ತೊಂದು ಒಗೆಯ ಅಪಾದನೆಯನ್ನು ಕಾಣಿಸಬೇಕು. "ನಿನಗೆ

ನಿಜವಾಗಿಯೂ—ನಿನ್ನ ಅರಿವಿಲ್ಲದಂತೆ ಎಂದರೂ ಎನ್ನಬಹುದು—ನವಗ್ರಹ ಪೂಜೆಯಲ್ಲಿ ನಂಬಿಕೆಯಿದೆ. ಅದಕ್ಕೆ ಏನೋ ಕುಂಟುನೆಪಹೇಳಿ ನೀನು ಆತ್ಮವಂಚನೆ ಮಾಡಿಕೊಳ್ಳುತ್ತಿದ್ದೀಯೆ."—ಇದು ಕೆಲವರು ಮಿತ್ರರ ಅಭಿಪ್ರಾಯ. ನನ್ನ ವರ್ತನೆ ಆತ್ಮವಂಚನೆಯಲ್ಲ ಎಂಬುದು ನನಗೆ ಖಚಿತವಾಗಿದೆ. ಇತರರಿಗೆ ಖಚಿತಪಡಿಸುವುದು ಹೇಗೋ—ತೋರುತ್ತಿಲ್ಲ. ಅವರು ನನ್ನ ಮಾತನ್ನು ನಂಬಿದರೆ ಸಂತೋಷ; ನಂಬದಿದ್ದರೆ ಅಸಮಾಧಾನವಿಲ್ಲ. ನನ್ನ ಮಿತ್ರರೊಬ್ಬರು ನನ್ನಂತೆಯೇ ವರ್ತಿಸುತ್ತಿದ್ದಾರೆ; ನಾನು ಕೊಡುವ ಸಮರ್ಥನೆಯನ್ನೇ ಅವರೂ ಕೊಡುತ್ತಾರೆ. ನಾವು ಅಭಿಪ್ರಾಯ ವಿನಿಮಯ ಮಾಡಿಕೊಂಡು ನಮ್ಮ ನಡತೆ ಸರಿ ಎಂಬ ನಿಲುವನ್ನು ತಾಳಿದ್ದೇವೆ. ಯಾವ ಸಂದರ್ಭದಲ್ಲಿ ಸಂಪ್ರದಾಯಕ್ಕೆ ರಿಯಾಯಿತಿ ತೋರಿಸಬೇಕು. ಯಾವ ಸಂದರ್ಭದಲ್ಲಿ ನಿಷ್ಠುರವಾಗಿ ನಿಲ್ಲಬೇಕು ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿರುವುದು ಸಾಧ್ಯ. ಲಕ್ಷ್ಮಣರೇಖೆಯನ್ನು ಎಲ್ಲಿ ಎಳೆಯಬೇಕು ಎಂಬುದನ್ನು ನಿರ್ಣಯಿಸುವುದು ಕೆಲವು ವೇಳೆ ಕಷ್ಟವಾಗಬಹುದು. ಅಂಥ ಸಂದರ್ಭಗಳಲ್ಲಿ ನಮ್ಮ ನಿರ್ಣಯ ತಪ್ಪಾದರೆ ಅದು ನಮ್ಮ ತರ್ಕದ ದೋಷವಾಗುತ್ತದೆ; ವಂಚನೆಯಾಗಲಿ ಆತ್ಮವಂಚನೆಯಾಗಲಿ ಆಗಬೇಕಾದ್ದಿಲ್ಲ.

* * *

ಖಾಯಿಲೆಯಿಂದಾಗಿ ನಾನು ಹಾಸಿಗೆ ಹಿಡಿದು ಮಲಗಿದ್ದು ಸುಮಾರು ಎರಡು ತಿಂಗಳ ಕಾಲ. ಪರೀಕ್ಷೆಯ ಫಲಿತಾಂಶ ಪ್ರಕಟವಾದಾಗ ಯಾರೋ ಒಬ್ಬರು ಬಂದು ಪಾಸಾದವರ ಪಟ್ಟಿಯಲ್ಲಿ ನನ್ನ ನಂಬರ್ ಇರಲಿಲ್ಲ ಎಂದು ಹೇಳಿದರು. ಅದನ್ನು ನಿರೀಕ್ಷಿಸಿಯೇ ಇದ್ದೆನಾದ್ದರಿಂದ ನನಗೆ ಆಶ್ಚರ್ಯ ವ್ಯಸನಗಳೇನೂ ಆಗಲಿಲ್ಲ. ಅದೇ ದಿನ ಮಧ್ಯಾಹ್ನ ನನ್ನ ಸಹಪಾಠಿಯೊಬ್ಬ ಬಂದು "ನೀನು ಕಂಪಲ್ಸರಿ ಮತ್ತು ಆಪ್ಷನಲ್ (Compulsory and Optional) ಎರಡು ಭಾಗಗಳಲ್ಲೂ ಎರಡನೇ ವರ್ಗದಲ್ಲಿ (ಸೆಕೆಂಡ್ ಕ್ಲಾಸ್‌ನಲ್ಲಿ) ಪಾಸಾಗಿದ್ದೀಯೆ" ಎಂದು ಹೇಳಿದ. (ಬೆಳಗ್ಗೆ ವರ್ತಮಾನ ಕೊಟ್ಟವರು ಮೂರನೆಯ ವರ್ಗದ ಪಟ್ಟಿಯನ್ನು ಮಾತ್ರ ನೋಡಿದ್ದರು). ನನಗೆ ಆಶ್ಚರ್ಯವಾದದ್ದು ಆಗ! ಇಂಗ್ಲಿಷ್‌ನಲ್ಲಿ ಮೊದಲ ಸ್ಥಾನ ಸಿಕ್ಕಿತ್ತು. ಅಂದ ಮೇಲೆ ಎಂ.ಎ. ಕ್ಲಾಸಿನಲ್ಲಿ ಸೀಟ್ ಸಿಕ್ಕುವುದೂ ಸ್ಕಾಲರ್‌ಷಿಪ್ ಮುಂದುವರಿಯುವುದೂ ಖಚಿತವಾಯಿತು.

ಸಂಸಾರ ನಡೆಸುವುದು ಕಷ್ಟವೇ ಆಯಿತು. ನಮ್ಮ ಗದ್ದೆಯನ್ನು ಕೊಂಡವನು ೬೯೦ ರೂಪಾಯಿ ಕೊಟ್ಟಿದ್ದ; ಇನ್ನೂ ೩೧೦ ರೂಪಾಯಿ ಕೊಡಬೇಕಾಗಿತ್ತು. ಅದನ್ನು ಪಡೆದು ನನಗೆ ಕಳಿಸಬೇಕೆಂದು ಬಂಧುಗಳೊಬ್ಬರಿಗೆ ಕಾಗದ ಬರೆದೆ. ಉತ್ತರ ಬರಲಿಲ್ಲ. ನನಗೆ ಪ್ರಯಾಣ ಮಾಡುವಷ್ಟು ಚೈತನ್ಯ ಬಂದ ಮೇಲೆ ನೇರವಾಗಿ ಆ ರೈತನ ಮನೆಗೇ ಹೋಗಿ (ಆತ ಮುಂಜನಹಳ್ಳಿಯವನು ಎಂದು ನೆನಪು) ಕೇಳಿದಾಗ ಅವನು "ನಿಮ್ಮ ಬಂಧು ನಿಮ್ಮ ಕಾಗದ ತೋರಿಸಿ ಆಗಲೇ ಹಣ ತೆಗೆದುಕೊಂಡು ಹೋದರಲ್ಲ" ಎಂದು ರಸೀದಿ ತೋರಿಸಿದ. ನಾನು ಬಂಧುವನ್ನು ಕೇಳಿದಾಗ "ಹಣ ಈಗಲೇ ಬೇಕು ಅಂತ ಒಂದು ಕಾಗದ ಬರಿಯುಬಾರದಾಗಿತ್ತೆ! ನಾನು ಉಪಯೋಗಿಸಿಬಿಟ್ಟೆ. ಆಮೇಲೆ

ಕೊಡುತ್ತೇನೆ" ಎಂದರು. ನಾನು ಮನೆಗೆ ಬಂದ ಮೇಲೆ "ಇದು ಶುದ್ಧ ಮೋಸ" ಎಂದು ಕೋಪದಿಂದ ನಾಲಗೆಯನ್ನು ಹರಿಯಬಿಟ್ಟೆ. ನನ್ನ ಅಜ್ಜ "ಛೀ, ಇದೇನು ಬುದ್ಧಿ ಬಂತು ನಿನಗೆ! ಬಿಡತು ಅನ್ನು.* ಆವನಿಂದ ಹಿಂದೆ ಎಷ್ಟು ಉಪಕಾರವಾಗಿದೆ— ನೆನಪಿಸಿಕೊ! ಅದರ ಋಣ ಈ ಗೋಪಾಳದ ೩೦೦ ರೂಪಾಯಿನಿಂದ ತೀರೀತೆ!" ಎಂದು ಎಚ್ಚರಿಸಿದರು. ಅವರ ಮಾತನ್ನು ನಾನು ಅನೇಕ ವೇಳೆ ನೆನೆದುಕೊಂಡಿದ್ದೇನೆ. ಒಬ್ಬರು ನಮಗೆ ಹತ್ತುಸಲ ಉಪಕಾರ ಮಾಡಿ ಒಂದು ಸಲ ಕೆಡಕು ಮಾಡಿದರೆ ನಾವು ಉಪಕಾರವನ್ನು ಮರೆತು ಕೆಡುಕನ್ನೇ ಎತ್ತಿ ಆಡುತ್ತೇವೆ! ನನ್ನ ಬಂಧು ಆಪತ್ಕಾಲದಲ್ಲಿ ನಮ್ಮ ನೆರವಿಗೆ ಬಂದಿದ್ದರೆಂಬುದು ನಿಜ. ಅವರು ಕಷ್ಟದಲ್ಲಿದ್ದದ್ದರಿಂದ ಆ ಹಣವನ್ನು ಬಳಸಿಕೊಂಡರು. ಅದನ್ನು ತೀರಿಸುವುದು ಅವರಿಂದ ಸಾಧ್ಯವಿರಲಿಲ್ಲ. ಎಷ್ಟೋ ವರ್ಷ ಕಳೆದ ಮೇಲೆ, ಸುಮಾರು ೧೯೩೫–೩೬ ರಲ್ಲಿ, ನಾನು ಒಂಟಿಕೊಪ್ಪಲಿನಲ್ಲಿ ಮನೆ ಕಟ್ಟಿಕೊಂಡು ಅಲ್ಲಿ ವಾಸವಾಗಿದ್ದಾಗ, ಆ ಬಂಧು ಯೋಗಕ್ಷೇಮ ವಿಚಾರಿಸಲೆಂದು ನಮ್ಮ ಮನೆಗೆ ಬಂದರು. ಬಡತನದಿಂದಾಗಿ ಮುಖ ಕಳೆಗುಂದಿತ್ತು. ಅವರಾಗಿಯೇ ಹಿಂದಿನ ಪ್ರಸಂಗವನ್ನು ನೆನೆದುಕೊಂಡು "ನನ್ನಿಂದ ನಿನಗೆ ಅನ್ಯಾಯವಾಯಿತು. ನಾನೂ ಬದುಕಲಿಲ್ಲ. ನಿನಗೂ ಕಷ್ಟಕೊಟ್ಟೆ" ಎಂದರು. ನಾನು ಅವರನ್ನು ವಿಶ್ವಾಸ ದಿಂದ ಸ್ವಾಗತಿಸಿದೆ;. ಸಮಾಧಾನದ ಮಾತಾಡಿದೆ; ಗೌರವಾರ್ಹರಾದ ಹಿರಿಯರೊಡನೆ ಹೇಗೆ ನಡೆದುಕೊಳ್ಳಬೇಕೋ ಹಾಗೆ ನಡೆದುಕೊಂಡೆ. ಆ ದೊಡ್ಡತನ ನನ್ನದಲ್ಲ. ಮೈದಳೆದು ಬಂದ ಸುಸಂಸ್ಕೃತ ಮಾನವತೆ ಎನ್ನಬಹುದಾದ ನನ್ನ ಅಜ್ಜಿಯದು. ಅವರನ್ನು ಹಿಂದೆ ನೂರಾರು ಸಾರಿ ಸ್ಮರಿಸಿದಂತೆ ಇಂದೂ ಭಕ್ತಿಯಿಂದ ಸ್ಮರಿಸು ತ್ತಿದ್ದೇನೆ.

(ಮುಂದುವರಿಯುವುದು)

---

* ಬಿಡತು (ಬಿಟ್ಟಿತು) ಅನ್ನು : ಕೆಟ್ಟ ಮಾತನ್ನು ಆಡಿದ್ದಕ್ಕಾಗಿ ಪಶ್ಚಾತ್ತಾಪ ಪಟ್ಟು 'ಆ ಪಾಪ ನನ್ನನ್ನು ಬಿಟ್ಟುಹೋಗಲಿ' ಎಂದು ಬಯಸುವ ಮಾತು.

ರಾಷ್ಟ್ರೀಯ ಶಬ್ದಕೋಶದಲ್ಲಿ ಹೇಡಿ ಶಬ್ದಕ್ಕೆ ಸ್ಥಾನವೇ ಇಲ್ಲ.

ಗಾಂಧೀಜಿ

ಪುಸ್ತಕ ವಿಭಾಗ

ಲಿಯೋ ಟಾಲ್‌ಸ್ಟಾಯ್ ಅವರ ಮಹಾ ಕಾದಂಬರಿ

ಅನ್ನಾ ಕರೆನಿನ

ಪ್ರಥಮ ಕಾಂಡ

ಅನುವಾದ
ದೇಜಗೌ

ಅವಳು ಪಾಂಡುರವರ್ಣದ, ನರದೌರ್ಬಲ್ಯದ, ಕಾಯಿಲೆ ಹೆಂಗಸು; ಅವಳ ಕಪ್ಪು ಕಣ್ಣು ಪ್ರಕಾಶಮಾನವಾಗಿದ್ದುವು. ಕಿಟ್ಟಿಯ ಬಗ್ಗೆ ಅವಳಿಗೆ ಅಚ್ಚುಮೆಚ್ಚು. ವಿವಾಹಿತ ಸ್ತ್ರೀಯರು ಅವಿವಾಹಿತ ಕನ್ಯೆಯರ ಬಗ್ಗೆ ತೋರುವ ಸಹಾನುಭೂತಿಯು ಶ್ರದ್ಧೆ ಅವಳಲ್ಲಿ ಅಭಿವ್ಯಕ್ತಗೊಳ್ಳುತ್ತಿತ್ತು. ತನ್ನ ವೈವಾಹಿಕ ಸುಖದ ಆದರ್ಶಕ್ಕನುಗುಣವಾಗಿ ಕಿಟ್ಟಿ ಮದುವೆಯಾಗಬೇಕೆಂಬುದೇ ಅವಳ ಅಪೇಕ್ಷೆಯಾಗಿತ್ತು. ಅದರಿಂದ ಕಿಟ್ಟಿ ವ್ರಾಂಸ್ಕಿಯನ್ನು ಮದುವೆಯಾಗಬೇಕೆಂದು ಆಶೆಯಿಟ್ಟುಕೊಂಡಿದ್ದಳು. ಚಳಿಗಾಲದ ಪ್ರಾರಂಭದಲ್ಲವಳು ಹಲವುಸಲ ಲೆವಿನ್‌ನನ್ನು ಶರ್‌ಬಟ್‌ಸ್ಕಿಯರ ಮನೆಯಲ್ಲಿ ಭೇಟಿ ಮಾಡಿದ್ದಳು. ಆದರೆ ಅವಳೆಂದೂ ಲೆವಿನ್‌ನನ್ನು ಮೆಚ್ಚಿಕೊಳ್ಳಲಿಲ್ಲ. ಅವರು ಪರಸ್ಪರ ಭೇಟಿಯಾದಾಗಲೆಲ್ಲ ಅವನನ್ನು ತಮಾಷೆಮಾಡುವುದೇ ಅವಳ ಮೆಚ್ಚಿನ ನಿರಂತರ ಹವ್ಯಾಸವಾಗಿತ್ತು.

'ತನ್ನ ಮಹೋನ್ನತಿಯ ಎತ್ತರದಿಂದ ನನ್ನಮೇಲವನು ಕಣ್ಣುಹಾಯಿಸುವುದನ್ನು ಕಂಡು ಮೆಚ್ಚುತ್ತೇನೆ; ನಾನವನ ಬೌದ್ಧಿಕ ಸಂವಾದವನ್ನು ಗ್ರಹಿಸಲಾರದಷ್ಟು ದಡ್ಡಿಯಾದ್ದರಿಂದ ಅದನ್ನು ನಿಲ್ಲಿಸಿಬಿಡುತ್ತಾನೆ; ಇಲ್ಲವೇ ನನ್ನೆತ್ತರಕ್ಕೆ ತಕ್ಕಂತೆ ನಡೆದುಕೊಳ್ಳುತ್ತಾನೆ. ಅವನ ಆ ಅನುಗ್ರಹದ ಭಾವವೇ ತುಂಬ ಸ್ವಾರಸ್ಯವಾಗಿರುತ್ತದಲ್ಲವೆ? ನನ್ನ ಬಗ್ಗೆ ಅವನಿಗೆ ತಾಳ್ಮೆಯಿಲ್ಲದ್ದರಿಂದಲೇ ನನಗೆ ಸಂತೋಷವಾಗುತ್ತದೆ' ಎಂದವಳು ಅವನನ್ನು ಕುರಿತು ಹರಟುತ್ತಿದ್ದಳು.

ಲೆವಿನ್‌ಗೆ ಅವಳ ಬಗ್ಗೆ ತಾಳ್ಮೆಯಿಲ್ಲದ್ದು ನಿಜ. ತನ್ನ ಅತ್ಯುತ್ಕೃಷ್ಟ ಗುಣಗಳೆಂದು ಯಾವನ್ನವಳು ನಂಬಿಕೊಂಡಿದ್ದಳೋ, ಯಾವನ್ನು ನಂಬಿ ಹೆಮ್ಮೆಯಿಂದ ಬೀಗುತ್ತಿದ್ದಳೋ ಅವನ್ನವನು ದ್ವೇಷಿಸುತ್ತಿದ್ದುದು ನಿಜ. ಅವಳ ಸೂಕ್ಷ್ಮ ಸಂವೇದನಾಸ್ವಭಾವ, ಮತ್ತು ಗ್ರಾಮ್ಯವೂ ಲೌಕಿಕವೂ ಆದ ವಿಷಯುಗಳ ಬಗೆಗಿನ ನಿರ್ಲಕ್ಷ್ಯ ಹಾಗೂ ಸೂಕ್ಷ್ಮ ತಿರಸ್ಕಾರ ಅವಳ ಗುಣಗಳಾಗಿದ್ದುವು.

ಸುಶಿಕ್ಷಿತ ಸಮಾಜದಲ್ಲಿ ಸಾಮಾನ್ಯವಾಗಿ ಕಾಣಲಾಗದ ಬಾಂಧವ್ಯ ನಾರ್ಡ್‌ಸ್ತನ್ ಮತ್ತು ಲೆವಿನ್‌ರ ನಡುವೆ ಬೆಳೆದು ಬಂದಿತ್ತು. ಬಹಿರಂಗವಾಗಿ ಮೈತ್ರಿಯನ್ನು ನಟಿಸುತ್ತ, ಪರಸ್ಪರ ವರ್ತನೆಯನ್ನು ಗಂಭೀರವಾಗಿ ಗಣನೆಗೆ ತೆಗೆದುಕೊಳ್ಳಲಾರದಷ್ಟು ಮತ್ತು ಅದರಿಂದ ಸಿಡಿಮಿಡಿಗೊಳ್ಳಲಾರದಷ್ಟು ದೂರ ಅವರಿಬ್ಬರ ಪರಸ್ಪರ ದ್ವೇಷ ಬೆಳೆದಿತ್ತು.

ಕೌಂಟೆಸ್ ನಾರ್ಡ್‌ಸ್ತನ್ ಕೂಡಲೇ ಲೆವಿನ್‌ನ ಮೇಲೆರಗಿದಳು. 'ಓ, ಕಾನ್‌ಸ್ಟೆಂಟಿನ್ ದಿಮಿತ್ರಿಚ್‌ರೆ! ನೀವು ಪುನಃ ಈ ನಮ್ಮ ಕೇಡಿನ ಬೇಬಿಲಾನ್‌ಗೆ ಬಂದುಬಿಟ್ಟದ್ದೀರಿ!' ಎಂದವಳು ತನ್ನ ಪೀತವರ್ಣದ ಸೂಕ್ಷ್ಮ ಹಸ್ತವನ್ನವನ ಕಡೆಗೆ ಚಾಚುತ್ತ ನುಡಿದಳು. ಚಳಿಗಾಲದ ಪ್ರಾರಂಭದಲ್ಲಿ ಮಾಸ್ಕೋವನ್ನು ಬೇಬಿಲಾನ್ ಎಂದವನು ಕರೆದಿದ್ದ ವಿಷಯುವನ್ನವನ ನೆನಪಿಗೆ ತಂದುಕೊಟ್ಟಳು. 'ಇದೀಗ ನಮ್ಮ ಬೇಬಿಲಾನ್ ಸುಧಾರಣೆ ಹೊಂದಿದೆಯೋ, ಅಥವಾ ನೀವು ಕೆಟ್ಟದ್ದೀರೊ?' ಎಂದವಳು ಕಿಟ್ಟಿಯ ಕಡೆಗೆ ಅಣಕದ ಹುಸಿನಗೆಯನ್ನು ಬೀರಿದಳು.

'ನನ್ನ ಮಾತುಗಳನ್ನು ಪೂರ್ಣವಾಗಿ ನೆನಪಿನಲ್ಲಿಟ್ಟುಕೊಂಡಿರುವುದಕ್ಕಾಗಿ ನಾನು ಸುಪ್ರೀತನಾಗಿದ್ದೇನೆ, ಕೌಂಟೆಸ್' ಎಂದು ಅಪ್ಪರಲ್ಲಿ ಸಮಾಧಾನವನ್ನು ತಂದುಕೊಂಡ

ಲೆವಿನ್ ಉತ್ತರಿಸಿದನು. ಕೌಂಟೆಸ್ ನಾರ್ಡ್‌ಸ್ತನ್‌ಳ ಸಂಗದಲ್ಲಿ ಯಾವಾಗಲೂ ಅಭ್ಯಾಸಗತವಾಗಿ ಬಂದಿದ್ದ ಪರಿಹಾಸಶೀಲ ವೈರಭಾವ ಕೂಡಲೇ ಅವನಲ್ಲಿ ಹೆಡೆಯೆತ್ತಿತು. 'ಆ ನನ್ನ ಮಾತು ನಿಮ್ಮ ಮೇಲೆ ಬಲವಾದ ಪ್ರಭಾವ ಬೀರಿರಬೇಕೆಂದುಕೊಂಡಿದ್ದೇನೆ' ಎಂದವನು ಉಸುರಿದನು.

'ನಿಜಕ್ಕೂ ನಿಜ! ಅಂಥ ವಿಷಯಗಳನ್ನು ಪ್ರತ್ಯೇಕವಾದೊಂದು ಟಿಪ್ಪಣಿ ಪುಸ್ತಕದಲ್ಲಿ ಗುರುತುಹಾಕಿಕೊಳ್ಳುತ್ತೇನೆ. ಸರಿ, ಕಿಟ್ಟಿ, ಈ ದಿನ ಮತ್ತೆ ನೀನು ಜಾರಾಟ ಮಾಡುತ್ತಿದ್ದೆಯಾ?'

ಅವಳು ಕಿಟ್ಟಿಯೊಡನೆ ಮಾತು ಪ್ರಾರಂಭಿಸಿದಳು. ಆ ಘಟ್ಟದಲ್ಲಿ ಅಲ್ಲಿಂದ ಬೀಳ್ಕೊಳ್ಳುವುದು ಅನಾಗರಿಕವಾದೀತೆಂದು ಲೆವಿನ್ ಬಗೆದನು. ಆದರೆ ಆಗಿಂದಾಗ್ಗೆ ತನ್ನ ಕಡೆಗೆ ಕಟಾಕ್ಷ ಬೀರುತ್ತಿದ್ದರೂ ತನ್ನ ಕಣ್ಣುಗಳಿಂದ ತಪ್ಪಿಸಿಕೊಳ್ಳುತ್ತಿದ್ದ ಕಿಟ್ಟಿಯ ಸಂಗದಲ್ಲಿ ಇಡೀ ಸಂಜೆಯನ್ನು ಕಳೆದು ಬೇಸರವನ್ನನುಭವಿಸುವುದಕ್ಕಿಂತ ಅನಾಗರಿಕವಾಗಿ ವರ್ತಿಸುವುದೇ ಸಲೀಸೆಂದವನು ಆಲೋಚಿಸಿದನು. ಅವನು ಮೇಲೇಳುತ್ತಿದ್ದಂತೆ ರಾಜಕುಮಾರಿ ಅವನ ಮೌನದ ಬಗೆಗೆ ಪ್ರಸ್ತಾಪಿಸುತ್ತ, ಅವನನ್ನು ಸಂಬೋಧಿಸಿದಳು: 'ಮಾಸ್ಕೋದಲ್ಲಿ ನೀವು ಹೆಚ್ಚು ದಿನ ತಂಗುತ್ತೀರಾ? ಜಿಲ್ಲಾ ಆಡಳಿತದ ಬಗ್ಗೆ ನಿಮಗೆ ಸಕ್ರಿಯಾಸಕ್ತಿಯಿದೆಯೆಂದು ತಿಳಿದಿದ್ದೇನೆ. ಆದ್ದರಿಂದ ನೀವು ಜಿಲ್ಲೆಯ ಹೊರಗೆ ಹೆಚ್ಚು ದಿನ ಉಳಿಯುವಂತಿಲ್ಲ.'

'ಇಲ್ಲ, ರಾಜಕುಮಾರಿಯವರೆ, ಜಿಲ್ಲಾ ಆಡಳಿತದಲ್ಲಿ ನಾನೀಗ ಭಾಗವಹಿಸುತ್ತಿಲ್ಲ. ಕೇವಲ ಕೆಲವು ದಿನಗಳಿಗೆ ಮಾತ್ರ ನಾನು ಬಂದಿದ್ದೇನೆ' ಎಂದವನು ನುಡಿದನು.

'ಇವನ ಇಂದಿನ ವರ್ತನೆ ಏನೋ ವಿಚಿತ್ರವಾಗಿದೆ' ಎಂದು ಕೌಂಟೆಸ್ ನಾರ್ಡ್‌ಸ್ತನ್ ಅವನ ಗಂಭೀರವೂ ಉಲ್ಲಾಸಹೀನವೂ ಆದ ದೃಷ್ಟಿಯನ್ನು ಗಮನಿಸಿ, ತನ್ನೊಳಗೆ ತಾನಂದುಕೊಂಡಳು. ಏನು ಕಾರಣವೊ ಕಾಣೆ, ಇವನು ಎಂದಿನಂತೆ ಸಂಭಾಷಣೆ ನಡೆಸುವ ಅಥವಾ ಬುದ್ಧಿ ಹೇಳುವ ಸ್ಥಿತಿಯಲ್ಲಿಲ್ಲ. ಆದರೆ ನಾನಿವನನ್ನು ಕಣಕ್ಕೆಳೆಯುತ್ತೇನೆ. ಕಿಟ್ಟಿಯ ಮುಂದೆ ಇವನನ್ನು ಅಪಹಾಸ್ಯಕ್ಕೀಡುಮಾಡುತ್ತೇನೆ. ಈಗಲೇ ಇವನನ್ನು ಅಣಕಕ್ಕೆ ಗುರಿಮಾಡುತ್ತೇನೆ.'

'ಕಾನ್‌ಸ್ಟೆಂಟಿನ್ ದಿಮಿತ್ರಿಚ್' ಎಂದವಳು ಅವನ ಕಡೆಗೆ ತಿರುಗಿಕೊಂಡು ಮಾತು ತೆಗೆದಳು. 'ಇದರ ಅರ್ಥವೇನೆಂಬುದನ್ನು ದಯೆಯಿಟ್ಟು ನನಗೆ ವಿವರಿಸಿ. ಆ ವಿಷಯದ ಬಗ್ಗೆ ನಿಮಗೆಲ್ಲವೂ ತಿಳಿದಿದೆ. ನಮ್ಮ ಕಲುಗ ಆಸ್ತಿಯಲ್ಲಿರುವ ರೈತರು ಮತ್ತು ಅವರ ಹೆಂಗಸರು ಎಲ್ಲ ಉತ್ಪತ್ತಿ ಸಾಧನಗಳನ್ನು ಮುಗಿಸಿಬಿಟ್ಟಿದ್ದಾರೆ: ನಮಗೀಗ ಅವರು ಗುತ್ತಿಗೆ ಹಣ ಕೊಡುವ ಸ್ಥಿತಿಯಲ್ಲಿಲ್ಲ. ಅದರರ್ಥವೇನು? ನೀವು ಯಾವಾಗಲೂ ರೈತರನ್ನು ಹೊಗಳಿ, ಹೊಗಳಿ ಆಗಸಕ್ಕೇರಿಸುತ್ತೀರಿ.'

ಆಕ್ಷಣದಲ್ಲಿ ಮತ್ತೊಬ್ಬ ಮಹಿಳೆ ಒಳಗೆ ಬಂದಳು. ಲೆವಿನ್ ಮೇಲೆದ್ದನು.

'ಕ್ಷಮಿಸಿ, ಕೌಂಟೆಸ್. ಆ ಬಗ್ಗೆ ನನಗೇನೂ ಗೊತ್ತಿಲ್ಲ; ಆ ವಿಷಯದ ಬಗೆಗೆ ನಾನೇನೂ ಹೇಳುವಂತಿಲ್ಲ' ಎಂದವನು ಉತ್ತರಿಸುವಾಗ, ಮಹಿಳೆಯ ಹಿಂದೆ ಪ್ರವೇಶಿಸಿದ ತರುಣ ಅಧಿಕಾರಿಯ ಕಡೆಗೆ ಅವನ ಕಣ್ಣು ಹರಿದುವು.

'ಅವನು ವ್ರಾಂಸ್ಕಿಯೇ ಇರಬೇಕು' ಎಂದವನು ಆಲೋಚಿಸಿದನು. ತನ್ನ ಊಹೆಯ ಸಮರ್ಥನೆಗಾಗಿ ಅವನು ಕಿಟ್ಟಿಯ ಕಡೆಗೆ ದೃಷ್ಟಿ ಹರಿಸಿದನು. ಅವಳು ವ್ರಾಂಸ್ಕಿಯ ಕಡೆಗೆ ಕಣ್ಣು ಮಿಟುಕಿಸಿ, ಲೆವಿನ್‌ನ ಕಡೆಗೆ ತಿರುಗಿದಳು. ಅವಳ ಕಣ್ಣಿನ ಕಾಂತಿ ಆ ಒಂದು ಮಿಟುಕಿನಲ್ಲಿಯೇ ಅಭಿವ್ಯಕ್ತವಾಗಿತ್ತು. ಈ ಮನುಷ್ಯನನ್ನವಳು ನಿಸ್ಸಂಶಯವಾಗಿ ಪ್ರೀತಿಸುತ್ತಿದ್ದಳೆಂಬುದನ್ನವನು ಆ ಒಂದು ಮಿಟುಕಿನಿಂದಲೇ ಅರ್ಥ ಮಾಡಿಕೊಂಡನು. ಆದರೆ ಅವನೆಂಥ ವ್ಯಕ್ತಿಯಾಗಿದ್ದಿರಬಹುದು? ಶುಭವೊ, ಅಶುಭವೊ ಈಗ ಲೆವಿನ್ ಅಲ್ಲಿಂದ ಹೋಗುವಂತಿರಲಿಲ್ಲ. ಅವಳು ಪ್ರೀತಿಸುತ್ತಿದ್ದ ವ್ಯಕ್ತಿ ಎಂಥವನಿರಬೇಕೆಂದು ತಿಳಿಯುವ ಆಸಕ್ತಿ ಅವನಲ್ಲಿ ತೀವ್ರವಾಗಿತ್ತು.

ಜಯಶೀಲರಾದ ಪ್ರತಿಸ್ಪರ್ಧಿಗಳನ್ನು ಸಂಧಿಸಿದಾಗ, ಅವರಲ್ಲಿರುವ ಒಳ್ಳೆಯದನ್ನೆಲ್ಲ ಮರೆತು, ಕೆಟ್ಟದ್ದನ್ನು ಮಾತ್ರವೇ ಎತ್ತಿ ತೋರಿಸುವ ಜನ ಎಲ್ಲೆಡೆಯೂ ಇದ್ದಾರೆ. ತಮ್ಮ ಪ್ರತಿಸ್ಪರ್ಧಿಗಳ ವಿಜಯಕ್ಕೆ ಕಾರಣವಾದ ಗುಣಗಳನ್ನು ಮಾತ್ರವೇ ಅರಸುವ, ತಮ್ಮಂತರಂಗಕ್ಕೆಷ್ಟೇ ವ್ಯಾಕುಲವಾದರೂ ಅವರಲ್ಲಿ ಒಳ್ಳೆಯದನ್ನೇ ಕಾಣುವ ತದ್ವಿರುದ್ಧವಾದ ಜನರೂ ಇದ್ದಾರೆ. ಲೆವಿನ್ ಅಂಥ ವ್ಯಕ್ತಿಯಾಗಿದ್ದನು. ವ್ರಾಂಸ್ಕಿಯ ಆಕರ್ಷಣೆಗೆ ಕಾರಣವಾದ ಸದ್ಗುಣಗಳನ್ನು ಗ್ರಹಿಸುವಲ್ಲಿ ಲೆವಿನ್‌ನಿಗೆ ಕಷ್ಟವಾಗಲಿಲ್ಲ. ಮೊದಲ ನೋಟದಲ್ಲಿಯೇ ಅವು ಅವನ ಕಣ್ಣಿಗೆ ಬಿದ್ದುವು. ಅವನ ಕೂದಲು ಕಪ್ಪಗಿದ್ದುವು; ಮಟ್ಟಸವಾದ ಎತ್ತರದವನು; ಕಟ್ಟುಮಸ್ತಾದ ಮೈಯವನು; ಸತ್ಸ್ವಭಾವದ ಪ್ರಶಾಂತ ಮುದ್ರೆಯ ದೃಢ ಮನೋಧರ್ಮದ ಸುಂದರ ಮುಖದವನು. ಅವನ ಮುಖ ಮತ್ತು ಆಕೃತಿಗಳು ತುಂಡಾಗಿ ಕತ್ತರಿಸಿದ ತಲೆಗೂದಲು ಮತ್ತು ಕ್ಷೌರಿತಗಲ್ಲಗಳಿಂದ ಹಿಡಿದು ನವೋನವವಾದ ಡೊಗಳೆ ಸಮವಸ್ತ್ರದವರೆಗೆ ಪ್ರತಿಯೊಂದೂ—ಸರ್ವಾಂಶಗಳಲ್ಲಿ ಸರಳವಾಗಿದ್ದುವಲ್ಲದೆ, ನೀಟಾಗಿದ್ದುವು. ಆದೆತಾನೆ ಬಂದಿದ್ದ ಮಹಿಳೆಗೆ ಮೊದಲು ದಾರಿಮಾಡಿಕೊಟ್ಟು ಅವನು ನೇರವಾಗಿ ಹಿರಿಯ ರಾಜಕುಮಾರಿಯ ಬಳಿಗೈದಿ, ತದನಂತರ ಕಿಟ್ಟಿಯ ಸನಿಹಕ್ಕೆ ಹೋದನು.

ಅವನವಳ ಬಳಿ ಸರಿಯುತ್ತಿದ್ದಂತೆ, ವಿಶಿಷ್ಟವೂ ಕೋಮಲವೂ ಆದ ಕಿರಣವೊಂದು ಅವನ ಸುಂದರ ನೇತ್ರಗಳನ್ನು ಬೆಳಗಿತು; ಕಂಡೂಕಾಣದಂತಿದ್ದ ಸುಖಹಾಸ ಮತ್ತು ನಿರಾಡಂಬರದ ಹೆಕ್ಕಳಿಕೆಯಿಂದ (ಲೆವಿನ್‌ನಿಗೆ ಅವನ ಚಹರೆ ಕಂಡದ್ದೇ ಹಾಗೆ) ವಿಶಾಲವಾದ ಸೂಕ್ಷ್ಮ ಹಸ್ತವನ್ನವಳ ಮುಂದೆ ನೀಡಿ, ಗೌರವ ಪೂರ್ವಕವಾಗಿ, ಆದರೆ ಸಂಕೋಚದಿಂದ ಅವಳ ಮೇಲೆ ಬಾಗಿದನು.

ಎಲ್ಲರೊಡನೆಯೂ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡು, ಉಚಿತವಾಗಿ, ಮಾತಾಡಿದ ನಂತರ, ಒಮ್ಮೆಯಾದರೂ ಲೆವಿನ್‌ನ ಕಡೆಗೆ ಕಣ್ಣು ಮಿಟುಕಿಸದೆ ಕುಳಿತುಕೊಂಡನು. ಲೆವಿನ್‌ನ ಕಣ್ಣು ಮಾತ್ರ ಕ್ಷಣಕಾಲ ಅವನ ಮುಖವನ್ನು ಬಿಟ್ಟಲುಗಲಿಲ್ಲ.

'ನಿಮ್ಮ ಪರಿಚಯ ಮಾಡಿಕೊಡಲೆ?' ಎಂದು ಹಿರಿಯ ರಾಜಕುಮಾರಿ ಲೆವಿನ್‌ನನ್ನು ತೋರಿಸಿದಳು. 'ಕಾನ್‌ಸ್ಟೆಂಟಿನ್ ದಿಮಿತ್ರಿಚ್ ಲೆವಿನ್. ಕೌಂಟ್ ಅಲೆಕ್ಸಿ ಕಿರಿಲೊವಿಚ್ ವ್ರಾಂಸ್ಕಿ.'

ವ್ರಾಂಸ್ಕಿ ಮೇಲೆದ್ದು, ಲೆವಿನ್‌ನ ಕೈಕುಲಕಿ, ಸ್ನೇಹ ಭಾವದಿಂದ ಅವನ ಮುಖವನ್ನೀಕ್ಷಿಸಿದನು.

'ಈ ಚಳಿಗಾಲದಲ್ಲೊಮ್ಮೆ ನಿಮ್ಮೊಡನೆ ಊಟ ಮಾಡುವ ಅವಕಾಶ ನನಗೆ ಲಭ್ಯವಾಗಿತ್ತು. ಆದರೆ ನೀವು ಅನಿರೀಕ್ಷಿತವಾಗಿ ಹಳ್ಳಿಗೆ ಹೊರಟು ಹೋದಿರಿ.' ಎಂದವನು ಆಕರ್ಷಕವಾದ ನಿಷ್ಕಪಟ ಮಂದಹಾಸದೊಡನೆ ನುಡಿದನು.

'ಕಾನ್‌ಸ್ಟೆಂಟಿನ್ ದಿಮಿತ್ರಿಚ್‌ನಿಗೆ ಪಟ್ಟಣ ಮತ್ತು ಪಟ್ಟಣದ ಜನರಿಂದ ರಾಗದು' ಎಂದು ಕೌಂಟೆಸ್ ನಾರ್ಡ್‌ಸ್ಟನ್ ಸೊಲ್ಲಿಸಿದಳು.

'ನಿಮ್ಮ ಮನಸ್ಸಿನ ಮೇಲೆ ನನ್ನ ಮಾತು ಬೀರಿರುವ ಆಳವಾದ ಪರಿಣಾಮವನ್ನು ನೋಡಿದರೆ, ಅವು ನಿಮ್ಮ ನೆನಪಿನಲ್ಲಿ ಭದ್ರವಾಗಿ ಬೇರೂರಿರಬೇಕೆಂದು ತೋರುತ್ತದೆ' ಎಂದು ಲೆವಿನ್ ನುಡಿದನು; ಮುಂಚೆಯೂ ಅದೇ ವಿಷಯವನ್ನು ಹೇಳಿದ್ದು ನೆನಪಾಗಿ, ಅವನ ಮುಖ ಕೆಂಪೇರಿತು.

ಲೆವಿನ್‌ನ ಮೇಲಿದ್ದ ದೃಷ್ಟಿಯನ್ನು ವ್ರಾಂಸ್ಕಿ ಕೌಂಟೆಸ್ ನಾರ್ಡ್‌ಸ್ಟನ್‌ಳ ಕಡೆಗೆ ತಿರುಗಿಸಿ, ಮುಗುಳುನಗೆ ಸೂಸಿದನು.

'ಇಡೀ ವರ್ಷವೆಲ್ಲ ನೀವು ಹಳ್ಳಿಯಲ್ಲಿಯೇ ವಾಸಿಸುತ್ತೀರೇನು? ಚಳಿಗಾಲದಲ್ಲಿ ಅಸಾಧ್ಯ ಬೇಸರವಾಗಬಹುದಲ್ಲವೆ?' ಎಂದವನು ಪ್ರಶ್ನಿಸಿದನು.

'ಕೈತುಂಬ ಕೆಲಸವಿದ್ದರೆ ಸ್ವಲ್ಪವೂ ಬೇಸರವಾಗದು. ನನ್ನಷ್ಟಕ್ಕೆ ನಾನಿರುವಾಗ ಬೇಸರವಾಗದು' ಎಂದು ಲೆವಿನ್ ಕೂಡಲೇ ಉತ್ತರಿಸಿದನು.

'ಹಳ್ಳಿಯೆಂದರೆ ನನಗೆ ತುಂಬ ಇಷ್ಟ' ಎಂದು ವ್ರಾಂಸ್ಕಿ ಲೆವಿನ್‌ನ ಧ್ವನಿಯನ್ನು ಗಮನಿಸಿದರೂ, ಗಮನಿಸದವನಂತೆ ನಟಿಸುತ್ತ ನುಡಿದನು.

'ಆದರೆ ಯಾವಾಗಲೂ ಹಳ್ಳಿಯಲ್ಲಿಯೇ ಕಾಲ ಕಳೆಯುವುದು ನಿಮಗಿಷ್ಟವಿರಲಾರದೆಂದು ನಾನು ಭಾವಿಸಿದ್ದೇನೆ' ಎಂದು ಕೌಂಟೆಸ್ ನಾರ್ಡ್‌ಸ್ಟನ್ ಅವನನ್ನು ಕೆಣಕಿದಳು.

'ನಾನೇನೂ ಹೇಳಲಾರೆ. ಹೆಚ್ಚು ದಿನ ನಾನಲ್ಲಿ ಇದ್ದದ್ದಿಲ್ಲ' ಎಂದವನು ಮಾತು ಮುಂದುವರಿಸಿದನು. 'ರಷ್ಯನ್ ಹಳ್ಳಿಯ ಬಗ್ಗೆ ನನಗೆಂದೂ ಗೀಳು ಹಿಡಿದಿಲ್ಲ. ಅಲ್ಲಿಯ ತೊಗಟೆ ಬೂಟುಗಳ ಬಗ್ಗೆ ಮತ್ತು ರೈತರ ಬಗ್ಗೆ ನನಗೆ ಆಸಕ್ತಿಯಿಲ್ಲ. ನಾನೊಮ್ಮೆ ನನ್ನ ತಾಯಿಯೊಡನೆ ನೈಸ್‌ನಲ್ಲಿ ಚಳಿಗಾಲವನ್ನು ಕಳೆದೆ. ನೈಸ್ ಒಂದು ಮಂಕು ಕವಿದ ಜಾಗ. ಆದರೆ ನೇಪಲ್ಸ್, ಜತೆಗೆ ಸೊರೆಂಟೊ ಸಹ ಸುಖಾನುಭವಯೋಗ್ಯವಾದ ಊರುಗಳು. ಆದರೆ ಕೆಲವು ದಿನ ಮಾತ್ರ ಅಲ್ಲಿರಬಹುದು. ರಷ್ಯಾದ ಹೃದಯಸ್ಪರ್ಶಿ ಸ್ಮೃತಿಗಳು ಯಾರಿಗಾದರೂ ಅಲ್ಲಿ ಮರುಕಳಿಸುತ್ತವೆ; ಮುಖ್ಯವಾಗಿ ರಷ್ಯಾದ ಹಳ್ಳಿಗಾಡಿನ ದೃಶ್ಯಗಳು ಅವರ ಕಣ್ಮುಂದೆ ನಿಲ್ಲುತ್ತವೆ. ಅದು ಹೇಗೆಂದರೆ....'

ಮಾತಾಡುತ್ತಿದ್ದಾಗ ಅವನು ಕಿಟ್ಟಿ ಲೆವಿನ್‌ರನ್ನು ಸಂಬೋಧಿಸುವವನಂತೆ ಅವಳ ಕಡೆಗೊಮ್ಮೆ, ಇವನ ಕಡೆಗೊಮ್ಮೆ ಸ್ನೇಹದೃಷ್ಟಿಯನ್ನು ಹಾಯಿಸುತ್ತಿದ್ದನು; ತನ್ನ ತಲೆಗೆ ಮೊದಲು ತೋಚಿದ ಸಂಗತಿಯನ್ನು ಉಲ್ಲೇಖಿಸುತ್ತಿದ್ದನು.

ಕೌಂಟೆಸ್ ನಾರ್ಡ್‌ಸ್ಟನ್‌ಳ ಮಾತಾಡುವ ಬಯಕೆಯನ್ನು ಗಮನಿಸಿದ ಅವನು ವಾಕ್ಯಮಧ್ಯದಲ್ಲಿಯೇ ನಿಲ್ಲಿಸಿ, ಅವಳ ಕಡೆಗೆ ಗಮನ ಹರಿಸಿದನು.

ಸಂವಾದ ನಿಲುಗಡೆಯಿಲ್ಲದೆ ಮುಂದುವರಿಯಿತು. ಸಂವಾದ ಸೊರಗಿದ್ದಾದರೆ, ಅದನ್ನು ಪ್ರಚೋದಿಸುವ ಸಲುವಾಗಿ ಹಿರಿಯ ರಾಜಕುಮಾರಿ ಯಾವಾಗಲಾದರೂ ಪ್ರಯೋಗಿಸುವ ಸಲುವಾಗಿ ಎರಡು ಭಾರವಾದ ಆಯುಧಗಳನ್ನು ತನ್ನ ಬಳಿ ಇರಿಸಿ ಕೊಂಡಿರುತ್ತಿದ್ದಳು. ವಾಣಿಜ್ಯವಿದ್ಯೆಗಿಂತ ಮಿಗಿಲಾಗಿ ಪಾಂಡಿತ್ಯ ವಿದ್ಯೆಯ ಅನು ಕೂಲಗಳು ಮತ್ತು ಸಾರ್ವತ್ರಿಕ ಸೈನ್ಯ ಸೇವೆಯೇ ಆ ಆಯುಧಗಳು. ಆದರೆ ಆ ಆಯುಧಗಳನ್ನು ಬಳಸುವ ಅವಕಾಶ ಅವಳಿಗೆ ದೊರೆಯಲಿಲ್ಲ. ಲೆವಿನ್‌ನನ್ನು ಅಪಹಾಸ್ಯಮಾಡುವ ಸದುವು ಸಹ ಕೌಂಟೆಸ್‌ಳಿಗೆ ಲಭಿಸಲಿಲ್ಲ.

ಸಂಭಾಷಣೆಗಿಳಿಯಲು ಲೆವಿನ್ ಆಶಿಸಿದನು; ಆದರದು ಸಾಧ್ಯವಾಗಲಿಲ್ಲ. 'ಈಗಲೇ ಹೊರಟುಹೋಗು; ಈಗಲೇ ಹೋಗು' ಎಂದವನು ತನ್ನಷ್ಟಕ್ಕೆ ತಾನು ಹೇಳಿಕೊಳ್ಳಲಾರಂಭಿಸಿದನು. ಆದರವನು ಅಲುಗಾಡಲಿಲ್ಲ. ಸಂಭವನೀಯವಾದ ಸಂಗತಿಗಾಗಿ ಅವನು ಕಾದುಕೊಂಡಿದ್ದಂತೆ ತೋರುತ್ತಿತ್ತು.

ಸಂವಾದ ಮೇಜುಬಡಿತ ಮತ್ತು ದೆವ್ವಗಳ ಕಡೆಗೆ ತಿರುಗಿತು; ಪ್ರೇತವಾದ ವನ್ನಭ್ಯಸಿಸಿದ್ದ ಕೌಂಟೆಸ್ ತಾನು ನೋಡಿದ್ದ ಅದ್ಭುತಗಳನ್ನು ವಿವರಿಸಿದಳು.

'ಓ, ಈ ಜನರಲ್ಲಿಗೆ ನೀವು ನನ್ನನ್ನು ಕರೆದೊಯ್ಯಬೇಕು, ಕೌಂಟೆಸ್. ಕರೆ ದೊಯ್ಯುವುದಾಗಿ ಮಾತು ಕೊಡಿ. ಅದ್ಭುತ ಸಂಗತಿಗಳನ್ನು ನೋಡುವ ಸಲುವಾಗಿ ಎಲ್ಲೆಲ್ಲೂ ಹುಡುಕಾಡಿದ್ದೇನೆ; ಎಲ್ಲಿಯೂ ಸಿಗಲಿಲ್ಲ' ಎಂದು ವ್ರಾಂಸ್ಕಿ ಮಂದಹಾಸ ದಿಂದ ನುಡಿದನು.

'ಅದಕ್ಕೇನಂತೆ, ಮುಂದಿನ ಶನಿವಾರವೇ ಆಗಲಿ' ಎಂದು ಕೌಂಟೆಸ್ ಉತ್ತರಿಸಿ ದಳು. 'ಕಾನ್‌ಸ್ಟೆಂಟಿನ್ ದಿಮಿತ್ರಿಚ್ ಅವರೆ, ನೀವು ಇಂಥ ಸಂಗತಿಗಳನ್ನೆಲ್ಲ ನಂಬುತ್ತೀರೇನು?' ಎಂದವಳು ಲೆವಿನ್‌ನನ್ನು ಕೇಳಿದಳು.

'ನನ್ನನ್ನೇಕೆ ಕೇಳುತ್ತೀರಿ? ನನ್ನ ಉತ್ತರವೇನೆಂಬುದು ನಿಮಗೆ ಗೊತ್ತೇ ಇದೆ ಯಲ್ಲ.'

'ಆದರೆ ನಿಮ್ಮ ಅಭಿಪ್ರಾಯವನ್ನು ನಾನು ತಿಳಿಯಬೇಕಾಗಿದೆ.'

'ಮೇಜು ಬಡಿತವನ್ನು ನಂಬುವ, ಸುಶಿಕ್ಷಿತರೆಂದು ಕರೆಸಿಕೊಳ್ಳುವ ಸಮಾಜ ರೈತರಿಗಿಂತ ಸ್ವಲ್ಪವೂ ಉತ್ತಮವಲ್ಲವೆಂಬುದೇ ನನ್ನ ಅಭಿಪ್ರಾಯ. ಅವರು ಕೆಟ್ಟಕಣ್ಣು, ಮಂತ್ರಮಾಟ, ಶಕುನಗಳನ್ನು ನಂಬುತ್ತಾರೆ; ನಾವು....'

'ಅಂದರೆ, ನೀವಂಥ ವಿಷಯಗಳನ್ನು ನಂಬುವುದಿಲ್ಲವೆಂದಾಯ್ತು.'

'ನಾನವನ್ನು ನಂಬುವುದಿಲ್ಲ, ಕೌಂಟೆಸ್.'

'ನನ್ನ ಕಣ್ಣುಗಳಿಂದಲೇ ಅವನ್ನು ನೋಡಿದ್ದೇನೆಂದರೂ ನೀವು ನಂಬುವುದಿಲ್ಲ ವೇನು?'

'ತಮ್ಮ ಕಣ್ಣಿಂದಲೇ ಪಿಶಾಚಿಯನ್ನು ನೋಡಿರುವುದಾಗಿ ಹಳ್ಳಿಯ ಹೆಂಗಸರು ಹೇಳುತ್ತಾರೆ.'

'ನನ್ನ ಮೇಲೆ ನೀವು ಸುಳ್ಳಿನ ಆಪಾದನೆ ಹೊರಿಸುತ್ತೀರೇನು?' ಎಂದವಳು ವಿಷಾದದ ನಗೆ ಸೂಸಿದಳು.

'ಹಾಗಲ್ಲ, ಮಾಮ; ಅವನ್ನೆಲ್ಲ ನಂಬುವುದಿಲ್ಲವೆಂದಷ್ಟೇ ಕಾನ್‌ಸ್ಟೆಂಟಿನ್ ದಿಮಿತ್ರಿಚ್ ಹೇಳಿದ್ದು' ಎಂದು ಕಿಟ್ಟಿ ಲೆವಿನ್‌ನ ಹೆಸರು ಹೇಳುವಾಗ ನಾಚಿಕೊಂಡಳು. ಅವಳ ಮಾತನ್ನು ಲೆವಿನ್ ಗ್ರಹಿಸಿದನು. ಅವನು ಭಾವಾವೇಗದಿಂದ ಕೂಡಲೇ ಉತ್ತರ ನೀಡಲುದ್ಯುಕ್ತನಾದನು. ಆದರೆ ಅನರ್ಥದಲ್ಲಿ ಕೊನೆಗಾಣುವಂತಿದ್ದ ಸಂಭಾಷಣೆಯನ್ನು ತಪ್ಪಿಸುವ ಸಲುವಾಗಿ ವ್ರಾನ್ಸ್ಕಿ ತನ್ನ ರೂಢಿಯ ನಿಷ್ಕಪಟ, ಉಲ್ಲಸಿತ ಮಂದಹಾಸದಿಂದ ಮಧ್ಯೆ ಪ್ರವೇಶಿಸಿದನು.

'ಅಂಥ ಸಂಗತಿಗಳ ಸಂಭವನೀಯತೆಯನ್ನೇ ನೀವು ಒಪ್ಪಿಕೊಳ್ಳುವುದಿಲ್ಲವಲ್ಲವೆ?' ಎಂದವನು ಪ್ರಶ್ನಿಸಿದನು. 'ಏಕೊಪ್ಪಿಕೊಳ್ಳಬಾರದು? ವಿದ್ಯುಚ್ಛಕ್ತಿಯ ಅಸ್ತಿತ್ವವನ್ನು ನಾವು ಒಪ್ಪಿಕೊಳ್ಳುತ್ತೇವೆ, ಆದರದನ್ನು ಯಾರೂ ನೋಡಿಲ್ಲ. ನಮಗಿನ್ನೂ ಅರ್ಥವಾಗದ ನೂತನ ಶಕ್ತಿಯೊಂದು ಇಲ್ಲವೆನ್ನುವಿರಾ? ಅದು....'

'ವಿದ್ಯುಚ್ಛಕ್ತಿಯನ್ನು ಕಂಡುಹಿಡಿದಾಗ ಅದೊಂದು ಅದ್ಭುತಮಾತ್ರವಾಗಿತ್ತು' ಎಂದು ಲೆವಿನ್ ಶೀಘ್ರವಾಗಿ ನಡುವೆ ಬಾಯಿಹಾಕಿದನು. 'ಅದೆಲ್ಲಿಂದ ಬಂತು, ಅದೇನು ಮಾಡಬಲ್ಲುದೆಂಬುದರ ಬಗ್ಗೆ ಯಾರಿಗೂ ಮಾಹಿತಿ ತಿಳಿದಿರಲಿಲ್ಲ. ಈ ಶಕ್ತಿಯನ್ನು ಹೇಗೆ ಬಳಸಿಕೊಳ್ಳಬಹುದೆಂಬುದನ್ನು ಕಂಡುಕೊಳ್ಳುವ ಹೊತ್ತಿಗೆ ಯುಗಯುಗಗಳೇ ಸಂದುವು. ಆದರೆ ತದ್ವಿರುದ್ಧವಾಗಿ ಪ್ರೇತವಾದಿಗಳು ತಮಗಾಗಿ ಕಾಗದ ಬರೆಯುವ ಮೇಜುಗಳನ್ನು ಕುರಿತು ಮಾತಾಡುತ್ತಾರೆ; ಪ್ರೇತಗಳು ತಮ್ಮಲ್ಲಿಗೆ ಬರುತ್ತವೆಂದು ಹೇಳುತ್ತಾರೆ; ತದನಂತರ ಯಾವುದೋ ಅಗೋಚರ ಶಕ್ತಿಯ ಬಗ್ಗೆ ಪ್ರಸ್ತಾಪಿಸುತ್ತಾರೆ.'

ವ್ರಾನ್ಸ್ಕಿ ಎಂದಿನಂತೆ ಅವನ ಮಾತುಗಳನ್ನು ಸಾವಧಾನವಾಗಿ ಆಲಿಸಿದನು; ಅವುಗಳಲ್ಲಿ ಹೆಚ್ಚು ಆಸಕ್ತಿ ತೋರಿಸಿದನು. 'ಹೌದು, ಪ್ರೇತವಾದಿಗಳು ಹೇಳುವುದಿದು: ಸದ್ಯದಲ್ಲಿ ಈ ಶಕ್ತಿ ಏನೆಂಬುದು ನಮಗೆ ತಿಳಿಯದು. ಆದರದು ಅಸ್ತಿತ್ವದಲ್ಲಿದೆ. ಅದು ಅಭಿವ್ಯಕ್ತಗೊಳ್ಳುವ ಸಂದರ್ಭಗಳಿವು; ವಿಜ್ಞಾನಿಗಳು ಅವುಗಳ ಲಕ್ಷಣಗಳನ್ನು ಕಂಡುಹಿಡಿಯಲಿ. ಯಾವುದೋ ಒಂದು ನೂತನ ಶಕ್ತಿ ಇಲ್ಲವೆಂದು ಹೇಳುವಂತಿಲ್ಲ. ಇದು ನನ್ನ ಮತ ಏಕೆಂದರೆ....'

'ಏಕೆ ಗೊತ್ತೆ?' ಎಂದು ಲೆವಿನ್ ನಡುವೆ ಬಾಯಿಹಾಕಿದನು. 'ವಿದ್ಯುಚ್ಛಕ್ತಿಯ ವಿಷಯಕ್ಕೆ ಬರೋಣ. ರಾಳದ ಕಡ್ಡಿಯನ್ನು ಉಣ್ಣೆಬಟ್ಟೆಯ ಮೇಲೆ ಉಜ್ಜಿದಾಗಲೆಲ್ಲ ಸುವಿದಿತವಾದ ಫಲಿತಾಂಶ ಏಕಪ್ರಕಾರವಾಗಿ ದೊರೆಯುತ್ತದೆ. ಪ್ರತಿ ಸಲವೂ ಇಲ್ಲಿ ಅದೇ ಫಲಿತಾಂಶ ಲಭಿಸುವುದಿಲ್ಲ. ಆದ್ದರಿಂದ ಇದು ಸಹಜ ಘಟನೆಯಲ್ಲವೆಂದು ಸ್ಪಷ್ಟವಾಗುತ್ತದೆ.'

ಪ್ರಾಯಶಃ ದಿವಾನಖಾನೆಗೆ ತಕ್ಕುದಲ್ಲದ ಗಾಂಭೀರ್ಯದ ಕಡೆಗೆ ಸಂಭಾಷಣೆ ಮುಖವಾಗುತ್ತಿದ್ದುದನ್ನರಿತ ವ್ರಾನ್ಸ್ಕಿ ಅದನ್ನು ಮುಂದುವರಿಸಲಿಲ್ಲ; ಸುಸ್ನಿಗ್ಧ ಮಂದಹಾಸದೊಡನೆ ಮಹಿಳೆಯರ ಕಡೆಗೆ ತಿರುಗಿಕೊಂಡು, ವಿಷಯ ಬದಲಾಯಿಸಲು ಪ್ರಯತ್ನಿಸಿದನು.

'ಅದನ್ನು ಒರೆಗೆ ಹಚ್ಚಿನೋಡೋಣ, ಕೌಂಟೆಸ್‌ರೆ' ಎಂದವನು ಮಾತು ತೆಗೆದನು. ಆದರೆ ಲೆವಿನ್ ತನ್ನ ವಿಚಾರಧಾರೆಯನ್ನು ಸ್ಥಗಿತಗೊಳಿಸಲಿಲ್ಲ.

'ತಮ್ಮ ಅದ್ಭುತಗಳಿಗೆ ನೂತನಾಗೋಚರ ಶಕ್ತಿಯೇ ಕಾರಣವೆಂದು ವಿವರಿಸಲು ನಡಸುವ ಪ್ರೇತವಾದಿಗಳ ಪ್ರಯತ್ನ ಅವರ ಅತ್ಯಂತ ದುರ್ಬಲ ಗುಣವೆಂದು ನನಗನಿಸು ತ್ತದೆ' ಎಂದವನು ಮಾತು ಮುಂದುವರಿಸಿದನು. 'ಅವರು ಆಧ್ಯಾತ್ಮ ಶಕ್ತಿಯ ಬಗ್ಗೆ ಬಹಿರಂಗವಾಗಿ ಮಾತಾಡುತ್ತಾರೆ; ಆದಾಗ್ಯೂ ಅದನ್ನು ಭೌತಪರೀಕ್ಷೆಗೊಳಗುಮಾಡಲು ಪ್ರಯತ್ನಿಸುತ್ತಾರೆ.'

ಅವನೆಷ್ಟು ಹೊತ್ತಿಗೆ ತನ್ನ ಮಾತು ಮುಗಿಸುವನೋ ಎಂದು ಪ್ರತಿಯೊಬ್ಬರಿಗೂ ಬೇಸರವಾಗಿತ್ತು. ಅವನಿಗೂ ಅದು ಅರ್ಥವಾಯಿತು.

'ನೀವೇ ಅತ್ಯುತ್ತಮ ಮಾಧ್ಯಮವಾಗಬಲ್ಲಿರೆಂದು ನನಗೆ ತೋರುತ್ತದೆ. ಉತ್ಸಾಹ ಶಕ್ತಿ ನಿಮ್ಮ ಸಹಜಗುಣವಾಗಿದೆ' ಎಂದು ಕೌಂಟೆಸ್ ನಾರ್ಡ್‌ಸ್ಟನ್ ನುಡಿದಳು.

ಉತ್ತರ ನೀಡುವ ಸಲುವಾಗಿ ಲೆವಿನ್ ಬಾಯಿ ತೆರೆದನು; ಆ ಬಗ್ಗೆ ಏನೋ ಹೇಳುವುದರಲ್ಲಿದ್ದನು; ಅವನ ಮುಖ ಕೆಂಪೇರಿತಷ್ಟೇ ಹೊರತು, ಮಾತಾಡಲಿಲ್ಲ.

'ಬನ್ನಿ, ಕೌಂಟೆಸ್‌ರೆ, ಮೇಜುಗಳನ್ನು ಪರೀಕ್ಷಿಸೋಣ' ಎಂದು ವ್ರಾನ್ಸ್ಕಿ ಕರೆದನು. 'ನಿಮ್ಮ ಅನುಮತಿ ಇದೆಯೆ, ರಾಜಕುಮಾರಿಯವರೆ?'

ವ್ರಾನ್ಸ್ಕಿ ಮೇಲೆದ್ದು, ಅನುಕೂಲವಾದ ಮೇಜಿಗಾಗಿ ಹುಡುಕಾಡಿದನು.

ಕಿಟ್ಟಿ ತಾನು ಕುಳಿತಿದ್ದ ಮೇಜಿನ ಕಡೆಯಿಂದ ಮೇಲೆದ್ದಳು. ಲೆವಿನ್ ಮುಂದೆ ಹಾದುಹೋಗುವಾಗ ಅವರ ಕಣ್ಣು ಸಂಧಿಸಿದುವು. ಅವನಿಗಾಗಿ ಅವಳ ಹೃದಯದಲ್ಲಿ ಮರುಕ ತುಂಬಿಬಂತು. ಅವನ ದುರವಸ್ಥೆಗೆ ತಾನೇ ಕಾರಣಳೆಂಬುದು ಅರಿವಾದಾಗ ಅವಳಿಗೆ ವ್ಯಥೆಯಾಯಿತು. 'ನೀವು ನನ್ನನ್ನು ಕ್ಷಮಿಸುವುದಾದರೆ ನನಗೆ ಸಮಾಧಾನ ವಾಗುತ್ತದೆ' ಎಂದು ಅವಳ ಓರೆನೋಟ ನುಡಿಯಿತು. 'ಅದರಿಂದ ನನಗೆ ಸಂತೋಷ ವಾಗುತ್ತದೆ.'

'ನಿನ್ನನ್ನು ನನ್ನನ್ನು ಸೇರಿಸಿಕೊಂಡು ನಾನು ಪ್ರತಿಯೊಬ್ಬರನ್ನೂ ದ್ವೇಷಿಸುತ್ತೇನೆ' ಎಂದವನ ಕಣ್ಣು ಮಿಟುಕು ಉತ್ತರಿಸುತ್ತಿದ್ದಂತೆ ಅವನು ಟೋಪಿಯನ್ನೆತ್ತಿಕೊಂಡನು. ಆದರವನು ಅಲ್ಲಿಂದ ತಪ್ಪಿಸಿಕೊಂಡು ಹೋಗುವಂತಿರಲಿಲ್ಲ. ಅವರೆಲ್ಲರೂ ಮೇಜಿನ ಸುತ್ತ ಕುಳಿತುಕೊಳ್ಳಲುದ್ಯುಕ್ತರಾಗುತ್ತಿದ್ದಂತೆ, ಲೆವಿನ್ ಹೊರಗೆ ಹೊರಡಲನುವಾಗು ತ್ತಿದ್ದಂತೆ, ಹಿರಿಯ ರಾಜಕುಮಾರ ಒಳಗೆ ಬಂದನು; ಸ್ತ್ರೀಯರೊಡನೆ ಕುಶಲ ವಿನಿಮಯ ಮಾಡಿಕೊಂಡ ನಂತರ ಅವನು ಲೆವಿನ್‌ನ ಕಡೆಗೆ ತಿರುಗಿದನು.

'ಆಹ!' ಎಂದವನು ಹರ್ಷದಿಂದ ಉದ್ಗಾರ ತೆಗೆದನು. 'ನೀವಿಲ್ಲಿಗೆ ಬಂದು ತುಂಬ ಹೊತ್ತಾಯಿತೇನು? ನೀವು ಬಂದದ್ದು ಗೊತ್ತಾಗಲಿಲ್ಲ. ನಿಮ್ಮನ್ನು ನೋಡಿ ತುಂಬ ಸಂತೋಷವಾಯಿತು.' ಅವನು ಲೆವಿನ್‌ನನ್ನಾಲಿಂಗಿಸಿಕೊಂಡನು. ಅವನ ಸಂಗಡದ ಮಾತುಕತೆಗಳಲ್ಲಿ ರಾಜಕುಮಾರ ಎಷ್ಟು ತಲ್ಲೀನನಾಗಿದ್ದನೆಂದರೆ, ಮೇಲೆದ್ದು ನಿಂತುಕೊಂಡು, ತನ್ನ ಕಡೆಗೆ ತಿರುಗಬಹುದೆಂದು ನೀರವವಾಗಿ ಕಾದುಕೊಂಡಿದ್ದ ವ್ರಾನ್ಸ್ಕಿಯನ್ನು ರಾಜಕುಮಾರ ಗಮನಿಸಲಿಲ್ಲ.

ಅಲ್ಲಿ ನಡೆದ ಘಟನೆಗಳ ನಂತರ, ತನ್ನ ತಂದೆ ತೋರುತ್ತಿದ್ದ ಪ್ರೀತಿ ಲೆವಿನ್‌ನಿಗೆ ಹಿಡಿಸುತ್ತಿರಲಿಲ್ಲವೆಂದು ಕಿಟ್ಟಿ ಭಾವಿಸಿದಳು. ವ್ರಾನ್ಸ್ಕಿ ಸಲ್ಲಿಸಿದ ಮರ್ಯಾದೆಯ ಬಗ್ಗೆ

ತನ್ನ ತಂದೆ ಉದಾಸೀನನಾಗಿದ್ದುದನ್ನವಳು ಗಮನಿಸಿದಳು. ಪ್ರೀತಿಪೂರ್ವಕವಾದ ಕಳವಳದಿಂದ ವ್ರಾಂಸ್ಕಿ ತನ್ನ ತಂದೆಯನ್ನೇ ನೋಡುತ್ತಿದ್ದುದನ್ನು ಸಹ ಅವಳು ಮರೆಯಲಿಲ್ಲ. ಯಾರೇ ಆಗಲಿ, ಯಾವ ಕಾರಣಕ್ಕಾದರೂ ಸರಿಯೆ ಅವನ ಬಗ್ಗೆ ವಿರೋಧ ಭಾವವನ್ನು ತಳೆಯುವುದು ಸರಿಯೆ ಎಂದು ಕಿಟ್ಟಿ ಆಲೋಚಿಸಿದಳು; ಅದರ ಹಿಂದಿರಬಹುದಾದ ಕಾರಣವನ್ನರ್ಥಮಾಡಿಕೊಳ್ಳಲು ಪ್ರಯತ್ನಿಸಿ, ಅವಳು ವಿಫಲಳಾದಳು. ಅವಳ ಕೆನ್ನೆ ಕೆಂಪಾದುವು.

'ಕಾನ್‌ಸ್ಟೆಂಟಿನ್ ದಿಮಿತ್ರಿಚ್‌ರನ್ನು ನಮ್ಮ ಕಡೆಗೆ ಕಳಿಸಿ, ರಾಜಕುಮಾರರೆ. ನಾವೊಂದು ಪ್ರಯೋಗವನ್ನು ನಡಸಲಿದ್ದೇವೆ' ಎಂದು ಕೌಂಟೆಸ್ ನಾರ್ಡ್‌ಸ್ಟನ್ ನುಡಿದಳು.

'ಅಹ, ಎಂಥ ಪ್ರಯೋಗ? ಮೇಜು ತಿರುಗಣೆಯೆ? ಕ್ಷಮಿಸಿ, ಮಹಿಳೆಯರೆ ಮತ್ತು ಮಹನೀಯರೆ, ಉಂಗುರದಾಟ ಇದಕ್ಕಿಂತ ಹೆಚ್ಚು ತಮಾಷೆಯ ಆಟವೆಂಬುದು ನನ್ನ ಮತ.' ಎಂದು ರಾಜಕುಮಾರ ನುಡಿಯುತ್ತ, ವ್ರಾಂಸ್ಕಿಯ ಕಡೆಗೆ ನೋಡುತ್ತ, ಇಷ್ಟಕ್ಕೆಲ್ಲ ಅವನ ಪ್ರಚೋದನೆಯೆ ಕಾರಣವಾಗಿರಬೇಕೆಂದು ಊಹಿಸಿಕೊಂಡನು. 'ಏನೇ ಇರಲಿ, ಉಂಗುರದಾಟದಲ್ಲಿ ಒಂದಿಷ್ಟಾದರೂ ವಿವೇಕವಿದೆ.'

ವ್ರಾಂಸ್ಕಿ ವಿಸ್ಮಯ ಭಾವದಿಂದ ತನ್ನ ಅಚಂಚಲ ದೃಷ್ಟಿಯನ್ನು ರಾಜಕುಮಾರನ ಮೇಲೆ ನಾಟಿದನು. ಮಂಕಾದ ಮುಗುಳು ನಗೆಯಿಂದ ಮುಂದಿನವಾರ ನಡೆಯಲಿದ್ದ ನೃತ್ಯಗೋಷ್ಠಿಯ ಬಗ್ಗೆ ಕೌಂಟೆಸ್ ನಾರ್ಡ್‌ಸ್ಟನ್‌ಳೊಡನೆ ಮಾತು ಪ್ರಾರಂಭಿಸಿದನು.

'ನೀನು ಗೋಷ್ಠಿಗೆ ಬರುತ್ತೀಯಷ್ಟೆ?' ಎಂದವನು ಕಿಟ್ಟಿಯನು ಕೇಳಿದನು. ಹಿರಿಯ ರಾಜಕುಮಾರ ತನ್ನಿಂದ ದೂರ ಸರಿದ ಕೂಡಲೇ ಲೆವಿನ್ ಯಾರಿಗೂ ಕಾಣದಂತೆ ಹೊರಗೆ ನುಸುಳಿದನು. ಆ ಸಂಜೆ ಅವನ ಮನಸ್ಸಿನ ಮೇಲೆ ಅಚ್ಚೊತ್ತಿದ ಅಂತಿಮ ಪ್ರಭಾವವೆಂದರೆ, ನೃತ್ಯಗೋಷ್ಠಿಯ ಬಗೆಗಿನ ವ್ರಾಂಸ್ಕಿಯ ಪ್ರಶ್ನೆಗೆ ಉತ್ತರ ನೀಡುವಾಗ ಅರಳಿದ ರಂಗೇರಿದ ಕಿಟ್ಟಿಯ ಮುಖ.

೧೫

ಸಂಜೆ ಕೊನೆಗೊಳ್ಳುತ್ತಿದ್ದಂತೆ, ತಾನು ಲೆವಿನ್‌ನೊಡನೆ ನಡಸಿದ ಮಾತುಕತೆಗಳನ್ನು ಕಿಟ್ಟಿ ತನ್ನ ತಾಯಿಗೆ ವಿವರಿಸಿದಳು. ಅವಳು ಲೆವಿನ್‌ನ ಬಗ್ಗೆ ಮರುಕ ವ್ಯಕ್ತಪಡಿಸಿದಳು; ಆದರೂ ಅವನಿಂದ ಬಂದ ವಿವಾಹ ಪ್ರಸ್ತಾಪ ಅವಳ ಹರ್ಷಾತಿಶಯಕ್ಕೆ ಕಾರಣವಾಗಿತ್ತು. ತಾನು ಮಾಡಿದ್ದೇ ಸರಿಯೆಂದವಳು ನಿಸ್ಸಂಶಯವಾಗಿ ತಿಳಿದುಕೊಂಡಿದ್ದಳು. ಆದರೂ ಹಾಸುಗೆಯ ಮೇಲುರುಳಿಕೊಂಡಾಗ ಬಹಳ ಹೊತ್ತು ಅವಳಿಗೆ ನಿದ್ದೆ ಹತ್ತಲಿಲ್ಲ. ಒಂದೇ ಒಂದು ಕಲ್ಪನೆ ನಿಷ್ಠುರವಾಗಿ ಅವಳನ್ನು ಕಾಡುತ್ತಿತ್ತು: ಲೆವಿನ್‌ನ ಗಂಟಿಕ್ಕಿಕೊಂಡಿದ್ದ ಹುಬ್ಬುಗಳ ಮುಖ ಮತ್ತು ಅಧೋದೃಷ್ಟಿಯಾಗಿ, ನೇರವಾಗಿ ನೋಡುತ್ತಿದ್ದ ಅವನ ದಯಾರ್ದ್ರ ನೇತ್ರಗಳು; ತನ್ನ ತಂದೆಯ ಮಾತುಗಳನ್ನಾಲಿಸುತ್ತ, ತನ್ನನ್ನೂ ವ್ರಾಂಸ್ಕಿಯನ್ನೂ ನೋಡುತ್ತ ನಿಂತುಕೊಂಡಿದ್ದ ಅವನ ಭಂಗಿ. ಅವನ ಬಗ್ಗೆ ಮೂಡಿದ ಸಹಾನುಭೂತಿಯಿಂದಾಗಿ ಅವಳ ಕಣ್ಣುಗಳಲ್ಲಿ ನೀರು ಒಟ್ಟಾಡು

ತ್ತಿದ್ದುವು. ಆದರೆ ಮತ್ತೊಂದು ಕ್ಷಣದಲ್ಲಿಯೇ, ಅವನಿಗೆ ಬದಲಾಗಿ ತಾನಾರಿಸಿಕೊಂಡಿದ್ದ ವ್ಯಕ್ತಿಯ ಕಡೆಗೆ ಅವಳ ಆಲೋಚನೆ ಹರಿದುವು. ಅವನ ಪುರುಷಕಾರದ ಅಚಂಚಲ ಮುಖವನ್ನು ಅದರ ಉದಾತ್ತ ಗಾಂಭೀರ್ಯವನ್ನು ಪ್ರತಿಯೊಂದು ಸಂದರ್ಭದಲ್ಲಿ ಹಾಗೂ ಪ್ರತಿಯೊಬ್ಬರ ಬಗ್ಗೆ ಅವನು ಪ್ರದರ್ಶಿಸುತ್ತಿದ್ದ ಸಾತ್ವಿಕ ಸ್ವಭಾವವನ್ನು ಅವಳು ಸುಸ್ಪಷ್ಟವಾಗಿ ನೆನೆದಳು. ತಾನು ಪ್ರೀತಿಸುತ್ತಿದ್ದವನ ಪ್ರೀತಿಗೊಳಗಾಗಿದ್ದ ಸಂಗತಿಯನ್ನು ನೆನೆದಳು. ಮತ್ತೊಮ್ಮೆ ಅವಳ ಹೃದಯ ಆನಂದ ಪರವಶವಾಯಿತು; ಪರಮಸುಖಾನುಭವದ ಮಂದಹಾಸದಿಂದ ಅವಳು ತಲೆದಿಂಬನ್ನು ಎದೆಗವಚಿಕೊಂಡಳು. 'ಅದು ವಿಷಾದದ ಸಂಗತಿ; ಆದರೆ ಅನ್ಯ ಮಾರ್ಗವಿಲ್ಲ. ನಾನಂತು ತಪ್ಪಿತಸ್ಥೆಯಲ್ಲ' ಎಂದವಳು ತನ್ನಷ್ಟಕ್ಕೆ ತಾನಂದುಕೊಂಡಳು. ಆದರೆ ಅವಳ ಒಳದನಿ ಹೇಳಿದ ವಿಷಯ ತೀರ ಭಿನ್ನವಾಗಿತ್ತು. ತನ್ನ ಪರಿತಾಪಕ್ಕೆ ಕಾರಣ ಲೆವಿನ್‌ನ ಪರಿತಾಪವನ್ನು ಕೆರಳಿಸಿದ್ದೋ ಅಥವಾ ಅವನನ್ನು ತಿರಸ್ಕರಿಸಿದ್ದೋ ಅವಳಿಗೆ ಗೊತ್ತಾಗಲಿಲ್ಲ; ಆದರೆ ಅವಳ ಸುಖಮಾತ್ರ ಶಂಕೆ ಸಂದೇಹಗಳಿಂದ ನಂಜುಗೂಡಿತ್ತು. 'ಭಗವಾನ್, ನನ್ನಮೇಲೆ ಮರುಕವಿರಲಿ. ದೇವರೆ, ನನ್ನ ಮೇಲೆ ಕನಿಕರವಿರಲಿ. ಪ್ರಭುವೆ, ನನ್ನಮೇಲೆ ದಯೆಯಿರಲಿ!' ಎಂದವಳು ಕಣ್ಣಿಗೆ ನಿದ್ದೆ ಹತ್ತುವತನಕ ಪುನರಾವೃತ್ತಿಸುತ್ತಿದ್ದಳು.

ಏತನ್ಮಧ್ಯೆ, ಕೆಳಗೆ, ರಾಜಕುಮಾರನ ಸಣ್ಣ ಅಧ್ಯಯನ ಮಂದಿರದಲ್ಲಿ ತಮ್ಮ ಮುದ್ದುಮಗಳ ಬಗ್ಗೆ ತಂದೆ ತಾಯಿಯರು ಜಗಳವಾಡುತ್ತಿದ್ದರು. ಇತ್ತೀಚೆಗೆ ಅಂಥ ಜಗಳಗಳು ಮೇಲಿಂದ ಮೇಲೆ ನಡೆಯುತ್ತಿದ್ದುವು.

'ಏನು? ಏನೆಂದು ಹೇಳುತ್ತೇನೆ, ಕೇಳು' ಎಂದು ರಾಜಕುಮಾರ ತನ್ನ ತೋಳುಗಳನ್ನು ಝುಳಪಿಸುತ್ತ, ಅಳಿಲುಗೆರೆಯ ಮೇಲಂಗಿಯನ್ನು ಮತ್ತೆ ಕೂಡಲೇ ಮೈಮೇಲೆಳೆದುಕೊಳ್ಳುತ್ತ, ಅಬ್ಬರಿಸಿದನು. 'ನಿನಗೆ ಸ್ವಾಭಿಮಾನವಿಲ್ಲ, ಮರ್ಯಾದೆಯಿಲ್ಲ; ಈ ವಿವೇಕಹೀನ ಅಸಹ್ಯರೀತಿಯ ಜೋಡಿ ಕೂಡಾಣಿಕೆಯಿಂದ ನಿನ್ನ ಮಗಳನ್ನು ಅವಮಾನಕ್ಕೀಡುಮಾಡಿ, ಅವಳನ್ನು ವಿನಾಶದ ಪ್ರಪಾತಕ್ಕೆ ತಳ್ಳುತ್ತಿದ್ದೀಯೆ.'

'ದೇವರ ಮೇಲಾಣೆ, ನಾನು ಮಾಡಿದ್ದಾದರೂ ಏನು ಹೇಳಿ' ಎಂದು ರಾಜಕುಮಾರಿ ಕಣ್ಣಲ್ಲಿ ನೀರು ತುಂಬಿಕೊಂಡು ರೋದಿಸಿದಳು.

ತನ್ನ ಮಗಳ ಮಾತುಕತೆಗಳಿಂದ ಸಂತುಷ್ಟಳಾಗಿದ್ದ ಅವಳು ರೂಢಿಯಂತೆ ರಾಜಕುಮಾರನಿಗೆ ಸುರಾತ್ರಿ ಹೇಳುವ ಸಲುವಾಗಿ ಬಂದಿದ್ದಳು. ಲೆವಿನ್‌ನ ವಿವಾಹ ಪ್ರಸ್ತಾಪವನ್ನಾಗಲಿ, ಕಿಟ್ಟಿಯ ನಿರಾಕರಣೆಯನ್ನಾಗಲಿ ತಿಳಿಸುವ ಉದ್ದೇಶ ಅವಳಿಗಿರಲಿಲ್ಲ. ವ್ರಾಂಸ್ಕಿಗೆ ಸಂಬಂಧಿಸಿದಂತೆ ಸಂಗತಿಗಳು ನಿರ್ಣಾಯಕ ಘಟ್ಟವನ್ನು ಮುಟ್ಟಿರುವಂತೆ ಮತ್ತು ಆತನ ತಾಯಿಯ ಆಗಮನಾನಂತರ ಎಲ್ಲವೂ ಅಂತಿಮವಾಗಿ ತೀರ್ಮಾನಗೊಳ್ಳುವಂತೆ ತನಗೆ ತೋರುವುದಾಗಿ ಅವಳು ಸ್ಥೂಲವಾಗಿ ತಿಳಿಸಿದಳು. ಈ ಮಾತು ತನ್ನ ಕಿವಿಯ ಮೇಲೆ ಬೀಳುತ್ತಿದ್ದಂತೆ ರಾಜಕುಮಾರ ಕೋಪಾರೂಢನಾಗಿ ಕೂಗುತ್ತ, ಹೊಲಸು ಭಾಷೆಯನ್ನು ಬಳಸಲಾರಂಭಿಸಿದನು.

'ನೀನೇನು ಮಾಡಿಬಿಟ್ಟೆ? ಏನೆಂದು ಹೇಳುತ್ತೇನೆ, ಕೇಳು: ಮೊದಲನೆಯದಾಗಿ, ನೀನೊಬ್ಬ ವಿವಾಹಾರ್ಥಿಯನ್ನು ಗಾಳಕ್ಕೆ ಕೆಡವಿಕೊಳ್ಳಲು ಬಹಿರಂಗವಾಗಿ ಪ್ರಯತ್ನಿಸು

ತ್ತಿದ್ದೀಯೆ. ಬಹುಬೇಗ ಇಡೀ ಮಾಸ್ಕೊ ನಗರದಲ್ಲಿ ಆ ಸುದ್ದಿ ಮನೆಮಾತಾಗುತ್ತದೆ. ಅದಕ್ಕೆ ಸರಿಯಾದ ಕಾರಣವೂ ಇದೆ. ಸಾಯಂಕಾಲದ ಗೋಷ್ಠಿಗಳನ್ನು ಏರ್ಪಡಿಸುವುದಾದರೆ, ವಿವಾಹಾರ್ಥಿಗಳ ಜತೆಗೆ ಇತರರನ್ನು ಆಹ್ವಾನಿಸು. ತರುಣರನ್ನೆಲ್ಲ ಕರೆ. (ಮಾಸ್ಕೋದಲ್ಲಿಯ ಬಿಸಿರಕ್ತದ ಯುವಕರೆಂಬುದು ರಾಜಕುಮಾರನ ಇಂಗಿತಾರ್ಥ) ಪಿಯಾನೊ ವಾದಕನೊಬ್ಬನನ್ನು ಗೊತ್ತು ಮಾಡು. ಅವರು ನೃತ್ಯದಲ್ಲಿ ಭಾಗವಹಿಸಲಿ. ಇಂದಿನಂತೆ ಬರಿಯ ವಿವಾಹಾರ್ಥಿಗಳನ್ನು ಮಾತ್ರ ಕರೆದು, ಜೋಡಿಕೂಡಾಣಿಕೆಗೆ ಕೈಹಾಕಬೇಡ. ನನಗಂತು ಅದೆಲ್ಲ ಅಸಹ್ಯವಾಗಿ ಕಾಣುತ್ತದೆ. ನೀನಂತು ನಿನಗೇನು ಬೇಕೊ ಅದನ್ನೆ ನಡಸಿದ್ದೀಯೆ. ಪಾಪ, ಹುಡುಗಿಯ ತಲೆ ತಿರುಗಿಹೋಗಿದೆ! ಲೆವಿನ್ ಸಾವಿರ ಪಟ್ಟು ಉತ್ತಮ. ಪೀಟರ್ಸ್‌ಬರ್ಗ್ ಸೊಗಸುಗಾರನಿದ್ದಾನಲ್ಲ! ಅವನಂಥವರು ಯಂತ್ರದ ಪಡಿಯಚ್ಚುಗಳಂತಿದ್ದಾರೆ; ಅಮೂಲ್ಯ ಕಸ! ಅವನೆಂಥ ಕುಲೀನನಾದರೂ, ನನ್ನ ಮಗಳಿಗವನು ಬೇಡ.'

'ಆದರೆ ನಾನು ಮಾಡಿದ್ದಾದರೂ ಏನು?'

'ಅದೇ ...' ಎಂದು ರಾಜಕುಮಾರ ಕೋಪೋಗ್ರನಾಗಿ ಅರಚಿದನು.

'ಒಂದು ಸಂಗತಿ ಮಾತ್ರ ನಿಜ. ನಾನು ನಿಮ್ಮ ಮಾತನ್ನೆ ಕೇಳಿಕೊಂಡಿರುವುದಾದರೆ' ಎಂದು ರಾಜಕುಮಾರಿ ಮಧ್ಯೆ ಬಾಯಿ ಹಾಕಿದಳು. 'ನಮ್ಮ ಮಗಳಿಗೆ ಗಂಡನೇ ಸಿಗುವುದಿಲ್ಲ. ನೀವು ಹೇಳುವುದೇ ಸರಿಯೆನ್ನುವುದಾದರೆ, ನಾವು ಹಳ್ಳಿಯಲ್ಲೇಕೆ ವಾಸಿಸಬಾರದು?'

'ಅದು ಒಳ್ಳೆಯದೆ'

'ಒಂದು ನಿಮಿಷ ಮಾತಾಡಲು ನನಗೆ ಅವಕಾಶ ಕೊಡಿ. ನಾನು ಯಾರನ್ನಾದರೂ ಬಲೆಗೆ ಹಾಕಿಕೊಳ್ಳಲು ಪ್ರಯತ್ನಿಸಿದೆನೆ? ತರುಣನೊಬ್ಬ, ಒಳ್ಳೆಯ ನಡತೆಯ ತರುಣನೊಬ್ಬ ತಾನಾಗಿಯೇ ಅವಳನ್ನು ಪ್ರೀತಿಸುತ್ತಿರುವಾಗ, ಅವಳು ಸಹ ಅವನಿಗೊಲಿದಿರುವಂತೆ ತೋರುವಾಗ ನಾನೇನು ಮಾಡುವುದಿದೆ?....'

'ಹೌದು, ನಿನಗೆ ತೋರುತ್ತದೆ. ನಿಜ! ಅವಳವನನ್ನು ನಿಜಕ್ಕೂ ಪ್ರೀತಿಸುವುದಾದರೆ, ಅವಳನ್ನವನು ಮದುವೆಯಾಗುವ ವಿಚಾರದಲ್ಲಿ ನನ್ನಂತೆಯೇ ಆಲೋಚಿಸುವುದಾದರೆ, ಪರಿಣಾಮ ಏನಾಗಬಹುದು? ಯೋಚಿಸು. ಅಯ್ಯೋ, ನಾನಿದನ್ನೆಲ್ಲ ನೋಡುವುದಕ್ಕೆಂದೇ ಜೀವಿಸಿಕೊಂಡಿರಬೇಕಾಗಿತ್ತೆ? "ಅಹ, ಆತ್ಮವಾದ! ಅಹ, ನೈಸ್! ಅಹ, ನೃತ್ಯಗೋಷ್ಠಿ"' 'ಅಹ' ಎಂಬ ಪದವನ್ನುಚ್ಚರಿಸಿದಾಗಲೆಲ್ಲ ರಾಜಕುಮಾರ ಮೈಬಗ್ಗಿಸಿ ಮಣಿದು ತನ್ನ ಮಡದಿಯನ್ನಣಕಿಸುತ್ತಿದ್ದನು. 'ಕಿಟ್ಟಿಯ ಇಡೀ ಬಾಳನ್ನೆಲ್ಲ ನಾವು ಸಂಕಟಕ್ಕೆ ಗುರಿಮಾಡುತ್ತಿರುವ ರೀತಿಯಿದು. ಅವಳಿದನ್ನು ನಿಜಕ್ಕೂ ಮನಸ್ಸಿಗೆ ಹಚ್ಚಿಕೊಳ್ಳಬಹುದು."

'ಆ ರೀತಿ ನೀವು ಯೋಚಿಸಲು ಕಾರಣವೇನು?'

'ನಾನು ಯೋಚಿಸುತ್ತಿಲ್ಲ, ನನಗೆ ಗೊತ್ತಿದೆ. ಅಂಥ ವಿಷಯಗಳು ಗಂಡಸರ ಕಣ್ಣಿಗೆ ಸ್ಪಷ್ಟವಾಗಿ ಗೋಚರಿಸುತ್ತವೆ; ಹೆಂಗಸರ ಕಣ್ಣಿಗೆ ಸಾಧ್ಯವಿಲ್ಲ. ಗಂಭೀರೋದ್ದೇಶದ ಮನುಷ್ಯನನ್ನು ನಾನು ಗುರುತಿಸಬಲ್ಲೆ. ಅಂಥವರಲ್ಲಿ ಲೆವಿನ್ ಒಬ್ಬ. ನಿನ್ನ ಸೊಗಸು-

ಗಾರರನ್ನು, ಜಂಬದ ಹುಂಜಗಳನ್ನು ನಾನು ಬಲ್ಲೆ. ವಿನೋದದಲ್ಲಿ ಹೊತ್ತು ಕಳೆದು ಖುಷಿಪಟ್ಟು, ತೆಪ್ಪಗಾಗುತ್ತಾರೆ.'

'ಎಂಥೆಂಥದೋ ಅಸಂಗತ ಯೋಚನೆ ನಿಮ್ಮ ತಲೆಯನ್ನು ಹೊಕ್ಕಿತೆಂದರೆ!'

'ನನ್ನ ಮಾತಿನ ಅರ್ಥ ನಿನಗೆ ತಿಳಿಯುವ ಹೊತ್ತಿಗೆ ಕಾಲ ಮೀರುತ್ತದೆ. ಡಾಲಿಯ ವಿಷಯ ಹಾಗೆಯೇ ಆಯಿತು.'

'ಓ, ಆ ವಿಷಯವನ್ನೆತ್ತಬೇಡಿ' ಎಂದು ರಾಜಕುಮಾರಿ ಅವಸರವಾಗಿ ಮಾತು ತೂರಿಸಿದಳು. ತನ್ನ ನತದೃಷ್ಟೆ ಡಾಲಿಯ ನೆನಪಾಗುತ್ತಿದ್ದಂತೆ ಅವಳು ಬೆದರಿದಳು.

'ಭೇಷ್. ಸುರಾತ್ರಿ'

ಇಬ್ಬರೂ ಪರಸ್ಪರ ಕ್ರೂಶೆಯ ಸಂಪ್ರದಾಯವನ್ನು ಮುಗಿಸಿ, ಮುತ್ತುಗಳನ್ನು ವಿನಿಮಯ ಮಾಡಿಕೊಂಡು, ತಂತನ್ನ ಅಭಿಪ್ರಾಯವೇ ಸರಿಯೆಂದು ಇಬ್ಬರೂ ಸಂಕಲ್ಪಿಸಿ ಕೊಂಡು, ತಂತಮ್ಮ ಕೋಣೆಗಳಿಗೆ ಹೋದರು.

ಆ ಸಂಜೆ ಕಿಟ್ಟಿಯ ಭವಿಷ್ಯ ನಿರ್ಣಯವಾಗಿತ್ತೆಂದೂ, ವ್ರಾಂಸ್ಕಿಯ ಉದ್ದೇಶ ಸಂದೇಹ ದೂರವಾಗಿತ್ತೆಂದೂ ರಾಜಕುಮಾರಿಗೆ ಮೊದಲು ಮನದಟ್ಟಾಯಿತು. ಆದರೆ ತನ್ನ ಗಂಡನ ಮಾತುಗಳು ಅವಳನ್ನು ತಬ್ಬಿಬ್ಬುಗೊಳಿಸಿದುವು. ತನ್ನ ಕೋಣೆಯನ್ನವಳು ಪ್ರವೇಶಿಸುತ್ತಿದ್ದಂತೆ ಭವಿಷ್ಯದ ಅನಿಶ್ಚಯತೆಗಾಗಿ ತಳಮಳಗೊಂಡು ಕಿಟ್ಟಿಯಂತೆಯೆ ಅವಳು ಸಹ 'ದೇವರ ಅನುಗ್ರಹವಿರಲಿ, ಭಗವಂತನ ದಯೆಯಿರಲಿ, ಪ್ರಭುವಿನ ಕೃಪೆ ಯಿರಲಿ' ಎಂದು ತನ್ನಷ್ಟಕ್ಕೆ ತಾನೆ ಪುನರುಕ್ತಿಸಿಕೊಂಡಳು.

೧೬

ವ್ರಾಂಸ್ಕಿಗೆ ನಿಜವಾದ ಕೌಟುಂಬಿಕ ಜೀವನದ ಅನುಭವವಿರಲಿಲ್ಲ. ಅವನ ತಾಯಿ ತಾರುಣ್ಯದಲ್ಲಿ ಉಜ್ವಲ ಸಮಾಜ ಸ್ತ್ರೀಯಾಗಿದ್ದಳು. ವೈವಾಹಿಕ ಜೀವನಾವಧಿಯಲ್ಲಿ ಮತ್ತು ತದನಂತರ ತನ್ನ ಹಲವು ಬಗೆಯ ಪ್ರಣಯವಿಲಾಸಗಳಿಂದಾಗಿ ಆಧುನಿಕ ಸಂಪ್ರದಾಯದ ಜಗತ್ತಿನಲ್ಲವಳು ಸುಪ್ರಸಿದ್ಧಳಾಗಿದ್ದಳು. ತಂದೆಯ ನೆನಪೆ ಅವನಿಗೆ ಸರಿಯಾಗಿರಲಿಲ್ಲ. ಬಾಲ ಸೈನಿಕರ ತರಬೇತಿದಳದಲ್ಲವನು ಶಿಕ್ಷಣ ಪಡೆದಿದ್ದನು.

ಯಶಸ್ವಿಯಾಗಿ ಶಿಕ್ಷಣ ಮುಗಿಸಿ, ತರುಣ ಅಧಿಕಾರಿಯಾಗಿ ಶಾಲೆಯಿಂದ ಹೊರ ಬಂದ ನಂತರ, ಕೂಡಲೇ ಪೀಟರ್ಸ್‌ಬರ್ಗ್‌ನ ಶ್ರೀಮಂತ ಯೋಧರ ವೃತ್ತವನ್ನು ಪ್ರವೇಶಿಸಿ ದನು. ಅವನು ಮೇಲಿಂದ ಮೇಲೆ ಪೀಟರ್ಸ್‌ಬರ್ಗ್ ಸಮಾಜಕ್ಕೆ ಹೋಗುತ್ತಿದ್ದರೂ, ಅವನ ಪ್ರಣಯ ವ್ಯವಹಾರಗಳೆಲ್ಲ ಯಾವಾಗಲೂ ಸಮಾಜದ ಹೊರಗೆ ನಡೆಯು ತ್ತಿದ್ದುವು.

ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಅಸಭ್ಯವೂ ಭೋಗಪ್ರದವೂ ಆದ ಜೀವನವನ್ನು ನಡಸಿದನಂತರ ಮಾಸ್ಕೋದಲ್ಲಿ ತನ್ನ ವರ್ಗಕ್ಕೆ ಸೇರಿದ, ತನ್ನನ್ನು ಪ್ರೀತಿಸುತ್ತಿದ್ದ ಮೃದು ಮಧುರ ಮುಗ್ಧ ಕನ್ಯೆಯೊಡನೆಯ ನಿಕಟಸಂಪರ್ಕದ ಆನಂದಾನುಭವವನ್ನು ಮೊತ್ತ ಮೊದಲ ಬಾರಿಗೆ ಅವನು ಪಡೆದಿದ್ದನು. ಕಿಟ್ಟಿಯೊಡನೆಯ ಸಂಬಂಧದಲ್ಲಿ ಏನೇನೂ ಅಪಾಯ ಸಂಭವಿಸಲಾರದೆಂಬ ಸಂಗತಿ ಅವನ ಮನಸ್ಸಿಗೆ ಹೊಳೆದಿರಲಿಲ್ಲ. ನೃತ್ಯಗೋಷ್ಠಿ

ಯಲ್ಲಿ ಅವಳನ್ನೇ ತನ್ನ ಜತೆಗೆ ಆರಿಸಿಕೊಳ್ಳುತ್ತಿದ್ದನು; ಅವಳ ಮನೆಗೆ ಆಗಾಗ್ಗೆ ಭೇಟಿ ಕೊಡುತ್ತಿದ್ದನು. ಸಮಾಜದಲ್ಲಿ ಜನ ಸಾಮಾನ್ಯವಾಗಿ ಮಾತಾಡಿಕೊಳ್ಳುವಂತೆ ಅವನು ಸಹ ಅವಳೊಡನೆ ಮಾತಾಡುತ್ತಿದ್ದನು; ಅವನ ಮಾತೆಲ್ಲ ಅಸಂಬದ್ಧವಾಗಿರುತ್ತಿದ್ದುವು; ಆದರವನು ಅಪ್ರಜ್ಞಾಪೂರ್ವಕವಾಗಿ ಅವನ್ನು ಬಳಸುತ್ತಿದ್ದನು; ಕಿಟ್ಟಿಯಂತು ಆ ಮಾತುಗಳಲ್ಲಿ ವಿಶೇಷಾರ್ಥವನ್ನು ಕಾಣುತ್ತಿದ್ದಳು. ಯಾರ ಮುಂದೆಯಾದರೂ ಹೇಳಬಹುದಾದ ಮಾತುಗಳನ್ನೆ ಅವನು ಬಳಸುತ್ತಿದ್ದನು. ಆದರೂ ತನ್ನ ಮೇಲಣ ಅವಳ ಅವಲಂಬನ ದಿನೇದಿನೇ ಹೆಚ್ಚುತ್ತಿದ್ದುದಾಗಿ ಅವನು ಭಾವಿಸಿದನು. ಈ ಭಾವನೆ ಬಲವಾದಂತೆಲ್ಲ ಅವನ ಸಂವೇದನೆಗಳು ಹೆಚ್ಚುಹೆಚ್ಚು ಆಪ್ಯಾಯಮಾನವಾಗಿ ತೋರುತ್ತಿದ್ದುವು; ಅವಳ ಬಗೆಗಿನ ಮನಸ್ಸು ಕೋಮಲವಾಗುತ್ತಿತ್ತು. ಕಿಟ್ಟಿಯ ಸಂಬಂಧದ ಅವನ ಈ ನಡೆವಳಿಕೆಯಲ್ಲಿ ವೈಶಿಷ್ಟ್ಯವಿತ್ತೆಂಬ, ವಿವಾಹೋದ್ದೇಶವಿಲ್ಲದೆ ಆ ಯುವತಿಯೊಡನೆ ತಾನು ಪ್ರಣಯ ವಿಲಾಸದಲ್ಲಿ ತೊಡಗಿದ್ದೆನೆಂಬ, ತನ್ನಂಥ ವರ್ಚಸ್ಸಿನ ಯುವಕರು ಸಾಮಾನ್ಯವಾಗಿ ಅನುಸರಿಸುತ್ತಿದ್ದ ಕೆಟ್ಟಪದ್ಧತಿಗಳಲ್ಲಿ ಅಂಥ ಪ್ರಣಯ ವಿಲಾಸವೊಂದೆಂಬ ವಿಷಯ ಅವನಿಗೆ ಗೊತ್ತಿರಲಿಲ್ಲ. ಆ ವಿಶಿಷ್ಟ ಪ್ರಣಯವಿಲಾಸವನ್ನು ತಾನು ಮೊದಲಿಗೆ ಕಂಡುಕೊಂಡಿದ್ದುದಾಗಿ ತಿಳಿದುಕೊಂಡು, ಆ ಕಾಣ್ಕೆಯ ಬಗ್ಗೆ ಆನಂದಪರವಶನಾಗಿದ್ದನು.

ಆ ದಿನ ಸಾಯಂಕಾಲ ಅವಳ ತಂದೆ ತಾಯಿಯರ ನಡುವೆ ನಡೆದಿದ್ದ ಸಂಭಾಷಣೆಯನ್ನವನು ಕೇಳಿಸಿಕೊಂಡಿದ್ದರೆ, ಕುಟುಂಬದ ದೃಷ್ಟಿಕೋನದಿಂದ ಸಂಗತಿಗಳನ್ನು ಪರಿಶೀಲಿಸುವ ಸಾಮರ್ಥ್ಯವನ್ನವನು ಪಡೆದಿದ್ದರೆ, ತಾನು ಕಿಟ್ಟಿಯನ್ನು ಮದುವೆಯಾಗದಿದ್ದರೆ ಅವಳಿಗೆ ತುಂಬ ವ್ಯಥೆಯಾಗುತ್ತಿತ್ತೆಂಬುದು ಅವನಿಗೆ ಗೊತ್ತಾಗಿದ್ದರೆ, ಅವನಿಗೆ ಆಶ್ಚರ್ಯವಾಗುತ್ತಿದ್ದುದು ಮಾತ್ರವಲ್ಲ, ನಿಜಕ್ಕೂ ಅವನದನ್ನು ನಂಬುತ್ತಿರಲಿಲ್ಲ. ತನಗೆ ಮಾತ್ರವಲ್ಲ ಅವಳಿಗೂ ಅಂಥ ಸವಿಯಾದ, ಮಹತ್ತರವಾದ ಆನಂದವನ್ನೊದಗಿಸಿದ ಸಂಬಂಧದಲ್ಲಿ ಏನೂ ತಪ್ಪಿರಲಾರದೆಂದವನು ಭಾವಿಸಿದನು. ಅವಳನ್ನು ಮದುವೆಯಾಗಬೇಕಾದೀತೆಂಬ ವಿಷಯವನ್ನು ಸಹ ಅವನು ನಂಬಲಿಲ್ಲ.

ವಿವಾಹ ಸಾಧ್ಯತೆಯ ಬಗ್ಗೆಯೂ ಅವನಿಗೆ ನಂಬಿಕೆಯಿರಲಿಲ್ಲ. ಕೌಟುಂಬಿಕ ಜೀವನದ ಬಗ್ಗೆ ಮಾತ್ರವಲ್ಲ, ಕುಟುಂಬದ ಬಗ್ಗೆಯೂ ಅವನಿಗೆ ಜುಗುಪ್ಸೆಯಿತ್ತು. ತಾನು ಸಂಬಂಧವಿಟ್ಟುಕೊಂಡಿದ್ದ ಬ್ರಹ್ಮಚಾರಿಗಳ ಜಗತ್ತಿನ ಸಾಮಾನ್ಯಾಭಿಪ್ರಾಯದ ಪ್ರಕಾರ, ಕುಟುಂಬಿಯ ಬಗ್ಗೆ, ವಿಶೇಷವಾಗಿ ಗಂಡನೆಂಬ ಪ್ರಾಣಿಯ ಬಗ್ಗೆ ಪರಕೀಯವೂ, ವಿಕರ್ಷಕವೂ, ಹಾಸ್ಯಾಸ್ಪದವೂ ಆದ ಭಾವನೆಯಿತ್ತು. ಅವಳ ತಂದೆ ತಾಯಿಯರ ಮನಸ್ಸಿನ ಬಗ್ಗೆ ಅವನಿಗೆ ಕಿಂಚಿತ್ತರಿವಿಲ್ಲದಿದ್ದರೂ, ಆ ದಿನ ಸಂಜೆ ತನ್ನ ಮತ್ತು ಕಿಟ್ಟಿಯರ ನಡುವೆ ನಿಗೂಢವಾದ ಆತ್ಮೀಯ ಸಂಬಂಧ ಪ್ರಬಲವಾಗುತ್ತಿತ್ತೆಂದೂ, ಆ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳಬೇಕೆಂದೂ, ಶರ್‌ಬತ್‌ಸ್ಕಿಯವರ ಮನೆಯಿಂದ ಹೊರಟಾಗ ಅವನಿಗರಿವಾಯಿತು. ಏನುಕ್ರಮ ತೆಗೆದುಕೊಳ್ಳಬಹುದೆಂಬುದರ ಬಗ್ಗೆ ಏನೊಂದುಪಾಯವೂ ಅವನ ಮನಸ್ಸಿನಲ್ಲಿ ಹೊಳೆದಿರಲಿಲ್ಲ.

'ಆದರ ಸೊಗಸೇನೆಂದರೆ' ಎಂದವನು ಶರ್‌ಬತ್‌ಸ್ಕಿಯರ ಮನೆಯಿಂದ ಹಿಂದಿರುಗುತ್ತಿದ್ದಾಗ ಆಲೋಚಿಸಿದನು. ಇಡೀ ಸಂಜೆ ಹೊಗೆ ಸೇದಿರಲಿಲ್ಲವಾದ್ದರಿಂದ, ಇಕೆಗೆ ತನ್ನ

ಮೇಲಣ ಅವಳ ಪ್ರೇಮದಿಂದಾಗಿ ಅವನ ಹೃದಯದಲ್ಲಿ ನೂತನರೀತಿಯ ಮಾರ್ದವತೆ ಅಂಕುರಿಸಿದ್ದುದರಿಂದ, ಎಂದಿನಂತೆ ನಿರ್ಮಲವೂ ಚೈತನ್ಯದಾಯಿಯೂ ಆದ ಮಧುರಭಾವದಿಂದ ಅವನು ಹೊರಟಿದ್ದನು. 'ಅದರ ಸೊಗಸೇನೆಂದರೆ, ಅವಳ ಬಾಯಿಂದಾಗಲೀ ನನ್ನ ಬಾಯಿಂದಾಗಲೀ ಒಂದು ಶಬ್ದವೂ ಹೊರಗೆ ಬಂದಿರಲಿಲ್ಲ. ಆದರೂ ನೋಟದ ಮತ್ತು ಧ್ವನಿಗತಿಯ ಭಾಷೆ ಸಮರ್ಗ್ರವಾಗುತ್ತಿತ್ತು. ತನ್ನನ್ನವಳು ಪ್ರೀತಿಸುತ್ತಿದ್ದುದಾಗಿ ಹಿಂದಿಗಿಂತ ಸ್ಪಷ್ಟವಾಗಿ ಅವಳ ಆ ಭಾಷೆಯಿಂದ ಸ್ಪಷ್ಟವಾಗುತ್ತಿತ್ತು. ಅದೆಂತು ಮಧುರವಾಗಿತ್ತು, ಎಷ್ಟು ಸರಳವಾಗಿತ್ತು, ಎಲ್ಲಕ್ಕಿಂತ ಮಿಗಿಲಾಗಿ ಅದೆಷ್ಟು ವಿಶ್ವಸನೀಯವಾಗಿತ್ತು. ಅದರಿಂದಾಗಿ ನಾನು ಉತ್ತಮನಾಗಿರುವಂತೆ, ಶುದ್ಧನಾಗಿರುವಂತೆ ಭಾವಿಸುತ್ತೇನೆ. ನನ್ನ ವಕ್ಷದಲ್ಲಿ ಮಿಡಿಯುತ್ತಿರುವ ಹೃದಯವೊಂದಿದೆಯೆಂಬುದು ನನಗರಿವಾಗುತ್ತಿದೆ. ನನ್ನೊಳಗೆ ಒಳ್ಳೆಯತನ ಸಾಕಷ್ಟು ಪ್ರಮಾಣದಲ್ಲಿದೆಯೆಂಬುದನ್ನು ನಾನು ಬಲ್ಲೆ. ಓ, ಆ ಮಧುರ ಪ್ರೇಮಮಯಿಾ ನೇತ್ರಗಳು "ಓ ಸಿಜಕ್ಕೂ ಹೌದು" ಎಂದವಳು ನುಡಿದಾಗ....

'ಹಾಗಾದರೆ, ಮುಂದೇನು? ಓ, ಏನೂ ಇಲ್ಲ. ನನಗೂ ಒಳ್ಳೆಯದು, ಅವಳಿಗೂ ಒಳ್ಳೆಯದೆ' ಸಂಜೆಯ ಉಳಿದ ಭಾಗವನ್ನು ಹೇಗೆ ಕಳೆಯಬಹುದೆಂಬುದರ ಕಡೆಗೆ ಅವನ ಗಮನ ತಿರುಗಿತು.

ತಾನು ಹೋಗಬಹುದಾದ ಜಾಗಗಳನ್ನವನು ಮನಸ್ಸಿನಲ್ಲಿಯೇ ಚಿತ್ರಿಸಿಕೊಂಡನು. ಕ್ಲಬ್ಬಿಗೆ?—ಇಗ್ನತೊವ್‌ನೊಂದಿಗೆ ಒಂದು ಬಾಟಲಿ ಶಾಂಪೇನ್ ಅನ್ನೂ ಒಂದು ಕೈ ಬೆಜಿಕ್ ಆಟವನ್ನೂ ಮುಗಿಸಬಹುದಲ್ಲವೆ? ಇಲ್ಲ, ನಾನಲ್ಲಿಗೆ ಹೋಗುವುದಿಲ್ಲ. ಪುಷ್ಪಸೌಧಕ್ಕೋ?—ಇಲ್ಲ, ಅಲ್ಲಿ ಅಬ್ಲಾನ್‌ಸ್ಕಿ ಭೇಟಿಯಾಗುತ್ತಾನೆ—ಹಾಡು ಕಾಡುಹರಟೆ ಅಷ್ಟೇ. ಥುತ್, ಅದು ರೋಸಿಹೋಗಿದೆ. ಆದ್ದರಿಂದ ಶರ್‌ಬತ್‌ಸ್ಕಿಯರ ಮನೆಯೇ ನನಗೆ ಇಷ್ಟ. ಅಲ್ಲಿಗೆ ಹೋದದ್ದಾದರೆ ನಾನು ಹೊಸಬನಾಗುತ್ತೇನೆ. ಇರಲಿ, ಈಗ ಮನೆಗೆ ಹೋಗುತ್ತೇನೆ.' ದುಸ್ಸೊತ್ ಹೋಟಲಿನ ತನ್ನ ಕೋಣೆಗವನು ನೇರವಾಗಿ ಹೋದನು, ತನ್ನ ಕೋಣೆಗೆ ಊಟ ತರುವಂತೆ ಹೇಳಿದನು, ಬಟ್ಟೆ ಬದಲಾಯಿಸಿದನು, ತಲೆದಿಂಬಿನ ಮೇಲೆ ತಲೆಯಿಟ್ಟಕೂಡಲೇ ಅವನು ಗಾಢ ನಿದ್ರೆಯಲ್ಲಿ ಮುಳುಗಿದನು.

೧೭

ಮಾರನೆಯ ದಿನ ಬೆಳಗ್ಗೆ ೧೧ ಗಂಟೆಗೆ ತನ್ನ ತಾಯಿಯನ್ನೆದುರುಗೊಳ್ಳುವ ಸಲುವಾಗಿ ವ್ರಾನ್ಸ್ಕಿ ಪೀಟರ್ಸ್‌ಬರ್ಗ್ ರೈಲು ನಿಲ್ದಾಣಕ್ಕೆ ಹೋದನು. ಸೋಪಾನ ಪಂಕ್ತಿಯಲ್ಲಿ ಅವನಿಗೆ ಮೊದಲೆದುರಾದ ವ್ಯಕ್ತಿಯೇ ಅಬ್ಲಾನ್‌ಸ್ಕಿ. ಅದೇ ರೈಲಿನಲ್ಲಿ ಬರಲಿದ್ದ ತನ್ನ ತಂಗಿಯನ್ನೆದುರುಗೊಳ್ಳುವ ಸಲುವಾಗಿ ಅಬ್ಲಾನ್‌ಸ್ಕಿ ಅಲ್ಲಿಗೆ ಬಂದನು.

'ಓ, ಯಾರನ್ನೆದುರುಗೊಳ್ಳಲು ಬಂದಿದ್ದೀರಿ, ಸ್ವಾಮಿ?' ಎಂದು ಅಬ್ಲಾನ್‌ಸ್ಕಿ ಅವನನ್ನು ಕೂಗಿದನು.

'ನನ್ನಮ್ಮ' ಎಂದು ವ್ರಾನ್ಸ್ಕಿ ಉತ್ತರಿಸಿದನು. ಅಬ್ಲಾನ್‌ಸ್ಕಿಯನ್ನೆದುರುಗೊಂಡಾಗ ಎಲ್ಲರಂತೆ ಅವನೂ ಮುಗುಳುನಗೆ ಸೂಸಿದನು. ಅವನು ಅಬ್ಲಾನ್‌ಸ್ಕಿಯ ಕೈ ಕುಲುಕಿದನು.

ಇಬ್ಬರೂ ಒಟ್ಟಿಗೆ ಸೋಪಾನವನ್ನೇರಿದರು. 'ಅವಳು ಸೆಂಟ್ ಪೀಟರ್ಸ್‌ಬರ್ಗ್‌ನಿಂದ ಬರುತ್ತಿದ್ದಾಳೆ.'

'ನಿಮಗಾಗಿ ನಾನು ಬೆಳಗ್ಗೆ ಎರಡು ಗಂಟೆಯ ತನಕ ಕಾಯುತ್ತಿದ್ದೆ. ಶರ್‌ಬತ್‌ಸ್ಕಿಯರ ಮನೆಯಿಂದ ನೀವೆಲ್ಲಿಗೆ ಹೋದಿರಿ?'

'ಮನೆಗೆ' ಎಂದು ವ್ರಾನ್ಸ್ಕಿ ನುಡಿದನು. 'ಶರ್‌ಬತ್‌ಸ್ಕಿಯರ ಮನೆಯಲ್ಲಿ ಹಾಯಾಗಿ, ಸಂತುಷ್ಟಿಯಿಂದ ಸಂಜೆ ಕಳೆದನಂತರ, ನನಗೆ ಬೇರೆಲ್ಲಿಗೂ ಹೋಗುವ ಮನಸ್ಸಾಗಲಿಲ್ಲ.'

'ಗಗನದಿ ಹಾರಾಡುವ ಪರಿಯಿಂ ಬಲ್ಲೆನು ಗರುಡನನು
ಬಲ್ಲೆನು ಕಂಗಳ ರಾಗದಿನನುರಾಗದೊಳಿಹ ತರುಣನನು'

ಎಂದು ಆಬ್ಲಾನ್‌ಸ್ಕಿ ಇತ್ತೀಚೆಗೆ ಲೆವಿನ್‌ನೊಡನೆ ಮಾತಾಡಿದ್ದ ಧಾಟಿಯಲ್ಲಿಯೇ ಸಾಲಂಕಾರವಾಗಿ ಸೊಲ್ಲಿಸಿದನು.

ಅವನ ವ್ಯಂಗ್ಯೋಕ್ತಿಯನ್ನು ವಿರೋಧಿಸಲಿಲ್ಲವೆಂಬಂತೆ ವ್ರಾನ್ಸ್ಕಿ ನಸುನಕ್ಕು, ವಿಷಯವನ್ನು ಬದಲಾಯಿಸಿದನು. 'ಯಾರಿಗಾಗಿ ಬಂದಿದ್ದೀರಿ?' ಎಂದವನು ಕೇಳಿದನು.

'ನಾನೆ? ಸುಂದರ ಸ್ತ್ರೀಯೊಬ್ಬಳನ್ನು ನೋಡಲು ಬಂದಿದ್ದೇನೆ' ಎಂದು ಆಬ್ಲಾನ್‌ಸ್ಕಿ ಮಾರ್ನುಡಿದನು.

'ಸರಿ, ಸರಿ.'

'ನನ್ನ ತಂಗಿ ಅನ್ನಾ'

'ಅಹ, ಕರೆನಿನ್‌ನ ಹೆಂಡತಿಯಲ್ಲವೆ?' ಎಂದು ವ್ರಾನ್ಸ್ಕಿ ಕೇಳಿದನು.

'ನಿನಗವಳು ಗೊತ್ತಿರಬೇಕೆಂದು ನಂಬಿದ್ದೇನೆ.'

'ಗೊತ್ತಿರಬೇಕೆಂದು ತಿಳಿದಿದ್ದೇನೆ. ಇಲ್ಲ, ಇಲ್ಲ....ನಿಜಕ್ಕೂ ನನಗೆ ನೆನಪಿಲ್ಲ' ಎಂದು ವ್ರಾನ್ಸ್ಕಿ ಅನ್ಯಮನಸ್ಕನಾಗಿ ನುಡಿದನು. ಕರೆನಿನ್‌ನ ಹೆಸರು ಕೇಳಿದೊಡನೆಯೇ ಅವನ ಮನಸ್ಸು ನೀರಸವೂ ಬಿಗುಮಾನವೂ ಆದ ಮುಖವನ್ನು ಅಸ್ಪಷ್ಟವಾಗಿ ಕಲ್ಪಿಸಿಕೊಂಡಿತು.

'ನನ್ನ ಭಾವ ಅಲೆಕ್ಸಿ ಅಲೆಕ್ಸಾಂಡ್ರೊವಿಚ್ ಸುಪ್ರಸಿದ್ಧ ವ್ಯಕ್ತಿ. ಅವನು ನಿಮಗೆ ಗೊತ್ತಿರಬೇಕಲ್ಲವೆ? ಅವನ ಹೆಸರು ಇಡೀ ಜಗತ್ತಿಗೆ ತಿಳಿದಿದೆ.'

'ಅವರನ್ನು ನೋಡಿಯೂ ಬಲ್ಲೆ. ಅವರು ಜಾಣರು, ವಿದ್ವಾಂಸರು, ಹಾಗೂ ಧರ್ಮಶ್ರದ್ಧೆಯುಳ್ಳವರೆಂಬುದನ್ನು ಬಲ್ಲೆ. ಅವರೆಂಥವರೆ ಆಗಿರಲಿ, ಅವರ ಮಾರ್ಗವೇ ಬೇರೆ, ನನ್ನ ಮಾರ್ಗವೇ ಬೇರೆ' ಎಂದು ವ್ರಾನ್ಸ್ಕಿ ಇಂಗ್ಲಿಷಿನಲ್ಲಿ ಹೇಳಿದನು.

'ಓ, ಅವನೊಬ್ಬ ಅಸಾಧಾರಣ ವ್ಯಕ್ತಿ–ತುಸು ಸಂಪ್ರದಾಯವಾದಿ; ಆದರೆ ಸೊಗಸಾದ ವ್ಯಕ್ತಿ' ಎಂದು ಆಬ್ಲಾನ್‌ಸ್ಕಿ ನುಡಿದನು. 'ನಿಜಕ್ಕೂ ಸೊಗಸಾದ ವ್ಯಕ್ತಿ.'

'ಸರಿ, ಸರಿ. ಅವರಿಗೆ ಶುಭವಾಗಲಿ' ಎಂದು ವ್ರಾನ್ಸ್ಕಿ ಮುಗುಳುನಗೆ ಬೀರಿದನು. 'ಅಹ, ನೀನೂ ಬಂದೆಯಾ?' ಎಂದವನು ಬಾಗಿಲಲ್ಲಿ ನಿಂತಿದ್ದ ತನ್ನ ತಾಯಿಯ ಸೇವಕ ಉದ್ದನೆಯ ಮುದಿಯನನ್ನು ಮಾತಾಡಿಸಿದನು. 'ಬಾ, ಇಲ್ಲಿ.'

ಆಬ್ಲಾಂಸ್ಕಿಯ ವ್ಯಕ್ತಿತ್ವಕ್ಕೆ ಮರುಳಾಗದ ಜನರಿರಲಿಲ್ಲ. ವ್ರಾಂಸ್ಕಿಯಾದರೂ ಅಷ್ಟೇ. ಕಿಟ್ಟಿಯ ಸಂಬಂಧದಿಂದಾಗಿ, ಈಗಂತೂ ಆಬ್ಲಾನ್‌ಸ್ಕಿಯಲ್ಲವನು ತುಂಬ ಆಸಕ್ತನಾಗಿದ್ದನು.

'ಭಾನುವಾರ ಪ್ರಸಿದ್ಧ ಗಾಯಕಿಗೆ ಸಂಜೆಯೂಟವನ್ನು ವ್ಯವಸ್ಥೆಗೊಳಿಸಲಾಗುವುದೇನು?' ಎಂದವನು ತುಸು ನಗುತ್ತ, ಆಬ್ಲಾನ್‌ಸ್ಕಿಯ ತೋಳೊಳಗೆ ಕೈಹಾಕಿಕೊಂಡು ಕೇಳಿದನು.

'ಖಂಡಿತವಾಗಿ! ನಾನು ವಂತಿಗೆಯನ್ನು ಸಂಗ್ರಹಿಸುತ್ತಿದ್ದೇನೆ. ಅದಿರಲಿ, ನಿನ್ನೆ ಸಂಜೆ ನೀವು ನನ್ನ ಗೆಳೆಯ ಲೆವಿನ್‌ನನ್ನು ಭೇಟಿಮಾಡಿದಿರೇನು?' ಎಂದು ಆಬ್ಲಾನ್‌ಸ್ಕಿ ಪ್ರಶ್ನಿಸಿದನು.

'ಮಾಡಿದೆ. ಆದರೆ ಯಾವ ಕಾರಣಕ್ಕೋ ಅವರು ಬಹುಬೇಗ ಆ ಜಾಗವನ್ನು ಬಿಟ್ಟರು.'

'ಅವನೊಬ್ಬ ಶ್ರೇಷ್ಠ ತರುಣ' ಎಂದು ಆಬ್ಲಾನ್‌ಸ್ಕಿ ನುಡಿದನು. 'ನಿಮಗೆ ಹಾಗನಿಸುವುದಿಲ್ಲವೆ?'

'ಆ ಬಗ್ಗೆ ನಾನೇನೂ ಹೇಳಲಾರೆ' ಎಂದು ವ್ರಾಂಸ್ಕಿ ಉತ್ತರಿಸಿದನು. 'ನಾನೀಗ ಯಾರೊಂದಿಗೆ ಮಾತಾಡುತ್ತಿದ್ದೇನೆಯೊ ಅವರನ್ನು ಬಿಟ್ಟು, ಉಳಿದ ಮಾಸ್ಕೊ ಜನ ತುಂಬ ಸೂಕ್ಷ್ಮಪ್ರಕೃತಿಯವರಂತೆ ಕಾಣುತ್ತಾರಲ್ಲ, ಏಕೆ?' ಎಂದವನು ಗೇಲಿಮಾಡಿದನು. ಅವರು ಯಾವಾಗಲೂ ಸ್ವಸಮರ್ಥನೆಯಲ್ಲಿ ಆಸಕ್ತರಾಗಿರುತ್ತಾರೆ; ಸುಲಭವಾಗಿ ತಾಳ್ಮೆ ಕಳೆದುಕೊಳ್ಳುತ್ತಾರೆ; ತಮ್ಮೊಡನೆ ಸರಸ ಸಲ್ಲದೆಂಬ ಭಾವನೆಯನ್ನು ಮೂಡಿಸುವ ಸಲುವಾಗಿ ಪ್ರಯತ್ನಿಸುವಂತೆ ತೋರುತ್ತದೆ....'

'ಹೌದು. ಅದು ನಿಜ' ಎಂದು ಆಬ್ಲಾನ್‌ಸ್ಕಿ ಉಲ್ಲಾಸದಿಂದ ನಕ್ಕನು.

'ರೈಲು ಬರುವ ಹೊತ್ತಾಯಿತೇನು?' ಎಂದು ವ್ರಾಂಸ್ಕಿ ನಿಲ್ದಾಣದ ನೌಕರನನ್ನು ಕೇಳಿದನು.

'ಕೈಮರ ಬಿದ್ದಿದೆಯಲ್ಲ' ಎಂದು ನೌಕರ ಉತ್ತರಿಸಿದ.

ಪೂರ್ವಭಾವೀ ಸಿದ್ಧತೆಗಳ ತರಾತುರಿಯಿಂದಾಗಿ, ಕೂಲಿಗಳ ನೂಕುನುಗ್ಗಲುಗಳಿಂದಾಗಿ, ಪೋಲೀಸ್ ಪೇದೆಗಳ ಮತ್ತು ನಿಲ್ದಾಣದ ಸೇವಕರ ಆತುರದಿಂದಾಗಿ, ಪ್ರಯಾಣಿಕರ ಬಂಧುಗಳ ಮತ್ತು ಸ್ನೇಹಿತರ ಸಸಂಭ್ರಮ ಸಡಗರಗಳಿಂದಾಗಿ ರೈಲಿನ ಆಗಮನ ಸನ್ನಿಹಿತವಾಯಿತೆಂದು ಸುಸ್ಪಷ್ಟವಾಯಿತು. ಕುರಿದೊಗಲ ಹೊದಿಕೆಯ, ಮೃದುವಾದ ಫೆಲ್ಟ್ ಬೂಟುಗಳ ಕಾರ್ಮಿಕರು ಬಾಗುದಾರಿಯ ಹಳಿಗಳನ್ನು ದಾಟುತ್ತಿದ್ದ ದೃಶ್ಯ ಕಾಣಿಸುತ್ತಿತ್ತು. ದೂರದ ಹಳಿಗಳ ಮೇಲೆ ಕತ್ತೆ ಎಂಜಿನ್ನು ಹುಯ್ಲೆಬ್ಬಿಸುತ್ತಿತ್ತು; ಭಾರವಾದ ಸಾಮಾನು ಬೋಗಿಗಳನ್ನು ಪಕ್ಕದ ಕಂಬಿಗಳಿಗೆ ಬದಲಾಯಿಸುತ್ತಿದ್ದ ಬೊಬ್ಬೆ ಕೇಳಿಸುತ್ತಿತ್ತು.

'ಇಲ್ಲ' ಎಂದು ನುಡಿದ ಆಬ್ಲಾನ್‌ಸ್ಕಿ ಕಿಟ್ಟಿಯ ಬಗೆಗಿನ ಲೆವಿನ್‌ನ ಉದ್ದೇಶಗಳನ್ನು ವ್ರಾಂಸ್ಕಿಗೆ ತಿಳಿಸಲೆಳಸಿದನು. 'ಇಲ್ಲ, ನನ್ನ ಗೆಳೆಯ ಲೆವಿನ್‌ನ ಬಗ್ಗೆ ನಿನಗೆ ತಪ್ಪು ತಿಳಿವಳಿಕೆಯಿದೆ. ಅವನೊಬ್ಬ ಶೀಘ್ರಕೋಪಿ ಕೆಲವೊಮ್ಮೆ ಅವನು ಹಿಡಿಸು

ವುದಿಲ್ಲ, ನಿಜ. ಆದರೆ ಸಾಮಾನ್ಯವಾಗಿ ಅವನೊಬ್ಬ ಉತ್ಕೃಷ್ಟ ವ್ಯಕ್ತಿಯೆಂದು ಧಾರಾಳ ವಾಗಿ ಹೇಳಬಲ್ಲೆ. ಅವನ ಪ್ರಾಮಾಣಿಕತೆ ಅಸಾಧಾರಣವಾದುದು; ಸತ್ಯನಿಷ್ಠೆ ಅಪ್ರತಿಮವಾದುದು; ಅವನದು ಚಿನ್ನದಂಥ ಹೃದಯ. ಆದರೆ ನಿನ್ನೆ ಸಂಜೆಯ ಸಂದರ್ಭ ವಿಶಿಷ್ಟವಾದುದಾಗಿತ್ತು' ಎಂದು ಆಬ್ಲಾನ್‌ಸ್ಕಿ ಅರ್ಥಪೂರ್ಣ ಮಂದಹಾಸ ಬೀರಿದನು. ಹಿಂದಿನ ದಿನ ಲೆವಿನ್‌ನ ಬಗ್ಗೆ ತಾನು ತಳೆದಿದ್ದ ಪ್ರಾಮಾಣಿಕ ಸಹಾನುಭೂತಿಯನ್ನೀಗ ಮರೆತು, ವ್ರಾಂಸ್ಕಿಯ ಕಡೆಗೆ ವಾಲಿದನು. 'ಹೌದು, ನಿನ್ನೆ ಸಂಜೆಯ ಅವನ ಸಮಾಧಾನಕ್ಕೆ ಹಾಗೂ ಅಸಮಾಧಾನಕ್ಕೆ ಕಾರಣವಿತ್ತು.'

ವ್ರಾಂಸ್ಕಿ ನಡೆ ನಿಲ್ಲಿಸಿ, ನೇರವಾಗಿ ಪ್ರಶ್ನೆ ಹಾಕಿದನು: 'ಏನದು? ನಿನ್ನೆ ರಾತ್ರಿ ಅವರು ನಿಮ್ಮ ನಾದಿನಿಯ ಮುಂದೆ ವಿವಾಹ ಪ್ರಸ್ತಾಪವನ್ನೆತ್ತಿದರೇನು?'

'ಸಾಧ್ಯವಿದ್ದೀತು' ಎಂದು ಆಬ್ಲಾನ್‌ಸ್ಕಿ ನುಡಿದನು. 'ನಿನ್ನೆ ದಿನ ಅದಕ್ಕಾಗಿಯೇ ಹೋಗಿರಬೇಕೆಂದು ನಾನು ಊಹಿಸಿದೆ. ಹೌದು, ಅವನು ಮುಂಚಿತವಾಗಿಯೇ ಅಲ್ಲಿಂದ ಹೊರಟದ್ದಾದರೆ, ಅವನು ದುಗುಡದಿಂದ ಕೂಡಿದ್ದರೆ, ಅವನು ಆ ವಿಷಯವನ್ನೆತ್ತಿರಬೇಕೆನಿಸುತ್ತದೆ. ಅವನು ಬಹುದಿನಗಳಿಂದ ಅವಳನ್ನು ಪ್ರೀತಿಸುತ್ತಿದ್ದಾನೆ; ಅವನ ಬಗ್ಗೆ ನನಗೆ ತುಂಬ ಮರುಕವಾಗುತ್ತದೆ.'

'ಓ, ಹಾಗೊ!.... ಅದೇನೇ ಇರಲಿ, ಅವಳು ತನಗನುರೂಪನಾದ ಉತ್ತಮ ಜೋಡಿಯನ್ನು ಹುಡುಕುತ್ತಿರಬೇಕೆಂದು ನನಗನಿಸುತ್ತಿದೆ.' ಎಂದು ವ್ರಾಂಸ್ಕಿ ಮೈಯನ್ನು ನೆಟ್ಟಗೆ ಮಾಡಿಕೊಂಡು, ಮತ್ತೆ ನಡೆದಾಡಲನುವಾದನು. 'ನನಗಂತು ಅವರ ವಿಷಯ ಏನೇನೂ ಗೊತ್ತಿಲ್ಲ.' ಎಂದವನು ಮಾತು ಸೇರಿಸಿದನು. 'ಹೌದು, ಅಂಥ ಸ್ಥಾನದಲ್ಲಿರುವಾಗ ಕಿರಿಕಿರಿಯಾಗುತ್ತದೆ. ಆದ್ದರಿಂದ ಹಲವರು ಕೆಟ್ಟ ಹುಡುಗಿಯರ ಸಂಬಂಧವನ್ನಪೇಕ್ಷಿಸುತ್ತಾರೆ. ಅವರಲ್ಲಿ ನಿನ್ನ ಬೇಳೆ ಬೇಯಲಿಲ್ಲವೆಂದರೆ, ನಿನ್ನಲ್ಲಿ ಸಾಕಷ್ಟು ಹಣವಿಲ್ಲವೆಂದೇ ಲೆಕ್ಕ. ಆದರೆ ಇತರರ ಜೊತೆಯಲ್ಲಿ ನಿನ್ನ ಪ್ರತಿಷ್ಠೆ ಅಪಾಯ ಸ್ಥಿತಿಯಲ್ಲಿರುತ್ತದೆಂದೇ ಹೇಳಬೇಕು. ಅಗೋ, ರೈಲು ಬಂದೇ ಬಿಟ್ಟಿತು.'

ರೈಲು ದೂರದಲ್ಲಿಯೇ ಸಿಳ್ಳು ಊದಿತು. ಕೆಲವು ನಿಮಿಷಗಳ ನಂತರ ಎಂಜಿನ್ನು ನುಗ್ಗುತ್ತಿದ್ದಂತೆ ನಿಲ್ದಾಣದ ಜಗಲಿ ವಿಕಂಪಿಸಿತು. ಎಂಜಿನ್ನು ಕಾರುತ್ತಿದ್ದ ಹೊಗೆಯ ಮೋಡಗಳು ಘನಹಿಮದ ಒತ್ತಡದಿಂದಾಗಿ ನೆಲವನ್ನು ಕಚ್ಚಿದುವು. ಅದರ ಸನ್ನೆಗೋಲು ನಿಧಾನವಾಗಿ, ಲಯಬದ್ಧವಾಗಿ ಹಿಂದಕ್ಕೂ ಮುಂದಕ್ಕೂ ಚಲಿಸುತ್ತಿತ್ತು. ಘನ ಹಿಮ ಆವರಿಸಿಕೊಂಡಿದ್ದ ಎಂಜಿನ್ ಗಾಡಿಯಿಂದ ಹೊರಗೆ ಚಾಲಕ ತಲೆ ಹಾಕಿದ್ದನು. ರೈಲು ನಿದಾನಗೊಂಡಂತೆಲ್ಲ ಜಗಲಿ ಅಧಿಕಾಧಿಕವಾಗಿ ಕಂಪಿಸುತ್ತಿತ್ತು. ದಾಸ್ತಾನು ಬಂಡಿಯ ಹಿಂದೆ ಸಾಮಾನುಗಾಡಿ ಇತ್ತು. ಅದರೊಳಗಿದ್ದ ನಾಯಿ ಚೀರುತ್ತಿತ್ತು. ಕೊಟ್ಟಕೊನೆಗೆ ಪ್ರಯಾಣಿಕರ ಗಾಡಿಗಳು ಉರುಳಿಕೊಂಡು ಬಂದು, ನಿಲ್ಲುವ ಮುನ್ನ ಗಡಗಡನೆ ಶಬ್ದ ಮಾಡಿದುವು.

ಚುರುಕಿನ ಕಾವುಗಾರ ಸಿಳ್ಳೆಯೂದುತ್ತ ಬಂಡಿಯಿಂದ ಕೆಳಗೆ ನೆಗೆದನು. ಅವನ ಹಿಂದೆಯೇ ಆತುರದ ಪ್ರಯಾಣಿಕರು ಒಬ್ಬೊಬ್ಬರಾಗಿ ಕೆಳಗಿಳಿದರು. ಸೆಟೆತು ಕೊಂಡಂತೆ ನಿಂತಿದ್ದ ಕಾಪಿನವರ ಅಧಿಕಾರಿಯೊಬ್ಬ ಸುತ್ತಲೂ ದುರುಗುಟ್ಟಿಕೊಂಡು

ನೋಡುತ್ತಿದ್ದನು. ಚಡಪಡಿಸುತ್ತಿದ್ದ, ಸೂಚಿಯನ್ನು ಹಿಡಿದಿದ್ದ ವರ್ತಕನೊಬ್ಬ ಉಲ್ಲಾಸದಿಂದ ಮುಗುಳುನಗೆ ಸೂಸುತ್ತಿದ್ದನು. ಹೆಗಲ ಮೇಲೆ ಗೋಣಿಯ ಚೀಲ ಹಾಕಿಕೊಂಡಿದ್ದ ರೈತನೊಬ್ಬ ಅವನ ಹಿಂದೆ ಬಂದನು.

ತನ್ನ ತಾಯಿಯನ್ನು ಸಂಪೂರ್ಣವಾಗಿ ಮರೆತ ವ್ರಾಂಸ್ಕಿ ಬಂಡಿಗಳನ್ನು, ಅವುಗಳೊಳಗಿದ್ದ ಪ್ರಯಾಣಿಕರನ್ನು ನೋಡುತ್ತ ಆಬ್ಲಾನ್‌ಸ್ಕಿಯ ಪಕ್ಕದಲ್ಲಿ ನಿಂತಿದ್ದನು. ಕಿಟ್ಟಿಯನ್ನು ಕುರಿತಂತೆ ತಾನು ಕೇಳಿಸಿಕೊಂಡಿದ್ದ ಮಾತುಗಳಿಂದ ಭಾವಪರವಶನಾದ ಅವನು ಸಂತುಷ್ಟನಾಗಿದ್ದನು. ಅವನ ಎದೆಯುಬ್ಬಿತು, ಕಣ್ಣು ಮಿಂಚಿದುವು; ತಾನೊಬ್ಬ ವಿಜೇತನೆಂಬಂತೆ ಹೆಮ್ಮೆಗೊಂಡನು.

'ಕೌಂಟೆಸ್ ವ್ರಾಂಸ್ಕಾಯ ಆ ಬೋಗಿಯಲ್ಲಿದ್ದಾರೆ' ಎಂದು ವ್ರಾಂಸ್ಕಿಯ ಬಳಿ ಬಂದ ಚುರುಕಿನ ಕಾಪಿನವ ನುಡಿದನು.

ಕಾಪಿನವನ ಮಾತು ಅವನನ್ನೆಚ್ಚರಿಸಿದುವು; ಅವುಗಳಿಂದಾಗಿ ತನ್ನ ತಾಯಿಯ ಬಗ್ಗೆ ಮತ್ತು ಅಷ್ಟರಲ್ಲಿಯೇ ಸಂಭವಿಸಲಿದ್ದ ಅವಳ ಭೇಟಿಯ ಬಗ್ಗೆ ಅವನು ಯೋಚಿಸುವಂತಾಯಿತು. ಅವನು ಅಂತಃಕರಣಪೂರ್ವಕವಾಗಿ ತನ್ನ ತಾಯಿಯನ್ನು ಗೌರವಿಸುತ್ತಿರಲಿಲ್ಲ. ತಾನು ವ್ಯವಹರಿಸುತ್ತಿದ್ದ ಸಮಾಜದ ಮರ್ಯಾದೆಗನುಗುಣವಾಗಿ, ಹಾಗೂ ತಾನು ಕಲಿತ ಶಿಕ್ಷಣಕ್ಕೆ ತಕ್ಕಂತೆ ಅವನು ಅವಳೊಡನೆ ಗೌರವ ವಿಧೇಯತೆಗಳಿಂದ ವರ್ತಿಸಬೇಕಾಗಿತ್ತು. ಅವನಿಗೆ ಅನ್ಯಮಾರ್ಗವಿರಲಿಲ್ಲ. ಆದರೂ ಅವಳನ್ನವನು ಪ್ರೀತಿಸುತ್ತಿರಲಿಲ್ಲ. ಆ ವಿಷಯವನ್ನೊಪ್ಪಿಕೊಳ್ಳಲು ಸಹ ಅವನು ಸಿದ್ಧನಾಗಿರಲಿಲ್ಲ. ಅವನು ಬಹಿರಂಗವಾಗಿ ಹೆಚ್ಚು ಹೆಚ್ಚು ಗೌರವ ವಿಧೇಯತೆಗಳಿಂದ ವರ್ತಿಸಿದಂತೆಲ್ಲ ಅಂತರಂಗಿಕವಾಗಿ ಅವನ ಪ್ರೀತಿ ಗೌರವಗಳು ಕಡಿಮೆಯಾಗುತ್ತಿದ್ದವು.

೧೮

ವ್ರಾಂಸ್ಕಿ ಕಾಪಿನವನ ಹಿಂದೆ ಬೋಗಿಯ ಬಳಿಗೆ ಹೋದನು. ಅವರು ಬಾಗಿಲು ತಲುಪಿದಾಗ ಬೇರೊಬ್ಬಳು ಮಹಿಳೆಗೆ ದಾರಿ ಮಾಡಿಕೊಡುವ ಸಲುವಾಗಿ ಅವರು ಪಕ್ಕಕ್ಕೆ ಸರಿದರು. ಆ ಮಹಿಳೆ ಸಮಾಜದಲ್ಲಿ ಅತ್ಯುತ್ತಮ ಶ್ರೇಣಿಗೆ ಸೇರಿದವಳೆಂಬುದನ್ನು ಅವಳ ಚಹರೆಯಿಂದಲೇ ಆಧುನಿಕ ಮನುಷ್ಯನ ಸೂಕ್ಷ್ಮಪ್ರಜ್ಞೆಯಿಂದ ವ್ರಾಂಸ್ಕಿ ಒಂದೇ ಒಂದು ಮಿಟುಕಿನಲ್ಲರಿತುಕೊಂಡನು. ಅವನವಳ ಕ್ಷಮೆಯನ್ನು ಯಾಚಿಸಿ, ಒಳಗೆ ಹೆಜ್ಜೆಯಿಡುವಷ್ಟರಲ್ಲಿ ಅವಳನ್ನು ಮತ್ತೊಮ್ಮೆ ನೋಡುವ ಪ್ರಲೋಭನೆ ಅವನ ಮನಸ್ಸನ್ನು ಕೆಣಕಿತು. ಅವನ ಪ್ರಲೋಭನೆಗೆ ಕಾರಣ ಅವಳ ಅನುಪಮ ಸೌಂದರ್ಯವಲ್ಲ; ಅವಳ ಇಡೀ ಆಕೃತಿಯಲ್ಲಿದ್ದು ಕಾಣುತ್ತಿದ್ದ ಲಾವಣ್ಯರಮ್ಯತೆಗಳೂ ಅಲ್ಲ; ತನಗೊತ್ತಿಕೊಂಡು ಹೋಗುವಾಗ ಅವಳ ಪ್ರಸನ್ನ ಮುಖದ ಭಾವದಲ್ಲಿ ಅಭಿವ್ಯಕ್ತಗೊಂಡಿದ್ದ ಅಸಾಧಾರಣ ನಯವಿನಯ ಸೌಜನ್ಯಗಳು. ಅವನವಳ ಕಡೆಗೆ ತಿರುಗಿದಾಗ, ಅವಳು ಸಹ ಅವನ ಕಡೆಗೆ ತನ್ನ ತಲೆ ತಿರುಗಿಸಿದಳು. ಒತ್ತಾದ ಎವೆಗಳಿಂದ ಕಪ್ಪಾಗಿ ಮಿರುಗುಟ್ಟುತ್ತಿದ್ದ ಅವಳ ಉಜ್ವಲ ಬೂದುಗಣ್ಣುಗಳು ಅವನನ್ನು ಗುರುತಿಸಿದುವೆನ್ನುವಂತೆ ಸ್ನೇಹಾಸಕ್ತಿಯಿಂದ ಒಂದೇ ಒಂದು ಕ್ಷಣ ಅವನ ಮುಖದ ಮೇಲೆ ಬಳಸಾಡು

ತ್ತಿದ್ದುವು; ತದನಂತರ ಯಾರನ್ನೋ ಹುಡುಕುತ್ತಿರುವಂತೆ ಅವು ನೆರವಿಯ ಮೇಲೆ ಹಾಯ್ದುವು. ಅವಳ ಮುಖದ ಮೇಲೆ ಚೆಲ್ಲವರಿದಿದ್ದ, ಅವಳ ಉಜ್ವಲ ನೇತ್ರಗಳ ಮತ್ತು ಅವಳ ಚೆಂದುಟಿಗಳ ಕೊಂಕಿನಲ್ಲಿಣುಕುತ್ತಿದ್ದ ಮುಗುಳು ನಗೆಯ ನಡುವೆ ಸುಳಿದಾಡುತ್ತಿದ್ದ ಸ್ತಂಭೀಭೂತ ಉತ್ಸಾಹವನ್ನು ಗಮನಿಸಲು ಆ ಕ್ಷಣಿಕ ಕಟಾಕ್ಷವೇ ವ್ರಾಂಸ್ಕಿಗೆ ಸಾಕಾಗಿತ್ತು. ತನ್ನಿಚ್ಛೆಗೆ ವಿರುದ್ಧವಾಗಿ ಅವಳ ಮಂದಹಾಸದಲ್ಲಿ ಮತ್ತು ಅವಳ ಕಣ್ಣುಗಳ ಕಾಂತಿಯಲ್ಲಿ ವ್ಯಕ್ತವಾಗುತ್ತಿದ್ದ ಯಾವುದೋ ಭಾವ ಅವಳ ಇಡೀ ಚೈತನ್ಯವನ್ನೇ ಆವರಿಸಿಕೊಂಡಿದ್ದಂತೆ ಭಾಸವಾಗುತ್ತಿತ್ತು. ಅವಳು ಉದ್ದೇಶಪೂರ್ವಕ ವಾಗಿ ಆ ಬೆಳಕನ್ನು ನಂದಿಸಿದ್ದಳು; ಆದರೆ ತನಗರಿವಿಲ್ಲದಂತೆಯೇ ಅದು ಅವಳ ಸ್ವಲ್ಪ ಗೋಚರ ಮಂದಹಾಸದ ಮೂಲಕ ಮಿನುಗುತ್ತಿತ್ತು.

ವ್ರಾಂಸ್ಕಿ ಬೋಗಿಯನ್ನು ಪ್ರವೇಶಿಸಿದನು. ಕಪ್ಪುಕಣ್ಣುಗಳ, ಕಣ್ಣು ಬಳಿಗಳ, ಕೃಶಳಾಗಿದ್ದ, ಮುಪ್ಪಿನ ಮಹಿಳೆ, ಅವನ ತಾಯಿ ಮಗನ ಕಡೆಗೆ ಕಣ್ಣು ಪಿಳುಕಿಸಿದಳು; ಅವಳ ತೆಳ್ಳುಟಿಗಳಲ್ಲಿ ಕಂಡೂಕಾಣದಂತೆ ನಗೆ ಚಿಮ್ಮಿತು. ಅವಳು ಪೀಠದಿಂದೆದ್ದು, ತನ್ನ ಅಂಗಸೇವಕಿಯ ಕೈಗೆ ಬಲೆಚೀಲವನ್ನಿತ್ತು, ತನ್ನ ತೆಳ್ಳನೆಯ ಕೈಯನ್ನು ಮಗನ ಕಡೆಗೆ ಚಾಚಿದಳು. ಮಗ ಅದರ ಮೇಲೆ ಬಾಗಿದಾಗ, ಅವಳು ಅವನ ತಲೆಯನ್ನೆತ್ತಿ, ಅವನ ಹಣೆಯನ್ನು ಚುಂಬಿಸಿದಳು.

'ನನ್ನ ತಂತಿ ತಲುಪಿತೆ? ನೀನು ಚೆನ್ನಾಗಿದ್ದೀಯಾ? ದೇವರ ದಯೆ.'

'ನಿಮ್ಮ ಪ್ರಯಾಣ ಹಿತಕರವಾಗಿತ್ತೆ?' ಎಂದವಳ ಮಗ ಪಕ್ಕದಲ್ಲಿ ಕುಳಿತು ಕೊಂಡು ಪ್ರಶ್ನಿಸಿದನು. ಬಾಗಿಲಿನ ಮತ್ತೊಂದು ಪಕ್ಕದಿಂದ ಬರುತ್ತಿದ್ದ ಮಹಿಳೆಯ ಧ್ವನಿಯನ್ನವನು ಅನೈಚ್ಛಿಕವಾಗಿ ಕೇಳಿಸಿಕೊಳ್ಳುತ್ತಿದ್ದನು. ಆ ಧ್ವನಿ ಪ್ರವೇಶ ಸಮಯ ದಲ್ಲೆದುರಾದ ಮಹಿಳೆಯದೆಂಬುದು ಅವನಿಗೆ ಗೊತ್ತಿತ್ತು.

'ಏನೇ ಆಗಲಿ, ನಾನು ನಿಮ್ಮ ಮಾತನ್ನೊಪ್ಪಲಾರೆ' ಎಂಬುದಾಗಿ ಆ ಮಹಿಳೆ ಹೇಳುತ್ತಿದ್ದಳು.

'ನಿಮ್ಮದು ಪೀಟರ್ಸ್ ಬರ್ಗ್ ಅಭಿಪ್ರಾಯವಮ್ಮ.'

'ಅದು ಪೀಟರ್ಸ್ ಬರ್ಗ್ ಅಭಿಪ್ರಾಯವಲ್ಲ, ಹೆಂಗಸಿನ ದೃಷ್ಟಿ ಮಾತ್ರ' ಎಂದವಳು ಉತ್ತರಿಸಿದಳು.

'ಅದೇನೇ ಇರಲಿ, ನಿಮ್ಮ ಕೈ ಚುಂಬಿಸಲು ಅನುಮತಿ ಕೊಡಿ.'

'ನಮಸ್ಕಾರ, ಇವಾನ್‌ಪೆತ್ರೊವಿಚ್. ನನ್ನ ಸೋದರ ಹೊರ್ಗಲ್ಲಾದರೂ ಇದ್ದಾನೆಯೆ, ನೋಡಿ. ಇದ್ದರೆ, ಅವನನ್ನಿಲ್ಲಿಗೆ ಕಳಿಸಿಕೊಡಿ' ಎಂದು ಆ ಮಹಿಳೆ ಮತ್ತೆ ಬೋಗಿಯೊಳಗೆ ಬರುತ್ತಿದ್ದಂತೆ ದ್ವಾರಪ್ರದೇಶದಲ್ಲಿ ನುಡಿದಳು.

'ನಿಮ್ಮಣ್ಣ ಬಂದಿದ್ದಾರೆಯೆ?' ಎಂದು ವ್ರಾಂಸ್ಕಿಯ ತಾಯಿ ಅವಳನ್ನು ಪ್ರಶ್ನಿಸಿ ದಳು.

ಆ ಮಹಿಳೆಯೇ ಶ್ರೀಮತಿ ಕರೆನಿನ ಎಂದು ವ್ರಾಂಸ್ಕಿಗೀಗ ಅರ್ಥವಾಯಿತು.

'ನಿಮ್ಮಣ್ಣ ಇಲ್ಲಿಯೇ ಇದ್ದಾರೆ' ಎಂದವನು ಮೇಲೇಳುತ್ತ ನುಡಿದನು. 'ಕೂಡಲೇ ನಿಮ್ಮನ್ನು ಗುರುತಿಸದಿದ್ದುದಕ್ಕಾಗಿ ಕ್ಷಮಿಸಿ. ನಮ್ಮ ಪರಿಚಯ ಅಷ್ಟೇನೂ

ಗಾಢವಾದದ್ದಲ್ಲ' ಎಂದು ಮಣಿಯು ಅವನು ನುಡಿದನು 'ನಿಮಗೆ ನನ್ನ ನೆನಪಿರಲಾರದು.'

'ಓ, ವಾಸ್ತವವಾಗಿ ನಾನು ನಿಮ್ಮನ್ನು ಗುರುತಿಸಬೇಕಾಗಿತ್ತು. ದಾರಿಯುದ್ದಕ್ಕೂ ನಾನು ಮತ್ತು ನಿಮ್ಮ ತಾಯಿ ನಿಮ್ಮ ವಿಷಯ ಬಿಟ್ಟು ಬೇರೇನೂ ಮಾತಾಡಲಿಲ್ಲ' ಎಂದವಳು ನುಡಿಯುವಾಗ, ಮುಗುಳು ನಗೆಯ ಮೂಲಕ ಹೊರಹೊಮ್ಮಲು ಅವಳ ಉತ್ಸಾಹ ಬಹಿರ್‍ದ್ವಾರವನ್ನು ಹುಡುಕುತ್ತಿತ್ತು. 'ನನ್ನಣ್ಣ ಎಲ್ಲಿರಬಹುದು?'

'ಎಲ್ಲಿದ್ದಾರೆ ನೋಡಿ, ಅವರನ್ನು ಕರೆದುಕೊಂಡು ಬಾ, ಅಲೆಕ್ಸಿ' ಎಂದು ಹಿರಿಯ ಕೌಂಟೆಸ್ ನುಡಿದಳು.

ವ್ರಾನ್‌ಸ್ಕಿ ರೈಲಿಂದಿಳಿದನು. 'ಅಬ್ಲಾನ್‍ಸ್ಕಿ! ಇಗೋ ಇಲ್ಲಿ!' ಎಂದು ಕೂಗಿದನು.

ಆದರೆ ಶ್ರೀಮತಿ ಕರೆನೀನ ತನ್ನಣ್ಣನ ಬರವಿಗಾಗಿ ಕಾಯಲಿಲ್ಲ. ಅವನ ಸುಳಿವು ಸಿಕ್ಕಿದ ಕೂಡಲೇ, ಅವಳು ಹಗುರವಾಗಿ, ಆದರೆ ದೃಢನಿರ್ಧಾರದ ಧಾಟಿಯಲ್ಲಿ ಹೆಜ್ಜೆಯಿಡುತ್ತ ವಾಹನದಿಂದಿಳಿದಳು. ಅಣ್ಣ ಬಳಿ ಬಂದಾಗ, ತನ್ನೆಡದೋಳನ್ನು ಅವನ ಕುತ್ತಿಗೆಯ ಸುತ್ತ ಬಳಸಿ, ತಟಕ್ಕನೆ ಅವನ ತಲೆಯನ್ನು ಕೆಳಗೆಳೆದುಕೊಂಡು, ಅವನನ್ನವಳು ಭಾವಾತ್ಮಕವಾಗಿ ಚುಂಬಿಸಿದಾಗ, ಅವಳಲ್ಲಿ ಕಂಡ ಲಾಲಿತ್ಯ ಲಾವಣ್ಯಗಳಿಗೆ ವ್ರಾನ್‌ಸ್ಕಿ ಮರುಳಾದನು. ಅವಳಲ್ಲಿಯೇ ನಾಟಿದ್ದ ಕಣ್ಣುಗಳನ್ನವನು ಕೀಳಲಾಗಲಿಲ್ಲ; ಏಕೆಂಬುದರ ಅರಿವಿಲ್ಲದೆ ಅವನು ಮುಗುಳುನಗೆ ಸೂಸಿದನು. ತನ್ನ ತಾಯಿ ತನಗಾಗಿ ಕಾದಿದ್ದಾಳೆಂಬುದು ಹಠಾತ್ತನೆ ನೆನಪಾಗಲಾಗಿ, ಅವನು ಬೋಗಿಯ ಬಳಿಗೆ ಮರಳಿದನು.

'ಅವಳು ತುಂಬ ಲಾವಣ್ಯವತಿಯಾಗಿದ್ದಾಳಲ್ಲವೆ?' ಎಂದು ಕೌಂಟೆಸ್ ಶ್ರೀಮತಿ ಕರೆನಿನಳ ವಿಷಯವೆತ್ತಿಕೊಂಡು ಕೇಳಿದಳು. 'ಅವಳ ಗಂಡ ಅವಳನ್ನಿಲ್ಲಿ ನನ್ನ ಸಂಗಡ ಕೂರಿಸಿದರು. ನನಗೂ ಸಂತೋಷವಾಯಿತು. ದಾರಿಯುದ್ದಕ್ಕೂ ನಾವು ಮಾತಾಡಿದೆವು. ಮಗನೆ, ಯಾರೋ ಹೇಳುತ್ತಿದ್ದುದನ್ನು ಕೇಳಿದೆ....ನಿಮ್ಮದೂ ಆದರ್ಶಪ್ರೇಮವಾಗಬೇಕು; ನನ್ನೊಲವೆ, ಇಬ್ಬರಿಗೂ ಶುಭವಾಗಲಿ.'

'ನಿಮ್ಮ ಮನಸ್ಸಿನಲ್ಲೇನಿದೆಯೋ ನನಗೆ ತಿಳಿಯಲಿಲ್ಲಮ್ಮ' ಎಂದವಳ ಮಗ ಗಡುಸಾಗಿ ನುಡಿದನು. 'ಈಗ ಹೋಗೋಣ, ಬನ್ನಿ.'

ಕೌಂಟೆಸ್‌ಳಿಂದ ಬೀಳ್ಕೊಳ್ಳುವ ಸಲುವಾಗಿ ಶ್ರೀಮತಿ ಕರೆನಿನ ಮತ್ತೆ ಬೋಗಿಯೆಡೆಗೆ ಮರಳಿದಳು. 'ಕೌಂಟೆಸ್‌ರೆ, ನಿಮಗೆ ನಿಮ್ಮ ಮಗ, ನನಗೆ ನನ್ನಣ್ಣ ಸಿಕ್ಕಿದಂತಾಯಿತು' ಎಂದವಳು ಉಲ್ಲಾಸದಿಂದ ನುಡಿದಳು. 'ಒಳ್ಳೆಯದಾಯಿತು. ನನ್ನ ಕತೆಯನ್ನೆಲ್ಲ ಹೇಳಿ ಮುಗಿಸಿದ್ದಾಯಿತು. ಇನ್ನೇನೂ ಉಳಿದಿಲ್ಲ.'

ಕೌಂಟೆಸ್ ಅವಳ ಕೈ ಹಿಡಿದುಕೊಂಡು 'ಓ, ನಾನು ನಿನ್ನೊಂದಿಗೆ ತಿರೆಯ ಕೊನೆತನಕ ಪಯಣಿಸಬಲ್ಲೆ. ಸ್ವಲ್ಪವೂ ಬೇಸರವಾಗುವುದಿಲ್ಲ' ಎಂದು ನುಡಿದು ನಕ್ಕಳು. 'ನಿನ್ನಂತೆ ಆನಂದ ಕೊಡುವ ಲಲನೆಯರೆ ಅಪರೂಪ. ನಿನ್ನೊಡನೆ ಮಾತಾಡುವುದೂ ಚೆಂದ, ಮೌನವಾಗಿರುವುದೂ ಚೆಂದ. ಆದರೆ ನಿನ್ನ ಪುಟ್ಟ ಮಗುವಿನ ವಿಷಯವನ್ನು ತಲೆಗೆ ಹಚ್ಚಿಕೊಳ್ಳಬೇಡ. ಯಾವಾಗಲೂ ಅವನಿಂದಗಲದೆ, ಅವನೊತ್ತಿನಲ್ಲಿಯೇ ಇರಲಾಗದು. ಅದು ತಪ್ಪೂ ಆಹುದು.'

ಶ್ರೀಮತಿ ಕರೆನಿನ ನೆಟ್ಟಗೆ ನಿಶ್ಚಲಳಾಗಿ ನಿಂತಿದ್ದಳು; ಅವಳ ಕಣ್ಣುಗಳಲ್ಲಿ ಮುಗುಳ್ನಗೆ ಮಿನುಗುತ್ತಿತ್ತು.

'ಅನ್ನಾ ಅರ್ಕದೀವ್ನಳಿಗೊಬ್ಬ ಪುಟ್ಟ ಮಗನಿದ್ದಾನೆ. ಅವನಿಗೆ ಎಂಟು ವರ್ಷವೆಂದು ತೋರುತ್ತದೆ. ಈ ಮುನ್ನ ಇವಳೆಂದೂ ಅವನಿಂದ ಅಗಲಿದ್ದಿಲ್ಲ. ಅವನನ್ನು ಬಿಟ್ಟು ಬಂದದ್ದರಿಂದ ಇವಳಿಗೆ ತುಂಬ ಹಿಂಸೆಯಾಗಿದೆ' ಎಂದು ಕೌಂಟೆಸ್ ತನ್ನ ಮಗನಿಗೆ ವಿವರಿಸಿದಳು.

'ಹೌದು, ಕೌಂಟೆಸ್ ಮತ್ತು ನಾನು ಕೊನೆಮೊದಲಿಲ್ಲದೆ ಮಾತಾಡುತ್ತಿದ್ದೇವೆ. ಅವರು ತಮ್ಮ ಮಗನ ವಿಷಯವಾಗಿ, ನಾನು ನನ್ನ ಮಗನ ವಿಷಯವಾಗಿ ಮಾತಾಡಿದ್ದೇ ಆಡಿದ್ದು' ಎಂದು ಶ್ರೀಮತಿ ಕರೆನಿನ ನುಡಿದಳು. ಅವಳ ಮುಖ ಮತ್ತೆ ಮುಗುಳು ನಗೆಯಿಂದ ಬೆಳಗಿತು. ಆ ಕೋಮಲ ಮಂದಹಾಸ ಅವನಿಗಾಗಿಯೇ ಮುಡಿಪು ಗೊಂಡಂತಿತ್ತು.

'ನಿಮಗೆ ತುಂಬ ಬೇಸರವಾಗಿರಬೇಕು' ಎಂದವನು ತನ್ನೆಡೆಗೆಸೆದ ಅವಳ ಒಯ್ಯಾರದ ನಗೆ ಚೆಂಡನ್ನು ಹಿಡಿದುಕೊಂಡು ನುಡಿದನು. ಆದರೆ ಅದೇ ಧಾಟಿಯಲ್ಲಿ ಸಂಭಾಷಣೆಯನ್ನು ಮುಂದುವರಿಸುವ ಇಷ್ಟ ಅವಳಿಗಿದ್ದಂತೆ ತೋರಲಿಲ್ಲ. ಅವಳು ಕೌಂಟೆಸ್ ಕಡೆಗೆ ತಿರುಗಿಕೊಂಡು 'ನಿಮಗೆ ಧನ್ಯವಾದಗಳು. ನಿನ್ನೆಯ ದಿನ ಕಾಲ ಗೊತ್ತಿಲ್ಲದಂತೆ ಕಳೆಯಿತು. ನಮಸ್ಕಾರ, ಕೌಂಟೆಸ್.'

'ನಮಸ್ಕಾರ, ನನ್ನ ಮುದ್ದೆ' ಎಂದು ಕೌಂಟೆಸ್ ಉತ್ತರಿಸಿದಳು. 'ನಿನ್ನ ಚೆಂದುಳ್ಳ ಮುಖಕ್ಕೆ ಮುತ್ತಿಡಬೇಕೆಂದು ನನಗಾಸೆಯಾಗುತ್ತಿದೆ. ಈ ನನ್ನ ಮುದಿ ವಯಸ್ಸಿನಲ್ಲಿ ನಾನು ಮುಚ್ಚುಮರೆಯಿಲ್ಲದೆ ಮಾತಾಡುತ್ತೇನೆ: ನನ್ನ ಹೃದಯವನ್ನು ನೀನು ಸೂರೆಗೊಂಡಿದ್ದೀಯೆ.'

ಅವಳ ಮಾತು ಹಳಸಲಾಗಿದ್ದರೂ ಶ್ರೀಮತಿ ಕರೆನಿನ ನಂಬಿಕೊಂಡಳಲ್ಲದೆ, ಹರ್ಷಾನ್ವಿತೆಯಾದಳು. ಅವಳ ಮುಖ ಬಣ್ಣವೇರಿತು; ಕೌಂಟೆಸ್‌ಳ ತುಟಿಗಳ ಬಳಿಗೆ ತನ್ನ ಮುಖವನ್ನು ತರುವ ಸಲುವಾಗಿ ಬಗ್ಗಿದಳು; ಮತ್ತೆ ನೆಟ್ಟಗೆ ನಿಂತಳು; ಕಣ್ಣು ತುಟಿಗಳ ನಡುವೆ ಸುಳಿದಾಡುತ್ತಿದ್ದ ಅದೇ ಮಂದಹಾಸದಿಂದ ಅವಳು ವ್ರಾನ್ಸ್ಕಿಯ ಮುಂದೆ ತನ್ನ ಕೈಚಾಚಿದಳು. ತನ್ನೆಡೆಗೆ ನೀಡಿದ ಕಿರುಗೈಯನ್ನವನು ಅದುಮಿದನು. ಅವನ ಕೈಯನ್ನವಳು ದೃಢವಾಗಿ ಬಲವಾಗಿ ಹುರುಪಿನಿಂದ ಹಿಸುಕಿದಳು. ಆ ಹುರುಪಿ ನಲ್ಲವನು ವಿಶೇಷತೆಯನ್ನನುಭವಿಸುತ್ತ, ಆನಂದತುಂದಿಲನಾದನು. ಅನಂತರ ತನ್ನ ಇಡೀ ಗಾತ್ರಕ್ಕೆ ಅಸಾಧಾರಣ ಚೈತನ್ಯವನ್ನು ನೀಡಿದ್ದ ಚುರುಕು ಹೆಜ್ಜೆಯಿಡುತ್ತ ಅವಳು ಹೊರಗೆ ನಡೆದಳು.

'ಅಪೂರ್ವ ಲಾವಣ್ಯವತಿ' ಎಂದು ಕೌಂಟೆಸ್ ನುಡಿದಳು.

ಅವಳ ಮಗನದು ಸಹ ಅದೇ ಅಭಿಪ್ರಾಯವಾಗಿತ್ತು. ಮಂದಹಾಸವಿನ್ನೂ ಅವಳ ತುಟಿಗಳನ್ನುತೊರೆದಿರಲಿಲ್ಲ. ಅವಳ ಮನೋಹರಾಕೃತಿ ದೃಷ್ಟಿವಲಯದಿಂದ ಮರೆಯಾಗುವ ತನಕ ಅವನು ತನ್ನ ಕಣ್ಣುಗಳ ಮೂಲಕ ಅವಳನ್ನು ಹಿಂಬಾಲಿಸಿದನು. ಅವಳು ತನ್ನಣ್ಣನ ಬಳಿಗೆ ಹೋದುದನ್ನು, ಅವನ ತೋಳೊಳಗವಳು ತನ್ನ ತೋಳು ತೂರಿಸಿ

ದುದನ್ನು, ಮತ್ತು ಅತ್ಯಂತ ಉಲ್ಲಾಸದಿಂದ ಅವನೊಡನೆ ಏನೋ ನುಡಿಯುತ್ತಿದ್ದು ದನ್ನವನು ಕಿಟಕಿಯ ಮೂಲಕ ನೋಡಿದನು. ಆದರೆ ಅವಳ ಮಾತು ತನಗೆ ಸಂಬಂಧಿ ಸಿದ್ದಲ್ಲವೆಂದು ಊಹಿಸಿಕೊಂಡು ಅವನು ನಿರಾಶನಾದನು.

'ಏನಮ್ಮ, ನೀವು ಚೆನ್ನಾಗಿದ್ದೀರಾ?' ಎಂದವನು ತಾಯಿಯ ಕಡೆಗೆ ತಿರುಗಿ ಕೊಂಡು ಪ್ರಶ್ನಿಸಿದನು.

'ಚೆನ್ನಾಗಿದ್ದೇನೆ. ಎಲ್ಲವೂ ಭರ್ಜರಿಯಾಗಿದೆ. ಅಲೆಕ್ಸಾಂಡರ್ ತುಂಬ ದಯಾಳು. ಮೇರಿ ತುಂಬ ಸುಧಾರಿಸಿದ್ದಾಳೆ. ನಿಜಕ್ಕೂ ಅವಳು ಆಕರ್ಷಕವಾಗಿದ್ದಾಳೆ.'

ಅವಳು ಮತ್ತೊಮ್ಮೆ ತನಗೆ ತುಂಬ ಇಷ್ಟವಾದ ಸಂಗತಿಗಳನ್ನು ಕುರಿತು ಮಾತಾಡತೊಡಗಿದಳು. ಸೆಂಟ್‌ಪೀಟರ್ಸ್‌ಬರ್ಗ್‌ಗೆ ಹೋಗಿ ತನ್ನ ಮೊಮ್ಮಗನಿಗೆ ಜ್ಞಾನ ಸ್ನಾನ ಮಾಡಿಸಿದ ವಿಷಯವನ್ನು ವಿವರಿಸಿದಳು. ತ್ಸಾರ್ ಚಕ್ರವರ್ತಿ ತನ್ನ ಹಿರಿಯ ಮಗನ ಮೇಲೆ ತೋರಿದ ಆದರವನ್ನು ಕೊಂಡಾಡಿದಳು.

'ಲವರೆಂತಿ ಇಲ್ಲಿಯೇ ಇದ್ದಾನೆ.' ಎಂದು ವ್ರಾಂಸ್ಕಿ ಕಿಟಕಿಯ ಹೊರಗೆ ನೋಡುತ್ತ ನುಡಿದನು. 'ನೀವು ಸಿದ್ಧವಾಗಿದ್ದರೆ ನಾವೀಗ ಹೊರಗೆ ಹೊರಡಬಹುದು '

ಪ್ರಯಾಣ ಸಮಯದಲ್ಲಿ ಕೌಂಟೆಸ್‌ಳ ಜತೆಗೆ ಬಂದಿದ್ದ ಮುದಿ ಸೇವಕ ಬೋಗಿ ಯೊಳಗೆ ಬಂದು, ಎಲ್ಲ ಸಿದ್ಧವಾಗಿದೆಯೆಂದು ತಿಳಿಸಿದನು. ಕೌಂಟೆಸ್ ಹೊರಗೆ ಹೊರಡಲು ಮೇಲೆದ್ದಳು.

'ಬನ್ನಿ, ಈಗ ಮಂದಿ ಕಡಮೆಯಾಗಿದ್ದಾರೆ' ಎಂದು ವ್ರಾಂಸ್ಕಿ ನುಡಿದನು.

ಸೇವಕಿ ಮುದ್ದುನಾಯಿಯನ್ನೂ ಚೀಲವನ್ನೂ ಹಿಡಿದುಕೊಂಡಳು. ಸೇವಕನೂ ಕೂಲಿಯಾಳೂ ಇತರ ವಸ್ತುಗಳನ್ನೆತ್ತಿಕೊಂಡರು. ವ್ರಾಂಸ್ಕಿ ತನ್ನ ತಾಯಿಗೆ ತೋಳಾಸರೆ ನೀಡಿದನು. ಆದರೆ ಅವರು ಬೋಗಿಯಿಂದ ಕೆಳಗಿಳಿಯುವಷ್ಟರಲ್ಲಿ ಭಯ ಚಕಿತ ಮುಖ ಗಳ ಕೆಲವು ಜನ ಬಿರುಬಿರನೆ ಓಡುತ್ತಿದ್ದರು. ಅಸಾಧಾರಣ ವರ್ಣದ ಟೋಪಿ ಧರಿಸಿದ್ದ ಸ್ಟೇಷನ್‌ಮಾಸ್ಟರ್ ಸಹ ವೇಗವಾಗಿ ಓಡುತ್ತಿದ್ದನು. ಏನೋ ಅಸಾಮಾನ್ಯ ಸಂಗತಿ ಸಂಭವಿಸಿರಬೇಕು. ರೈಲಿನಿಂದ ಅದೆತಾನೆ ಹೊರಗೆ ಬಂದ ಜನ ಅದರ ಹಿಂದುಗಡೆಗೆ ಧಾವಿಸುತ್ತಿದ್ದರು.

'ಏನು....ಏನಾಗಿದೆ?....ಎಲ್ಲಿ?....ಕೆಳಗೆ ಬಿದ್ದುಬಿಟ್ಟನೇನು?....ಅವನ ಮೇಲೆ ಹರಿಯಿತೇನು?....' ಇವೇ ಮೊದಲಾದ ಮಾತುಗಳು ಅವರ ಕಿವಿಗಳ ಮೇಲೆ ಬೀಳು ತ್ತಿದ್ದುವು.

ತನ್ನ ತೋಳ್ಸೆರೆಯಲ್ಲಿದ್ದ ತಂಗಿಯೊಡನೆ ಅಬ್ಲಾನ್‌ಸ್ಕಿ ಹಿಂದಕ್ಕೆ ಸರಿದು, ಮಂದಿಯ ನೂಕುನುಗ್ಗಲಿಂದ ತಪ್ಪಿಸಿಕೊಳ್ಳುವ ಸಲುವಾಗಿ ಬೋಗಿಯ ಬಾಗಿಲಲ್ಲಿ ನಿಂತುಕೊಂಡನು. ಇಬ್ಬರ ಮುಖಗಳ ಮೇಲೂ ಭಯ ಮುದ್ರಿಸಿತ್ತು.

ಸ್ತ್ರೀಯರು ಬೋಗಿಯೊಳಗೆ ಹೊಕ್ಕರು: ಅಪಘಾತದ ವಿವರಗಳನ್ನು ತಿಳಿಯುವ ಸಲುವಾಗಿ ಗಂಡಸರಿಬ್ಬರೂ ನೆರವಿಯನ್ನು ಹಿಂಬಾಲಿಸಿದರು.

ಕುಡಿದು ಅಮಲೇರಿದ್ದರಿಂದಲೋ ಅಥವಾ ಕೊರೆ ಚಳಿಯಿಂದ ರಕ್ಷಿಸಿಕೊಳ್ಳಲು ಶೇಪೆ ಬಟ್ಟೆಗಳನ್ನು ತಲೆಮೈಗಳ ತುಂಬ ಬಿಗಿಯಾಗಿ ಸುತ್ತಿಕೊಂಡಿದ್ದರಿಂದಲೋ

ಹಿಂದಕ್ಕೆ ಚಲಿಸುತ್ತಿದ್ದ ರೈಲಿನ ಸದ್ದನ್ನು ಕಾವಲುಗಾರ ಕೇಳಿಸಿಕೊಳ್ಳಲಿಲ್ಲ. ರೈಲು ಅವನ ಮೇಲೆ ಹರಿಯಿತು.

ಈ ಸುದ್ದಿ ತಿಳಿದು ವ್ರಾನ್ಸ್ಕಿ ಆಬ್ಲಾನ್‌ಸ್ಕಿಯರು ಹಿಂದಕ್ಕೆ ಬರುವ ಹೊತ್ತಿಗೆ, ಸ್ತ್ರೀಯರು ಸೇವಕನ ಮುಖಾಂತರ ಆ ವಾರ್ತೆಯನ್ನರಿತುಕೊಂಡಿದ್ದರು.

ಇಬ್ಬರು ಗಂಡಸರೂ ಕತ್ತರಿಸಿಬಿದ್ದಿದ್ದ ದೇಹವನ್ನು ನೋಡಿದ್ದರು. ಆಬ್ಲಾನ್‌ಸ್ಕಿಯ ಮನಸ್ಸಿಗೆ ತುಂಬ ಯಾತನೆಯಾಯಿತು. ಅವನ ಹುಬ್ಬುಗಂಟಿಕ್ಕಿತು. ಅವನ ಕಣ್ಣುಗಳಿಂದ ನೀರು ಕೋಡಿವರಿಯುವುದರಲ್ಲಿತ್ತು.

'ಅದೆಂಥ ಭಯಂಕರ ದೃಶ್ಯ! ಓ, ಅನ್ನಾ ನೀನವನನ್ನು ನೋಡಬೇಕಿತ್ತು! ಅದೆಂಥ ಭಯಂಕರ ದೃಶ್ಯ!' ಎಂದವನು ಹೇಳುತ್ತಿದ್ದನು.

ವ್ರಾನ್ಸ್ಕಿ ತುಟಿ ಬಿಚ್ಚಲಿಲ್ಲ; ಅವನ ಸುಂದರ ವದನ ಗಂಭೀರವಾಗಿತ್ತು. ನಿರಾತಂಕವಾಗಿತ್ತು.

'ಓ ನೀನವನನ್ನು ನೋಡಬೇಕಾಗಿತ್ತು, ಕೌಂಟೆಸ್!' ಎಂದು ಆಬ್ಲಾನ್‌ಸ್ಕಿ ಮಾತು ಮುಂದುವರಿಸಿದನು. 'ಅವನ ಮಡದಿ ಸಹ ಅಲ್ಲೇ ಇದ್ದಳು....ಅವಳನ್ನು ನೋಡಿ ಎದೆ ನಡುಗುತ್ತಿತ್ತು....ದೇಹದ ಮೇಲೆ ಬಿದ್ದುಕೊಂಡಿದ್ದಳು. ದೊಡ್ಡ ಕುಟುಂಬಕ್ಕೆ ಅವನೊಬ್ಬನೇ ಆಸರೆಯೆಂದು ಮಾತಾಡಿಕೊಳ್ಳುತ್ತಿದ್ದರು. ಅದು ಘೋರವಲ್ಲವೆ?'

'ಅವರಿಗೆ ನಾವೇನಾದರೂ ಮಾಡಲಾದೀತೆ?' ಎಂದು ಶ್ರೀಮತಿ ಕರೆನಿನ ಕಳವಳದಿಂದ ಪಿಸುಗುಟ್ಟಿದಳು.

ವ್ರಾನ್ಸ್ಕಿ ಅವಳ ಕಡೆಗೆ ಕಣ್ಣು ಮಿಟುಕಿಸಿ, ಗಾಡಿಯಿಂದ ಕೆಳಗಿಳಿದನು. 'ಕೂಡಲೇ ಬಂದುಬಿಡುತ್ತೇನಮ್ಮ' ಎಂದವನು ಮುಂದೆ ಹಾಯ್ದನು.

ಕೆಲವು ನಿಮಿಷಗಳ ನಂತರ ಅವನು ಹಿಂದಿರುಗಿದಾಗ, ಆಬ್ಲಾನ್‌ಸ್ಕಿ ಕೌಂಟೆಸ್ ಳೊಡನೆ ಹೊಸ ಸಂಗೀತಗಾತಿಯ ಬಗ್ಗೆ ಪ್ರಸ್ತಾಪಿಸುತ್ತಿದ್ದನು. ಆದರೆ ಅವಳು ಮಾತ್ರ ಆಗಾಗ್ಗೆ ಬಾಗಿಲ ಕಡೆಗೆ ಕಾತರ ದೃಷ್ಟಿ ಹಾಯಿಸುತ್ತ, ತನ್ನ ಮಗನಿಗಾಗಿ ಚಡಪಡಿಸುತ್ತಿದ್ದಳು.

'ನಾವು ಹೊರಡೋಣವೆ?' ಎಂದು ವ್ರಾನ್ಸ್ಕಿ ಒಳಗೆ ಕಾಲಿಡುತ್ತ ಕೇಳಿದನು.

ತನ್ನ ತಾಯಿಯೊಡನೆ ವ್ರಾನ್ಸ್ಕಿ ಮುಂದೆ, ತನ್ನಣ್ಣನೊಡನೆ ಶ್ರೀಮತಿ ಕರೆನಿನ ಹಿಂದೆ, ಎಲ್ಲರೂ ಒಟ್ಟಿಗೆ ಹೊರಗೆ ಹೊರಟರು. ಅವರು ನಿಲ್ದಾಣದಿಂದ ಹೊರಗೆ ಕಾಲಿಡುತ್ತಿದ್ದಂತೆ, ಸ್ಟೇಷನ್ ಮಾಸ್ತರು ವ್ರಾನ್ಸ್ಕಿಯನ್ನು ಹಿಡಿದನು. 'ನೀವು ನನ್ನ ಸಹಾಯಕನ ಕೈಗೆ ಇನ್ನೂರು ರೂಬಲ್ ಕೊಟ್ಟಿರಿ. ಅದು ಯಾರಿಗೆ ಸಲ್ಲಬೇಕೆಂಬುದನ್ನು ದಯೆಯಿಟ್ಟು ತಿಳಿಸಿ.'

'ವಿಧವೆಗೆ' ಎಂದು ವ್ರಾನ್ಸ್ಕಿ ಭುಜ ಕುಣಿಸಿದನು. 'ಈ ನಿಮ್ಮ ಪ್ರಶ್ನೆ ಸಮರ್ಥವಾಗುವುದಿಲ್ಲ.'

'ನೀವು ಕೊಟ್ಟಿರೇನು?' ಎಂದು ಆಬ್ಲಾನ್‌ಸ್ಕಿ ಹಿಂದಿನಿಂದ ಕೂಗಿ ಕೇಳಿದನು. ತನ್ನ ತಂಗಿಯ ಕೈಯನ್ನದುಮುತ್ತ 'ಚಲೋ ಕೆಲಸಮಾಡಿದಿರಿ, ನಿಜಕ್ಕೂ ಚಲೋ ಕೆಲಸ. ಒಳ್ಳೆಯ ಆಸಾಮಿಯಲ್ಲವೆ? ನಮಸ್ಕಾರ, ಕೌಂಟೆಸ್?'

ಅವನೂ ಅವನ ತಂಗಿಯೂ ನಿಂತುಕೊಂಡು, ಕೌಂಟೆಸ್‌ಳ ಸೇವಕಿಗಾಗಿ ಹುಡುಕಾಡಿದರು.

ಅವರು ರಸ್ತೆ ತಲುಪುವಷ್ಟರಲ್ಲಿ ವ್ರಾಂಸ್ಕಿಯ ಬಂಡಿ ಹೊರಟು ಹೋಗಿತ್ತು. ನಿಲ್ದಾಣದಿಂದ ಹೊರಗೆ ಬರುತ್ತಿದ್ದ ಜನ ಅಪಘಾತದ ಬಗ್ಗೆ ಮಾತಾಡಿಕೊಳ್ಳುತ್ತಿದ್ದರು.

'ಎಂಥ ಘೋರವಾದ ಸಾವು!' ಎಂದೊಬ್ಬ ವ್ಯಕ್ತಿ ಮುಂದೆ ಮುಂದೆ ಸಾಗುತ್ತ ನುಡಿದನು. 'ಅವನ ದೇಹ ಎರಡು ತುಂಡಾಯಿತೆಂದು ಹೇಳುತ್ತಾರೆ.'

'ನಾನೊಪ್ಪುವುದಿಲ್ಲ. ಸುಲಭದ ಸಾವು. ಎಲ್ಲ ಒಂದೇ ಕ್ಷಣದಲ್ಲಿ ನಡೆದುಹೋಯಿತು' ಎಂದು ಮತ್ತೊಬ್ಬ ನುಡಿದನು.

'ಅವರು ಸಾಕಷ್ಟು ಎಚ್ಚರಿಕೆ ವಹಿಸಲಿಲ್ಲವೇಕೆ?' ಎಂದು ಮೂರನೆಯವ ಉದ್ಗಾರ ತೆಗೆದನು.

ಶ್ರೀಮತಿ ಕರೆನಿನ ವಾಹನವನ್ನೇರಿದಾಗ, ಅವಳ ತುಟಿ ನಡುಗುತ್ತಿದ್ದುದನ್ನು ಅಬ್ಲಾನ್‌ಸ್ಕಿ ಗಮನಿಸಿದನು. ಅವಳು ಕಣ್ಣೀರು ತಡೆದುಕೊಳ್ಳಲಾಗಲಿಲ್ಲ.

'ಏನಾಗಿದೆ, ಅನ್ನಾ?' ಎಂದವನು ವಾಹನ ತುಸು ದೂರ ಸಾಗಿದನಂತರ ಪ್ರಶ್ನಿಸಿದನು.

'ದುಶ್ಶಕುನ'

'ನಿನಗೆ ಹುಚ್ಚು' ಎಂದವಳ ಸೋದರ ಅಣಕವಾಡಿದನು. 'ನೀನು ಬಂದದ್ದೇ ಮುಖ್ಯ. ಅದೇ ಶುಭ ಸೂಚನೆ. ನಾನು ನಿನ್ನಲ್ಲಿ ಎಷ್ಟು ವಿಶ್ವಾಸವಿಟ್ಟಿದ್ದೇನೆಂಬುದನ್ನು ನೀನು ಊಹಿಸಿಕೊಳ್ಳಲಾರೆ.'

'ವ್ರಾಂಸ್ಕಿಯನ್ನು ನೀನು ಬಹುದಿನಗಳಿಂದ ಬಲ್ಲೆಯೇನು?' ಎಂದವಳು ಕೇಳಿದಳು.

'ಓ, ಹೌದು. ಅವನು ಕಿಟ್ಟಿಯನ್ನು ಮದುವೆಯಾಗಬಹುದೆಂದು ತಿಳಿದಿದ್ದೇನೆ.'

'ಓ, ಹೌದೆ?' ಎಂದು ಅನ್ನಾ ಮೆಲ್ಲಗೆ ನುಡಿದಳು. 'ಈಗ ನಿನ್ನ ವಿಷಯ ಮಾತಾಡೋಣ, ಬಾ' ಎಂದು ಬೇಡವಾದ್ದನ್ನು, ತನ್ನ ಮನಸ್ಸಿಗೆ ಕಾಟಕೊಡುತ್ತಿದ್ದುದನ್ನು ಶಾರೀರಕ ಪ್ರಯತ್ನದಿಂದ ಕೊಡವಿಬಿಡಲೆಂಬಂತೆ ಅವಳು ತನ್ನ ತಲೆಯನ್ನು ತುಸು ಸೆಟಿಸಿ ನುಡಿದಳು. 'ನಿನ್ನ ವ್ಯವಹಾರದ ಬಗ್ಗೆ ಚರ್ಚಿಸೋಣ. ನಿನ್ನ ಕಾಗದ ಬಂದಕೂಡಲೇ ನಾನಿಲ್ಲಿಗೆ ಓಡೋಡಿ ಬಂದೆ.'

'ನನ್ನ ಆಸೆಗಳೆಲ್ಲ ನಿನ್ನನ್ನವಲಂಬಿಸಿವೆ' ಎಂದು ಅಬ್ಲಾನ್‌ಸ್ಕಿ ನುಡಿದನು.

'ಎಲ್ಲ ಹೇಳಿಬಿಡು.'

ಅವನು ತನ್ನ ಕತೆ ಆರಂಭಿಸಿದನು.

ಅವರು ಮನೆ ತಲುಪಿದಾಗ ಅಬ್ಲಾನ್‌ಸ್ಕಿ ತಂಗಿಯನ್ನು ಕೆಳಗಿಳಿಸಿಕೊಂಡು, ನಿಟ್ಟುಸಿರು ಬಿಟ್ಟು, ಅವಳ ಕೈಯನ್ನದುಮಿ, ತನ್ನ ಕಚೇರಿಗೆ ಹೊರಟನು.

೧೯

ಅನ್ನಾ ಚಿಕ್ಕ ದಿವಾನಖಾನೆಯನ್ನು ಪ್ರವೇಶಿಸಿದಾಗ, ತನ್ನ ತಂದೆಯನ್ನು ಹೋಲುತ್ತಿದ್ದ ಹೊಂಗೂದಲ ಚೆಲುವ ಪುಟ್ಟ ಹುಡುಗನೊಡನೆ ಅವನು ಓದುತ್ತಿದ್ದ

ಫ್ರೆಂಚ್ ಪಾಠವನ್ನು ಕೇಳಿಸಿಕೊಳ್ಳುತ್ತ ಡಾಲಿ ಕುಳಿತಿದ್ದಳು. ಓದುತ್ತಿದ್ದಂತೆ ಅವನು ಸಡಿಲಗೊಂಡಿದ್ದ ತನ್ನ ಅಂಗಿಯ ಗುಂಡಿಯನ್ನು ತಿರುಚುತ್ತ, ಅದನ್ನು ಕಿತ್ತುಹಾಕಲು ಪ್ರಯತ್ನಿಸುತ್ತಿದ್ದನು. ತಾಯಿ ಹಲವು ಸಲ ಅವನ ಕೈಯನ್ನು ದೂರ ನೂಕಿದಳು; ಆದರೆ ಅವನ ದುಂಡು ಬೆರಳುಗಳು ಮತ್ತೆ ಗುಂಡಿಗಳ ಬಳಿಗೆ ಹೇಗೋ ನುಸುಳಿಕೊಂಡು ಬರುತ್ತಿದ್ದುವು. ಕೊನೆಗೆ ಅಸಹನೆಯಿಂದ ಅವಳು ಅದನ್ನು ಕಿತ್ತು, ತನ್ನ ಜೇಬಿನಲ್ಲಿರಿಸಿ ಕೊಂಡಳು.

'ನಿನ್ನ ಚೇಷ್ಟೆ ನಿಲ್ಲಿಸು, ಗ್ರಿಷ' ಎಂದವಳು ದೀರ್ಘಕಾಲದಿಂದ ಹೆಣೆಯುತ್ತಿದ್ದ ರಜಾಯಿಯನ್ನು ಮತ್ತೆ ಕೈಗೆತ್ತಿಕೊಂಡಳು; ತನಗೆ ಸಿಟ್ಟು ಬಂದಾಗಲೆಲ್ಲ ಅವಳು ಆ ಕೆಲಸದಲ್ಲಿ ಮಗ್ನಳಾಗುತ್ತಿದ್ದಳು. ಈಗವಳು ಬೆರಳನ್ನು ಕೊಡವುತ್ತ, ಹೊಲಿಗೆಗಳನ್ನೆಣಿ ಸುತ್ತ, ಗಾಬರಿಯಿಂದ ಹೆಣಿಗೆ ಹಾಕುತ್ತಿದ್ದಳು. ಅವನ ತಂಗಿಯ ಆಗಮನಕ್ಕೂ ತನಗೂ ಏನೇನೂ ಸಂಬಂಧವಿಲ್ಲವೆಂದು, ಆದರೂ ಸಿದ್ಧತೆಗಳನ್ನೆಲ್ಲ ಮುಗಿಸಿ, ಅವಳಿಗಾಗಿ ಕುತೂಹಲದಿಂದ ಕಾದುಕೊಂಡಿದ್ದುದಾಗಿ ಹಿಂದಿನ ದಿನವೇ ಗಂಡನಿಗೆ ಹೇಳಿಕಳಿಸಿದ್ದಳು.

ತನ್ನ ಕಷ್ಟಕ್ಲೇಶಗಳಿಂದ ಡಾಲಿ ನುಗ್ಗುನೂರಾಗಿದ್ದಳು; ಅವಳು ಸಂಪೂರ್ಣವಾಗಿ ಅವುಗಳಲ್ಲಿ ಮಗ್ನಳಾಗಿದ್ದಳು. ಆದರೂ ತನ್ನ ನಾದಿನಿ ಅನ್ನಾ ಮಹತ್ವದ ಮಹಿಳೆ ಯೆಂಬುದನ್ನು, ಸೆಂಟ್‌ಪೀಟರ್ಸ್‌ಬರ್ಗ್‌ನ ಸುವಿಖ್ಯಾತ ಸಾರ್ವಜನಿಕ ವ್ಯಕ್ತಿಯ ಮಡದಿ ಯೆಂಬುದನ್ನವಳು ನೆನಪಿಸಿಕೊಂಡಳು. ಆದ್ದರಿಂದಲೇ ತಾನೇನು ಮಾಡುವುದಾಗಿ ಗಂಡನನ್ನಂಜಿಸಿದ್ದಳೋ ಅದನ್ನವಳು ಎಸಗಲಿಲ್ಲ; ತನ್ನ ನಾದಿನಿ ಬರುತ್ತಿದ್ದ ವಿಷಯ ವನ್ನವಳು ಮರೆಯಲಿಲ್ಲ. 'ಏನೇ ಇರಲಿ, ಅನ್ನಾಳನ್ನು ದ್ವೇಷಿಸಲಾಗದು' ಎಂದು ಡಾಲಿ ಆಲೋಚಿಸಿದಳು. 'ಅವಳಲ್ಲಿ ನಾನು ಒಳ್ಳೆಯದನ್ನಲ್ಲದೆ ಬೇರೇನನ್ನು ಕಂಡಿಲ್ಲ. ಅವಳು ಯಾವಾಗಲೂ ನನ್ನ ಬಗ್ಗೆ ದಯಾರ್ದ್ರ ಹೃದಯಿಯಾಗಿದ್ದಾಳೆ, ಪ್ರೇಮಮಯಿಯಾಗಿ ದ್ದಾಳೆ.' ಪೀಟರ್ಸ್‌ಬರ್ಗ್ ನಗರದ ಕರೆನಿನ್‌ರ ಮನೆ ತನ್ನ ಮೇಲೆ ಬೀರಿದ ಪ್ರಭಾವವನ್ನು ನೆನೆದಾಗ, ಅವರ ಕುಟುಂಬ ಅವಳಿಗೆ ಹಿಡಿಸಲಿಲ್ಲವೆಂಬುದು ನಿಜ. ಅವರ ಕೌಟುಂಬಿಕ ಜೀವನದ ಇಡೀ ಚೌಕಟ್ಟಿನಲ್ಲಿಯೇ ಏನೋ ಕೃತ್ರಿಮತೆಯಿದ್ದಂತೆ ಅವಳಿಗೆ ತೋರಿತು. 'ಆದರೆ ನಾನವಳನ್ನೇಕೆ ಬರಮಾಡಿಕೊಳ್ಳಬಾರದು? ನನ್ನನ್ನವಳು ಸಮಾಧಾನಪಡಿಸಲು ಪ್ರಯತ್ನಿಸದಿದ್ದರಷ್ಟೇ ಸಾಕು' ಎಂದು ಡಾಲಿ ಎಣಿಸಿದಳು. 'ಎಲ್ಲ ಬಗೆಯ ಸಮಾಧಾನ ಬುದ್ಧಿವಾದ ಮತ್ತು ಕ್ರಿಶ್ಚಿಯನ್ ಕ್ಷಮೆಗಳ ಬಗ್ಗೆ ಸಾವಿರಾರು ಸಲ ಆಲೋಚಿಸಿದ್ದೇನೆ. ಅವುಗಳಿಂದ ಏನೇನೂ ಪ್ರಯೋಜನವಾಗದು.'

ಇತ್ತೀಚಿನ ಕೆಲವು ದಿನಗಳನ್ನವಳು ತನ್ನ ಮಕ್ಕಳೊಡನೆ ಏಕಾಕಿಯಾಗಿ ಕಳೆದಿದ್ದಳು. ತನ್ನ ಸಂಕಟದ ವಿಷಯವನ್ನು ಪ್ರಸ್ತಾಪಿಸುವ ಇಷ್ಟ ಅವಳಿಗಿರಲಿಲ್ಲ; ತನ್ನ ಹೃದಯದಲ್ಲಿಂಥ ಸಂಕಟವನ್ನಿಟ್ಟುಕೊಂಡು ಬೇರೆ ವಿಷಯವನ್ನು ಕುರಿತು ಮಾತಾಡಲಾರ ದವಳಾಗಿದ್ದಳು. ಒಂದಲ್ಲ ಒಂದು ರೀತಿಯಲ್ಲಿ ಅನ್ನಾಳಿಗೆ ಎಲ್ಲವನ್ನು ಹೇಳಬೇಕಾದೀತೆಂದು ಅವಳು ತಿಳಿದಿದ್ದಳು; ಮುಚ್ಚುಮರೆಯಿಲ್ಲದೆ ತನ್ನ ಸಂಕಟವನ್ನು ತೋಡಿಕೊಳ್ಳಬಹುದಾದ ಅವಕಾಶ ಲಭಿಸಿದ್ದಕ್ಕಾಗಿ ಅವಳೊಂದು ಕ್ಷಣ ಹರ್ಷಗೊಂಡದ್ದು ಉಂಟು. ಅವಳೊಡನೆ, ಅವರ ತಂಗಿಯೊಡನೆ ತನ್ನೆಲ್ಲ ಅಪಮಾನದ ಕಥೆಯನ್ನು ನಿರೂಪಿಸುವ ಮತ್ತು ತಂಗಳು

ಬುದ್ಧಿವಾದ ಮತ್ತು ಸಮಾಧಾನಗಳನ್ನು ಕೇಳಬೇಕಾದ ಪ್ರಸಂಗವನ್ನು ನೆನೆದು ಅವಳು ಮರುಕ್ಷಣವೇ ಕುಪಿತಗೊಂಡಳು. ಯಾವ ಕ್ಷಣದಲ್ಲಾದರೂ ಅತಿಥಿ ಬರಬಹುದೆಂಬ ನಿರೀಕ್ಷೆಯಿಂದ ಅವಳು ಪ್ರತಿ ನಿಮಿಷವೂ ಗಡಿಯಾರದ ಕಡೆಗೆ ನೋಡುತ್ತಿದ್ದಳು. ಆದರೆ ಹಲವು ಸಲ ಸಂಭವಿಸುವಂತೆ, ಬಾಗಿಲ ಗಂಟೆ ಕೇಳಿಸಲಿಲ್ಲವಾಗಿ, ಅತಿಥಿ ಬಂದದ್ದು ಅವಳ ಗಮನಕ್ಕೆ ಬರಲಿಲ್ಲ.

ಬಾಗಿಲಲ್ಲಿ ಲಂಗದ ಮುರ ಮುರ ಶಬ್ದ ಮತ್ತು ಹಗುರ ಹೆಜ್ಜೆಗಳ ಸದ್ದು ಕೇಳಿಸಲಾಗಿ ಅವಳು ಸುತ್ತಲೂ ಕಣ್ಣು ಹೊರಳಿಸಿದಳು. ಅವಳ ಸೊರಗಿದ ಮುಖ ಸಂತೋಷಕ್ಕೆ ಬದಲಾಗಿ ಆಶ್ಚರ್ಯವನ್ನು ವ್ಯಕ್ತಪಡಿಸಿತು. ಅವಳು ಮೇಲೆದ್ದು, ತನ್ನ ನಾದಿನಿಯನ್ನಪ್ಪಿಕೊಂಡಳು.

'ಏನು? ಎಷ್ಟುಬೇಗ ಬಂದು ಬಿಟ್ಟೆ?' ಎಂದವಳು ನಾದಿನಿಯನ್ನು ಚುಂಬಿಸುತ್ತ ಕೇಳಿದಳು.

'ನಿನ್ನನ್ನು ನೋಡಿ ತುಂಬ ಸಂತೋಷವಾಯಿತು, ಡಾಲಿ.'

'ನನಗೂ ಅಷ್ಟೇ ಸಂತೋಷವಾಗಿದೆ' ಎಂದು ನುಡಿಯುವಾಗ ಡಾಲಿಯ ಮುಖದ ಮೇಲೆ ದುರ್ಬಲ ಮಂದಹಾಸ ನುಸುಳಿತು. ಅನ್ನಾಳ ಮುಖಭಾವದಿಂದ ಅವಳಿಗೆಲ್ಲ ತಿಳಿದಿರಬಹುದೆ ಎಂದವಳು ಊಹಿಸಲು ಪ್ರಯತ್ನಿಸಿದಳು. 'ಪ್ರಾಯಶಃ ಅವಳಿಗೆ ಗೊತ್ತಿರಬೇಕು' ಎಂದವಳು ಅನ್ನಾಳ ಮುಖದ ಮೇಲೆ ಮುದ್ರಿಸಿದಂತಿದ್ದ ಸಹಾನುಭೂತಿಯನ್ನು ಗಮನಿಸುತ್ತ ಆಲೋಚಿಸಿದಳು. 'ಇಗೋ, ಇಲ್ಲಿ ಬನ್ನಿ. ನಿಮ್ಮ ಕೋಣೆ ತೋರಿಸುತ್ತೇನೆ' ಎಂದವಳು ನಾದಿನಿಯನ್ನು ಕರೆದಳು. ಅಂತರಂಗದ ಸಂಗತಿಗಳ ಪ್ರಸ್ತಾಪವನ್ನು ಮುಂದೂಡಲು ಅವಳು ಕಾತರಳಾಗಿದ್ದಂತೆ ತೋರಿತು.

'ಓ, ಇವ ಗ್ರಿಷ ಅಲ್ಲವೆ? ಭೇಷ್, ಭೇಷ್, ಅದೆಷ್ಟು ಸೊಂಪಾಗಿ ಬೆಳೆದಿದ್ದಾನೆ?' ಎಂದು ಅನ್ನಾ ನುಡಿದಳು. ಡಾಲಿಯ ಮೇಲಿದ್ದ ದೃಷ್ಟಿಯನ್ನು ಬದಲಾಯಿಸದೆಯೆ ಅವಳು ಮಗುವಿಗೆ ಮುತ್ತಿಟ್ಟಳು. ಅನಂತರ ಅವಳಲ್ಲಿಯೇ ನಿಂತುಕೊಂಡು 'ಇಲ್ಲೇ ಇರುತ್ತೇನೆ. ಆಗಬಹುದು ತಾನೆ?' ಎನ್ನುವಾಗ ಅವಳ ಮುಖ ಕೆಂಪೇರಿತು.

ಅವಳು ಅಂಗವಸ್ತ್ರವನ್ನು ಟೋಪಿಯನ್ನು ತೆಗೆದಳು. ದಟ್ಟವಾದ ಗುಂಗುರು ಗೂದಲಿನ ಕಪ್ಪನೆಯ ಕುರುಳೊಂದು ಟೋಪಿಯಲ್ಲಿ ಸಿಕ್ಕಿಕೊಂಡಿರಲಾಗಿ, ಅದನ್ನು ಬಿಡಿಸಿಕೊಳ್ಳಲು ತಲೆಯನ್ನು ತೊನೆದಳು.

'ಆರೋಗ್ಯ ಸುಖ ಸಂತೋಷಗಳು ನಿಮ್ಮಲ್ಲಿ ತುಂಬಿ ತುಳುಕುತ್ತಿವೆ' ಎಂದು ಡಾಲಿ ತುಸು ಈರ್ಷ್ಯಾಪೂರ್ವಕವಾಗಿ ಸೊಲ್ಲಿಸಿದಳು.

'ನನ್ನಲ್ಲಿಯೆ?....ಓ, ಹೌದು' ಎಂದು ಅನ್ನಾ ನುಡಿದಳು. 'ಎಲ್ಲ ದೇವರ ದಯೆ!—ಓ, ತನ್ಯಳೆ? ನನ್ನ ಸರ್ಜಿಯಷ್ಟೇ ವಯಸ್ಸಿನವಳು' ಎಂದವಳು ಒಳಗೆ ಓಡೋಡಿ ಬಂದ ಸಣ್ಣ ಹುಡುಗಿಯನ್ನು ಹತ್ತಿರಕ್ಕೆ ಕರೆದಳು. ಆ ಮಗುವನ್ನವಳು ತೋಳಲ್ಲೆತ್ತಿಕೊಂಡು, ಚುಂಬಿಸಿದಳು. 'ಎಂಥ ಮುದ್ದು ಮಗು, ಎಂಥ ಸುಂದರ ಪುತ್ಥಳಿ! ಅವನ್ನೆಲ್ಲ ನನಗೆ ತೋರಿಸು.'

ಅವಳು ಪ್ರತಿಯೊಬ್ಬರ ಹೆಸರು ಹಿಡಿದು ಕರೆದಳು. ಅವರ ಹೆಸರುಗಳನ್ನು ಮಾತ್ರವಲ್ಲ, ಅವರು ಹುಟ್ಟಿದ ವರ್ಷಮಾಸಗಳನ್ನೂ, ಅವರ ಗುಣಲಕ್ಷಣಗಳನ್ನೂ, ಅವರನುಭವಿಸಿದ ರೋಗರುಜಿನಗಳನ್ನೂ ಅವಳು ನೆನೆಸಿಕೊಂಡಳು. ಡಾಲಿ ಅವಳ ಸ್ಮೃತಿಶಕ್ತಿಯನ್ನು ತುಂಬ ಮೆಚ್ಚಿಕೊಂಡಳು.

'ಅವರ ಬಳಿಗೀಗ ಹೋಗೋಣ' ಎಂದವಳು ನುಡಿದಳು. 'ಆದರೆ ವ್ಯ ಗಾಢ ನಿದ್ರೆಯಲ್ಲಿದ್ದಾಳಲ್ಲ; ಅಯ್ಯೋ ಪಾಪ!'

ಅವರು ಮಕ್ಕಳನ್ನು ನೋಡಲು ಹೋದಾಗ ಎಲ್ಲರೂ ದಿವಾನಖಾನೆಯಲ್ಲಿ ಕಾಫಿಗಾಗಿ ಕುಳಿತಿದ್ದರು. ಅನ್ನಾ ತಟ್ಟೆಯನ್ನೆಳೆದುಕೊಂಡು, ಪಕ್ಕಕ್ಕೆ ನೂಕಿದಳು.

'ಡಾಲಿ, ಅವನೆಲ್ಲವನ್ನು ನನಗೆ ತಿಳಿಸಿದ್ದಾನೆ' ಎಂದವಳು ಮಾತು ತೆಗೆದಳು.

ಡಾಲಿ ಅನ್ನಾಳ ಕಡೆಗೆ ಔದಾಸೀನ್ಯದಿಂದ ಕಣ್ಣು ಹಾಯಿಸಿದಳು. ಅವಳು ಅನ್ನಾಳ ಕಡೆಯಿಂದ ಭಾವಪೂರ್ಣವಾದ ಸಹಾನುಭೂತಿಯ ಮಾತುಗಳನ್ನು ನಿರೀಕ್ಷಿಸುತ್ತಿದ್ದಳು. ಆದರೆ ಅನ್ನಾಳ ಬಾಯಿಂದ ಅಂಥ ಮಾತು ಹೊರಡಲಿಲ್ಲ.

'ಪ್ರಿಯ ಡಾಲಿ, ಅವನ ಪರವಾಗಿ ಮಾತಾಡುವ ಅಥವಾ ನಿನ್ನನ್ನು ಸಮಾಧಾನಪಡಿಸುವ ಇಚ್ಛೆ ನನಗಿಲ್ಲ. ಅದು ಸಾಧ್ಯವಿಲ್ಲದ ಮಾತು. ಆದರೆ, ಅತ್ತಿಗೆ, ನಿನ್ನ ಸಂಕಟವನ್ನು ನೋಡಿ ನನಗೆ ನಿಜಕ್ಕೂ ವ್ಯಥೆಯಾಗಿದೆ.'

ಅವಳ ಪ್ರಕಾಶಮಾನವಾದ ಕಣ್ಣುಗಳ ದಟ್ಟ ಎವೆಗಳ ಹಿಂದುಗಡೆ ಅಶ್ರು ಹನಿಗೂಡಿದುವು. ಅವಳು ಅತ್ತಿಗೆಯ ಪಕ್ಕದಲ್ಲಿ ಕುಳಿತುಕೊಂಡು, ತನ್ನ ಗಟ್ಟಿಮುಟ್ಟಾದ ಕೈಗಳಿಂದ ಅವಳ ಕೈಹಿಡಿದುಕೊಂಡಳು. ಡಾಲಿ ಅವಳಿಂದ ದೂರ ಸರಿಯಲಿಲ್ಲ; ಆದರೆ ಅವಳ ಮುಖದಲ್ಲಿ ನಿರುತ್ಸಾಹ ಮಡುಗಟ್ಟಿತ್ತು. 'ನೀನು ನನ್ನನ್ನು ಸಂತೈಸಲಾರೆ. ಅದೆಲ್ಲ ಮುಗಿದ ಕತೆ. ಈಗೇನೂ ಉಳಿದಿಲ್ಲ' ಎಂದವಳು ನುಡಿದಳು.

ಆ ಮಾತು ಮುಗಿಯುತ್ತಿದ್ದಂತೆ ಅವಳ ಮುಖದಲ್ಲಿ ಸೌಮ್ಯಭಾವ ಸುಳಿಯಿತು. ಅನ್ನಾ ಡಾಲಿಯ ಕೃಶಸುಪುರ ಹಸ್ತವನ್ನೆಳೆದುಕೊಂಡು ಚುಂಬಿಸಿದಳು.

'ಆದರೆ ಈಗ ಮಾಡಬಹುದಾದ್ದೇನು, ಡಾಲಿ?' ಎಂದವಳು ಪ್ರಶ್ನಿಸಿದಳು. 'ಮಾಡಬಹುದಾದ್ದೇನು? ಸದ್ಯದ ವಿಷಮ ಸನ್ನಿವೇಶದಲ್ಲಿ ನಾವನುಸರಿಸಬಹುದಾದ ಉತ್ತಮ ಉಪಾಯ ಯಾವುದು? ನಾವೀಗ ಯೋಚಿಸಬೇಕಾದ್ದೇ ಅದು.'

'ಎಲ್ಲವೂ ಮುಗಿದಿದೆ. ಇನ್ನೇನೂ ಉಳಿದಿಲ್ಲ' ಎಂದು ಡಾಲಿ ನುಡಿದಳು. 'ಅತ್ಯಂತ ಕಷ್ಟದ ವಿಷಯವೆಂದರೆ ಅದೇ ಈಗ ಯೋಚಿಸಬೇಕಾದ್ದು!—ಅವರನ್ನೀಗ ಬಿಡಲಾರೆ: ಮಕ್ಕಳಿದ್ದಾರೆ. ನನ್ನ ಕೈಕಾಲುಗಳನ್ನು ಕಟ್ಟಿದಂತಾಗಿದೆ. ಆದರೆ ಅವರೊಡನೆ ಬಾಳುವೆ ನಡೆಸಲಾರೆ; ಅವರ ದರ್ಶನವೇ ನನಗೆ ಹಿಂಸೆಯಾಗುತ್ತದೆ.'

'ಮುದ್ದು ಡಾಲಿ, ಅವನೆಲ್ಲ ಹೇಳಿದ್ದಾನೆ. ಆದರೆ ಆ ಕತೆಯನ್ನು ನಿನ್ನ ಬಾಯಿಂದ ಕೇಳಬೇಕೆಂದಿದ್ದೇನೆ–ಚಾಚೂ ತಪ್ಪದೆ ಹೇಳಿಬಿಡು.'

ಡಾಲಿ ಅನ್ವೇಷಕ ದೃಷ್ಟಿಯಿಂದ ಅವಳ ಕಡೆಗೆ ನೋಡಿದಳು.

ಅನ್ನಾಳ ಮುಖದಲ್ಲಿ ಪ್ರಾಮಾಣಿಕವಾದ ಪ್ರೇಮ ಸಹಾನುಭೂತಿಗಳು ಮಾರ್ಪೊಳೆದುವು.

'ಸರಿ ಹಾಗಾದರೆ' ಎಂದವಳು ಒಡನೆಯೇ ಕತೆ ಆರಂಭಿಸಿದಳು. 'ಮೊದಲಿಂದ ಶುರುಮಾಡುತ್ತೇನೆ. ನಾನು ಮದುವೆಯಾದ ಪರಿ ನಿನಗೆ ಗೊತ್ತಿದೆ. ಅಮ್ಮ ಕಲಿಸಿದ ಶಿಕ್ಷಣದ ಫಲವಾಗಿ ನಾನು ಮುಗ್ಧೆಯಾಗಿದ್ದೆ, ಪೆಪ್ಪೆತಕ್ಕಡಿಯಾಗಿದ್ದೆ. ನನಗೆ ಸ್ವಲ್ಪವೂ ತಿಳಿವಳಿಕೆ ಇರಲಿಲ್ಲ. ತಾವು ಹಿಂದೆ ಬಾಳಿ ಬದುಕಿದ ವಿವರಗಳನ್ನು ಗಂಡಂದಿರು ತಮ್ಮ ಮಡದಿಯರಿಗೊಪ್ಪಿಸುತ್ತಾರೆಂಬುದು ಸಾಮಾನ್ಯವಾಗಿ ಚಾಲ್ತಿಯಲ್ಲಿರುವ ನಂಬಿಕೆ. ಆದರೆ ಸ್ಟೀವ್–' ಅಷ್ಟಕ್ಕೆ ತಡೆದು ತನ್ನ ಮಾತು ತಿದ್ದಿಕೊಂಡಳು. ಆದರೆ ಸ್ಟೀಫನ್ ಅರ್ಕಾದೇವಿಚ್ ಏನೊಂದೂ ಹೇಳಲಿಲ್ಲ. ಅವನು ತೀರ ಸಲುಗೆಯಿಂದಿದ್ದ ಹೆಂಗಸು ತಾನೊಬ್ಬಳೇ ಎಂದು ಈ ತನಕ ನಾನು ತಿಳಿದಿದ್ದೆ. ನಿಜ ಹೇಳಿದರೆ ನೀನು ನಂಬುವುದು ಕಷ್ಟ. ಈ ರೀತಿ ನಾನು ಎಂಟು ವರ್ಷಗಳ ಕಾಲ ಬಾಳು ನಡಸಿದೆ. ಅವರ ದಾಂಪತ್ಯ ದ್ರೋಹದ ಬಗ್ಗೆ ಎಳ್ಳಷ್ಟಾದರೂ ನನಗೆ ಶಂಕೆಯಿರಲಿಲ್ಲವೆಂದು ಹೇಳಿದರೆ ನೀನು ನಂಬುತ್ತೀಯೆಂದು ನಾನು ಭಾವಿಸಿದ್ದೇನೆ. ಅಂಥ ಸಂಗತಿ ಅಸಾಧ್ಯ ವೆಂದೇ ನಾನು ತಿಳಿದಿದ್ದೆ. ಅಂಥ ಸದ್ಭಾವನೆಗಳಲ್ಲಿ ಮುಳುಗಿದ್ದ ನನ್ನ ಮುಂದೆ ಇದ್ದಕ್ಕಿದ್ದಂತೆ ಈ ಎಲ್ಲ ಭೀಕರ ಸಂಗತಿಗಳು, ಈ ಎಲ್ಲ ಅಸಹ್ಯಗಳು ಪ್ರತ್ಯಕ್ಷವಾದಾಗ, ನನ್ನ ಮನಸ್ಸಿಗೆಂಥ ಆಘಾತವಾಗಿರಬೇಕೆಂಬುದನ್ನು ಕಲ್ಪಿಸಿಕೊಳ್ಳಲು ಪ್ರಯತ್ನಿಸು.... ನನ್ನ ಸಂಕಟವನ್ನರ್ಥಮಾಡಿಕೊಳ್ಳಲು ನೀನು ಪ್ರಯತ್ನಿಸು. ಹಾಯಾಗಿ, ನಿರಾತಂಕ ವಾಗಿ ಬಾಳು ಸಾಗುತ್ತಿರುವಾಗ, ಇದ್ದಕ್ಕಿದ್ದಂತೆ....' ಎನ್ನುವಾಗ ಉಕ್ಕಿಬಂದ ಗದ್ಗದವ ನ್ನವಳು ಅದುಮಿಕೊಂಡು ಮಾತು ಮುಂದುವರಿಸಿದಳು. 'ಈ ಕಾಗದ ನನ್ನ ಕೈಗೆ ಸಿಕ್ಕಿದರೆ—ಇದೆಂಥ ಕಾಗದ! ತಮ್ಮ ಉಪಪತ್ನಿಗೆ, ನನ್ನ ಮಕ್ಕಳ ಉಪಾಧ್ಯಾಯಿನಿಗೆ ಬರೆದ ಪತ್ರ—ನನ್ನ ಮನಸ್ಸಿಗೆ ಆಘಾತವಾಗಬೇಡವೆ? ಓ, ಅದರ ನೆನಪೇ ಘೋರ!' ಅವಳು ಅವಸರವಾಗಿ ಕೈಚೌಕವನ್ನೆಳೆದುಕೊಂಡು ಅದರಿಂದ ತನ್ನ ಮುಖವನ್ನು ಮುಚ್ಚಿಕೊಂಡಳು. 'ರಾಗೋದ್ರೇಕ ನನಗರ್ಥವಾಗುತ್ತದೆ' ತುಸು ತಡೆದು ಅವಳು ಮತ್ತೆ ಮಾತು ಮುಂದುವರಿಸಿದಳು. 'ಉದ್ದೇಶಪೂರ್ವಕವಾಗಿ, ಕುತಂತ್ರದ ಮೂಲಕ ನನ್ನನ್ನು ಮೋಸಗೊಳಿಸಲೆಂದೆ....ಹಾಗೂ ಯಾರೊಡನೆ....? ಏಕಕಾಲದಲ್ಲಿ ನನ್ನ ಗಂಡ ನಾಗಿದ್ದುಕೊಂಡು, ಅವಳೊಡನೆ ತಮ್ಮ ಸಂಬಂಧವನ್ನು ಮುಂದುವರಿಸುವುದೆ? ಓ, ಅದರ ನೆನಪೇ ತಳಮಳಗುಟ್ಟಿಸುತ್ತದೆ. ಅಂಥ ವ್ಯವಹಾರ ನಿನಗರ್ಥವಾಗದು.'

'ಹೌದ್ಹೌದು, ನನಗರ್ಥವಾಗುತ್ತದೆ, ನಿಜಕ್ಕೂ ನನಗರ್ಥವಾಗುತ್ತದೆ, ನನ್ನ ಮುದ್ದು ಡಾಲಿ' ಎಂದು ಅನ್ನಾ ತನ್ನ ಕೈ ಹಿಸುಕಿಕೊಳ್ಳುತ್ತ ನುಡಿದಳು.

'ನನ್ನ ಸ್ಥಿತಿಗತಿಯ ಪೂರ್ಣ ಭಯಂಕರ ಸ್ವರೂಪ ಅವರಿಗರ್ಥವಾಗುತ್ತದೆಂದು ನೀನು ತಿಳಿದೆಯಾ?' ಎಂದು ಡಾಲಿ ಸೊಲ್ಲಿಸಿದಳು. 'ಖಂಡಿತ ಸಾಧ್ಯವಿಲ್ಲ. ಅವರು ಸುಖಸಂತೃಪ್ತಿಗಳಲ್ಲಿ ಓಲಾಡುತ್ತಿದ್ದಾರೆ.'

'ಇಲ್ಲ, ಇಲ್ಲ!' ಎಂದು ಅನ್ನಾ ಕೂಡಲೇ ಮಧ್ಯೆ ಬಾಯಿ ಹಾಕಿದಳು. 'ಅವನು ದುಃಖಾಕ್ರಾಂತನಾಗಿದ್ದಾನೆ; ಪಶ್ಚಾತ್ತಾಪ ದಗ್ಧನಾಗಿದ್ದಾನೆ.'

'ಅವರಲ್ಲಿ ಪರಿತಾಪ ನಿರೀಕ್ಷಿಸುವುದು ಸಾಧ್ಯವೆ?' ಎಂದು ಡಾಲಿ ಅತ್ಯಾಸಕ್ತಿ ಯಿಂದ ತನ್ನ ನಾದಿನಿಯ ಮುಖವನ್ನು ವೀಕ್ಷಿಸುತ್ತ ಕೇಳಿದಳು.

'ಹೌದು, ನನಗವನ ಮರ್ಮ ತಿಳಿದಿದೆ. ಅವನನ್ನು ನೋಡಿದಾಗಲೆಲ್ಲ ಅವನ ಬಗ್ಗೆ ನನಗೆ ಮರುಕವಾಗುತ್ತದೆ. ನಾವಿಬ್ಬರೂ ಅವನನ್ನು ಬಲ್ಲೆವು. ಅವನು ದಯಾಪರ, ಆದರೆ ಸ್ವಾಭಿಮಾನಿ; ಈಗವನ ಸೊಕ್ಕು ಮುರಿದಿದೆ! ನನ್ನ ಹೃದಯವನ್ನು ತಾಗಿದ ಎರಡು ಸಂಗತಿಗಳೆಂದರೆ....' ಡಾಲಿಯ ಮನಸ್ಸನ್ನು ಕರಗಿಸಬಹುದಾದ ಸಂಗತಿ ಏನಿರಬಹುದೆಂದು ಅನ್ನಾ ಊಹಿಸಿಕೊಂಡಳು.) '....ಅವನೀಗ ಎರಡು ಸಂಗತಿಗಳ ಇಕ್ಕುಳದ ನಡುವೆ ಸಿಕ್ಕಿಕೊಂಡಿದ್ದಾನೆ: ಮಕ್ಕಳ ದೆಸೆಯಿಂದಾಗಿ ಅವನು ಲಜ್ಜಾಸ್ಪದನಾಗಿದ್ದಾನೆ; ತಾನು ಪ್ರೀತಿಸುವ—ಹೌದ್ಹೌದು, ಭೂಮಿಯ ಮೇಲೆ ಎಲ್ಲಕ್ಕಿಂತ ಮಿಗಿಲಾಗಿ ಪ್ರೀತಿಸುವ ನಿನಗೆ ನೋವುಂಟುಮಾಡಿದ್ದಕ್ಕಾಗಿ' ಎಂದವಳು ಡಾಲಿಯ ಪ್ರತಿಭಟನೆಯನ್ನೆದುರಿಸುವ ಸಲುವಾಗಿ ಮಾತುಗಳನ್ನು ಚುರುಕುಗೊಳಿಸಿದಳು. 'ನಿನಗೆ ನೋವುಂಟುಮಾಡಿದ್ದಕ್ಕಾಗಿ, ನಿನ್ನನ್ನು ಕೊಂದರೆಗೀಡುಮಾಡಿದ್ದಕ್ಕಾಗಿ ಅವನು ವ್ಯಾಕುಲಗೊಂಡಿದ್ದಾನೆ. "ಇಲ್ಲ, ಇಲ್ಲ, ಅವಳೆಂದೂ ನನ್ನನ್ನು ಕ್ಷಮಿಸುವುದಿಲ್ಲ" ಎಂದವನು ಆಗಾಗ್ಗೆ ಗೊಣಗಿಕೊಳ್ಳುತ್ತಾನೆ.'

ತನ್ನ ನಾದಿನಿಯ ಮಾತುಗಳನ್ನಾಲಿಸುತ್ತ ಡಾಲಿ ಅವಳಿಂದಾಚೆಗಿನ ಲೋಕವನ್ನು ಕನಸುಗಣ್ಣುಗಳಿಂದ ನಿಟ್ಟಿಸುತ್ತಿದ್ದಳು. 'ಹೌದು, ಅವರ ಸ್ಥಿತಿ ಭಯಂಕರವಾಗಿದೆಯೆಂಬುದು ನನಗರ್ಥವಾಗುತ್ತದೆ; ಮುಗ್ಧರಿಗಿಂತ ಅಪರಾಧಿಗಳಿಗೆ ಅದು ತೀವ್ರವಾಗಿ ತೋರುತ್ತದೆ' ಎಂದವಳು ನುಡಿದಳು. 'ತನ್ನ ಅಪರಾಧವೇ ಎಲ್ಲ ಸಂಕಟಕ್ಕೆ ಕಾರಣವೆಂದು ಅವರಿಗರ್ಥವಾಗುವುದಾದರೆ ಮಾತ್ರ ಅದು ಸಾಧ್ಯ. ಆದರೆ ಅವಳಿದ್ದೂ ನಾನೆಂತು ಮತ್ತೆ ಅವರ ಮಡದಿಯಾದೇನು? ಅವರನ್ನೆಂತು ಕ್ಷಮಿಸಲಿ? ಹಿಂದೆ ಪ್ರೀತಿಸುತ್ತಿದ್ದವರನ್ನು ಈಗಲೂ ಪ್ರೀತಿಸಬೇಕೆಂಬ ಕಾರಣಕ್ಕಾಗಿ, ಅವರೊಡನೆ ಬಾಳುವೆ ನಡಸುವುದು ಅಸಹನೀಯವಾಗುತ್ತದೆ.'

ಗದ್ಗದ ಅವಳ ಮಾತುಗಳನ್ನು ನುಂಗಿದುವು. ಆದರೆ ತನ್ನ ಹೃದಯ ಮಾರ್ದವಗೊಂಡಂತೆಲ್ಲ, ಯಾವುದೋ ನಿರ್ಬಂಧದಿಂದಲೆಂಬಂತೆ, ಮತ್ತೆ ಮತ್ತೆ ಅವಳು ತನ್ನ ಬೇಗುದಿಯನ್ನು ತೋಡಿಕೊಳ್ಳುತ್ತಿದ್ದಳು.

'ಅವಳಿನ್ನೂ ಚಿಕ್ಕವಳು! ಚೆಲುವೆ!' ಎಂದವಳು ನುಡಿದಳು. 'ಆದರೆ, ನನ್ನಿಂದ ಯೌವನವನ್ನೂ, ಲಾವಣ್ಯವನ್ನೂ ಯಾರು ಅಪಹರಿಸಿದ್ದಾರೆಂಬುದು ನಿನಗೆ ಚೆನ್ನಾಗಿ ಗೊತ್ತಿದೆ, ಅನ್ನಾ. ಅವರು ಮತ್ತು ಅವರ ಮಕ್ಕಳು. ನನ್ನಿಂದೆಷ್ಟು ಸೇವೆ ಸಾಧ್ಯವೋ ಅಷ್ಟನ್ನೂ ಅವರಿಗೆ ಸಲ್ಲಿಸಿದೆ. ಹಾಗೆ ಸೇವೆ ಸಲ್ಲಿಸುವಲ್ಲಿ, ನಾನೆಲ್ಲವನ್ನು ಅವರಿಗಾಗಿ ತ್ಯಾಗ ಮಾಡಿದೆ. ಈಗವರಿಗೆ ಈ ಹೊಚ್ಚ ಹೊಸ, ಕೀಳುನಡತೆಯ, ಎಳೆಯ ವಸ್ತು ಬೇಕಾಗಿದೆ. ಅವರಿಬ್ಬರೂ ನನ್ನ ಬಗ್ಗೆ ಪರಸ್ಪರವಾಗಿ ಏನೇನೋ ಮಾತಾಡಿಕೊಂಡಿರಬೇಕೆಂದು ಬಗೆದಿದ್ದೇನೆ. ಕನಿಷ್ಠವೆಂದರೆ, ನನ್ನ ಬಗ್ಗೆ ಅವರು ಮೌನದಿಂದಿರಬಹುದು—ನಿನಗೀಗ ಅರ್ಥವಾಯಿತೆ?' ಮತ್ತೊಮ್ಮೆ ಅವಳ ನೇತ್ರಗಳಲ್ಲಿ ದ್ವೇಷಾಗ್ನಿ ಪ್ರಜ್ವಲಿಸಿತು. 'ಇಷ್ಟೆಲ್ಲ ಹಗರಣ ನಡೆದನಂತರವೂ ನನ್ನೊಡನೆ....ಹೇಳಲು ಪ್ರಯತ್ನಿಸುತ್ತಾರೆ....ನಾನವರನ್ನು ನಂಬಬಹುದೆ? ನೀನೇ ಹೇಳು. ಖಂಡಿತ ಸಾಧ್ಯವಿಲ್ಲ ಇಲ್ಲ, ಇಲ್ಲ; ಅದೆಲ್ಲ ಮುಗಿದ ಕತೆ. ನನ್ನ ಸುಖದ ದಿನಗಳು, ನನ್ನ ಕಷ್ಟಕ್ಕೆ ಪ್ರತಿಫಲ ಲಭಿಸುತ್ತಿದ್ದ ದಿನಗಳು ಎಲ್ಲ ಮುಗಿದಿವೆ.

ಈಗಂತು ಬರಿಯ ಯಾತನೆ....ಗ್ರಿಷಗೆ ನಾನು ಪಾಠ ಕಲಿಸುತ್ತಿದ್ದೆ—ಬೋಧನೆ ನನಗೆ ಪ್ರಿಯವಾದ ಕೆಲಸ; ಈಗದು ನನಗೆ ಅಸಹ್ಯವಾಗಿ ತೋರುತ್ತಿದೆಯೆಂದರೆ ನೀನು ನಂಬು ವೆಯಾ? ನಾನೇಕೆ ದುಡಿಯಬೇಕು? ಇಷ್ಟೆಲ್ಲ ಶ್ರಮ ಏಕೆ? ನನಗೆ ಮಕ್ಕಳು ಬೇಕಾ ಗಿತ್ತೆ? ನನ್ನ ಹೃದಯ ಸಂಪೂರ್ಣವಾಗಿ ಬದಲಾವಣೆಗೊಂಡಿರುವುದೇ ಭೀಕರಾನುಭವ ವಾಗಿದೆ. ಯಾವ ಹೃದಯ ಅವರ ವಿಷಯದಲ್ಲಿ ಹಿಂದೊಮ್ಮೆ ಪ್ರೇಮದ, ಮಾರ್ದವತೆಯ ಮಡುವಾಗಿತ್ತೋ ಈಗದು ದ್ವೇಷದ ಅಗ್ನಿಕುಂಡವಾಗಿದೆ. ಹೌದು, ಅದು ದ್ವೇಷದ ಜ್ವಾಲಾಮುಖಿಯಾಗಿದೆ. ಅವರನ್ನು ಕೊಂದುಬಿಡುವಷ್ಟು....'

'ಮುದ್ದು ಡಾಲಿ, ನನಗದೆಲ್ಲ ಅರ್ಥವಾಗುತ್ತದೆ. ಆದರೆ ಈ ಆತ್ಮಹಿಂಸೆ ಬೇಡ. ನಿನಗೆ ತುಂಬ ನೋವಾಗಿದೆ, ಭಾವೋದ್ರೇಕವಾಗಿದೆ; ಅದರಿಂದಾಗಿ ಎಲ್ಲವನ್ನು ನೀನು ತಪ್ಪುತಪ್ಪಾಗಿ ಅರ್ಥಮಾಡಿಕೊಳ್ಳುತ್ತಿದ್ದೀಯೆ.'

ಡಾಲಿ ಸ್ತಬ್ಧಳಾದಳು. ಕೆಲವು ನಿಮಿಷ ಇಬ್ಬರೂ ಮೌನವಾಗಿದ್ದರು.

'ಈಗೇನು ಮಾಡುವುದಿದೆ? ಆ ಬಗ್ಗೆ ಯೋಚಿಸು, ಅನ್ನಾ. ನನಗೆ ನೆರವು ನೀಡು. ನಾನು ಮತ್ತೆಮತ್ತೆ ಆಲೋಚಿಸಿದ್ದೇನೆ. ನನಗೆ ಬೇರೆ ದಾರಿಯೇ ಕಾಣದಾಗಿದೆ.'

ಅನ್ನಾಳಿಗೂ ಅನ್ಯೋಪಾಯ ಹೊಳೆಯಲಿಲ್ಲ. ಅತ್ತಿಗೆಯ ಪ್ರತಿಯೊಂದು ಮಾತಿಗೂ, ಅವಳ ಹಣೆಯಲ್ಲಿ ವ್ಯಕ್ತವಾಗುತ್ತಿದ್ದ ಪ್ರತಿಯೊಂದು ಭಾವಪರಿವರ್ತನೆಗೂ ಅವಳ ಹೃದಯ ಮಿಡಿಯುತ್ತಿತ್ತು.

'ನಾನು ಹೇಳಬಹುದಾದ ವಿಷಯವೊಂದಿದೆ' ಎಂದವಳು ಮಾತು ಪ್ರಾರಂಭಿಸಿ ದಳು. 'ನಾನವನ ತಂಗಿ, ನಾನವನ ಸ್ವಭಾವವನ್ನು ಬಲ್ಲೆ. ಎಲ್ಲವನ್ನು ಮರೆಯುವ ಪ್ರವೃತ್ತಿ ಅವನದು' ಎಂದವಳು ತನ್ನ ಹಣೆಯ ಮುಂದೆ ಕೈಯಾಡಿಸಿದಳು. 'ಇತ್ತೀಚಿನ ವ್ಯಾಮೋಹಕ್ಕಂತು ವಶನಾಗಿದ್ದಾನೆಯೋ ಅಂತೆಯೇ ಅದಕ್ಕಾಗಿ ಪಶ್ಚಾತ್ತಾಪ ಪಡುವ ಸ್ವಭಾವ ಅವನದು. ಈಗ ತಾನೇನು ನಡಸಿದ್ದಾನೆಯೋ, ಅದೆಲ್ಲ ಹೇಗಾಯಿತೆಂಬುದೇ ಅವನಿಗರ್ಥವಾಗದು. ಅದನ್ನೆಲ್ಲ ನಂಬುವುದು ಸಹ ಆತನಿಗೆ ಕಷ್ಟವಾಗಿದೆ.'

'ಓ, ಅದು ನಿಜವಲ್ಲ. ಅವರಿಗದು ಅರ್ಥವಾಗಿದೆ, ಅರ್ಥವಾಗಿತ್ತು!' ಎಂದು ಡಾಲಿ ನಡುವೆ ಬಾಯಿ ಹಾಕಿದಳು. 'ಆದರೆ ನಾನು....ನೀನು ನನ್ನನ್ನು ಮರೆಯುತ್ತೀಯೆ. ಇದರಿಂದ ನನಗೆ ಬರುವ ಭಾಗ್ಯವೇನು?'

'ತುಸು ತಡಿ. ಅವನು ನನ್ನೊಡನೆ ಮಾತಾಡಿದಾಗ, ನಿನ್ನ ಪರಿಸ್ಥಿತಿಯ ಭೀಕರತೆ ಯನ್ನು ಅರ್ಥಮಾಡಿಕೊಳ್ಳಲಿಲ್ಲವೆಂದು ನಾನು ಒಪ್ಪಿಕೊಳ್ಳುತ್ತೇನೆ. ಆಗ ನನ್ನ ಕಣ್ಮುಂದಿದ್ದವನು ಅವನು ಮಾತ್ರ. ಕುಟುಂಬ ಒಡೆದು ಹೋಗುತ್ತಿದೆಯಲ್ಲ ಎಂದು ಯೋಚಿಸಿದೆ. ಅವನ ವಿಷಯದಲ್ಲಿ ಕನಿಕರ ಮೂಡಿತು. ನಿನ್ನೊಡನೆ ಮಾತಾಡಿದನಂತರ ಅದನ್ನು ಭಿನ್ನ ದೃಷ್ಟಿಯಿಂದ ನೋಡುತ್ತಿದ್ದೇನೆ. ಹೆಂಗಸಿನ ದೃಷ್ಟಿಯಿಂದ ಆ ಬಗ್ಗೆ ಯೋಚಿಸುತ್ತಿದ್ದೇನೆ. ನಿನ್ನ ಸಂಕಟ ನನಗೆ ತಿಳಿದಿದೆ. ನಿನಗಾಗಿ ನನಗೆಷ್ಟು ದುಃಖವಾಗಿದೆ ಯೆಂಬುದನ್ನು ಮಾತಿನಲ್ಲಿ ವಿವರಿಸಲಾರೆ. ಆದರೆ, ಪ್ರಿಯ ಡಾಲಿ, ನಿನ್ನ ಸಂಕಟ ನನಗೆ ಸಂಪೂರ್ಣವಾಗಿ ಅರ್ಥವಾಗಿದ್ದರೂ, ನನಗೆ ತಿಳಿಯದ ಸಂಗತಿಯೊಂದಿದೆ. ನನಗೆ ತಿಳಿಯದು, ನಿಜ....ನಿನ್ನ ಹೃದಯದಲ್ಲಿ ಅವನಿಗಾಗಿ ಏನಾದರೂ ಒಂದಿಷ್ಟು

ಪ್ರೀತಿ ಉಳಿದಿದೆಯೆ ಎಂಬುದು ನನಗೆ ತಿಳಿಯದು. ಅವನನ್ನು ಕ್ಷಮಿಸುವಷ್ಟು ಪ್ರೀತಿ ಯಿದೆಯೆ ಎಂಬುದು ನಿನಗೆ ಮಾತ್ರ ಗೊತ್ತು. ಇರುವುದಾದರೆ, ಅವನನ್ನು ಕ್ಷಮಿಸು!'

'ಇಲ್ಲ' ಎಂದು ಡಾಲಿ ಉಸುರಿದಳು. ಆದರೆ ಅನ್ನಾ ಅವಳ ಕೈಯನ್ನು ಮತ್ತೆ ಚುಂಬಿಸಿ ಅವಳ ಮಾತು ತಡೆದಳು.

'ಈ ಪ್ರಪಂಚ ನಿನಗಿಂತ ನನಗೆ ಚೆನ್ನಾಗಿ ಗೊತ್ತಿದೆ.' ಎಂದವಳು ಮಾತಿನ ಲಹರಿ ಹರಿಸಿದಳು. 'ಸ್ಟೀವ್‌ನಂಥ ಜನ ಅಂಥ ಸಂಗತಿಗಳನ್ನು ನೋಡುವ ಬಗೆ ನನಗೆ ಗೊತ್ತಿದೆ. ಅವನು ನಿನ್ನ ವಿಷಯ ಕುರಿತು ಅವಳೊಡನೆ ಮಾತಾಡಿದನೆಂದು ನೀನು ಹೇಳುತ್ತೀಯೆ. ಅವನೆಂದೂ ಆ ವಿಷಯವೆತ್ತಿಲ್ಲ. ಅಂಥ ಜನರ ನಿಷ್ಠೆ ಪ್ರಶ್ನಾರ್ಹವಿರಬಹುದು. ಆದರೆ ತಮ್ಮ ಮನೆ ಮತ್ತು ಮಡದಿಯರು ಅವರಿಗೆ ಬಹುಪವಿತ್ರ. ಬೇರೆ ಹೆಂಗಸರನ್ನವರು ತಾತ್ಸಾರದಿಂದ ಕಾಣುತ್ತಾರೆ; ಆದರೆ ಕುಟುಂಬವನ್ನೊಡೆಯಲು ಅವಕಾಶ ಕೊಡುವು ದಿಲ್ಲ. ಅವರ ಮತ್ತು ತಮ್ಮ ಕುಟುಂಬಗಳ ನಡುವೆ ಅವರು ಅಲಂಘ್ಯವಾದ ಗಡಿರೇಖೆಯ ನ್ನೆಳೆಯುತ್ತಾರೆ. ಅದರ ಮರ್ಮ ನನಗರ್ಥವಾಗದು; ಆದರೂ ವಾಸ್ತವಾಂಶವಿದು.'

'ಹೌದು, ಆದರೆ ಅವರವಳನ್ನು ಚುಂಬಿಸಿದ್ದಾರೆ....'

'ಕೇಳು, ಮುದ್ದು ಡಾಲಿ. ನಿನ್ನನ್ನು ಪ್ರೀತಿಸುತ್ತಿದ್ದಾಗಿನ ಸ್ಟೀವ್‌ನನ್ನು ನಾನು ಬಲ್ಲೆ. ಅವನು ನನ್ನ ಬಳಿ ಬಂದು, ನಿನ್ನ ವಿಷಯವನ್ನು ಕುರಿತು ಮಾತಾಡುವಾಗ ಅತ್ತದ್ದು ನನಗೆ ನೆನಪಿದೆ. ನಿನ್ನ ಬಗೆಗಿನ ಅವನ ಭಾವನೆ ಉದಾತ್ತವಾಗಿತ್ತು, ಕಾವ್ಯ ಮಯವಾಗಿತ್ತು. ನಿನ್ನೊಡನೆ ದೀರ್ಘಕಾಲ ಬಾಳುವೆ ನಡಸಿದಂತೆಲ್ಲ, ನಿನ್ನ ಬಗೆಗಿನ ಅವನ ಭಾವನೆ ಉನ್ನತವಾಗುತ್ತಿದೆ. ಯಾವ ವಿಷಯವೆತ್ತಿಕೊಂಡು ಮಾತಾಡುತ್ತಿದ್ದರೂ, ಸಂಗತವೋ ಅಸಂಗತವೋ, ಡಾಲಿ ಅದ್ಭುತವಾದ ಲಲನೆ ಎಂಬ ಮಾತನ್ನು ಸಲಸಲವೂ ಸೇರಿಸುತ್ತಿದ್ದುದರಿಂದ ನಾವು ನಗುತ್ತಿದ್ದುದುಂಟು. ಅವನ ಪಾಲಿಗೆ ನೀನೊಬ್ಬಳು ದೇವತಾ ಸ್ತ್ರೀಯಾಗಿದ್ದೀಯೆ. ಯಾವಾಗಲೂ ಹಾಗೆ, ಈಗಲೂ ಅಷ್ಟೇ. ಅವನ ಸದ್ಯದ ಮೋಹ ಹೃತ್ಪೂರ್ವಕವಾದದ್ದಲ್ಲ.'

'ಈ ಮೋಹ ಪ್ರಸಂಗ ಮತ್ತೆಮತ್ತೆ ಪುನರಾವೃತ್ತಿಗೊಂಡದ್ದಾದರೆ?'

'ಅದು ಸಾಧ್ಯವಿಲ್ಲವೆಂದು ನನಗೆ ಮನವರಿಕೆಯಾಗಿದೆ.'

'ಹೌದೆ? ಆದರೆ ನೀನವರನ್ನು ಕ್ಷಮಿಸುವೆಯಾ?'

'ನಾನೇನೂ ಹೇಳಲಾರೆ. ಅಭಿಪ್ರಾಯ ಹೇಳುವುದು ಕಷ್ಟ....ಹೌದು, ಹೇಳಬಲ್ಲೆ' ಎಂದು ಅನ್ನಾ ಆ ವಿಷಯವನ್ನೆ ಕುರಿತು ಯೋಚಿಸುತ್ತ ನುಡಿದಳು. ತರುವಾಯ ಆ ಸ್ಥಿತಿಯಲ್ಲಿ ತಾನಿದ್ದಂತೆ ಭಾವಿಸಿಕೊಂಡು, ಪ್ರತಿಯೊಂದಂಶವನ್ನು ಎಚ್ಚರಿಕೆಯಿಂದ ತೂಗಿ ನೋಡಿ, ತನ್ನ ಅಭಿಪ್ರಾಯವನ್ನು ಪ್ರಕಟಿಸಿದಳು: 'ಹೌದು, ನಾನಾಗಿದ್ದರೆ ಅವನನ್ನು ಕ್ಷಮಿಸುತ್ತಿದ್ದೆ; ಎಲ್ಲ ಸ್ಥಿತಿಗತಿಗಳಲ್ಲಿ ನಾನು ಒಂದೇ ರೀತಿಯಲ್ಲಿ ಚಲ ಹಿಡಿಯ ಲಾರೆ. ಅವನನ್ನು ನಾನು ಕ್ಷಮಿಸುತ್ತಿದ್ದೆ; ಏನೂ ನಡೆಯಲಿಲ್ಲವೆಂಬಂತೆ, ಯಾವಾಗಲೂ ನಡೆಯಲಿಲ್ಲನೆಂಬಂತೆ ಕ್ಷಮಿಸುತ್ತಿದ್ದೆ.'

'ಹೌದ್ಹೌದು; ಅದನ್ನು ಹೇಳಬೇಕಾಗಿಲ್ಲ.' ಎಂದು ಡಾಲಿ ತಟ್ಟನೆ ನುಡಿದಳು. ಹಲವುಸಲ ತನ್ನ ಮನಸ್ಸಿನಲ್ಲಿದ್ದ ಆಲೋಚನೆಗೆ ಅನ್ನಾ ದನಿ ನೀಡಿದಂತೆ ಅವಳು ಭಾವಿಸಿ

ದಳು. 'ಇಲ್ಲವಾದರೆ, ಕ್ಷಮೆ ಎಂಬ ಮಾತಿಗೆ ಅರ್ಥವಿರುವುದಿಲ್ಲ. ನಾನವರನ್ನು ಕ್ಷಮಿಸುವುದಾದರೆ, ಅದು ಸಂದಿಲ್ಲದೆ ಪೂರ್ಣವಾಗಿರುತ್ತದೆ, ಪೂರ್ಣವಾಗಿರುತ್ತದೆಂಬುದರಲ್ಲಿ ಸಂದೇಹವಿಲ್ಲ. ಸದ್ಯಕ್ಕೆ ಸಾಕು, ನನ್ನೊಡನೆ ಬಾ, ನಿನ್ನ ಕೋಣೆ ತೋರಿಸುತ್ತೇನೆ.' ಎಂದವಳು ಮೇಲೆದ್ದಳು. ಅವರು ಮುಂದೆ ಹೆಜ್ಜೆ ಇಡುತ್ತಿದ್ದಂತೆ, ಡಾಲಿ ನಾದಿನಿಯನ್ನಪ್ಪಿಕೊಂಡಳು. 'ನನ್ನ ಜೇನ್ ಏ, ನೀನು ಬಂದದ್ದರಿಂದ ನನಗೆಷ್ಟು ಆನಂದವಾಗಿದೆ, ಗೊತ್ತೆ? ಪರಿಸ್ಥಿತಿಯೇ ಸುಧಾರಿಸಿದಂತಿದೆ, ಎಲ್ಲವೂ ಸರಿ ಹೋದಂತಿದೆ.'

೨೦

ಅಬ್ಲಾನ್‌ಸ್ಕಿಯರ ಮನೆಯಲ್ಲಿದ್ದುಕೊಂಡೇ ಅನ್ನಾ ಹಗಲು ಕಳೆದಳು. ಅವಳ ಆಗಮನದ ವಾರ್ತೆ ತಿಳಿದು ಆ ದಿನವೇ ಕೆಲವು ಗೆಳತಿಯರು ಬಂದರೂ, ಅವರಿಗವಳು ಭೇಟಿ ನಿರಾಕರಿಸಿದಳು. ಡಾಲಿ ಮತ್ತು ಮಕ್ಕಳೊಡನೆ ಅವಳು ಬೆಳಗಿನ ವೇಳೆ ಕಳೆದಳು. ಮನೆಯಲ್ಲಿಯೇ ಊಟಮಾಡತಕ್ಕದ್ದೆಂದು ಅವಳು ಅಣ್ಣನಿಗೊಂದು ಚೀಟಿಕಳಿಸಿದಳು. 'ದೇವರು ದಯಾಮಯಿ, ಮನೆಗೆ ಬಾ' ಎಂದವಳು ಅದರಲ್ಲಿ ಒಕ್ಕಣಿಸಿದಳು.

ಅಬ್ಲಾನ್‌ಸ್ಕಿ ಮನೆಯಲ್ಲಿಯೇ ಊಟಮಾಡಿದನು. ಅವರ ಸಂಭಾಷಣೆ ಸಾಮಾನ್ಯ ಸ್ವರೂಪದ್ದಾಗಿತ್ತು. ಗಂಡನೊಡನೆ ಮಾತಾಡುವಾಗ ಮಡದಿ ಅವನನ್ನು ಸ್ಟೀವ್ ಎಂದು ಸಂಬೋಧಿಸುತ್ತಿದ್ದಳು. ಅವಳು ಗಂಡನನ್ನು ಆ ರೀತಿ ಕರೆದು ಬಹುದಿನಗಳಾಗಿದ್ದುವು. ಆದರೂ ಗಂಡ ಹೆಂಡಿರ ನಡುವೆ ಏನೋ ಒಂದು ಬಿಗುಮಾನವಿತ್ತು. ಅಗಲಿಕೆಯ ಬಗ್ಗೆ ಯಾರೂ ಸೊಲ್ಲೆತ್ತಲಿಲ್ಲ. ಸಮಜಾಯಿಷಿ ಮತ್ತು ರಾಜಿಗಳ ಸಾಧ್ಯತೆಯನ್ನು ಅಬ್ಲಾನ್‌ಸ್ಕಿ ನಿರೀಕ್ಷಿಸಿದ್ದನು.

ಊಟ ಮುಗಿದನಂತರ ಕಿಟ್ಟಿ ಬಂದಳು. ಅವಳಿಗೆ ಅಲ್ಪಸ್ವಲ್ಪ ಅನ್ನಾಳ ಪರಿಚಯವಿತ್ತು. ಪ್ರತಿಯೊಬ್ಬರೂ ಪ್ರಶಂಸಿಸುತ್ತಿದ್ದ ಆಧುನಿಕ ರೀತಿ ನೀತಿಗಳ ಈ ಪೀಟರ್ಸ್‌ಬರ್ಗ್ ಮಹಿಳೆ ತನ್ನ ಜತೆ ಹೇಗೆ ವರ್ತಿಸಬಹುದೆಂಬ ಚಿಂತೆ ಅಕ್ಕನ ಮನೆಗೆ ಹೋಗುವ ದಾರಿಯಲ್ಲಿ ಅವಳನ್ನು ಕಾಡುತ್ತಿತ್ತು. ಆದರೆ ಅನ್ನಾಳಿಗೆ ಅವಳ ಮೇಲೆ ಮಮತೆಯಿತ್ತು. ಕಿಟ್ಟಿ ಅದನ್ನು ಕೂಡಲೇ ಗ್ರಹಿಸಿದಳು. ಕಿಟ್ಟಿಯ ಹರೆಯದ ಚೆಲುವು ಅನ್ನಾಳನ್ನು ಆಕರ್ಷಿಸಿತ್ತು. ಆ ವಿಷಯ ಗೊತ್ತಾಗುವುದಕ್ಕೆ ಮುಂಚೆಯೇ ಅವಳು ಅನ್ನಾಳ ಪ್ರಭಾವಕ್ಕೊಳಗಾಗಿದ್ದಳು. ಅಷ್ಟೇ ಅಲ್ಲ, ಕೆಲವೊಮ್ಮೆ ಹರೆಯದ ಹೆಣ್ಣುಗಳು ಹಿರಿಯ ವಿವಾಹಿತ ಮಹಿಳೆಯರಿಗೊಲಿಯುವಂತೆ ಅವಳು ಅನ್ನಾಳನ್ನು ಪ್ರೀತಿಸುತ್ತಿದ್ದಳು. ಸಂಪ್ರದಾಯಶೀಲೆಯಂತಾಗಲಿ, ಎಂಟು ವರ್ಷದ ಮಗನನ್ನುಳ್ಳ ತಾಯಿಯಂತಾಗಲಿ ಅನ್ನಾ ಕಾಣಿಸುತ್ತಿರಲಿಲ್ಲ. ಅವಳು ಇಪ್ಪತ್ತು ವರ್ಷದ ಸುಕುಮಾರಿಯಂತೆ, ವಿಲಾಸಲಲಿಯದ ಲಲನೆಯಂತೆ ಕಾಣುತ್ತಿದ್ದಳು. ಅವಳ ಚಲನವಲನಗಳಲ್ಲಿ ಬಾಗು ಬಳುಕುಗಳಿದ್ದುವು; ಅವಳ ಮಂದಹಾಸದಲ್ಲಿ ಹಾಗೂ ನೇತ್ರದ್ವಯಗಳಲ್ಲಿ ಚೈತನ್ಯೋತ್ಸಾಹಗಳು ತುಂಬಿ ತುಳುಕುತ್ತಿದ್ದುವು; ಕೆಲವೊಮ್ಮೆ ಅವಳ ಕಣ್ಣುಗಳಲ್ಲಿ ಸೂಸುತ್ತಿದ್ದ ಗಾಂಭೀರ್ಯ ದುಃಖಗಳು ಸಹ ಕಿಟ್ಟಿಯನ್ನು ವಿಸ್ಮಯಗೊಳಿಸಿ, ಅವಳ ಮನಸ್ಸನ್ನು ಸೂರೆಗೊಳ್ಳುತ್ತಿದ್ದುವು. ಅನ್ನಾಳ ವರ್ತನೆಯಲ್ಲಿ ಕೃತಕತೆಯಿಲ್ಲವೆಂದೂ, ಏನನ್ನೂ ಅವಳು ಬಚ್ಚಿಟ್ಟುಕೊಳ್ಳುತ್ತಿರಲಿಲ್ಲ

ವೆಂದೂ, ತನಗೆ ದುರ್ಗಮವಾಗಿದ್ದ ಸಂಕೀರ್ಣವೂ, ಕಾವ್ಯಗುಣಸಂಪನ್ನವೂ ಆದ ಮತ್ತೊಂದು ಉಚ್ಚತಮ ಜಗತ್ತನ್ನವಳು ಬಲ್ಲಳೆಂದೂ ಕಿಟ್ಟಿ ತಿಳಿದಿದ್ದಳು.

ಊಟ ಮುಗಿದನಂತರ ಡಾಲಿ ತನ್ನ ಕೋಣೆಗೆ ಹೋದಳು. ಅನ್ನಾ ತಟಕ್ಕನೆ ಮೇಲೆದ್ದು, ಚುಟ್ಟಾ ಸೇದುತ್ತಿದ್ದ ತನ್ನ ಸೋದರನ ಕೋಣೆಯೊಳಗೆ ನುಸುಳಿದಳು.

'ಸ್ಟೀವ್' ಎಂದವಳು ಅವನ ಕಡೆಗೆ ತುಂಟತನದ ನೋಟ ಬೀರಿದಳು; ಅವನ ಮೇಲೆ ಶಿಲುಬೆಯಾಕಾರದಲ್ಲಿ ಅಂಗ ಭಂಗಿಯನ್ನು ಪ್ರದರ್ಶಿಸಿದಳು; ನೋಟದ ಮೂಲಕ ಬಾಗಿಲ ಕಡೆಗೆ ಅವನ ಗಮನವನ್ನು ಸೆಳೆದು, 'ಹೋಗಲ್ಲಿಗೆ. ದೇವರ ದಯೆಯಿಂದ ಶುಭವಾಗಲಿ' ಎಂದು ನುಡಿದಳು.

ಅವನು ಕೂಡಲೇ ಅವಳ ಮಾತು ಸನ್ನೆಗಳ ಅರ್ಥವನ್ನು ಗ್ರಹಿಸಿ, ಚುಟ್ಟಾ ಬಿಸಾಡಿ, ಹೊರಗೆ ಹೋದನು.

ಅವನು ಹೋದ ನಂತರ, ಮೊದಲೇ ಮಕ್ಕಳೊಡನೆ ಕುಳಿತಿದ್ದ ಸೋಫಾದ ಬಳಿಗೆ ಅವಳು ಹಿಂದಿರುಗಿದಳು. ತಮ್ಮ ತಾಯಿ ಈ ಅತ್ತೆಯನ್ನು ಪ್ರೀತಿಸುತ್ತಿದ್ದುದ ಕ್ಕಾಗಿಯೋ, ಇಲ್ಲವೆ ಅವಳ ವಿಶಿಷ್ಟ ಆಕರ್ಷಕ ಗುಣ ತನುಗೆ ತಿಳಿದಿದ್ದುದರಿಂದಲೋ ಏನೋ ಎಲ್ಲ ಮಕ್ಕಳಂತೆ ಊಟಕ್ಕೆ ಮುಂಚೆಯೇ ಅತ್ತೆಗಂಟಿಕೊಂಡಿದ್ದ ಹಿರಿಯ ಮಕ್ಕಳು ಅನ್ನಾಳನ್ನು ಬಿಟ್ಟಲುಗುತ್ತಿರಲಿಲ್ಲ; ಚಿಕ್ಕವರು ಸಹ ಹಿರಿಯವರನ್ನನುಸರಿಸು ತ್ತಿದ್ದರು. ಅವಳಿಗೆ ತೀರ ಹತ್ತಿರವಾಗಿ ಕುಳಿತುಕೊಳ್ಳುವ ಸ್ಪರ್ಧೆ ಆ ಮಕ್ಕಳ ನಡುವೆ ನಡೆದಿತ್ತು; ಅವಳ ಪಕ್ಕದಲ್ಲಿ ಕುಳಿತುಕೊಂಡು, ಅವಳನ್ನು ಮುದ್ದಿಸಬೇಕು, ಅವಳ ಕೋಮಲ ಕೈಗಳನ್ನು ಹಿಡಿದುಕೊಳ್ಳಬೇಕು, ಅವನ್ನು ಚುಂಬಿಸಬೇಕು, ಅವಳ ಉಂಗುರಗಳೊಡನೆ ಆಟವಾಡಬೇಕು, ಅಥವಾ ಅವಳ ಲಂಗದ ನೆರಿಗೆಗಳನ್ನು ಮುಟ್ಟ ಬೇಕು ಎಂಬುದಾಗಿ ಅವರು ತವಕಿಸುತ್ತಿದ್ದರು.

'ಬನ್ನಿ, ಮೊದಲಿನಂತೆ ಕುಳಿತುಕೊಳ್ಳೋಣ' ಎಂದು ಅನ್ನಾ ತನ್ನ ಹಿಂದಿನ ಜಾಗದಲ್ಲಿ ಕುಳಿತುಕೊಳ್ಳುತ್ತ ನುಡಿದಳು.

ಗ್ರೀಷ ಪುನಃ ಅವಳ ತೋಳಿನ ಕೆಳಗೆ ತಲೆಯನ್ನು ನುಗ್ಗಿಸಿ, ಅವಳ ವಕ್ಷದ ಮೇಲೆ ಅದನ್ನಿರಿಸಿದಾಗ, ಅವನ ಮುಖದಿಂದ ಅಭಿಮಾನ ಸುಖಗಳ ಸೂಸುತ್ತಿದ್ದುವು.

'ನೃತ್ಯ ಗೋಷ್ಠಿ ಯಾವಾಗ?' ಎಂದವಳು ಕಿಟ್ಟಿಯ ಕಡೆಗೆ ತಿರುಗಿಕೊಂಡು ಪ್ರಶ್ನಿಸಿದಳು.

'ಮುಂದಿನವಾರ. ಅದ್ಭುತ ಗೋಷ್ಠಿ. ಪ್ರತಿಯೊಬ್ಬರಿಗೂ ಆನಂದವುಂಟುಮಾಡುವ ಗೋಷ್ಠಿಗಳಲ್ಲಿ ಅದೂ ಒಂದು.'

'ಸದಾ ಆನಂದವನ್ನು ನೀಡುವ ಗೋಷ್ಠಿಗಳೂ ಇವೆಯೇನು?' ಎಂದು ಅನ್ನಾ ತುಸು ವಿಡಂಬನಾತ್ಮಕವಾಗಿ ಕೇಳಿದಳು.

'ಅಂಥವು ಇವೆಯೆಂಬುದೇ ಒಂದು ವಿಚಿತ್ರ. ಬೊಬ್ರಿಶ್ಚೇವ್ ಗೋಷ್ಠಿಯಲ್ಲಿ ಯಾವಾಗಲೂ ತಮಾಷೆಯಿರುತ್ತದೆ. ನಿಕಿತಿನ್‌ರಲ್ಲಿಯೂ ಅಷ್ಟೇ. ಆದರೆ ಮೆಝ್‌ಕೊವ್ ಗೋಷ್ಠಿಗಳು ಯಾವಾಗಲೂ ಸಪ್ಪೆ. ನೀವದನ್ನು ಗಮನಿಸಿಲ್ಲವೆ?'

ಮುಂದುವರಿಯುವುದು

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

1. ಎ. ಆರ್. ನಾಗಭೂಷಣ, ಇಂಗ್ಲಿಷ್ ಉಪನ್ಯಾಸಕ
1235, ಕೆ. ಎಂ. ಪುರಂ, ಮೈಸೂರು–೫೭೦ ೦೦೪

2. ಕೆ. ಅಕ್ಕಮಹಾದೇವಿ
ನಂ. 51/11 (ಎ), ರೇಖಾ ಇಂಜಿನಿಯರಿಂಗ್ ಹಿಂಭಾಗ
21ನೇ ಮುಖ್ಯರಸ್ತೆ, 21ನೇ ಅಡ್ಡರಸ್ತೆ, ವಿಜಯನಗರ,
ಬೆಂಗಳೂರು–೫೭೦ ೦೪೦

3. ಡಿ. ಎಸ್. ಶ್ರೀನಾಥ್, ಸಹ ಉಪಾಧ್ಯಾಯರು
ಕಸ್ತೂರಬಾ ಬಾಲಕಿಯರ ಜೂನಿಯರ್ ಕಾಲೇಜು
ಶಿವಮೊಗ್ಗ–೫೭೭ ೨೦೧

4. ಜಿ. ಟಿ. ನಾರಾಯಣರಾವ್
ಅತ್ರಿ, ಎಂಟನೆಯ ಅಡ್ಡರಸ್ತೆ, ಕುವೆಂಪು ನಗರ,
ಮೈಸೂರು–೫೭೦ ೦೨೩

5. ಎಸ್. ರಾಮರಾವ್
1188, ಬಾಲಕೃಷ್ಣರಾವ್ ರಸ್ತೆ, ಚಾಮರಾಜಪುರಂ,
ಮೈಸೂರು–೫೭೦ ೦೦೪

6. ಶಂಸ ಐತಾಳ
611, 'ಚಂದನ', 7ನೇ ಕ್ರಾಸ್, ಅನಿಕೇತನ ರಸ್ತೆ, ಕುವೆಂಪುನಗರ
ಮೈಸೂರು–೫೭೦ ೦೨೩

7. ಎಚ್. ಸಂಜೀವಯ್ಯ
ಭೌತಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

8. ಲೀಲಾವತಿ ಜಿ.
ಸೆಂಟ್ ಥಾಮಸ್ ಹೈಸ್ಕೂಲ್, ವಿದ್ಯಾರಣ್ಯಪುರಂ,
ಮೈಸೂರು–೫೭೦ ೦೦೮

ಸರ್ವಶ್ರೀಗಳಾದ—

9. ಲಕ್ಷ್ಮೀನಾರಾಯಣ ಅರೋರಾ, ಅಧ್ಯಾಪಕ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ,
ಮೈಸೂರು–೫೭೦ ೦೦೬

10. ಹೆಚ್. ಎನ್. ವಸಂತಕುಮಾರ
ಸಹಾಯಕ ಯೋಜನಾಧಿಕಾರಿ, ವಯಸ್ಕರ ಶಿಕ್ಷಣ ಕಛೇರಿ
ಎಂ. ಜಿ. ರಸ್ತೆ, ಚಿಕ್ಕಮಗಳೂರು–೫೭೭ ೧೦೧

11. ಪ್ರೊ॥ ಎ. ಎಸ್. ಮೂರ್ತಿರಾವ್
185, ಎಚ್. ಎ. ಎಲ್. ಲೇ ಔಟ್, 2ನೇ ಹಂತ, ಸಂಜಯನಗರ
ಬೆಂಗಳೂರು–೫೬೦ ೦೯೪

12. ಪ್ರೊ॥ ದೇ. ಜವರೇಗೌಡ, ವಿಶ್ರಾಂತ ಉಪಕುಲಪತಿಗಳು
ಜಯಲಕ್ಷ್ಮೀಪುರಂ, ಮೈಸೂರು–೫೭೦ ೦೧೨

ಇಂದು ನೆಡುವ ಒಂದು ಸಸಿ - ನಾಳಿನ ಬಾಳಿನ ಆಧಾರ

ಇಂದೇ ಒಂದು ಸಸಿ ನೆಡಿರಿ. ಉಚಿತ ಸಸಿಗಳು ನಿಮಗಾಗಿ ಕಾದಿವೆ.

ನೀವೊಂದು ಸಸಿ ನೆಟ್ಟರೆ, ಆ ಸಸಿಯಿಂದ ನೀವು ಪಡೆಯುವ ಪ್ರಯೋಜನ ಒಂದೆರಡಲ್ಲ. ಪ್ರಯೋಜನ ನಿಮ್ಮೊಬ್ಬರಿಗೆ ಅಲ್ಲ—ನಿಮ್ಮ ಮನೆಯವರಿಗೆ, ಸುತ್ತಮುತ್ತಲ ಜನರಿಗೆ, ಎಲ್ಲರಿಗೂ.

ನಮ್ಮ ಪೂರ್ವಜರಿಗೆ ಮರಗಳ ಮಹತ್ವ ತಿಳಿದಿತ್ತು. ಆದ್ದರಿಂದಲೇ ಆ ಕಾಲದಲ್ಲಿ ಪ್ರತಿಯೊಂದು ಹಳ್ಳಿಯಲ್ಲಿಯೂ ಮರಗಳ ಒಂದು ತೋಪು ಇರುತ್ತಿತ್ತು. ಪಟ್ಟಣಗಳಲ್ಲಿ ಪ್ರತಿಯೊಂದು ಮನೆಗೂ ಒಂದೆರಡು ಮರಗಳು ತಂಪಿನ ಆಸರೆ ನೀಡುತ್ತಿದ್ದವು.

ಆದರೆ ಇಂದು ನಮ್ಮ ಅರಣ್ಯ ಸಂಪತ್ತು ಕ್ಷೀಣಿಸಿದೆ. ಉರುವಲಿಗಾಗಿ, ಮರಮುಟ್ಟುಗಳಿಗಾಗಿ ಜಾನುವಾರುಗಳ ಮೇವಿಗಾಗಿ, ಕಾಡನ್ನು ಕಡಿದು ನಾಶಪಡಿಸಲಾಗಿದೆ. ಅಕ್ರಮವಾಗಿ ಮರ ಕಡಿಯುವುದರಿಂದಷ್ಟೆ ಅಲ್ಲ, ಕಾಳ್ಗಿಚ್ಚಿನಿಂದಲೂ ಮರಗಳು ನಾಶವಾಗುತ್ತಿವೆ—ಇದರ ಪರಿಣಾಮ ನಮ್ಮ ಭವಿಷ್ಯಕ್ಕೆ ಮಾರಕ. ನಮ್ಮ ಅಮೂಲ್ಯವಾದ ಕಾಡುಗಳು ಕಣ್ಮರೆಯಾದರೆ ನಮಗೆ ಕ್ಷಾಮ, ನೆರೆಹಾವಳಿ, ಅಷ್ಟೇಕೆ ಪರಿಸರದ ಅವನತಿ—ಎಲ್ಲವೂ ನಿಶ್ಚಿತ.

ಆದರೆ ಒಂದು ಆಶಾಕಿರಣವಿದೆ. ನಾವು ಪ್ರಯತ್ನಿಸಿದರೆ ಈಗಲೂ ನಮ್ಮ ನಾಡನ್ನು ಹಸಿರು ಮರಗಳ ನಂದನವನವನ್ನಾಗಿಸಬಹುದು. ಹೌದು, ಈ ಕಾರ್ಯದಲ್ಲಿ ನಿಮ್ಮ ಪ್ರಯತ್ನವೇ ಮುಖ್ಯ. ನೀವು ಒಂದು ಸಸಿ ನೆಡುವ ಮೂಲಕ ನೆರವಾಗಬಹುದು. ಸಾಧ್ಯವಾದರೆ ಇಂದೇ ಒಂದು ಸಸಿ ನೆಡಬಹುದು—ನಿಮ್ಮ ಕೈತೋಟದಲ್ಲಿ, ಹಿತ್ತಲಿನಲ್ಲಿ, ಹೊಲದಲ್ಲಿ, ನಿಮ್ಮ ಶಾಲೆಯ ಕಾಂಪೌಂಡಿನಲ್ಲಿ—ಎಲ್ಲಿ ಬೇಕಾದರೂ, ಒಂದೇ ಸಸಿ ಏಕೆ ಅವಕಾಶವಿದ್ದರೆ ಸಾವಿರಾರು ನೆಡಬಹುದಲ್ಲವೆ?

ಇದು ತುಂಬಾ ಸುಲಭ, ಏನೂ ಖರ್ಚಿಲ್ಲ, ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆ ನೀವು ಸಸಿ ನೆಡಲು ಸಹಾಯ ಮಾಡುವ ಯೋಜನೆಯೊಂದನ್ನು ಜಾರಿಗೆ ತಂದಿದೆ. ಇಲಾಖೆ ನಿಮಗೆ ಸಸಿಗಳನ್ನು, ಬೀಜಗಳನ್ನು ಪೂರೈಸುತ್ತದೆ, ಉಚಿತವಾಗಿ; ತ್ವರೆಮಾಡಿ; ನಿಮ್ಮ ಕೈಲಾದಷ್ಟು ನೆರವು ನೀಡಿ. ನಿಮಗೆ ಹತ್ತಿರವಿರುವ ಅರಣ್ಯ ಇಲಾಖೆಯ ಕಛೇರಿಯನ್ನು ಸಂಪರ್ಕಿಸಿ ಅಥವಾ ನಮಗೆ ಬರೆಯಿರಿ :

ಅಧಿಕ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಸಾಮಾಜಿಕ ಅರಣ್ಯ ಯೋಜನೆ
54, ಅರಣ್ಯ ಭವನ
ಮಲ್ಲೇಶ್ವರ, ಬೆಂಗಳೂರು-560 003

"ಮರಗಳು ನಿಮ್ಮ ಭವಿಷ್ಯ ನಿಧಿ"

ಕರ್ನಾಟಕ ವಾರ್ತೆ

ನಿಮ್ಮ ಮಗುವನ್ನು ರೋಗಗಳಿಂದ ರಕ್ಷಿಸಿ


ಹುಟ್ಟಿದ ದಿನದಿಂದಲೇ ನಿಮ್ಮ ಮಗುವು ಅನೇಕ ಆರೋಗ್ಯದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅಲ್ಲದೆ, ಮಗುವು ಹಲವಾರು ಸಾಂಕ್ರಾಮಿಕ ರೋಗಗಳಿಗೆ ತುತ್ತಾಗುವ ಸಾಧ್ಯತೆ ಇರುತ್ತದೆ. ಮಗುವಿನಲ್ಲಿ ರೋಗ ನಿರೋಧಕ ಶಕ್ತಿ ಸ್ವಾಭಾವಿಕವಾಗಿ ಕಡಿಮೆ ಇರುತ್ತದೆ. ಎಂತಲೇ, ನಿಮ್ಮ ಮಗುವನ್ನು ರೋಗಗಳಿಗೆ ತುತ್ತಾಗದಂತೆ ಕಾಪಾಡುವುದು ಅತ್ಯಂತ ಅವಶ್ಯಕ; ನಿಮ್ಮ ಮಗುವಿಗೆ ರೋಗ ನಿರೋಧಕ ಚುಚ್ಚುಮದ್ದುಗಳನ್ನು ಕೊಡಿಸಿ. ಕ್ಷಯ, ಗಂಟಲುಬೇನೆ, ನಾಯಿಕೆಮ್ಮು ಹಾಗೂ ಮೀಸಲ್ಸ್ (ಗೊಬ್ಬರ) ಈ ರೋಗಗಳನ್ನು ತಡೆಗಟ್ಟಲು ನಿಮ್ಮ ಮಗುವಿಗೆ ಒಂದು ವರ್ಷದೊಳಗೆ ಚುಚ್ಚುಮದ್ದುಗಳನ್ನು ಹಾಕಿಸಿ ಹಾಗೂ ಪೋಲಿಯೋ ತಡೆಯಲು 'ತೊಟ್ಟು' ಔಷಧಿಯನ್ನು ಕೊಡಿಸಿ.

ಮಗುವಿನ ವಯಸ್ಸು	ಕೊಡಬೇಕಾದ ಲಸಿಕೆ	ಪ್ರಮಾಣ
3 ರಿಂದ 9 ತಿಂಗಳು	ಅ) ತ್ರಿರೋಗ–ಅಂದರೆ ಧನುರ್ವಾಯು, ನಾಯಿಕೆಮ್ಮು, ಗಂಟಲುಬೇನೆಗಳ ವಿರುದ್ಧ	3 ಬಾರಿ 1 ರಿಂದ 2 ತಿಂಗಳ ಅಂತರದಲ್ಲಿ
	ಅ) ಪೋಲಿಯೋ (ಅಂಗವಿಕಲತೆ)	3 ಬಾರಿ 1 ರಿಂದ 2 ತಿಂಗಳ ಅಂತರದಲ್ಲಿ
	ಅ) ಕ್ಷಯರೋಗ ವಿರುದ್ಧ—ಬಿ.ಸಿ.ಜಿ	ಒಂದು ಬಾರಿ
9 ರಿಂದ 12 ತಿಂಗಳ	ಮೀಸಲ್ಸ್	ಒಂದು ಬಾರಿ

ಹೆಚ್ಚಿನ ವಿವರಗಳಿಗೆ:

ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ
ಕರ್ನಾಟಕ ಸರ್ಕಾರ
ಬೆಂಗಳೂರು—ಇವರನ್ನು ಸಂಪರ್ಕಿಸಿ

ಕರ್ನಾಟಕ ವಾರ್ತೆ



ಸುಮಿತ್ರಾನಂದನ ಪಂತ್